ಕೇದರನಾಥ ಯಾತ್ರೆ
ಕೇದರನಾಥ ದೇಗುಲಕ್ಕೆ ನಾಲ್ಕು ದಿನಗಳಲ್ಲಿ 1.24 ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಾರ್ಗಸೂಚಿ
ಬಿಸಿಲಿನ ಪ್ರಮಾಣ ಹೆಚ್ಚುತ್ತಿರುವ ಕಾರಣ ಜನರು ದೀರ್ಘಕಾಲ ಬಿಸಿಲಿಗೆ ಮೈ ಒಡ್ಡ ಕೂಡದು ಎಂದು ಹವಾಮಾನ ಇಲಾಖೆ ಸಲಹೆ ನೀಡಿದೆ

47 YEARS OF EXCELLENCE | SRAMAYEVA JAYATHE | NARAYANA® EDUCATIONAL INSTITUTIONS

CBSE CLASS - X 2026 Top Scorers Powered by Narayana Karnataka !

498 B SANJANA REDDY R.No. 18115692 • 497 BHUVI VEERENDRA S R.No. 18118788 • 497 SHAURYA MANOJ W R.No. 18118877 • 497 P NITHISH RAAJ R.No. 18141188 • 496 YASHNI SHETTY R.No. 18137637 • 496 ANVIKA SAINI R.No. 18137679 • 496 NAKUL KHURANA R.No. 18103438 • 495 ADARSH ARVAPALLY R.No. 18118774 • 495 GAYATHRI PRASAD I R.No. 18118804 • 495 ARKODEEP RAY R.No. 18116701 • 495 NEHA REDDY B R.No. 18116747 • 495 A KUMARASWAMY R.No. 18186943 • 495 AKHIL K R.No. 18186944 • 498 AHAAN SAJEEVAN R.No. 18137633

JEE MAIN 2026

Celebrating 8 State Toppers & Seven 100 Percentiles



Disclaimer: Any inadvertent error published in this advertisement could be brought to our notice. Map not to scale, for representation purposes only.

60 STUDENTS ACHIEVE 100 PERCENTILE ACROSS SUBJECTS • 27 STUDENTS IN AIR TOP 100 ALL IN OPEN CATEGORY • 174 STUDENTS IN AIR TOP 1000 ALL IN OPEN CATEGORY

OUR STUDENTS IN TOP 25: AIR 10 THAMMINA GIRISH • AIR 14 SAI RITHVIK REDDY V V • AIR 17 MADHAV VIRADIYA • AIR 19 • AIR 21 • AIR 23 SHREYAS MISHRA • AIR 24 D BHAVITESH REDDY • AIR 25 SIDDHARTH SHRIKANT ATHALEY

JEE MAIN-2026 RESULTS KARNATAKA

AIR 29 A VISHNU SAI THEJA. • AIR 146 ROHIT SREENIVAS. • AIR 259 AKSHIT BOYAPATI. • AIR 261 NIRANJAN BABU. • AIR 304 NACHIKETH VAASISHTA. • AIR 376 SHAIK FAISAL AHMED. • AIR 378 K YASHWIN. • AIR 420 A SRICHARAN. • AIR 425 V SHREYAS REDDY. • AIR 473 ADHIRATH M PATIL. • AIR 611 MANU PARAMESHWARAN. • AIR 635 ADITYA KUMAR. • AIR 636 UTKARSH ASHUTOSH L. • AIR 647 MD EHAN YASEER. • AIR 655 MEHA JAIN. • AIR 726 EVIN JUBY ISAC.

nPrep : Narayana Digital Learning Programme

Narayana Schools, CBSE & PU Colleges in Karnataka

SCHOOLS - • ADUR Ph: 7022970085, 7349738563 • BANNERGHATTA Ph: 7022293937, 7022192319 • BALLARI Ph: 7022293903/904, 7022293958 • BELLANDUR Ph: 63662 38956, 70222 93941 • CHANDAPURA Ph: 70220 37238, 8179922582 • ELECTRONIC CITY - 2 Ph: 7022037241, 7024162286 • ECITY Ph: 7022293935, 8088602238 • GORAVIGERE Ph: 7899969873,9608084927 • HOSUR Ph: 8438653429, 8438664529 • HSR LAYOUT Ph: 7022027517,7022293992 • JP NAGAR Ph: 7022293914/920 KAMMANAHALLI Ph: 7022293902, 7022293901 • KAGADASAPURA Ph: 70222 93845, 70222 93844 • KASTURI NAGAR Ph: 7022293862, 7022293863 • KORAMANGALA Ph: 7022294007, 7022192275 • KR PURAM Ph: 70222 93859, 70222 93856 • MARAGONDANAHALLI Ph: 70222 93861 / 981 • MARATHAHALLI Ph: 70222 93890 / 875 MATHIKERE Ph: 7022293870, 8179934718 • MYSURU Ph: 7022293922,7022662586 • NAGARBHAVI Ph: 7022293912, 7022281466 • TUMKUR Ph: 7349738565,8179948017 • NANDINI LAYOUT Ph: 7022293872, 7022293870 • MALLASANDRA Ph: 70220 01272, 7899964836 • RAMAMURTHY NAGAR Ph: 7022293867, 7022293866 • RK LAYOUT Ph: 7022293884, 7022293864 RT NAGAR Ph: 7022294015/014 SAHAKAR NAGAR Ph: 7349738570, 7022293942 UTTARAHALLI Ph: 7022192738, 7411125668 • VIDYARANYAPURA Ph: 7022293943, 7022293944 • WHITEFIELD Ph: 7022960894, 7022192032 • YELAHANKA Ph: 7349738562, 7022293880 CO SCHOOLS • CO-CV Raman Bhavan, Kasturi Nagar Ph: 70222 24095 • CO-Bhaskara Bhavan BTM- Hulimavu Ph: 7022293931 • CO-Prasanthi Bhavan, Whitefield Ph: 702201267 • Marathahalli CO Ph: 7022293955 • CO Sindhu Bhavan, Sahakar Nagar Ph: 7022293881 • CO Kaveri Bhavan, Kasavanahalli Ph: 70222 93858 • STAR CO, Nagarbhavi Ph: 7022293962 • CO- Triveni Bhavan, JP Nagar Ph: 7022293922 • STAR CO Ballari Ph: 7022293903

COLLEGES • VIDYARANYAPURA - Ph: 7022294002, 9606980496 • RAJAJINAGAR COE - Ph: 7022294013, 9606980313 • ELECTRONIC CITY (PHASE-2) - Ph: 7022293930, 8179945272 • BALLARI - Ph: 7022293903, 7022293905 • RAMAMURTHY NAGAR - Ph: 7022381465, 7022293854 • CV RAMAN NAGAR - Ph: 7022281463, 7022293953 • BELLANDUR - Ph: 7022293948, 7022293858 • CHANDAPURA - Ph: 7349738574, 7022030836 • HULIMAVU, NOBONAGAR (CO-BHASKARA BHAVAN) - Ph: 7022293931, 9606084890, 7022960891 • KASAVANAHALLI (CO KAVERI BHAVAN) - Ph: 7022293858, 7022293894 • KEMPAPURA, DASARAHALLI (CO-KUVEMPU BHAVAN) - Ph: 7022294013, 7022294004 • WHITEFIELD (CO PRASHANTHI BHAVAN) - Ph: 7022001267 • SAHAKAR NAGAR (CO-SINDHU BHAVAN) - Ph: 7022293924, 70222939246 • JP NAGAR - Ph: 7022293922, 7022293921 • GIRINAGAR - Ph: 7022293962/946, 8722278676 • MARATHAHALLI - Ph: 7022293955, 7022304342 • MALLASANDRA - Ph: 7022293922, 7022001268 • NAGARBHAVI - Ph: 7022293879, 7022293939, 7022293962 • MYSURU - Ph: 7022293922, 7022662586 • TUMKUR - Ph: 7349738565, 8179939626 • BYRATHI - Ph: 7022293850, 7022293853 • KASTURI NAGAR (CO-CV RAMAN BHAVAN) - Ph: 7022224095, 7022224102 • YELAHANKA - Ph: 7022017474, 7022012424 • HOSUR - Ph: 8438653429, 8438664529 • RESIDENTIAL COLLEGES - PUNEET BHAVAN (BANDAPURA - GIRLS) - Ph: 7337587421, 7022001271 • NLM GIRLS (NELAMANGALA) - Ph: 7022293938 • NLM BOYS (NELAMANGALA) - Ph: 7022294001 • BLR-SAMETHANALLI - PRASHANTHI CO BOYS - Ph: 7337587421 • RESIDENTIAL CO SCHOOLS - CO - Saraswathi Bhavan, Boys Campus, Goravigere - Ph: 9642412345 • Girls Campus: Bandapura - Ph: 8351056789

SCAN QR FOR ADMISSIONS

nLearn Online self-learning app • nConnect Tech-enabled performance tracking

#YourDreamsAreOurDreams | Toll Free: 1800 102 3344 | www.narayanagroup.com

‘ಅನರ್ಹತೆ ಕೋರಿ ಸಭಾಪತಿಗೆ ಪತ್ರ’

ಸಂಸದರ ಪಕ್ಷಾಂತರ ‘ಸಂವಿಧಾನಬಾಹಿರ’ ಎಎಪಿ ನಾಯಕ ಸಂಜಯ್ ಸಿಂಗ್

ನವದೆಹಲಿ/ ಚಂಡೀಗಢ (ಪಿಟಿಐ): ಬಿಜೆಪಿ ಸೇರಿರುವ ತನ್ನ ಏಳು ಸಂಸದರನ್ನು ಮೇಲ್ಮನೆಯಿಂದ ಅನರ್ಹಗೊಳಿಸುವಂತೆ ಕೋರಿ ಪಕ್ಷವು ರಾಜ್ಯಸಭಾ ಸಭಾಪತಿಗೆ ಪತ್ರ ಬರೆಯಲಿದೆ ಎಂದು ಎಎಪಿ ನಾಯಕ ಸಂಜಯ್ ಸಿಂಗ್ ಶನಿವಾರ ಹೇಳಿದರು.

‘ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಯಾವುದೇ ರೀತಿಯ ಒಡಕು ಅಥವಾ ಗುಂಪುಗಾರಿಕೆ ನಡೆಯುವಂತಿಲ್ಲ ಎಂದು ಪಕ್ಷಾಂತರ ನಿಷೇಧ ಕಾನೂನು ಸ್ಪಷ್ಟವಾಗಿ ಹೇಳುತ್ತದೆ. ಒಂದು ಪಕ್ಷದ ಮೂರನೇ ಎರಡರಷ್ಟು ಸದಸ್ಯರು ಪಕ್ಷಾಂತರ ಗೊಂಡರೂ, ಅದಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲ’ ಎಂದರು.

‘ಬಿಜೆಪಿ ಸೇರಲು ನಿರ್ಧರಿಸಿರುವ ಎಎಪಿಯ ಏಳು ಸಂಸದರ ನಡೆ ‘ಅಸಾಂವಿಧಾನಿಕ’ ಮತ್ತು ‘ಕಾನೂನು ಬಾಹಿರ’ವಾಗಿದೆ. ಏಳೂ ಮಂದಿಯನ್ನು ಅನರ್ಹಗೊಳಿಸುವಂತೆ ಕೋರಿ ರಾಜ್ಯಸಭಾ ಸಭಾಪತಿಗೆ ಪತ್ರ ಬರೆಯುತ್ತೇವೆ’ ಎಂದು ಪಕ್ಷದ ತೀರ್ಮಾನವನ್ನು ತಿಳಿಸಿದರು. ಎಎಪಿಯ ರಾಜ್ಯಸಭಾ ಸದಸ್ಯರಾದ ರಾಘವ್ ಚಡ್ಡಾ, ಸಂದೀಪ್ ಪಾಠಕ್, ಅಶೋಕ್ ಮಿತ್ತಲ್, ದೆಹಲಿ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಸ್ವಾತಿ ಮಾಲಿವಾಲ್, ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್, ರಾಜಿಂದರ್ ಗುಪ್ತಾ ಮತ್ತು ವಿಕ್ರಂ ಸಾಹ್ನಿ ಅವರು ಬಿಜೆಪಿ ಸೇರುವುದಾಗಿ ಶುಕ್ರವಾರ ಘೋಷಿಸಿದ್ದರು.

ರಾಷ್ಟ್ರಪತಿ ಭೇಟಿಗೆ ಸಮಯ ಕೋರಿದ ಮಾನ್: ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ರಾಜ್ಯಸಭಾ ಸದಸ್ಯರು ಬಿಜೆಪಿ ಸೇರ್ಪಡೆಯಾದ ವಿಚಾರಕ್ಕೆ ಸಂಬಂಧಿಸಿದಂತೆ ಪಕ್ಷದ ಶಾಸಕರೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲು ಸಮಯ ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎಎಪಿ ತೊರೆದು ಬಿಜೆಪಿಗೆ ಸೇರ್ಪಡೆಗೊಂಡ ಪಂಜಾಬ್‌ನ ರಾಜ್ಯಸಭಾ ಸದಸ್ಯರನ್ನು ‘ವಾಪಸ್ ಕರೆಸಿಕೊಳ್ಳುವ’ ಕುರಿತು ಮುಖ್ಯಮಂತ್ರಿ ಅವರು ತಮ್ಮ ಪಕ್ಷದ ನಿಲುವನ್ನು ರಾಷ್ಟ್ರಪತಿಗೆ ತಿಳಿಸಲಿದ್ದಾರೆ ಎಂದು ಮೂಲಗಳು ಹೇಳಿವೆ. ಬಿಜೆಪಿ ಸೇರಿರುವ ಏಳು ಸದಸ್ಯರಲ್ಲಿ ಆರು ಮಂದಿ ಪಂಜಾಬ್‌ನಿಂದ ರಾಜ್ಯಸಭೆಗೆ ಆಯ್ಕೆಯಾದವರು.

‘ಬಿಜೆಪಿಯು ಎಎಪಿಯಲ್ಲಿ ಒಡಕು ಮೂಡಿಸಲು ಪ್ರಯತ್ನಿಸುತ್ತಿದೆ’ ಎಂದು ಆರೋಪಿಸಿದ ಅವರು, ಪಕ್ಷವನ್ನು ತೊರೆದಿರುವ ನಾಯಕರು ಪಂಜಾಬಿನ ಜನರಿಗೆ ದ್ರೋಹ ಬಗೆದಿದ್ದಾರೆ ಎಂದು ಟೀಕಿಸಿದರು.



ಎಎಪಿಯ ಏಳು ರಾಜ್ಯಸಭಾ ಸದಸ್ಯರು ಪಕ್ಷದಿಂದ ನಿರ್ಗಮಿಸಿರುವುದು ಅರವಿಂದ ಕೇಜ್ರಿವಾಲ್ ಅವರ ‘ಸರ್ವಾಧಿಕಾರಿ’ ಧೋರಣೆಗೆ ಬಿದ್ದಿರುವ ದೊಡ್ಡ ಪೆಟ್ಟು
ರೇಖಾ ಗುಪ್ತಾ, ದೆಹಲಿ ಮುಖ್ಯಮಂತ್ರಿ

‘ಬಿಜೆಪಿ ‘ವಾಷಿಂಗ್ ಮಷಿನ್’ ಕಾರ್ಯಾರಂಭ’

ಎಎಪಿ ಸಂಸದರು ಬಿಜೆಪಿ ಸೇರಿರುವುದನ್ನು ಉಲ್ಲೇಖಿಸಿ ಕಾಂಗ್ರೆಸ್ ಪಕ್ಷವು ಬಿಜೆಪಿಯ ಕಾಲೆಳೆದಿದ್ದು, ‘ವಾಷಿಂಗ್ ಮಷಿನ್’ ಮತ್ತೆ ಕಾರ್ಯಾರಂಭ ಮಾಡಿದೆ ಎಂದು ಹೇಳಿದೆ.



‘ಮೋದಿ ವಾಷಿಂಗ್ ಪೌಡರ್ ಜತೆ ಬಿಜೆಪಿ ವಾಷಿಂಗ್ ಮಷಿನ್ ಮರಳಿದೆ. ತಮ್ಮನ್ನು ತಾವು ಸದ್ಗುಣ, ಪ್ರಾಮಾಣಿಕತೆ ಮತ್ತು ಸಿದ್ಧಾಂತದ ಮಾದರಿಗಳೆಂದು ಬಿಂಬಿಸಿಕೊಂಡವರ ನಿಜ ಬಣ್ಣ ಬಯಲಾಗಿದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಟ್ವೀಟ್’ ಮಾಡಿದ್ದಾರೆ.

ವಿವಿಧ ಪ್ರಕರಣಗಳನ್ನು ಎದುರಿಸುತ್ತಿರುವವಿಪಕ್ಷಗಳ ನಾಯಕರನ್ನು ಬಿಜೆಪಿಯು ತನ್ನ ಪಕ್ಷಕ್ಕೆ ಸೇರಿಸಿಕೊಂಡ ಬಳಿಕ ಅವರ ವಿರುದ್ಧದ ತನಿಖಾ ಪ್ರಕ್ರಿಯೆ ನಿಧಾನ ವಾಗುತ್ತದೆ ಎಂದು ಕಾಂಗ್ರೆಸ್ ಆರೋಪಿಸುತ್ತಾ ಬಂದಿದೆ. ಬಿಜೆಪಿ ಸೇರಿರುವ ಎಎಪಿ ಸಂಸದ ಅಶೋಕ್ ಮಿತ್ತಲ್ ಅವರು ಕೆಲ ದಿನಗಳ ಹಿಂದೆ ಜಾರಿ ನಿರ್ದೇಶನಾಲಯದ (ಇ.ಡಿ) ದಾಳಿ ಎದುರಿಸಿದ್ದರು.

‘ಮೂಲತತ್ವಗಳಿಂದ ದೂರ ಸರಿದ ಎಎಪಿ’

‘ಎಎಪಿಯು ತನ್ನ ಮೂಲತತ್ವಗಳಿಂದ ದೂರ ಸರಿದಿದ್ದು, ಅದರ ನಾಯಕ ಅರವಿಂದ ಕೇಜ್ರಿವಾಲ್ ಅವರು ಈ ಹಿಂದೆ ಇದ್ದಂತೆ ಇಲ್ಲ’ ಎಂದು ಬಿಜೆಪಿ ಸೇರಿರುವ ಸ್ವಾತಿ ಮಾಲಿವಾಲ್ ಶನಿವಾರ ಆರೋಪಿಸಿದ್ದಾರೆ.



‘ನಾನು ನನ್ನ ಮನೆಯನ್ನು ತೊರೆದು, ಏಳು ವರ್ಷ ಕೊಳೆಗೇರಿಯಲ್ಲಿ ವಾಸಿಸುತ್ತಿದ್ದೆ. ಉದ್ಯೋಗ ತೊರೆದು ಎಲ್ಲ ಚಳವಳಿಗಳಿಗೆ ಬೆಂಬಲ ನೀಡಿದ್ದೇನೆ. ಆದರೆ, ಕೇಜ್ರಿವಾಲ್ ನಿವಾಸದಲ್ಲಿ ಅವರ ಆಪ್ತ ಸಹಾಯಕನಿಂದ ಹಲ್ಲೆಗೊಳಗಾದ ಸಂದರ್ಭದಲ್ಲಿ ದೂರು ನೀಡಲು ಮುಂದಾದಾಗ ನನ್ನನ್ನು ಬೆದರಿಸಲಾಯಿತು’ ಎಂದು ಪಿಟಿಐ ವಿಡಿಯೊಗೆ ತಿಳಿಸಿದ್ದಾರೆ.

‘ಪ್ರಕರಣ ಹಿಂಪಡೆಯುವಂತೆ ಎರಡು ವರ್ಷ ಒತ್ತಡ ಹೇರಲಾಯಿತು. ಆದರೆ ನಾನು ತಲೆಕೆಡಿಸಿಕೊಳ್ಳಲಿಲ್ಲ. ಇದರಿಂದಾಗಿ ಸಂಸತ್ತಿನಲ್ಲಿ ಒಂದು ನಿಮಿಷ ಮಾತನಾಡಲೂ ಪಕ್ಷವು ನನಗೆ ಅವಕಾಶ ನೀಡಲಿಲ್ಲ’ ಎಂದಿದ್ದಾರೆ.

ಚಿಟಿಕೆ ಸುದ್ದಿ

ತುಂಗಭದ್ರಾ ಅಣೆಕಟ್ಟೆ: ಕ್ರೆಸ್ಟ್‌ಗೇಟ್ ಅಳವಡಿಕೆ ಪೂರ್ಣ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಗೆ ನೂತನ ಕ್ರೆಸ್ಟ್‌ಗೇಟ್‌ಗಳ ಅಳವಡಿಕೆ ಕಾರ್ಯ ಶನಿವಾರ ಪೂರ್ಣಗೊಂಡಿತು. ಮುಂಗಾರು ಅವಧಿಯಲ್ಲಿ ಉತ್ತಮ ಮಳೆಯಾಗಿ ಅಣೆಕಟ್ಟೆ ಭರ್ತಿಯಾಗಿ 15 ಲಕ್ಷ ಎಕರೆಗೆ ನೀರು ಸಿಗಲಿದೆ.

ಕ್ರೆಸ್ಟ್‌ಗೇಟ್ ತಜ್ಞ ಕನ್ನಯ್ಯ ನಾಯ್ಡು ಅವರು ಇದೇ 14ರಂದು ಅಣೆಕಟ್ಟೆಗೆ ಭೇಟಿ ನೀಡಿ, ಗೇಟ್‌ಗಳ ವಿನ್ಯಾಸ, ಕಾಮಗಾರಿ ಕಂಡು ಸಂತೃಪ್ತಿ ವ್ಯಕ್ತಪಡಿಸಿದ್ದರು. ಈ ತಿಂಗಳೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದಿದ್ದರು.

‘ಪ್ರಮುಖ ಕೆಲಸಗಳು ಮುಗಿದಿವೆ. ವೆಲ್ಡಿಂಗ್, ಪೇಂಟಿಂಗ್ ಕೆಲ ಕೆಲಸಗಳು ಬಾಕಿ ಇವೆ. ಮೇ ಎರಡನೇ ವಾರ ಚೈನ್‌ಲಿಂಕ್ ಬರಲಿವೆ. ಮೇ ಅಂತ್ಯದೊಳಗೆ ಅಣೆಕಟ್ಟೆ ಪೂರ್ಣಪ್ರಮಾಣದಲ್ಲಿ ನೀರು ಭರ್ತಿ ಮಾಡುವುದಕ್ಕೆ ಸಜ್ಜಾಗಲಿದೆ’ ಎಂದು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ತಿಳಿಸಿದರು.

ಕೆಎಸ್ಎಸ್ಐಡಿಸಿ ನೇಮಕಾತಿ ಪರೀಕ್ಷೆ ಇಂದು

ಬೆಂಗಳೂರು: ಕೆಎಸ್‌ಎಸ್‌ಐಡಿಸಿ ಮತ್ತು ಬೆಂಗಳೂರು ಜಲಮಂಡಳಿಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್, ವ್ಯವಸ್ಥಾಪಕ ಹಾಗೂ ಸಹಾಯಕ ವ್ಯವಸ್ಥಾಪಕರ ಹುದ್ದೆಗಳಿಗೆ ಏ.26 ಮತ್ತು 27ರಂದು ಲಿಖಿತ ಪರೀಕ್ಷೆ ನಡೆಯಲಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿದ್ಧತೆ ಪೂರ್ಣಗೊಳಿಸಿದೆ.

ಉಳಿಕ ಮೂಲ ವೃಂದದ ಅಭ್ಯರ್ಥಿಗಳಿಗೆ ಏ.26ರಂದು ಬೆಂಗಳೂರಿನ 11 ಮತ್ತು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗೆ ಏ.27ರಂದು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿನ ಚಲನವಲನಗಳನ್ನು ಬೆಂಗಳೂರಿನ ಕೆಇಎ ಕಚೇರಿಯಲ್ಲಿ ಸ್ಥಾಪಿಸಿರುವ ನಿರ್ವಹಣಾ ಕೇಂದ್ರದಿಂದ ನಿಗಾ ವಹಿಸಲಾಗುವುದು. ಅಕ್ರಮಗಳಿಗೆ ಅವಕಾಶ ಇಲ್ಲದಂತೆ ಪಾರದರ್ಶಕ ವಾಗಿಪರೀಕ್ಷೆ ನಡೆಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ನೀಟ್: ಎಂಬಿಬಿಎಸ್ ವಿದ್ಯಾರ್ಥಿಗಳಿಗಿಲ್ಲ ರಜೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಕಾರಣಕ್ಕೆ ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮೇ 2 ಮತ್ತು 3ರಂದು ರಜೆ ನೀಡಬಾರದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಸೂಚಿಸಿದೆ.

ಹಿಂದಿನ ವರ್ಷಗಳಲ್ಲಿ ಕೆಲವು ಎಂಬಿಬಿಎಸ್ ವಿದ್ಯಾರ್ಥಿಗಳು ಪರೀಕ್ಷಾ ವಂಚನೆ ಪ್ರಕರಣಗಳಲ್ಲಿ ಸಿಕ್ಕಿಬಿದ್ದಿದ್ದರು. ಬೇರೆ ಅಭ್ಯರ್ಥಿಗಳ ಪರವಾಗಿ ಪರೀಕ್ಷೆಗೆ ಹಾಜರಾಗಿದ್ದ ಪ್ರಕರಣಗಳು ನಡೆದಿದ್ದವು. ಹಾಗಾಗಿ, ಕೇಂದ್ರ ಶಿಕ್ಷಣ ಸಚಿವಾಲಯದ ಸೂಚನೆಯಂತೆ ಆಯೋಗ ಆದೇಶವನ್ನು ಹೊರಡಿಸಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ದೇಶದಾದ್ಯಂತ ಮೇ 3ರಂದು ನೀಟ್ ಆಯೋಜಿಸಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಪರೀಕ್ಷಾ ದುರುಪಯೋಗ ತಡೆಯಲು ಹಾಗೂ ಪರೀಕ್ಷೆಯನ್ನು ನ್ಯಾಯಸಮ್ಮತವಾಗಿ ನಡೆಸಲು ನಿರ್ಧಾರ ಕೈಗೊಳ್ಳಲಾಗಿದೆ. ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ನಿಗಾವಹಿಸಬೇಕು ಎಂದು ಸೂಚಿಸಲಾಗಿದೆ.

ಸುದ್ದಿ 2 ನಿಮಿಷ

ಪೋಷಣ್: ಪ್ರತಿಕ್ರಿಯೆ ಕೇಳಿದ ಕೋರ್ಟ್

ಬೆಂಗಳೂರು: ‘ಪೋಷಣ್–2 ಅಭಿಯಾನದಡಿ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರು, ಬಾಣಂತಿಯರು ಸೇರಿದಂತೆ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ವಿತರಿಸುವಾಗ ಮುಖ ಗುರುತಿಸುವಿಕೆಯನ್ನು ಕಡ್ಡಾಯಗೊಳಿಸಿರುವ ಷರತ್ತನ್ನು ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ನಿಮ್ಮ ಪ್ರತಿಕ್ರಿಯೆ ತಿಳಿಸಿ’ ಎಂದು ಹೈಕೋರ್ಟ್, ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ವರಲಕ್ಷ್ಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿ ಈ ಕುರಿತಂತೆ ಉಭಯ ಪ್ರತಿವಾದಿಗಳಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

‘ಮುಖ ಗುರುತಿಸುವಿಕೆಯನ್ನು ಕಡ್ಡಾಯಗೊಳಿಸಿ 2025ರ ಮೇ 3ರಂದು ಹೊರಡಿಸಿರುವ ಮಾರ್ಗಸೂಚಿ ರದ್ದುಪಡಿಸಬೇಕು. ಬಯೋಮೆಟ್ರಿಕ್ ಅಲ್ಲದ ಪರ್ಯಾಯ ವಿಧಾನಗಳ ಮೂಲಕ ವಿತರಣೆಗೆ ಅನುಮತಿ ನೀಡುವಂತೆ ಪ್ರತಿವಾದಿಗಳಿಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಚಿರೇಕಲ್ಲು ಗುಡ್ಡ: ಮಧ್ಯ ಶಿಲಾಯುಗದ ಕುರುಹು ಪತ್ತೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಚಿರೇಕಲ್ಲು ಗುಡ್ಡಗಳಲ್ಲಿ ಸಂಶೋಧನೆ ವೇಳೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯು (ಎಎಸ್ಐ) ಮಧ್ಯ ಶಿಲಾಯುಗದಲ್ಲಿನ ಹಲವು ಕುರುಹುಗಳನ್ನು ಗುರುತಿಸಿದೆ.

‘ಕಾರವಾರದಿಂದ ಭಟ್ಕಳದವರೆಗೆ ಚಿರೇಕಲ್ಲು ಬೆಟ್ಟ ಕೇಂದ್ರೀಕರಿಸಿಕೊಂಡು ಪರಿಶೀಲನೆ ನಡೆಯಿತು. ಶಿಲಾಯುಗದಲ್ಲಿ ಇಲ್ಲಿ ಚಟುವಟಿಕೆಗಳು ನಡೆದಿದ್ದವು ಎಂಬುದು ದೃಢಪಟ್ಟಿದೆ’ ಎಂದು ಎಎಸ್ಐ ಹೇಳಿದೆ. ‘30 ರಿಂದ 120 ಮೀಟರ್ ಎತ್ತರದ ಚಿರೇಕಲ್ಲಿನ ಬೆಟ್ಟಗಳಲ್ಲಿ ಸಂಶೋಧನೆ ನಡೆಸಲಾಗಿದೆ. ಅಂತಹ ಪ್ರದೇಶಗಳಲ್ಲಿ ಮಧ್ಯ ಮತ್ತು ನವ ಶಿಲಾಯುಗದ ಸಾಂಸ್ಕೃತಿಕ ಅವಶೇಷಗಳು ಕಂಡುಬಂದಿವೆ. ಮಧ್ಯ ಶಿಲಾಯುಗದ ಹಲವು ರಚನೆಗಳು ಮತ್ತು ಕಲ್ಲಿನ ಆಯುಧಗಳನ್ನು ಪತ್ತೆ ಹಚ್ಚಲಾಗಿದೆ’ ಎಂದು ತಿಳಿಸಿದೆ.

‘ಮಧ್ಯ ಶಿಲಾಯುಗದ ರಚನೆಗಳು, ಕುಮಟಾದ ಹರನೀರ, ಮಿರ್ಜಾನ್ ಬಳಿ ಉಪಕರಣಗಳು ಪತ್ತೆಯಾಗಿವೆ. ಕುಮಟಾ ಮತ್ತು ನೀಲಕೊಂಡದ ಬಳಿ ನವಶಿಲಾಯುಗದ ಕುರುಹುಗಳು ಸಿಕ್ಕಿವೆ’ ಎಂದು ಸಂಸ್ಥೆ ಹೇಳಿದೆ. ‘ಕರಾವಳಿ ಭಾಗದಲ್ಲಿ ಸಿಕ್ಕ ಈ ಕುರುಹುಗಳು 20 ಸಾವಿರ ವರ್ಷಕ್ಕೂ ಹಿಂದೆ ಮಾನವ ಚಟುವಟಿಕೆಗಳು ಇಲ್ಲಿ ಇದ್ದವು ಎಂದು ದೃಢಪಡಿಸುತ್ತವೆ’ ಎಂದು ಇತಿಹಾಸಕಾರ ಲಕ್ಷ್ಮೀಶ ಸೋಂದಾ ವಿಶ್ಲೇಷಿಸಿದ್ದಾರೆ.

‘15ರ ಒಳಗೆ ಡಿಕೆಶಿಗೆ ಒಳ್ಳೆಯದಾಗುತ್ತೆ– ಶಾಸಕ ಎಚ್‌.ಡಿ. ರಂಗನಾಥ್

ಮತ್ತೆ ಮುನ್ನೆಲೆಗೆ ಬಂದ ‘ನಾಯಕತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ಮತ್ತು ರಾಜ್ಯದಲ್ಲಿನ ಎರಡು ಕ್ಷೇತ್ರಗಳ ಉಪ ಚುನಾವಣೆಯ ಕಾರಣಕ್ಕೆ ತಣ್ಣಗಾಗಿದ್ದ ನಾಯಕತ್ವ ಬದಲಾವಣೆ ಮತ್ತು ಸಂಪುಟ ಪುನರ್ ರಚನೆ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ.

ಕಳೆದ ಎರಡು ದಿನಗಳಿಂದ ನವದೆಹಲಿಯಲ್ಲಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವುದು ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಚುನಾವಣೆಯ ಫಲಿತಾಂಶ ಮೇ 4ರಂದು ಹೊರಬೀಳಲಿದ್ದು, ಆ ಬಳಿಕ ನಾಯಕತ್ವ ಗೊಂದಲ ವಿಚಾರದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕೆಂದು ಶಿವಕುಮಾರ್ ಪಟ್ಟು ಹಿಡಿದಿದ್ದಾರೆ ಎಂದು ಗೊತ್ತಾಗಿದೆ. ಈ ಮಧ್ಯೆ ತುಮಕೂರಿನಲ್ಲಿ ಶನಿವಾರ ಮಾತನಾಡಿದ ಶಾಸಕ ಡಾ.ಎಚ್.ಡಿ. ರಂಗನಾಥ್, ‘ಡಿ.ಕೆ. ಶಿವಕುಮಾರ್ ಅವರ ಹುಟ್ಟುಹಬ್ಬ ಮೇ 15ರಂದು ಇದೆ. ಅಷ್ಟರ ಒಳಗೆ ಅವರಿಗೆ ಒಳ್ಳೆಯದಾಗುತ್ತದೆ’ ಎಂದರು. ‘ಕಾಂಗ್ರೆಸ್‌ನಲ್ಲಿ ಏನಾಗಿದೆ ಎಂಬುವುದನ್ನು ಪಕ್ಷದ ಹೈಕಮಾಂಡ್ ಗಮನಿಸುತ್ತದೆ. ಕಾಂಗ್ರೆಸ್ ಶಾಸಕನಾಗಿ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ತಲೆಬಾಗುತ್ತೇನೆ’ ಎಂದರು.

‘ಅವಶ್ಯಕತೆ ಇದ್ದರೆ ನಾವೆಲ್ಲ ದೆಹಲಿಗೆ ಹೋಗುತ್ತೇವೆ. ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಮಾತನಾಡದಂತೆ ನೋಟಿಸ್ ಕೊಟ್ಟಿದ್ದಾರೆ. ಹೀಗಾಗಿ ನಾನು ಜಾಸ್ತಿ ಮಾತನಾಡಲ್ಲ’ ಎಂದೂ ಪ್ರತಿಕ್ರಿಯಿಸಿದರು.



ಮುಖ್ಯಮಂತ್ರಿ ಕುರ್ಚಿ ಮತ್ತು ಸಂಪುಟ ವಿಸ್ತರಣೆ ವಿಷಯದಲ್ಲಿ ಗೊಂದಲವಿದೆ. ಇದನ್ನು ಬಗೆಹರಿಸಲು ಪಕ್ಷದ ಹೈಕಮಾಂಡ್ ಯಾಕೆ ವಿಳಂಬ ಮಾಡುತ್ತಿದೆ ಎಂಬುದು ಗೊತ್ತಿಲ್ಲ
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

‘ಸಿ.ಎಂ ಸ್ಥಾನದ ಬಯಕೆ ತಪ್ಪಲ್ಲ’



‘ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಸದ್ಯ ಖಾಲಿ ಇಲ್ಲ. ಖಾಲಿ ಆದಾಗ ಯಾರು ಬಂದು ಕುಳಿತುಕೊಳ್ಳುತ್ತಾರೋ, ನೋಡೋಣ’ ಎಂದು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ ತಿಳಿಸಿದರು.

ಬೆಳಗಾವಿಯಲ್ಲಿ ಮಾತನಾಡಿದ ಅವರು, ‘ಅಧಿಕಾರ ಹಂಚಿಕೆ ವಿಷಯದಲ್ಲಿ ಏನು ಮಾತುಕತೆ ನಡೆದಿದೆ ಎಂಬುದು ಗೊತ್ತಿಲ್ಲ. ಮುಖ್ಯಮಂತ್ರಿ ಆಗಬೇಕೆಂದು ಬಯಸುವುದು ತಪ್ಪಲ್ಲ’ ಎಂದರು.

‘ಸಚಿವ ಸಂಪುಟ ವಿಸ್ತರಣೆ ವೇಳೆ ಈಗ ಇರುವ ಸಚಿವರ ಪೈಕಿ ಅರ್ಧದಷ್ಟು ಮಂದಿಯನ್ನು ಕೈಬಿಟ್ಟು ಹೊಸಬರಿಗೆ ಸ್ಥಾನ ನೀಡಲು ಕೆಲವರು ಕೋರಿದ್ದಾರೆ. ಅಂತಿಮವಾಗಿ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ’ ಎಂದೂ ಅವರು ಹೇಳಿದರು.

‘ಪವನ್ ಖೇರಾ ಪರ ಹೋರಾಟ’

ನವದೆಹಲಿ (ಪಿಟಿಐ): ಪಕ್ಷದ ನಾಯಕ ಪವನ್ ಖೇರಾ ಅವರ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿರುವ ಗುವಾಹಟಿ ನ್ಯಾಯಾಲಯದ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಲಾಗುವುದು ಎಂದು ಕಾಂಗ್ರೆಸ್ ಶನಿವಾರ ತಿಳಿಸಿದೆ.ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ‘ಬೆದರಿಕೆ, ಕಿರುಕುಳದ ರಾಜಕೀಯದ ವಿರುದ್ಧ ನ್ಯಾಯ ಲಭಿಸುತ್ತದೆ ಎಂಬ ವಿಶ್ವಾಸವಿದೆ’ ಎಂದು ಹೇಳಿದರು.

‘ಜನಿವಾರ ಪ್ರಕರಣ: ಕಠಿಣ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿಇಟಿ ಪರೀಕ್ಷೆಯ ವೇಳೆ ಕೃಪಾನಿಧಿ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿಗಳ ಜನಿವಾರ ತೆಗೆಸಿರುವುದು ಅಮಾನವೀಯ ನಡೆ. ಈ ಘಟನೆಯ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದು, ಕಾನೂನಿನ ಚೌಕಟ್ಟಿನಲ್ಲಿ ಪಾರದರ್ಶಕವಾಗಿ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

‘ಪರೀಕ್ಷೆಗೆ ಬರುವ ವಿದ್ಯಾರ್ಥಿಗಳ ಕಿವಿ ಓಲೆ, ಬಳೆ, ಹಿಜಾಬ್ ಅಥವಾ ಜನಿವಾರ ತೆಗೆಸುವುದು, ಉದ್ದನೆಯ ತೋಳಿಗೆ ಕತ್ತರಿ ಹಾಕುವುದು ಮನೋಸ್ಥೈರ್ಯ ಕುಗ್ಗಿಸುವ ಯತ್ನ. ಪರೀಕ್ಷಾ ಕೇಂದ್ರಗಳು ವಿದ್ಯಾರ್ಥಿಗಳ ಜ್ಞಾನವನ್ನು ಒರೆಗೆ ಹಚ್ಚುವ ತಾಣಗಳಾಗಬೇಕೇ ಹೊರತು, ಅವರ ಆತ್ಮಗೌರವಕ್ಕೆ ಧಕ್ಕೆ ತರುವ ಸ್ಥಳಗಳಲ್ಲ. ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಗಂಭೀರ ಕ್ರಮ ತೆಗೆದುಕೊಳ್ಳಲಿದೆ’ ಎಂದೂ ಅವರು ಹೇಳಿದ್ದಾರೆ.



ಮುಖ್ಯಮಂತ್ರಿಗೆ ಪತ್ರ: ‘ಪರೀಕ್ಷೆ ವೇಳೆ ಜನಿವಾರ ತೆಗೆಸುವ ಮೂಲಕ ಬ್ರಾಹ್ಮಣ ಸಮುದಾಯಕ್ಕೆ ಪದೇ–ಪದೇ ಅವಮಾನ ಮಾಡುತ್ತಿದ್ದು, ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕಾನೂನನ್ನು ರೂಪಿಸಬೇಕು’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಂಕರ ಗುಹ ದ್ವಾರಕನಾಥ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ಒಂದು ವರ್ಷದಲ್ಲಿ ಇಂತಹ ಹಲವು ಘಟನೆಗಳು ನಡೆದಿವೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ಬ್ರಾಹ್ಮಣರನ್ನು ಪದೇ–ಪದೇ ಅವಮಾನಕ್ಕೆ ಗುರಿ ಮಾಡುತ್ತಿರುವುದು ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯೇ ಸರಿ. ಅಂತಹ ಅಧಿಕಾರಿಗಳನ್ನು ಅಮಾನತು ಮಾಡಿದರೆ ಯಾವ ಪ್ರಯೋಜನವೂ ಇಲ್ಲ. ಮುಂಬರುವ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಿ, ಶಾಶ್ವತ ಪರಿಹಾರ ಕಂಡುಕೊಳ್ಳಬೇಕು’ ಎಂದಿದ್ದಾರೆ.

ಸಿಇಟಿ: ವಿದ್ಯಾರ್ಥಿ ಜನಿವಾರಕ್ಕೆ ಕತ್ತರಿ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಬೀಡಗಾನಹಳ್ಳಿ ಬಳಿಯ ನಾಗಾರ್ಜುನ ಎಂಜಿನಿಯರಿಂಗ್ ಕಾಲೇಜಿನ ಕೇಂದ್ರಕ್ಕೆ ಏ.23ರಂದು ಸಿಇಟಿ ಬರೆಯಲು ಬಂದಿದ್ದ ವಿದ್ಯಾರ್ಥಿ, ಚಿಂತಾಮಣಿಯ ಸುಪ್ರೀತ್ ಅವರು ಧರಿಸಿದ್ದ ಜನಿವಾರವನ್ನು ಪರೀಕ್ಷಾ ಕೇಂದ್ರದ ಸಿಬ್ಬಂದಿ ಕತ್ತರಿಸಿದ್ದಾರೆ.

ಘಟನೆ ಖಂಡಿಸಿ ಚಿಂತಾಮಣಿ ತಾಲ್ಲೂಕಿನ ಬ್ರಾಹ್ಮಣ ಸಮುದಾಯದ ಮುಖಂಡರು ಮತ್ತು ವಿದ್ಯಾರ್ಥಿ ತಾಯಿ ವಾಣಿ ಡಿವೈಎಸ್‌ಪಿಗೆ ದೂರು ನೀಡಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರಿಗೆ ಸೇರಿದ ಚಿಂತಾಮಣಿಯ ಕಿಶೋರ ವಿದ್ಯಾಭವನದಲ್ಲಿ ಶಿಕ್ಷಕಿಯಾಗಿರುವ ಸುಪ್ರೀತ್ ತಾಯಿ ವಾಣಿ, ‘ಸಂಬಂಧಿತರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

‘10 ದಿನದ ಹಿಂದೆ ಉಪನಯನ ವಾಗಿತ್ತು. ಪರೀಕ್ಷಾ ಕೇಂದ್ರದಲ್ಲಿ ಜನಿವಾರ ತೆಗೆಯಬೇಕು ಎಂದರು. ನಾನೇ ತೆಗೆಯಲು ಸಹ ಬಿಡಲಿಲ್ಲ. ಅವರೇ ಕತ್ತರಿಸಿ ಕಸದಬುಟ್ಟಿಗೆ ಎಸೆದರು’ ಎಂದು ಸುಪ್ರೀತ್ ಪ್ರತಿಕ್ರಿಯಿಸಿದ್ದಾನೆ.

‘ಪರವಾನಗಿ ರದ್ದುಪಡಿಸಿ’

‘ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಶಾಲಾ–ಕಾಲೇಜುಗಳ ಮಾನ್ಯತೆಯನ್ನು ರದ್ದುಪಡಿಸಿ’ ಎಂದು ಒತ್ತಾಯಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ‘ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆಗಳು ಹಿಂದಿನ ವರ್ಷ ನಡೆದಿತ್ತು. ಅಂತಹ ಕ್ರಮದ ವಿರುದ್ಧ ಬ್ರಾಹ್ಮಣ ಮಹಾಸಭಾವು ಕರ್ನಾಟಕ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯ ವಿಚಾರಣೆ ವೇಳೆ ರಾಜ್ಯ ಸರ್ಕಾರವು, ‘ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುತ್ತೇವೆ’ ಎಂದು ಮುಚ್ಚಳಿಕೆ ಬರೆದುಕೊಟ್ಟಿತ್ತು. ಆದರೂ, ಜನಿವಾರ ತೆಗೆಸಲಾಗಿದೆ’ ಎಂದಿದ್ದಾರೆ.



‘ಸರ್ಕಾರದ ಮುಚ್ಚಳಿಕೆಗೆ ಯಾವುದೇ ಬೆಲೆ ಇಲ್ಲ ಮತ್ತು ಕೆಲವು ಶಾಲಾ–ಕಾಲೇಜುಗಳು ಬ್ರಾಹ್ಮಣರ ವಿರುದ್ಧ ಹಗೆ ಸಾಧಿಸುತ್ತಿವೆ ಎಂಬುದನ್ನು ಈ ಘಟನೆ ಎತ್ತಿ ತೋರಿಸುತ್ತಿದೆ. ಅಂತಹ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಕಾಯ್ದೆ ರೂಪಿಸಿ: ಶರವಣ

‘ಸಿಇಟಿ ಬರೆಯಲು ಬಂದ ವಿದ್ಯಾರ್ಥಿಗಳ ಜನಿವಾರವನ್ನು ಬಲವಂತದಿಂದ ತೆಗೆಸಿರುವುದು ಮತ್ತು ವಿದ್ಯಾರ್ಥಿನಿಯರ ಮೂಗುತಿ ಮೇಲೆ ಪ್ಲಾಸ್ಟರ್ ಅಂಟಿಸಿರುವುದು ಖಂಡನೀಯ. ಇದನ್ನು ತಡೆಯಲು ಕಾಯ್ದೆ ರೂಪಿಸಿ’ ಎಂದು ವಿಧಾನ ಪರಿಷತ್ತಿನ ಜೆಡಿಎಸ್ ಸದಸ್ಯ ಟಿ.ಎ.ಶರವಣ ಹೇಳಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಜನಿವಾರ ಮತ್ತು ಮೂಗುತಿ ಒಳಗೆ ಏನಾದರೂ ಬಚ್ಚಿಟ್ಟುಕೊಂಡು ಬಂದು ಪರೀಕ್ಷೆಯಲ್ಲಿ ಕಾಪಿ ಹೊಡೆಯಲು ಸಾಧ್ಯವೇ. ಜನಿವಾರ ಮತ್ತು ಮೂಗುತಿ ಧಾರ್ಮಿಕ ವಿಚಾರಗಳು. ಅವುಗಳನ್ನು ತೆಗೆಸುವ ಮೂಲಕ ಧಾರ್ಮಿಕ ಭಾವನೆಗಳ ಮೇಲೆ ದೌರ್ಜನ್ಯ ಎಸಗಲಾಗಿದೆ’ ಎಂದಿದ್ದಾರೆ.

‘ಪರೀಕ್ಷೆ ಬರೆಯಲು ಹೋಗುವ ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಹಿಂಸೆ ಕೊಡಲಾಗುತ್ತಿದೆ. ಜನಿವಾರ ತೆಗೆಸಿದವರನ್ನು ಅಮಾನತು ಮಾಡಿದರೆ ಸಾಲದು, ಮತ್ತೆ ಇಂತಹ ಘಟನೆ ಜರುಗದೇ ಇರುವ ಹಾಗೆ ಕಾಯ್ದೆ ರೂಪಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಮೂಲಸೌಕರ್ಯ: ₹5,500 ಕೋಟಿ ಕೊಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹5,500 ಕೋಟಿ ಮಂಜೂರು ಮಾಡಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಅಧ್ಯಕ್ಷತೆಯಲ್ಲಿ ಶನಿವಾರ ಇಲ್ಲಿ ನಡೆದ ನಗರ ಸವಾಲು ನಿಧಿ (ಯುಸಿಎಫ್) ಮತ್ತು ಅರ್ಬನ್ ಇನ್ವೆಸ್ಟ್ ವಿಂಡೋ (ಯುಐವಿನ್) ಕುರಿತ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ಕರ್ನಾಟಕ ಸರ್ಕಾರವು ₹1.25 ಲಕ್ಷ ಕೋಟಿ ವೆಚ್ಚದ 1,082 ನಗರ ಮೂಲಸೌಕರ್ಯ ಯೋಜನೆಗಳನ್ನು ರೂಪಿಸಿದೆ. ಕೇಂದ್ರ ಸರ್ಕಾರವು ₹5,500 ಕೋಟಿಗಿಂತ ಹೆಚ್ಚಿನ ಅನುದಾನ ನೀಡಿ ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳಿಗೆ ಸಹಕಾರ ನೀಡಬೇಕು’ ಎಂದು ಮನವಿ ಮಾಡಿದರು.

‘ರಾಜ್ಯ ಸರ್ಕಾರವು ವಿಶ್ವದರ್ಜೆ ನಗರ ಮೂಲ ಸೌಕರ್ಯದೊಂದಿಗೆ ಭವಿಷ್ಯಕ್ಕೆ ಪೂರಕವಾಗಿ ಬೆಂಗಳೂರನ್ನು ಬಲಿಷ್ಠ ನಗರವನ್ನಾಗಿ ನಿರ್ಮಾಣ ಮಾಡಲಿದೆ’ ಎಂದು ಭರವಸೆ ನೀಡಿದರು.

ನಗರಗಳ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಉತ್ತೇಜನ ನೀಡಲು ಕೇಂದ್ರದ ₹1 ಲಕ್ಷ ಕೋಟಿ ನೆರವಿನಿಂದ ‘ನಗರ ಸವಾಲು ನಿಧಿ (ಯುಸಿಎಫ್)‘ ಆರಂಭಿಸಲು ಕೇಂದ್ರ ಸಚಿವ ಸಂಪುಟ ಇತ್ತೀಚೆಗೆ ಒಪ್ಪಿಗೆ ನೀಡಿತ್ತು. ನಗರ ಸವಾಲು ನಿಧಿ ಯೋಜನೆಯಡಿ ಕೇಂದ್ರ ಸರ್ಕಾರ ಯೋಜನಾ ವೆಚ್ಚದ ಶೇ 25 ಭರಿಸಲಿದೆ. ಈ ನಿಧಿಗೆ ಮಾರುಕಟ್ಟೆಯಿಂದ ಯೋಜನಾ ವೆಚ್ಚದ ಕನಿಷ್ಠ ಶೇಕಡಾ 50 ರಷ್ಟನ್ನು ಸಂಗ್ರಹಿಸುವುದು ಕಡ್ಡಾಯ. ಈ ಉಪಕ್ರಮವು ಮುಂದಿನ ಐದು ವರ್ಷಗಳಲ್ಲಿ ನಗರ ವಲಯದಲ್ಲಿ ಒಟ್ಟು ₹4 ಲಕ್ಷ ಕೋಟಿ ಹೂಡಿಕೆಗೆ ಕಾರಣವಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಈ ಯೋಜನೆಯನ್ನು ಈ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು.

ನೀತಿ ಆಯೋಗದ ‘ಪರಿಣಾಮಕಾರಿ ನಗರ ಆಡಳಿತದೆಡೆಗೆ ಸಾಗುವುದು ಮಿಲಿಯನ್‌ಪ್ಲಸ್ ನಗರಗಳಿಗೆ ಒಂದು ಚೌಕಟ್ಟು‘ ವರದಿಯನ್ನು ಮನೋಹರ್ ಲಾಲ್ ಖಟ್ಟರ್ ಬಿಡುಗಡೆ ಮಾಡಿದರು. ಡಿ.ಕೆ. ಶಿವಕುಮಾರ್ ಮತ್ತಿತರರು ಇದ್ದಾರೆ

80 ವಿದ್ಯಾರ್ಥಿಗಳ ಶುಲ್ಕ ಭರಿಸಲಿರುವ ದಾನಿ

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಕಳಸ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ಈ ವರ್ಷ ದಾಖಲಾಗುವ 80 ಅರ್ಹ ಬಡ ವಿದ್ಯಾರ್ಥಿಗಳ ದಾಖಲಾತಿಯ ವೆಚ್ಚವನ್ನು ಭರಿಸುವುದಾಗಿ ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ, ದಾನಿ ಹಿತ್ಲುಮಕ್ಕಿ ರಾಜೇಂದ್ರ ತಿಳಿಸಿದ್ದಾರೆ.

‘ವಿದ್ಯಾರ್ಥಿಗಳ ಆರ್ಥಿಕ ಸಂಕಷ್ಟದ ಅರಿವಿದೆ. ಯಾವ ಮಕ್ಕಳೂ ಆರ್ಥಿಕ ಸಮಸ್ಯೆಯ ಕಾರಣಕ್ಕಾಗಿ ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಅವರ ಪ್ರವೇಶದ ಎಲ್ಲ ಶುಲ್ಕವನ್ನು ಭರಿಸುತ್ತೇನೆ’ ಎಂದು ಅವರು ಹೇಳಿದ್ದಾರೆ. ‘ಕಾಲೇಜಿನಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಆರಂಭ ವಾಗಿದೆ. ಬಿ.ಎಗೆ 30 ವಿದ್ಯಾರ್ಥಿಗಳು, ಬಿ.ಕಾಂಗೆ 30 ವಿದ್ಯಾರ್ಥಿಗಳು ಮತ್ತು ಬಿ.ಸಿ.ಎಗೆ 20 ಮಕ್ಕಳು ಅರ್ಹತೆಗೆ ಅನುಸಾರ ಈ ಉಚಿತ ಪ್ರವೇಶದ ಸೌಲಭ್ಯ ಪಡೆಯಲಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.



ಹಿತ್ಲುಮಕ್ಕಿ ರಾಜೇಂದ್ರ

‘ರಾಜೇಂದ್ರ ಅವರ ಪ್ರಾಯೋಜಕತ್ವದಲ್ಲಿ ಪ್ರಥಮ ವರ್ಷದ ಪದವಿಗೆ ಸೇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಉಚಿತ ಪ್ರವೇಶ ಅವಕಾಶ ಸಿಗಲಿದೆ. ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಆರ್ಥಿಕ ಹಿನ್ನೆಲೆ ಗಮನಿಸಿ, ಅವರಿಗೂ ಉಚಿತ ಪ್ರವೇಶಾತಿ ಕೊಡುವ ಬಗ್ಗೆ ಆಡಳಿತ ಮಂಡಳಿ ತೀರ್ಮಾನಿಸಲಿದೆ. ರಾಜೇಂದ್ರ ಅವರು ಈ ಪ್ರಾಯೋಜಕತ್ವಕ್ಕೆ ಒಟ್ಟು ₹4.5 ಲಕ್ಷ ಭರಿಸಲಿದ್ದಾರೆ’ ಎಂದು ಪ್ರಾಂಶುಪಾಲ ವಿನಯಕುಮಾರ್ ಶೆಟ್ಟಿ ಹೇಳಿದ್ದಾರೆ.

ಶಿಕ್ಷಕಿ ಜಯಂತಿ ಅವರಿಗೆ ನಮಸ್ಕರಿಸಿದ ಶಾಸಕ ಗಂಟಿಹೊಳೆ

ಶಿಕ್ಷಕಿ ಕಾಲಿಗೆರಗಿದ ಶಾಸಕ

ಬೈಂದೂರು: ಇಲ್ಲಿನ ಶಿರೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಶಾಲೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶದ ರೂವಾರಿ ಎನ್ನಲಾದ ಪ್ರಾಂಶುಪಾಲೆ ಜಯಂತಿ ಅವರ ಕಾಲಿಗೆರಗಿ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಗೌರವಿಸಿದರು.

ಕಳೆದ ವರ್ಷ ಶೇ.35ರಷ್ಟು ಫಲಿತಾಂಶವಿದ್ದ ಶಾಲೆ ಈ ಬಾರಿ ಶೇ. 94ರಷ್ಟು ಫಲಿತಾಂಶ ಗಳಿಸಿದೆ. ಕಳೆದ ವರ್ಷ ಶಾಸಕ ಗುರುರಾಜ್ ಗಂಟಿಹೊಳೆ ಪ್ರಾಂಶುಪಾಲರನ್ನು ಹಾಗೂ ಶಿಕ್ಷಕರನ್ನು ಕಟು ಮಾತುಗಳಿಂದ ತರಾಟೆಗೆ ತೆಗೆದುಕೊಂಡಿದ್ದರು.

ಶನಿವಾರ ಶಾಲೆಗೆ ಭೇಟಿ ನೀಡಿದ ಶಾಸಕರು ಭಾವುಕರಾಗಿ ಶಿರಬಾಗಿದರು. ಇದನ್ನು ಕಂಡು ಅಲ್ಲಿದ್ದವರ ಕಣ್ಣಾಲಿಗಳು ಒದ್ದೆಯಾದವು.‘ಸೋತಾಗ ಎಚ್ಚರಿಸುವ ಕೆಲಸ ಆಗಬೇಕು. ಬದಲಾವಣೆಯ ಉದ್ದೇಶದಿಂದಲೇ ಕಳೆದ ಬಾರಿ ಟೀಕೆ ಮಾಡಿದ್ದೆ. ಜಯಂತಿ ಟೀಚರ್ ಮತ್ತು ತಂಡದವರು ಆ ಸವಾಲನ್ನು ಗೆದ್ದಿದ್ದಾರೆ’ ಎಂದು ಶಾಸಕರು ಹೇಳಿದರು. ಶಾಸಕರ ಕಾಳಜಿಗೆ ಜಯಂತಿ ಟೀಚರ್ ಕೂಡ ಕಣ್ಣೀರಾದರು.

ಪಶ್ಚಿಮ ಬಂಗಾಳ: 82 ವರ್ಷದ ಅಲಿ ಮಿರ್ಜಾಗೆ ಈ ಬಾರಿ ಮತದಾನ ಅವಕಾಶ ಇಲ್ಲ

‘ಛೋಟೆ ನವಾಬ್’ಗೆ ಎಸ್ಐಆರ್ ಆಘಾತ

● ಅನಿರ್ಬನ್ ಭೌಮಿಕ್

ಕೋಲ್ಕತ್ತ: ಸೈಯದ್ ಮೊಹಮ್ಮದ್ ರೆಜಾ ಅಲಿ ಮಿರ್ಜಾ ತಮ್ಮ ಜೀವನದಲ್ಲಿ ಒಮ್ಮೆಯೂ ಮತದಾನವನ್ನು ತಪ್ಪಿಸಿಕೊಂಡವರಲ್ಲ. ಪ್ರತಿ ಚುನಾವಣೆಯಲ್ಲೂ ಬೆಳಿಗ್ಗೆಯೇ ಮತಗಟ್ಟೆಗೆ ತೆರಳಿ ತಮ್ಮ ಹಕ್ಕು ಚಲಾಯಿಸುತ್ತಿದ್ದರು. ಮತದಾನದ ಆರಂಭಕ್ಕೂ ಮುನ್ನ ಸರತಿಯ ಸಾಲಿನಲ್ಲಿ ನಿಂತಿರುತ್ತಿದ್ದ ಕೆಲವರಲ್ಲಿ ಅವರೂ ಇರುತ್ತಿದ್ದರು.

ಆದರೆ, ಈ ಬಾರಿ 82 ವರ್ಷದ ಮಿರ್ಜಾ ಅವರು ಮುರ್ಶಿದಾಬಾದ್‌ನ ಕುತುಬ್‌ಪುರ ನವ ಆದರ್ಶ ಹೈಸ್ಕೂಲ್‌ನ ಮತಗಟ್ಟೆಯತ್ತ ಬರಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23ರಂದು ಮೊದಲ ಹಂತದ ಮತದಾನ ನಡೆದಿದ್ದು, 294 ಕ್ಷೇತ್ರಗಳಲ್ಲಿ 152 ಕ್ಷೇತ್ರಗಳ ಮತದಾರರು ಹಕ್ಕು ಚಲಾಯಿಸಿದ್ದಾರೆ.

ಮಿರ್ಜಾ ಅಲ್ಲದೆ ಅವರ ಪುತ್ರ ಸೈಯದ್ ಮೊಹಮ್ಮದ್ ಫಹೀಂ ಅಲಿ ಮಿರ್ಜಾ ಅವರೂ ಮತ ಚಲಾಯಿಸಲಿಲ್ಲ. ಮಾತ್ರವಲ್ಲ, ಅವರ ಸುಮಾರು 200ರಷ್ಟು ಸಂಬಂಧಿಕರೂ ಈ ಬಾರಿ ಮತದಾನದಿಂದ ದೂರ ಉಳಿಯಬೇಕಾಯಿತು. ಬಂಗಾಳದಲ್ಲಿ ಚುನಾವಣಾ ಆಯೋಗ ನಡೆಸಿದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಮಿರ್ಜಾ ಸೇರಿದಂತೆ ಇವರೆಲ್ಲರ ಮತದಾನದ ಹಕ್ಕನ್ನು ಕಸಿದುಕೊಂಡಿದೆ.

‘ಅವರು (ಚುನಾವಣಾ ಆಯೋಗ) ನನ್ನ ಹೆಸರನ್ನು ಮತದಾರರ ಪಟ್ಟಿಗೆ ಮತ್ತೆ ಸೇರಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಮತದಾನದ ದಿನ ಮತಗಟ್ಟೆಗೆ ಹೋಗಬೇಕು ಎಂದು ಒಮ್ಮೆ ಭಾವಿಸಿದ್ದೆ’ ಎಂದು ಮಿರ್ಜಾ ಹೇಳಿದರು. ‘ಆದರೆ, ನಾನು ನಂತರ ಆ ಆಲೋಚನೆಯನ್ನೇ ಕೈಬಿಟ್ಟೆ. ಏಕೆಂದರೆ, ಹೆಸರನ್ನು ಮತ್ತೆ ಪಟ್ಟಿಯಲ್ಲಿ ಸೇರಿಸಿದ್ದರೆ ಮುಂಚಿತವಾಗಿ ಮಾಹಿತಿ ಸಿಗುತ್ತಿತ್ತು’ ಎಂದರು.

ಮಿರ್ಜಾ ಅವರು ಬಂಗಾಳದ ನವಾಬರಾಗಿದ್ದ ಮೀರ್ ಜಾಫರ್ ಅವರ ವಂಶದ 15ನೇ ತಲೆಮಾರಿನವರು. ಜಾಫರ್ ಅವರು ಬಂಗಾಳದ ಕೊನೆಯ ಸ್ವತಂತ್ರ ನವಾಬರಾದ ಸಿರಾಜ್-ಉದ್-ದೌಲಾಗೆ ದ್ರೋಹ ಬಗೆದಿದ್ದರು ಮತ್ತು 1757ರ ಪ್ಲಾಸಿ ಕದನದಲ್ಲಿ ರಾಬರ್ಟ್ ಕ್ಲೈವ್ ಅವರೊಂದಿಗೆ ಸೇರಿಕೊಂಡು ಈಸ್ಟ್ ಇಂಡಿಯಾ ಕಂಪನಿಯ ಗೆಲುವಿಗೆ ನೆರವಾಗಿದ್ದರು.

ಸಿರಾಜ್-ಉದ್-ದೌಲಾ ಆಡಳಿತದ ಪತನ ಮತ್ತು ಅವರ ಮರಣದ ನಂತರ ಈಸ್ಟ್ ಇಂಡಿಯಾ ಕಂಪನಿಯು ಮೀರ್ ಜಾಫರ್ ಅವರನ್ನು ಬಂಗಾಳದ ನವಾಬ್ ಆಗಿ ನೇಮಕ ಮಾಡಿತು. ಅವರು 1757ರಿಂದ 1760ರವರೆಗೂ ಬಂಗಾಳವನ್ನು ಆಳಿದರು.

ಮಿರ್ಜಾ ಅವರು ಮುರ್ಶಿದಾಬಾದ್‌ನ ಭಾಗೀರಥಿ ನದಿ ದಂಡೆಯಲ್ಲಿರುವ ಕಿಲಾ ನಿಜಾಮತ್‌ನಲ್ಲಿ ತಮ್ಮ ಕುಟುಂಬದ ಜತೆ ನೆಲಸಿದ್ದಾರೆ. ಒಂದು ಕಾಲದಲ್ಲಿ ಬಂಗಾಳ, ಬಿಹಾರ ಮತ್ತು ಒಡಿಶಾದ ನವಾಬರ ಆಡಳಿತ ಕೇಂದ್ರವಾಗಿದ್ದ ಕಿಲಾ ನಿಜಾಮತ್ ಐತಿಹಾಸಿಕ ಪಟ್ಟಣ ಎನಿಸಿಕೊಂಡಿದೆ.

ಮೀರ್ ಜಾಫರ್ ಅವರ ತಲೆಮಾರಿನವರು ಮುರ್ಶಿದಾಬಾದ್‌ನ ಇತಿಹಾಸದ ಜತೆ ಬೆಸೆದುಕೊಂಡಿದ್ದಾರೆ. ಹಾಗಿದ್ದರೂ, ಮತದಾನದ ಹಕ್ಕನ್ನು ಕಳೆದುಕೊಂಡಿರುವುದು ಮಿರ್ಜಾ ಅವರಿಗೆ ಸಾಕಷ್ಟು ಬೇಸರ ಉಂಟುಮಾಡಿದೆ.

‘ದಾಖಲೆ ಸಲ್ಲಿಸಿದ್ದರೂ ಹೆಸರು ಕೈಬಿಟ್ಟರು’

‘ನಾನು ದಶಕಗಳಿಂದ ಪ್ರತಿ ಚುನಾವಣೆಯಲ್ಲೂ ಮತ ಚಲಾಯಿಸುತ್ತಿದ್ದೇನೆ. 2002ರ ಮತದಾರರ ಪಟ್ಟಿಯಲ್ಲೂ ನನ್ನ ಹೆಸರು ಇತ್ತು’ ಎಂದು ಮುರ್ಶಿದಾಬಾದ್‌ನಲ್ಲಿ ‘ಛೋಟೆ ನವಾಬ್’ ಎಂದೇ ಹೆಸರು ಪಡೆದಿರುವ ಅವರು ಮತದಾರರ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ತೋರಿಸುತ್ತಾ ಹೇಳಿದರು.

‘ಚುನಾವಣಾ ಆಯೋಗದ ಅಧಿಕಾರಿಗಳು ಅಹವಾಲು ಸ್ವೀಕರಿಸಲು ನನ್ನನ್ನು ಕರೆದರು. ನಾನು ಎಲ್ಲಾ ದಾಖಲೆಗಳನ್ನು ಸಲ್ಲಿಸಿದೆ. ಆದರೆ ಸೂಕ್ತ ದಾಖಲೆ ಸಲ್ಲಿಸಿಲ್ಲ ಎಂದು ನನ್ನ ಹೆಸರು ಅಳಿಸಿಹಾಕಿದರು’ ಎಂದರು. ‘ನನ್ನ ಪುತ್ರ, ಕುಟುಂಬದ ಇತರ ಸದಸ್ಯರು ಮತ್ತು ಹೆಚ್ಚಿನ ಸಂಬಂಧಿಕರ ಹೆಸರನ್ನೂ ಅಳಿಸಿದ್ದಾರೆ’ ಎಂದು ಅಳಲು ತೋಡಿಕೊಂಡರು.

2002ರ ಪಟ್ಟಿಯಲ್ಲಿರುವ ಹೆಸರಿನ ಜತೆ ‘ಸೈಯದ್’ ಎಂಬುದು ಇರಲಿಲ್ಲ. ಅನಂತರದ ಪಟ್ಟಿಗಳಲ್ಲಿ ಹೆಸರಿನ ಜತೆ ‘ಸೈಯದ್’ ಸೇರಿಸಲಾಗಿದೆ. ಹೆಸರು ಹೊಂದಾಣಿಕೆಯಾಗದಿರುವುದನ್ನು ವಿವರಿಸಲು ಅಗತ್ಯ ದಾಖಲೆಗಳನ್ನು ಸಲ್ಲಿಸಿದರೂ, ಮತದಾರರ ಪಟ್ಟಿಯಿಂದ ಅವರ ಹೆಸರು ಕೈಬಿಡಲಾಗಿದೆ.

ಮುರ್ಶಿದಾಬಾದ್‌ನಲ್ಲಿರುವ ಹಜಾರ್‌ದುವಾರಿ ಅರಮನೆ ಮತ್ತು ಇತರ ಐತಿಹಾಸಿಕ ಸ್ಮಾರಕಗಳನ್ನು ತಮ್ಮ ಪೂರ್ವಜರು ನಿರ್ಮಿಸಿದ್ದಾರೆ. ಆದರೂ ತಮ್ಮ ಕುಟುಂಬ ಮತ್ತು ಮೀರ್ ಜಾಫರ್ ಅವರ ಇತರ ವಂಶಸ್ಥರ ಪೌರತ್ವವನ್ನು ಪ್ರಶ್ನಿಸಲಾಗಿದೆ ಎಂಬುದು ಅವರ ನೋವಿನ ನುಡಿ.



ಸೈಯದ್ ಮೊಹಮ್ಮದ್ ರೆಜಾ ಅಲಿ ಮಿರ್ಜಾ

ರಾಹುಲ್ ಶತಕ ಸಡಗರ
ನವದೆಹಲಿಯಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್ (ಔಟಾಗದೇ 152; 67ಎ, 4X16, 6X9) ಶತಕ ಗಳಿಸಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ದೇಶೀಯ ಟಾರ್ಪಿಡೊ ಹಸ್ತಾಂತರ 6
ಮೇಲ್ಮನವಿ ಸಲ್ಲಿಸಿದ ವಿನಯ ಕುಲಕರ್ಣಿ 5

‘ಎಚ್–1ಬಿ’ ವೀಸಾ 3 ವರ್ಷ ಸ್ಥಗಿತ: ಮಸೂದೆ ಮಂಡನೆ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾ ವಿತರಣೆಯನ್ನು ಮೂರು ವರ್ಷ ಸ್ಥಗಿತಗೊಳಿಸುವ ಮಸೂದೆಯನ್ನು ರಿಪಬ್ಲಿಕನ್ ಪಕ್ಷದ ಕೆಲವು ಸಂಸದರು ಅಮೆರಿಕ ಸಂಸತ್ತಿನಲ್ಲಿ ಮಂಡಿಸಿದ್ದಾರೆ.

ವಿದೇಶಿಗರು ಸ್ಥಳೀಯರಿಂದ ಉದ್ಯೋಗಾವಕಾಶಗಳನ್ನು ಹೈಜಾಕ್ ಮಾಡುತ್ತಿದ್ದಾರೆ. ಈ ಕಾರಣದಿಂದ ಮಸೂದೆಯನ್ನು ಮಂಡಿಸಿದ್ದೇವೆ ಎಂದು ಸಂಸದರು ತಿಳಿಸಿದ್ದಾರೆ.

ಸಂಸದ ಎಲಿ ಕ್ರೇನ್ ಅವರು ‘ಎಚ್–1ಬಿ ವೀಸಾ ದುರುಪಯೋಗ ಕಾಯ್ದೆ -2026’ ಅನ್ನು ಮಂಡಿಸಿದರು. ರಿಪಬ್ಲಿಕನ್ ಪಕ್ಷದ 7 ಸಂಸದರು ಮಸೂದೆಗೆ ಬೆಂಬಲ ಸೂಚಿಸಿದರು. ‘ನೂತನ ಕಾಯ್ದೆಯು ಅಮೆರಿಕನ್ನರ ಪರವಾಗಿ ಇರಲಿದೆ. ನಮ್ಮ ಸರ್ಕಾರವು ನಮ್ಮ ನಾಗರಿಕರ ಪರವಾಗಿ ಕೆಲಸ ಮಾಡಬೇಕೇ ಹೊರತು ಬೃಹತ್ ಸಂಸ್ಥೆಗಳ ಲಾಭಕ್ಕಾಗಿ ಅಲ್ಲ’ ಎಂದು ಕ್ರೇನ್ ಹೇಳಿದರು.

6

ತಾಲ್ಲೂಕು ಆಸ್ಪತ್ರೆಗೆ ಬೇಕು ‘ಚಿಕಿತ್ಸೆ’

ಕೊರತೆಗಳ ನಡುವೆ ಕಾರ್ಯನಿರ್ವಹಣೆ ಬೇಸರ ತರಿಸುವ ‘ಅನ್ಯ ಆಸ್ಪತ್ರೆಗೆ ಶಿಫಾರಸು’

● ವರುಣ ಹೆಗಡೆ

ಒಳನೋಟ

ಬೆಂಗಳೂರು: ಅದು 2025ರ ಅಕ್ಟೋಬರ್ 27. ಕಾಲ್ನಡಿಗೆಯಲ್ಲಿ ಮನೆಗೆ ತೆರಳುತ್ತಿದ್ದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ಬೋಳೆ ಗ್ರಾಮದ ನಿವಾಸಿ ಚಂದ್ರಹಾಸ ಆಗೇರ ಎಂಬ ಕಾರ್ಮಿಕನಿಗೆ, ಶೆಟಗೇರಿ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ವೇಗವಾಗಿ ಬಂದ ಕಾರೊಂದು ಗುದ್ದಿತು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಅಂಕೋಲಾ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದರೆ, ಅಲ್ಲಿ ಸೌಲಭ್ಯವಿಲ್ಲದ ಕಾರಣ ಬೇರೊಂದು ಆಸ್ಪತ್ರೆಗೆ ಶಿಫಾರಸು ಮಾಡಲಾಯಿತು. ಖಾಸಗಿ ಆಸ್ಪತ್ರೆಗಳಿಗೆ ಭರಿಸುವಷ್ಟು ಹಣ ಅವರ ಕುಟುಂಬಸ್ಥರ ಬಳಿ ಆ ವೇಳೆ ಇರದ ಕಾರಣ, ಆಸ್ಪತ್ರೆಯಿಂದ ಆಸ್ಪತ್ರೆಗೆ ವಾಹನದಲ್ಲೇ ಅಲೆದು ಕೊನೆಗೆ ಚಿಕಿತ್ಸೆ ಸಿಗದೆ ಮೃತಪಟ್ಟರು.

ಅವರಿಗೆ ಚಿಕಿತ್ಸೆ ಒದಗಿಸಲು ಮಂಗಳೂರಿಗೆ ತೆರಳಿದ್ದ ಕುಟುಂಬಸ್ಥರು, ಆಂಬುಲೆನ್ಸ್‌ನೊಂದಿಗೆ 12 ಗಂಟೆಗಳ

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕು ಆಸ್ಪತ್ರೆಯಲ್ಲಿ ಬೆಡ್‌ಶೀಟ್‌ಗಳೇ ಇಲ್ಲ

ಕಾಲ ಸುಮಾರು 600 ಕಿ.ಮೀ. ಅಲೆದಾಟ ನಡೆಸಿದ್ದರು. ಅವರನ್ನು ದಾಖಲಿಸಿಕೊಂಡು, ಸಕಾಲಕ್ಕೆ ಚಿಕಿತ್ಸೆ ಒದಗಿಸಿದ್ದರೆ ಗಾಯಾಳು ಬದುಕುಳಿಯುತ್ತಿದ್ದರು ಎಂಬುದು ಕುಟುಂಬಸ್ಥರ ಅಳಲು. ಈ ಪ್ರಕರಣ ರಾಜ್ಯದ ಸರ್ಕಾರಿ ವೈದ್ಯಕೀಯ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಇದೇ ರೀತಿ ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಪ್ರಕರಣ ರಾಜ್ಯದ ವಿವಿಧೆಡೆ ಆಗಾಗ ವರದಿಯಾಗುತ್ತಲೇ ಇದೆ.

ರಾಜ್ಯದ 148 ತಾಲ್ಲೂಕು ಆಸ್ಪತ್ರೆಗಳ ಬಲವರ್ಧನೆಗೆ, ದಿನದ 24 ಗಂಟೆಯೂ ತ್ರಿವಳಿ ತಜ್ಞರ ಲಭ್ಯತೆ, ತಜ್ಞ ವೈದ್ಯರ ನೇಮಕಾತಿ ಸೇರಿ ವಿವಿಧ ಕ್ರಮಗಳನ್ನು ಕಳೆದ ವರ್ಷಾಂತ್ಯಕ್ಕೆ ಆರೋಗ್ಯ ಇಲಾಖೆ ಕೈಗೊಂಡಿತ್ತು.

‘ಸ್ತ್ರೀರೋಗ, ಅರಿವಳಿಕೆ ಮತ್ತು ಮಕ್ಕಳ ತಜ್ಞರ ಲಭ್ಯತೆಗೆ ಕ್ರಮವಹಿಸಲಾಗಿದೆ. ಪ್ರತಿ ಆಸ್ಪತ್ರೆಗೆ ತಲಾ ಇಬ್ಬರು ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು, ಓರ್ವ ವಿಕಿರಣ ತಜ್ಞರು ಮತ್ತು ವೈದ್ಯರು ವಿವಿಧ ಪಾಳಿ ಅನುಸಾರ ಕಾರ್ಯನಿರ್ವಹಿಸಲಿದ್ದಾರೆ. ಕಡಿಮೆ ಕಾರ್ಯಕ್ಷಮತೆ ಹೊಂದಿರುವ ಸಮುದಾಯ ಆರೋಗ್ಯ ಕೇಂದ್ರಗಳ ತಜ್ಞರನ್ನು, ತಾಲ್ಲೂಕು ಆಸ್ಪತ್ರೆಗಳಿಗೆ ನಿಯೋಜಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದರು.

4

ಅಂಕಿ ಅಂಶಗಳು

147	15	275
ರಾಜ್ಯದಲ್ಲಿರುವ ತಾಲ್ಲೂಕು ಆಸ್ಪತ್ರೆಗಳು	ಜಿಲ್ಲಾ ಆಸ್ಪತ್ರೆಗಳು	ಸಮುದಾಯ ಆರೋಗ್ಯ ಕೇಂದ್ರಗಳು

ಪ್ರಮುಖವಾಗಿ ಏನೆಲ್ಲ ಸಮಸ್ಯೆ?

- ತಜ್ಞ ವೈದ್ಯರ ಕೊರತೆ ಹಾಗೂ ಸಂಜೆ ಬಳಿಕ ವೈದ್ಯರ ಅಲಭ್ಯತೆ
- ಮೂಲಸೌಕರ್ಯ ಕೊರತೆಯಿಂದ ಚಿಕಿತ್ಸೆಗೆ ತೊಡಕು
- ಸಂಕೀರ್ಣ ಪ್ರಕರಣಗಳ ನಿರ್ವಹಣೆ, ಪರೀಕ್ಷೆಗೆ ವೈದ್ಯಕೀಯ ಉಪಕರಣಗಳ ಕೊರತೆ
- ಶುಶ್ರೂಷಕರು, ವೈದ್ಯಕೀಯ ಸಿಬ್ಬಂದಿ ಅಗತ್ಯ ಪ್ರಮಾಣದಲ್ಲಿ ಇಲ್ಲದಿರುವುದು
- ತುರ್ತು ಸಂದರ್ಭದಲ್ಲಿ ಆಂಬುಲೆನ್ಸ್ ದೊರೆಯದಿರುವುದು
- ಔಷಧ ಕೊರತೆಯಿಂದ ಹೊರಗಡೆ ಪಡೆಯಲು ಸೂಚಿಸುತ್ತಿರುವುದು
- ಖಾಸಗಿ ವ್ಯವಸ್ಥೆಯಡಿ ಪರೀಕ್ಷೆಗೆ ಚೀಟಿ ಬರೆದುಕೊಡುತ್ತಿರುವುದು

‘ರಾಷ್ಟ್ರೀಯ ಶರಣಾಗತಿ ಸಂಘ’

ನವದೆಹಲಿ (ಪಿಟಿಐ): ‘ರಾಷ್ಟ್ರೀಯ ಸ್ವಯಂಸೇವಕ ಸಂಘವು ‘ರಾಷ್ಟ್ರೀಯ ಶರಣಾಗತಿ ಸಂಘ’ವಾಗಿ ಮಾರ್ಪಟ್ಟಿದೆ. ರಾಮ್ ಮಾಧವ್ ಅವರು ಅಮೆರಿಕದ ವಿಷಯದಲ್ಲಿ ಆರ್‌ಎಸ್‌ಎಸ್ ಗುಲಾಮಗಿರಿಯನ್ನು ಬಹಿರಂಗಪಡಿಸಿದ್ದಾರೆ’ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ವಿವರ 7

ಅಮೆರಿಕದ ಪಾಕ್ ಪ್ರವಾಸ ರದ್ದು

ಇಸ್ಲಾಮಾಬಾದ್‌ನಿಂದ ವಾಪಸ್ ಆದ ಇರಾನ್ ಸಚಿವ ಅರಾಘ್ಚಿ

ಇಸ್ಲಾಮಾಬಾದ್/ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಇರಾನ್ ಜತೆ ಶಾಂತಿ ಮಾತುಕತೆ ನಡೆಸಲು ಹೊರಟಿದ್ದ ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಟ್ರಂಪ್ ಅಳಿಯ ಹಾಗೂ ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್ ಅವರ ಪ್ರವಾಸವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊನೆಗಳಿಗೆಯಲ್ಲಿ ರದ್ದುಪಡಿಸಿದ್ದಾರೆ.

ಶಾಂತಿ ಮಾತುಕತೆ ಸಲುವಾಗಿ ಇಸ್ಲಾಮಾಬಾದ್‌ಗೆ ಶುಕ್ರವಾರವೇ ಬಂದಿದ್ದ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಶನಿವಾರ ಸಂಜೆ ಇಸ್ಲಾಮಾಬಾದ್ ತೊರೆದಿದ್ದನ್ನು ಪಾಕ್ ಅಧಿಕಾರಿಗಳು ಖಚಿತಪಡಿಸಿದ್ದರು. ಇದರ ಬೆನ್ನಲ್ಲೇ ಟ್ರಂಪ್ ಅಮೆರಿಕ ನಿಯೋಗದ ಪ್ರವಾಸವನ್ನು ರದ್ದುಪಡಿಸಿದ್ದಾರೆ. ಈ ವಿಷಯವನ್ನು ಅವರು ‘ಫಾಕ್ಸ್ ನ್ಯೂಸ್’ಗೆ ತಿಳಿಸಿದ್ದಾರೆ.

ತನ್ನ ಮಧ್ಯಸ್ಥಿಕೆಯಲ್ಲಿ ಎರಡನೇ ಸುತ್ತಿನ ಮಾತುಕತೆಗಾಗಿ ಸಿದ್ಧತೆ ನಡೆಸಿ, ಸತತ ಪ್ರಯತ್ನ ಮುಂದುವರಿಸಿದ್ದ ಪಾಕಿಸ್ತಾನಕ್ಕೆ ಈ ಬೆಳವಣಿಗೆ ಹಿನ್ನಡೆಯನ್ನು ಉಂಟುಮಾಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅರಾಘ್ಚಿ ಅವರ ನೇತೃತ್ವದಲ್ಲಿ ಪಾಕ್‌ಗೆ ಬಂದಿದ್ದ ಇರಾನ್ ನಿಯೋಗ, ಅಮೆರಿಕ ನಿಯೋಗದ ಜತೆ ನೇರ ಮಾತುಕತೆ ನಡೆಯುವುದು ಅನುಮಾನ ಎಂದು ಹೇಳಿತ್ತು. ಇರಾನ್ ಸರ್ಕಾರಿ ಸುದ್ದಿ ಸಂಸ್ಥೆಯೂ ಅದನ್ನು ಪುನರುಚ್ಚರಿಸಿತ್ತು.

ಪಾಕ್ ಪ್ರಧಾನಿ ಭೇಟಿಯಾದ ಅರಾಘ್ಚಿ: ಅಬ್ಬಾಸ್ ಅರಾಘ್ಚಿ ಶನಿವಾರ ಪಾಕಿಸ್ತಾನದ ಶೆಹಬಾಜ್ ಷರೀಫ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಈ ವೇಳೆ ಪಾಕ್ ಉಪ ಪ್ರಧಾನಿ ಇಶಾಕ್ ಡಾರ್ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಪಾಲ್ಗೊಂಡಿದ್ದರು.

‘ಈ ವೇಳೆ ಪ್ರಾದೇಶಿಕ ಸ್ಥಿತಿಗತಿ ಕುರಿತು ಚರ್ಚಿಸಲಾಯಿತು’ ಎಂದು ಪ್ರಧಾನಿ ಕಚೇರಿ ‘ಎಕ್ಸ್’ನಲ್ಲಿ ತಿಳಿಸಿದೆ.

ಇದಕ್ಕೂ ಮುನ್ನ ಅರಾಘ್ಚಿ ಅವರು ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

6

> ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆ ಸಾಧಿಸಲು ಇರಾನ್– ಅಮೆರಿಕ ನಡುವೆ ಮಾತುಕತೆಗಾಗಿ ಪಾಕಿಸ್ತಾನ ಎಲ್ಲ ರೀತಿಯ ಪ್ರಯತ್ನ ನಡೆಸುತ್ತಿದ್ದು, ಅದನ್ನು ಮುಂದುವರಿಸಲಿದೆ
> **ಇಶಾಕ್ ಡಾರ್,** ಪಾಕಿಸ್ತಾನದ ಉಪಪ್ರಧಾನಿ

> ಹೊರ್ಮುಜ್‌ನಲ್ಲಿ ಇರಾನ್ ಅಳವಡಿಸಿರುವ ಜಲಬಾಂಬ್‌ಗಳನ್ನು ತೆರವು ಮಾಡಿ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಕಾರ್ಯವನ್ನು ಅಮೆರಿಕ ನೌಕಾಪಡೆ ಆರಂಭಿಸಿದೆ
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

ವಾಣಿಜ್ಯ ವಿಮಾನ ಹಾರಾಟ ಪುನರಾರಂಭ

ಕೈರೊ (ಎಪಿ): ಟೆಹರಾನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾಣಿಜ್ಯ ವಿಮಾನಗಳ ಹಾರಾಟವನ್ನು ಇರಾನ್ ಶನಿವಾರ ಪುನರಾರಂಭಿಸಿದೆ.

ಅಮೆರಿಕ– ಇರಾನ್ ನಡುವೆ ಎರಡು ತಿಂಗಳಿಂದ ನಡೆಯುತ್ತಿರುವ ಸಂಘರ್ಷದಿಂದ ವಾಣಿಜ್ಯ ವಿಮಾನ ಹಾರಾಟವನ್ನು ಸ್ಥಗಿತಗೊಳಿಸಿದ್ದ ಇರಾನ್ ಇದೇ ಮೊದಲ ಬಾರಿಗೆ ಮತ್ತೆ ಆರಂಭಿಸಿದೆ.

ಟೆಹರಾನ್‌ನಿಂದ ಟರ್ಕಿಯ ಇಸ್ತಾಂಬುಲ್, ಒಮಾನ್ ರಾಜಧಾನಿ ಮಸ್ಕತ್, ಸೌದಿ ನಗರ ಮದಿನಾಗೆ ವಿಮಾನಗಳು ಸಂಚರಿಸಿವೆ ಎಂದು ಇರಾನ್ ಸರ್ಕಾರಿ ವಾಹಿನಿ ವರದಿ ಮಾಡಿದೆ.

‘ಪೊಲೀಸರಿಗೆ ಪ್ರೇಮಿಗಳ ಹಿಂದೆಯೇ ಸುತ್ತುವ ತವಕ’

ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಪೊಲೀಸರು ಎಷ್ಟು ಪವರ್ ಫುಲ್ ಅಂದ್ರೆ ಅವರಿಗೆ ಸಹಜೀವನ ನಡೆಸುವ ಜೋಡಿಗಳು ಮತ್ತು ಪ್ರೇಮಿಗಳ ಹಿಂದೆಯೇ ಸುತ್ತುವ ತವಕ. ನಿಜವಾದ ಅಪರಾಧಗಳ ತನಿಖೆಯನ್ನೇ ಮಾಡುವುದಿಲ್ಲ. ಕಲಂ 69ರ ಪ್ರಕರಣಗಳ ಚುಂಗು ಹಿಡಿದು ಅಡ್ಡಾಡುವುದೇ ಅವರ ಜಾಯಮಾನ’.

‘ಕಾಂತಾರ ಚಾಪ್ಟರ್-1 ಚಿತ್ರದ ದೈವಪಾತ್ರವನ್ನು ಅಪಹಾಸ್ಯ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿನ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ನಟ ರಣವೀರ್ ಸಿಂಗ್ (41) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಶನಿವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಕುಟುಕಿದ್ದು ಹೀಗೆ.

ವಿಚಾರಣೆ ವೇಳೆ ರಣವೀರ್ ಸಿಂಗ್ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ, ‘ಮೈಸೂರಿನಲ್ಲಿರುವ ಚಾಮುಂಡಿ ದೇವಸ್ಥಾನಕ್ಕೆ ರಣವೀರ್ ಖಂಡಿತಾ ಭೇಟಿ ನೀಡಲಿದ್ದಾರೆ. ಆದರೆ, ಸುರಕ್ಷತೆಯ ದೃಷ್ಟಿಯಿಂದ ಸಲೀಸಾಗಿ ಹೊರಗೆ ಸುತ್ತಾಡಲು ಕಷ್ಟವಾಗಿದೆ’ ಎಂದರು.

5

‘ನಾಲ್ಕು ಮಕ್ಕಳಿರಲಿ, ಒಂದನ್ನು ಸಂಘಕ್ಕೆ ಸೇರಿಸಿ’

ಮುಂಬೈ: ‘ಭಾರತೀಯರು ನಾಲ್ಕು ಮಕ್ಕಳನ್ನು ಹೆರಬೇಕು, ಒಂದು ಮಗುವನ್ನು ಆರ್‌ಎಸ್‌ಎಸ್‌ಗೆ ಸೇರಿಸಬೇಕು’ ಎಂದು ಮಧ್ಯಪ್ರದೇಶದ ಬಾಗೇಶ್ವರ ಧಾಮದ ಪೀಠಾಧೀಶ ಧೀರೇಂದ್ರ ಕೃಷ್ಣ ಶಾಸ್ತ್ರಿ ಹೇಳಿಕೆ ನೀಡಿದ್ದಾರೆ.

ವಿವರ 7

ಸಿಇಟಿ ಅರ್ಜಿ: ತಿದ್ದುಪಡಿಗೆ ಮತ್ತೊಮ್ಮೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿರುವ ಅಭ್ಯರ್ಥಿಗಳ ಅರ್ಜಿ ತಿದ್ದುಪಡಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತೊಂದು ಅವಕಾಶ ನೀಡಿದೆ.

ಸಾಮಾನ್ಯ ಪ್ರವೇಶ ಪರೀಕ್ಷೆ ಸಲುವಾಗಿ ಅರ್ಜಿ ಸಲ್ಲಿಸಿರುವ ಹಲವರು ಅರ್ಜಿಯಲ್ಲಿನ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಿಕೊಳ್ಳಲು ಮನವಿ ಮಾಡಿಕೊಂಡಿದ್ದಾರೆ. ಅವರ ಮನವಿ ಪರಿಗಣಿಸಿ ಅರ್ಜಿ ಸಲ್ಲಿಸಿದ ಎಲ್ಲರಿಗೂ ಮೇ 3ರವರೆಗೆ ತಿದ್ದುಪಡಿಗೆ ಅವಕಾಶ ನೀಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ವ್ಯಾಸಂಗದ ವಿವರ, ಮೀಸಲಾತಿ, ಇತರ ಕ್ಲೇಮ್ಸ್ ದಾಖಲಿಸಿಕೊಳ್ಳಲು ಅವಕಾಶವಿದೆ. ಇದೇ ಕೊನೆ ಅವಕಾಶವಾಗಿದ್ದು, ಮತ್ತೊಮ್ಮೆ ತಿದ್ದುಪಡಿಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ST. MARY'S PRE-UNIVERSITY COLLEGE CHIKKAMAGALURU

The only College with IITians, NITians, Doctor's, Text Book Authors, Ph.D Holders, Gold Medalists to train students in Chikmagalur

#1 COLLEGE FOR COMPETITIVE AND BOARD EXAMS

CREATING HISTORY OF RANKS IN CHIKKAMAGALURU

II PU RESULT - 2026: 414 TOTAL APPEARED | 248 DISTINCTIONS | 159 FIRST CLASS

ABOVE 95% ▶ 51 STUDENTS
ABOVE 90% ▶ 164 STUDENTS
ABOVE 85% ▶ 248 STUDENTS

100 OUT OF 100: KANNADA 16 | BUSI. STUDIES 10 | COMP. SCIENCE 16 | PHYSICS 08 | STATISTICS 15 | ACCOUNTANCY 05 | MATHEMATICS 10 | ECONOMICS 01

ACHIEVED 5 STATE RANKS AMONG TOP 10

OUR STATE & DISTRICT TOPPERS

COLLEGE TOPPER: NEHA K R 594/600 — 1st DISTRICT RANK, 7th STATE RANK
MONISHA M R 593/600 — 2nd DISTRICT RANK
SHINY 593/600 — 8th STATE RANK
MOHITH S SHETTY 592/600 — 3rd DISTRICT RANK, 8th STATE RANK
EVANGELINE SHEKINA STEVEN 591/600 — 4th DISTRICT RANK, 10th STATE RANK

100% RESULTS in commerce

95 PERCENTAGE AND ABOVE
589 PRAPTHI G; 588 CHINMAY C; 588 ANANYA K P; 587 POOJA S; 586 VANDANA C V; 585 ALISHA ANNABEL AMBROSE; 585 LISHA ANGEL MENDONCA; 584 GANGA URS C S; 584 MANITH GOWDA K N; 583 NIRALI K G; 583 BINDU H A; 582 SUZAIN FATHIMA; 580 M SUHAS; 580 DHANUSH U; 580 DIVA PREESHAL RODRIGUES; 581 NAVAMI GOWDA K H; 581 UMME RABIYA; 581 SHREYA C M; 579 SHASHANK T M; 579 KALPANA H M; 578 HARSHA U; 577 BHOOMIKA C D; 576 GEONITHA ABHIVYAKTA; 576 MANOJ H A; 575 MANTHAN B; 575 ADHYA B A; 575 PRAJWAL A; 574 NAMRATHA H Y; 574 SAKSHI S; 574 SHAMITHA G K; 574 VAMSHI V KRISHNA; 573 ADHYA B G; 573 CHANDANA L P; 573 K S HARSHAL KUSHALAPPA; 573 MOHAMMED HAKEEM K H; 572 DHANISH PATEL B L; 572 GANAVI N E; 572 JAHNAVI H URS; 571 MEHVISH FATHIMA; 571 NANDITHA C; 571 RAGAVI M S; 571 JEEVITHA M; 571 SAKSHI ANANTHA KUMAR; 570 BHUVAN RAJ B R; 570 SAHANA H B; 570 YASHWANTHA G K

From ST. MARY'S To MBBS | BDS BACHELOR OF DENTAL SURGERY

PUC + INTEGRATED COACHING | SCIENCE: PCMB / PCMC CET, NEET, JEE, NATA | COMMERCE: EBAC / EBAS CA FOUNDATION / CSEET / CLAT

SEPARATE HOSTEL FACILITY FOR GIRLS & BOYS WITHIN THE CAMPUS
JOIN US & BE A PART OF THE SUCCESS STORY
ADMISSIONS OPEN FOR I PUC SCIENCE & COMMERCE
6360539736 | 9380010198

ರಾಜ್ ಅಭಿಮಾನಿಗಳಿಂದ ಮುತ್ತಿಗೆ

ಸಮಾಧಿ ಸ್ಥಳಕ್ಕೆ ಜಾಗ ನೀಡಿದ್ದಕ್ಕೆ ಆಕ್ಷೇಪ, ಆಕ್ರೋಶದ ಬಳಿಕ ಕ್ಷಮೆಯಾಚಿಸಿದ ಚೇತನ್

ಪ್ರಜಾವಾಣಿ ವಾರ್ತೆ

ಚೇತನ್

ಬೆಂಗಳೂರು: ಡಾ.ರಾಜ್‌ಕುಮಾರ್ ಸಮಾಧಿ ಸ್ಥಳಕ್ಕೆ ರಾಜ್ಯ ಸರ್ಕಾರ ಜಾಗ ನೀಡಿರುವುದಕ್ಕೆ ಆಕ್ಷೇಪಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ನಟ ಚೇತನ್ ವಿರುದ್ಧ ರಾಜ್‌ಕುಮಾರ್ ಅಭಿಮಾನಿಗಳು ಆಕ್ರೋಶ ಹೊರಹಾಕಿದ್ದಾರೆ.

ಶೇಷಾದ್ರಿಪುರದಲ್ಲಿರುವ ಅವರ ಮನೆಗೆ ಹೋರಾಟಗಾರ ಸಾ.ರಾ.ಗೋವಿಂದು ನೇತೃತ್ವದಲ್ಲಿ ನೂರಾರು ಅಭಿಮಾನಿಗಳು ಶನಿವಾರ ಸಂಜೆ ಮುತ್ತಿಗೆ ಹಾಕಿ, ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿದ್ದ ಹಲವರು ಚೇತನ್ ಅವರನ್ನು ತರಾಟೆಗೆ ತೆಗೆದುಕೊಂಡರು. ಅಭಿಮಾನಿಗಳ ಆಕ್ರೋಶ ಹೆಚ್ಚಾದ ಬಳಿಕ ಚೇತನ್ ಕ್ಷಮೆಯಾಚಿಸಿದ್ದಾರೆ. ಬಳಿಕ ಅಭಿಮಾನಿಗಳು ಅಲ್ಲಿಂದ ತೆರಳಿದರು. ಚೇತನ್ ಮನೆಯ ಸುತ್ತಮುತ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ.

‘ಎಕ್ಸ್’ ಖಾತೆಯಲ್ಲಿ ಶುಕ್ರವಾರ ಚೇತನ್ ಪೋಸ್ಟ್ ಹಾಕಿದ್ದರು. ಅದನ್ನು ಗಮನಿಸಿದ್ದ ‘ಡಾ. ರಾಜ್‌ಕುಮಾರ್ ಸೇನೆ’ಯ ಪದಾಧಿಕಾರಿಗಳು ಹಾಗೂ ರಾಜ್ ಅಭಿಮಾನಿಗಳು, ಶನಿವಾರ ಮಧ್ಯಾಹ್ನ ಬಸವೇಶ್ವರನಗರ ಠಾಣೆಗೆ ದೂರು ನೀಡಿ ಕ್ರಮಕ್ಕೆ ಆಗ್ರಹಿಸಿದ್ದರು.

ಅಭಿಮಾನಿಗಳಿಗೆ ಚೇತನ್ ಅವಮಾನ ಮಾಡಿದ್ದಾರೆ. ನೋವಾಗಿದ್ದು, ಚೇತನ್ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೇನೆಯ ಪದಾಧಿಕಾರಿಗಳು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ದೂರು ಸ್ವೀಕರಿಸಲಾಗಿದೆ. ಕಾನೂನು ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪೋಸ್ಟ್‌ನಲ್ಲಿ ಏನಿತ್ತು?

‘ನಾವು ರಾಜ್‌ಕುಮಾರ್ ಅವರನ್ನು ಒಬ್ಬ ಮಹಾನ್ ಕಲಾವಿದರಾಗಿ ಗೌರವಿಸುತ್ತೇವೆ. ಆದರೆ, ಬೆಂಗಳೂರು ನಗರದ ಮಧ್ಯದಲ್ಲಿ, 2006ರಲ್ಲಿ ಒಬ್ಬ ನಟನ ಸಮಾಧಿ ಕಾಂಪ್ಲೆಕ್ಸ್‌ಗಾಗಿ 2.5 ಎಕರೆ ಭೂಮಿಯನ್ನು ನೀಡುವುದು ತಿಳಿವಳಿಕೆಯ ನಿರ್ಧಾರವಾಗಿತ್ತೇ ಎಂಬುದನ್ನು ಪ್ರಶ್ನಿಸಬೇಕಾಗಿದೆ. 21ನೇ ಶತಮಾನದ ಭಾರತದಲ್ಲಿ ಪ್ರಮುಖ ಹೋರಾಟವೇ ಭೂಮಿ. ಸರ್ಕಾರವು ಭವಿಷ್ಯವನ್ನು ಗಮನದಲ್ಲಿ ಇಟ್ಟುಕೊಂಡು ಹಾಗೂ ಸಾರ್ವಜನಿಕರ ಉಪಯೋಗಕ್ಕೆ ತಕ್ಕಂತೆ ಹಂಚಬೇಕು. ಮತಗಳ ಲಾಭದ ಉದ್ದೇಶದಿಂದ ಹಂಚಬಾರದು’ ಎಂಬುದಾಗಿ ಚೇತನ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

‘ರಾಜ್‌ಕುಮಾರ್ ಅವರು ಬದುಕಿದ್ದಾಗ ಜಮೀನು ನೀಡಿದ ವಿಚಾರವು ತಿಳಿದಿದ್ದರೆ ಅವರೇ ಬೇಡ ಎನ್ನುತ್ತಿದ್ದರು. ಅವರದ್ದು ವಿಶಾಲ ಮನಸ್ಸು. ನಾನು ಅಭಿಮಾನಿಗಳ ಸಂಘದವರನ್ನು ಪ್ರಶ್ನಿಸುತ್ತಿಲ್ಲ. ಸರ್ಕಾರವನ್ನು ಪ್ರಶ್ನಿಸುತ್ತಿದ್ದೇನೆ’ ಎಂದು ಚೇತನ್ ಮಾಧ್ಯಮದವರಿಗೆ ತಿಳಿಸಿದರು.

‘ಭೂಮಿಯ ದುರ್ಬಳಕೆಯಾದಾಗ ಪ್ರಶ್ನೆ ಮಾಡಿದ್ದೇನೆ. ಫಾಕ್ಸ್‌ಕಾನ್‌ಗೆ ಭೂಮಿ ನೀಡಿದಾಗಲೂ ಪ್ರಶ್ನಿಸಿದ್ದೇನೆ. ಅದು ಪ್ರಚಾರಕ್ಕೆ ಬರುವುದಿಲ್ಲ. ಅದೇ ರಾಜ್‌ಕುಮಾರ್ ವಿಚಾರದ ಬಗ್ಗೆ ಪೋಸ್ಟ್ ಮಾಡಿದಾಗ ಟಿಆರ್‌ಪಿಗೋಸ್ಕರ ಮಾಧ್ಯಮದವರು ಪ್ರಶ್ನಿಸುತ್ತಿದ್ದಾರೆ’ ಎಂದು ಆಪಾದಿಸಿದರು.

‘ಎಕ್ಸ್’ ಖಾತೆಯಲ್ಲಿ ಚೇತನ್ ಹಾಕಿದ್ದ ಪೋಸ್ಟ್

‘ಬಳ್ಳಾರಿ ಹಾಗೂ ಹೊಳಲ್ಕೆರೆ ಭಾಗದಲ್ಲಿ ಗಣಿಗಾರಿಕೆಯಿಂದ ರೈತರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆಯೂ ಹೋರಾಟ ನಡೆಸಿದ್ದೇನೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ನಾನೂ ಸಹ ಅಣ್ಣಾವ್ರ ಅಭಿಮಾನಿ. ಅವರ ಹೆಸರಿನಲ್ಲಿ ಸರ್ಕಾರ ಮಾಡಿದ್ದೆಲ್ಲವೂ ಸರಿಯೆಂದು ನೋಡಲು ಸಾಧ್ಯವಿಲ್ಲ. ಸರ್ಕಾರ ತಿಳಿವಳಿಕೆ ಹಾಗೂ ಮುಂದಾಲೋಚನೆಯಿಂದ ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ಶಿಕ್ಷೆ ಪ್ರಮಾಣ ಪ್ರಕಟ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಅಪರಾಧಿ ಮೊಹಮ್ಮದ್ ಶಾರೀಕ್ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯವು ಮಾನ್ಯ ಮಾಡಿದ್ದು, ಏಪ್ರಿಲ್ 27ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ. ನ್ಯಾಯಾಲಯದಲ್ಲಿ ಶನಿವಾರವೂ ಪ್ರಕರಣದ ವಿಚಾರಣೆ ನಡೆಯಿತು.

ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಅವರು, ಅಪರಾಧಿಗೆ ಕಠಿಣ ಶಿಕ್ಷೆ ವಿಧಿಸುವಂತೆ ನ್ಯಾಯಾಧೀಶರಲ್ಲಿ ಕೋರಿದರು.

ಮೂರು ತಿಂಗಳ ಹಿಂದೆ ಶಾರೀಕ್, ಕೃತ್ಯ ಎಸಗಿದ್ದಾಗಿ ತಪ್ಪೊಪ್ಪಿಕೊಂಡು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ಈ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿತ್ತು.

2022ರ ನ.19ರಂದು ಸಂಜೆ 4.40ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಟೊದಲ್ಲಿ ಶಾರೀಖ್ ತೆರಳುವಾಗ (ಐಇಡಿ) ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಬಾಂಬ್ ಸ್ಫೋಟ ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಅಪರಾಧ ಸುದ್ದಿ

₹18.48 ಕೋಟಿ ಮೌಲ್ಯದ ಗಾಂಜಾ ಜಪ್ತಿ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಗುರುವಾರ ಮತ್ತು ಶುಕ್ರವಾರ ನಡೆಸಿದ ಕಾರ್ಯಾಚರಣೆಯಲ್ಲಿ 51.06 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಐದು ಪ್ರತ್ಯೇಕ ಪ್ರಕರಣಗಳಲ್ಲಿ ಏಳು ಪ್ರಯಾಣಿಕರನ್ನು ಬಂಧಿಸಿ, ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುರುವಾರ ನಡೆದ ತಪಾಸಣೆಯಲ್ಲಿ ಒಟ್ಟು ನಾಲ್ಕು ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕರ ಬಳಿ ₹8.67 ಕೋಟಿ ಮೌಲ್ಯದ 24.83 ಕೆ.ಜಿ ತೂಕದ ಗಾಂಜಾ ಜಪ್ತಿ ಮಾಡಲಾಗಿದೆ.

ಶುಕ್ರವಾರ ನಡೆದ ಕಾರ್ಯಚರಣೆಯಲ್ಲಿ ಬ್ಯಾಂಕಾಕ್‌ನಿಂದ ಬಂದ ಮೂವರು ಪ್ರಯಾಣಿಕರಿಂದ ₹9.81 ಕೋಟಿ ಮೌಲ್ಯದ 26.23 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆಯಲಾಗಿದೆ.

ಬಸ್ ಅಪಘಾತ ಎಂಜಿನಿಯರಿಂಗ್ ವಿದ್ಯಾರ್ಥಿನಿ ಸಾವು

ಬೆಂಗಳೂರು: ಉತ್ತರಹಳ್ಳಿ ಮುಖ್ಯರಸ್ತೆಯ ಶ್ರೀನಿವಾಸಪುರ ಕ್ರಾಸ್ ಬಳಿ ಬಿಎಂಟಿಸಿ ಹಾಗೂ ಸ್ಕೂಟಿ ನಡುವೆ ಶನಿವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ಬಸ್ ಚಕ್ರ ಹರಿದು ಎಂಜಿನಿಯರಿಂಗ್ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಿರಿಶಾ(21) ಮೃತ ವಿದ್ಯಾರ್ಥಿನಿ.

ಕೆಲಸದ ನಿಮಿತ್ತ ಸಿರಿಶಾ ಅವರು ಸ್ಕೂಟಿಯಲ್ಲಿ ತೆರಳುತ್ತಿದ್ದರು. ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿ ಸಾಗುತ್ತಿದ್ದಾಗ ಸ್ಕೂಟರ್ ಹ್ಯಾಂಡಲ್‌ಗೆ ಬಸ್ ತಗುಲಿತ್ತು. ವಿದ್ಯಾರ್ಥಿನಿ ರಸ್ತೆಗೆ ಬಿದ್ದಿದ್ದರು. ಅದೇ ಸಮಯದಲ್ಲಿ ಬಸ್ ಚಕ್ರಗಳು ಸಿರಿಶಾ ಅವರ ಮೇಲೆ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

‘ಬಿಎಂಟಿಸಿ ಬಸ್ ಚಾಲಕನ ನಿರ್ಲಕ್ಷ್ಯ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಬಸ್ ಚಾಲಕ ಚಂದ್ರು ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಆರ್.ಆರ್ ವೈದ್ಯಕೀಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲ್ಲು ಎತ್ತಿಹಾಕಿ ವ್ಯಕ್ತಿ ಕೊಲೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ರಾಮಚಂದ್ರ

ಹರೀಶ್

ಬೆಂಗಳೂರು: ವ್ಯಕ್ತಿಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿರುವ ಘಟನೆ ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಪಟಾಲಮ್ಮ ಲೇಔಟ್‌ನಲ್ಲಿ ನಡೆದಿದೆ.

ತಮಿಳುನಾಡಿನ ಹೊಸೂರಿನ ರಾಮಚಂದ್ರ (45) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ಹರೀಶ್(35) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಏಪ್ರಿಲ್ 24ರ ರಾತ್ರಿ ಕಾಡುಗೋಡಿಯ ಪಟಾಲಮ್ಮ ಲೇಔಟ್‌ನಲ್ಲಿ ಆರೋಪಿ ಕೃತ್ಯ ಎಸಗಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

‘ಈರುಳ್ಳಿ ವ್ಯಾಪಾರ ನಡೆಸುತ್ತಿದ್ದ ರಾಮಚಂದ್ರ ಹೊಸೂರಿನಲ್ಲಿ ಕುಟುಂಬದವರ ಜತೆಗೆ ವಾಸವಿದ್ದರು. ಈ ವೇಳೆ, ಕೂಲಿ ಕೆಲಸ ಮಾಡಿಕೊಂಡಿದ್ದ ಕಾಡುಗೋಡಿಯ ಪಟಾಲಮ್ಮ ಲೇಔಟ್‌ನ ಮಹಿಳೆಯ ಪರಿಚಯವಾಗಿ ಸಲುಗೆ ಬೆಳೆಸಿದ್ದರು. ಈ ಮಧ್ಯೆ, ರಾಮಚಂದ್ರ ಈರುಳ್ಳಿ ವ್ಯಾಪಾರ ಬಿಟ್ಟು ಲಾರಿ, ಆಟೊ ಹಾಗೂ ಗೂಡ್ಸ್ ವಾಹನಗಳ ಚಾಲಕರಾಗಿ ಕೆಲಸ ಮಾಡಿಕೊಂಡಿದ್ದರು. ವಾರಕ್ಕೆ ಎರಡ್ಮೂರು ಬಾರಿ ಮಹಿಳೆಯ ಮನೆಗೆ ಬಂದು ಹೋಗುತ್ತಿದ್ದು, ರಾತ್ರಿ ವೇಳೆ ಸಮೀಪದಲ್ಲಿ ಇರುವ ಪಟಾಲಮ್ಮ ದೇವಸ್ಥಾನದ ಬಳಿ ಮಲಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮಹಿಳೆಯ ಜತೆಗೆ ಮೊದಲು ಆತ್ಮೀಯತೆ ಹೊಂದಿದ್ದ ಆರೋಪಿ ಹರೀಶ್‌ಗೆ ರಾಮಚಂದ್ರ ಹಾಗೂ ಮಹಿಳೆ ಸ್ನೇಹದ ವಿಚಾರವು ಗೊತ್ತಾಗಿತ್ತು. ಏಪ್ರಿಲ್ 24ರಂದು ರಾಮಚಂದ್ರ ಸಮೀಪದಲ್ಲಿರುವ ದೇವಸ್ಥಾನದಲ್ಲಿ ಮಲಗಿದ್ದರು. ಆಗ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿ ಆರೋಪಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಮೂರ್ತಿ

ಬೆಂಗಳೂರು: ವಿಜಯನಗರದ ನಿವಾಸಿ ಮೂರ್ತಿ (65) ಶನಿವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಮೂರ್ತಿ ಅವರು 28 ವರ್ಷ ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ (ಟಿಪಿಎಂಎಲ್) ‘ಪ್ರೊಡಕ್ಷನ್’ ವಿಭಾಗದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ಮೈಸೂರು ಜಿಲ್ಲೆಯ ತಿ. ನರಸಿಪುರದ ಬೊಮ್ಮನಹಳ್ಳಿ ಗವಿಮಠದಲ್ಲಿ ಶನಿವಾರವೇ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನೋಡಿ, ಇಲ್ಲಿದೆ ಕಸ!

ಪೀಣ್ಯ ಕೈಗಾರಿಕಾ ವಲಯದ ಬೃಂದಾವನದಿಂದ ಬಿಎಂಟಿಸಿ ಘಟಕ–9 ಮತ್ತು ಘಟಕ–22ಕ್ಕೆ ಸಂಪರ್ಕ ಕಲ್ಪಿಸುವ ಎನ್‌ಟಿಟಿಎಫ್ ಕೆರೆಯ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ

ಚಾಮರಾಜಪೇಟೆಯ ಶಂಕರಪುರದ ರಂಗರಾವ್ ರಸ್ತೆಯ ಐದನೇ ಕ್ರಾಸ್‌ನಲ್ಲಿ ಕಸದ ರಾಶಿ ಬಿದ್ದಿದೆ



ಕೆಂಗೇರಿಯ ಮೈಲಸಂದ್ರದ ಪ್ರಿನ್ಸ್‌ವಿಲ್ಲಾ ಅಪಾರ್ಟ್‌ಮೆಂಟ್ ಬಳಿಯಲ್ಲಿ ಹಾಕಿರುವ ಕಸದ ರಾಶಿಗೆ ಬೆಂಕಿ ಹಚ್ಚಿರುವುದು

ಕುಮಾರಸ್ವಾಮಿ ಬಡಾವಣೆಯ ವಾಟರ್ ಟ್ಯಾಂಕ್ ರಸ್ತೆಯ ಜಂಕ್ಷನ್‌ನಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ

ನಿಮ್ಮ ಬಡಾವಣೆಯಲ್ಲಿ ಕಸ ವಿಲೇವಾರಿ ಆಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ ‘ಪ್ರಜಾವಾಣಿ’ಗೆ ಕಳುಹಿಸಿ.
9606038256

ಉತ್ತರ ಕ್ರಿಯಾದಿ

ಶ್ರೀಮತಿ ಲಕ್ಷ್ಮೀ ಕಾಂತಮ್ಮ
(ದಿ॥ ಶ್ರೀ ಕೊಂಡಪ್ಪರವರ ಧರ್ಮಪತ್ನಿ)
ತಾ॥ 18.04.2026ನೇ ಶನಿವಾರ ರಾತ್ರಿ 1–15 ಘಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಉತ್ತರ ಕ್ರಿಯಾದಿ ಪುಣ್ಯಾಹ ಕಾರ್ಯವನ್ನು ದಿನಾಂಕ 28.04.2026, ಮಂಗಳವಾರ ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ. ಸ್ಥಳ: ನಂ. 227, 9ಎ ಮೈನ್ 1ನೇ ಬ್ಲಾಕ್, ಹೆಚ್.ಆರ್.ಬಿ.ಆರ್. ಲೇಔಟ್, ಕಲ್ಯಾಣನಗರ, ಬೆಂಗಳೂರು–560043
ಇಂತಿ ದುಃಖತಪ್ತರು:
ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಕುಟುಂಬದವರು
ದೂರವಾಣಿ: 9448672032, 9035572555

ಜನಗಣತಿ ಕರ್ತವ್ಯಕ್ಕೆ ಅಡ್ಡಿ: ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜನಗಣತಿ ವೇಳೆ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಸಿಬ್ಬಂದಿಗೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಅವಮಾನಿಸಿದವರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾರ್ಡ್ ಸಂಖ್ಯೆ 43ರಲ್ಲಿ ಜನಗಣತಿ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಗಣತಿದಾರರಾದ ವೀಣಾ ಅವರು ಏಪ್ರಿಲ್ 20ರಂದು ಆರ್.ಟಿ.ನಗರದ ಸುಲ್ತಾನಪಾಳ್ಯ ಮುಖ್ಯರಸ್ತೆಯ ಸಮೀಪದಲ್ಲಿರುವ ಪೇರಿ ಮೊನಾರ್ಕ್ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದ ವೇಳೆ, ಸಂಬಂಧಿಸಿದ ನಿವಾಸಿ ಯಾವುದೇ ಮಾಹಿತಿ ನೀಡಲು ನಿರಾಕರಿಸಿದರು.

ಈ ಸಂಬಂಧ, ಏಪ್ರಿಲ್ 25ರಂದು ಪರಿಶೀಲನೆ ವೇಳೆ ಸರ್ಕಲ್-2 ಮೇಲ್ವಿಚಾರಕರಾದ ರಶ್ಮಿ ಆರ್ ಅವರು ಸ್ಥಳಕ್ಕೆ ಭೇಟಿ ನೀಡಿ ಗಣತಿ ಕಾರ್ಯಕ್ಕೆ ಅಗತ್ಯ ಮಾಹಿತಿಯನ್ನು ಕೇಳಿದಾಗ, ಅಪಾರ್ಟ್‌ಮೆಂಟ್ ನಿವಾಸಿಯು ಸಹಕರಿಸಲು ನಿರಾಕರಿಸಿದ್ದು ಮಾತ್ರವಲ್ಲದೆ, ಗಣತಿ ಕಾರ್ಯಕ್ಕೆ ಅಡ್ಡಿಪಡಿಸಿ ಮಹಿಳಾ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದರು.

ಈ ಕುರಿತು ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ, ಜನಗಣತಿ ಕಾಯ್ದೆ, 1948ರ ಸೆಕ್ಷನ್ 11(1) ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್) ಕಲಂ 223 ಮತ್ತು 79 ಅಡಿಯಲ್ಲಿ ಡಾ. ಲೋಕೇಶ್, ಜನಗಣತಿ ಚಾರ್ಜ್ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ ಎಂದು ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದ್ದಾರೆ.

ಜನಗಣತಿ ಕಾರ್ಯವು ರಾಷ್ಟ್ರದ ಪ್ರಮುಖ ಕರ್ತವ್ಯವಾಗಿದ್ದು, ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಡ್ಡಿಪಡಿಸುವುದು ಕಾನೂನುಬದ್ಧ ಅಪರಾಧವಾಗಿದೆ. ಈ ರೀತಿಯ ಕೃತ್ಯಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

‘ಬಿ28’ ತಯಾರಿಕಾ ಕೇಂದ್ರಕ್ಕೆ ಚಾಲನೆ

ಶೀಘ್ರದಲ್ಲೇ ಬೆಂಗಳೂರು-ಮುಂಬೈ ನಡುವೆ ಸೂಪರ್ ಫಾಸ್ಟ್: ಅಶ್ವಿನಿ ವೈಷ್ಣವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಬಿಇಎಂಎಲ್‌ನಲ್ಲಿ ನಿರ್ಮಿಸಿರುವ ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ಉತ್ಪಾದನಾ ಕೇಂದ್ರವನ್ನು ಶನಿವಾರ ಉದ್ಘಾಟಿಸಿದರು.

ಬಿಇಎಂಎಲ್‌ನ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಜತೆ ಸಂವಾದ ನಡೆಸಿ, ರೈಲ್ವೆ ಬೋಗಿ, ಮೆಟ್ರೊ ಬೋಗಿಗಳ ತಯಾರಿಕೆ ಕುರಿತು ಮಾಹಿತಿ ಪಡೆದುಕೊಂಡರು. ರೈಲ್ವೆ ಬೋರ್ಡ್ ಅಧ್ಯಕ್ಷ ಸತೀಶ್ ಕುಮಾರ್, ಬಿಇಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಅಶ್ವಿನಿ ವೈಷ್ಣವ್ ಮಾತನಾಡಿ, ಇಂಟಿಗ್ರಲ್ ಕೋಚ್ ಫ್ಯಾಕ್ಟರಿ (ಐಸಿಎಫ್) ಮತ್ತು ಬಿಇಎಂಎಲ್ ಸಹಯೋಗದಲ್ಲಿ ಬುಲೆಟ್ ರೈಲು ಬಿ28 ಬೋಗಿಗಳನ್ನು ವಿನ್ಯಾಸಗೊಳಿಸಲಾಗುತ್ತಿದ್ದು, ಇದು ಆತ್ಮನಿರ್ಭರ ಭಾರತದ ಸ್ವದೇಶಿ ಬುಲೆಟ್ ರೈಲು ಆಗಿರಲಿದೆ. ಬಿಇಎಂಎಲ್‌ನ ಆದಿತ್ಯ ಘಟಕದಲ್ಲಿ ಇದರ ಉತ್ಪಾದನೆ ನಡೆಯಲಿದೆ. ಮುಂದಿನ ವರ್ಷದ ಆರಂಭದಲ್ಲಿ ಮೊದಲ ಮಾದರಿ (ಪ್ರೊಟೊಟೈಪ್) ನಿರೀಕ್ಷಿಸಲಾಗಿದ್ದು, 2027ರ ಅಂತ್ಯಕ್ಕೆ ಸಂಪೂರ್ಣವಾಗಿ ಸಿದ್ಧಗೊಳ್ಳಲಿದೆ ಎಂದರು.

ಪ್ರಸ್ತುತ ಸೇವೆಯಲ್ಲಿರುವ ವಂದೇ ಭಾರತ ಸ್ಲೀಪರ್ ರೈಲಿನ ಕುರಿತು ಪ್ರತಿಕ್ರಿಯಿಸಿದ ಸಚಿವರು, ಗುವಾಹಟಿ-ಕೋಲ್ಕತ್ತ ನಡುವೆ ಸಂಚರಿಸುತ್ತಿರುವ ವಂದೇ ಭಾರತ್ ಸ್ಲೀಪರ್ ರೈಲಿಗೆ ಪ್ರಯಾಣಿಕರಿಂದ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಬೆಂಗಳೂರಿನಿಂದ ಮಂಗಳೂರು ಮಾರ್ಗವಾಗಿ ಮಡಗಾಂವ್‌ವರೆಗೆ ರೈಲು ಸೇವೆಗೆ ಯೋಜಿಸಲಾಗಿದೆ. ಪ್ರಸ್ತುತ ಹಾಸನ-ಮಂಗಳೂರು ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಪ್ರಕ್ರಿಯೆ ನಡೆಯುತ್ತಿದ್ದು, ಅತಿ ಶೀಘ್ರದಲ್ಲೇ ವಂದೇ ಭಾರತ್ ರೈಲು ಸಂಚರಿಸಲಿದೆ. ಇದರ ಜೊತೆಗೆ ಬೆಂಗಳೂರು-ಮುಂಬೈ ಮಾರ್ಗದಲ್ಲಿ ಎರಡು ಸೂಪರ್ ಫಾಸ್ಟ್ ರೈಲುಗಳು ಕಾರ್ಯಾರಂಭ ಮಾಡಲಿವೆ. ಒಂದು ಹುಬ್ಬಳ್ಳಿ-ಧಾರವಾಡ ಮಾರ್ಗವಾಗಿ ಸಂಚರಿಸಲಿದೆ. ಮತ್ತೊಂದು ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ಉಪನಗರ ರೈಲು ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉತ್ತಮ ಪ್ರಗತಿ ಕಂಡು ಬಂದಿದೆ ಎಂದರು.

ವಾರ್ತಾ ಶಾಖೆಯ (ಪಿಐಬಿ) ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ. ರವೀಂದ್ರ ಸ್ವಾಗತಿಸಿದರು.

ಬಿಇಎಂಎಲ್‌ನಲ್ಲಿ ನಿರ್ಮಿಸಿರುವ ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ತಯಾರಿಕಾ ಕೇಂದ್ರವನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಉದ್ಘಾಟಿಸಿ, ವೀಕ್ಷಿಸಿದರು

ಹೈ ಸ್ಪೀಡ್ ರೈಲುಗಳು ದೊಡ್ಡ ಪರಿವರ್ತನೆ ತರಲಿದ್ದು, ಬೆಂಗಳೂರು-ಚೆನ್ನೈ ರೈಲು ಪ್ರಯಾಣದ ಸಮಯ 73 ನಿಮಿಷ ಆಗಲಿದೆ. ಇದು ಎರಡು ನಗರಗಳ ನಡುವಿನ ಸಂಪರ್ಕದ ಜಾಲವನ್ನು ಮತ್ತಷ್ಟು ಹೆಚ್ಚಿಸುತ್ತದೆ
ಅಶ್ವಿನಿ ವೈಷ್ಣವ್, ರೈಲ್ವೆ ಸಚಿವ

‘15 ಲಕ್ಷ ಸಸಿ ನೆಡುವ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರವನ್ನು ಮತ್ತಷ್ಟು ಹಸಿರಾಗಿಸುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) 15 ಲಕ್ಷ ಸಸಿಗಳನ್ನು ನೆಡುವ ಪರಿಸರ ಯೋಜನೆಯನ್ನು ರೂಪಿಸಿದೆ.

ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್ ನೇತೃತ್ವದಲ್ಲಿ ಜೂನ್ 5 ರಂದು ಈ ಯೋಜನೆ ಕಾರ್ಯರೂಪಕ್ಕೆ ಬರಲಿದ್ದು, ನಗರದ ವಿವಿಧ ಸ್ಥಳಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಥಳೀಯ ಸಸಿಗಳನ್ನು ನೆಡಲಾಗುತ್ತದೆ.

ತಾಪಮಾನದ ಒತ್ತಡ ತಗ್ಗಿಸಲು, ಸೂಕ್ಷ್ಮ ಹವಾಮಾನ ಮತ್ತು ನಗರದ ಜೀವನ ಗುಣಮಟ್ಟ ಸುಧಾರಿಸುವ ಕಾರ್ಯತಂತ್ರದ ಭಾಗವಾಗಿ ಈ ಯೋಜನೆಯನ್ನು ರೂಪಿಸಿದ್ದು ಗಿನ್ನಿಸ್ ದಾಖಲೆ ನಿರ್ಮಿಸಲು ಬಿಡಿಎ ಉದ್ದೇಶಿಸಿದೆ.

ಸಿಎಸ್‌ಆರ್ ನಿಧಿಯ ಮೂಲಕ ಹದಿನೈದು ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಕಾಲಮಿತಿಯಲ್ಲಿ ಸರ್ಕಾರಿ ಸಂಸ್ಥೆಗಳು, ನಾಗರಿಕ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸ್ವಯಂ ಸೇವಕರು ಮತ್ತು ನಾಗರಿಕರನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ದೀರ್ಘಕಾಲೀನ ಪರಿಸರ ಸಂರಕ್ಷಣೆಯಲ್ಲಿ ಪಾಲುದಾರಿಕೆಯನ್ನು ಈ ಯೋಜನೆ ಉತ್ತೇಜಿಸುತ್ತದೆ.

ಯೋಜನೆ ಕುರಿತು ಮಾತನಾಡಿದ ಅಧ್ಯಕ್ಷ ಎನ್.ಎ. ಹ್ಯಾರಿಸ್, ‘ನಗರವನ್ನು ಹಸಿರಾಗಿಸುವ ಉದ್ದೇಶ ಇದೆ. ಸ್ಥಳೀಯ ಪ್ರಭೇದಗಳಿಗೆ ಆದ್ಯತೆ ನೀಡುವುದರ ಜೊತೆಗೆ ಸಮುದಾಯವನ್ನು ಭಾಗವಹಿಸುವಂತೆ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಹಸಿರು ನಗರ ನಿರ್ಮಿಸಲಾಗುವುದು. ಸಾರ್ವಜನಿಕರ ಭಾಗವಹಿಸುವಿಕೆಯ ಮೂಲಕ ನಡೆಯುವ ಈ ಕಾರ್ಯಕ್ರಮಗಳು ನಗರದ ಪರಿಸರ ಮತ್ತು ಜೀವನದ ಗುಣಮಟ್ಟ ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ’ ಎಂದು ಹೇಳಿದರು.

‘ಸಸಿ ನೆಡುವಿಕೆಯ ಸ್ಥಳಗಳು, ಪಾಲುದಾರಿಕೆಯ ವಿಧಾನ ಮತ್ತು ಭಾಗವಹಿಸುವಿಕೆಯ ಅವಕಾಶಗಳ ಕುರಿತ ವಿವರಗಳನ್ನು ಮುಂಬರುವ ದಿನಗಳಲ್ಲಿ ಹಂಚಿಕೊಳ್ಳಲಾಗುವುದು. ಹಸಿರು ಮತ್ತು ಆರೋಗ್ಯಕರ ನಗರದತ್ತ ಸಾಗಲು ರೂಪಿಸಿರುವ ಈ ಚಳವಳಿಯಲ್ಲಿ ಸಾರ್ವಜನಿಕರು, ಸಂಘ-ಸಂಸ್ಥೆಗಳು ಮತ್ತು ಪಾಲುದಾರರು ಪಾಲ್ಗೊಳ್ಳಬಹುದು’ ಎಂದರು.

ಎನ್.ಎ.ಹ್ಯಾರಿಸ್

ಆಸ್ತಿ ತೆರಿಗೆ ಐಡಿಯಿಂದ ಆನ್‌ಲೈನ್‌ನಲ್ಲಿ ಇ–ಖಾತಾ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಐಡಿ (ಎಸ್‌ಎಎಸ್) ಮೂಲಕ ಆನ್‌ಲೈನ್‌ನಲ್ಲಿ ಇ-ಖಾತಾ ಡೌನ್‌ಲೋಡ್ ಮಾಡಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸುಮಾರು 13 ಲಕ್ಷ ಇ-ಖಾತಾಗಳನ್ನು ತಕ್ಷಣವೇ ನಾಗರಿಕರಿಗೆ ಲಭ್ಯವಾಗುವಂತೆ ಮಾಡುವುದು ಹಾಗೂ ಅನಗತ್ಯ ವಿಳಂಬ ಮತ್ತು ಆಡಳಿತಾತ್ಮಕ ಅಡೆತಡೆಗಳನ್ನು ನಿವಾರಿಸುವುದು ಈ ಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು.

ವೆಬ್‌ಸೈಟ್: https://BBMPeAasthi.karnataka.gov.in ಮೂಲಕ ಮೊಬೈಲ್ ಸಂಖ್ಯೆ, ಒಟಿಪಿ ಮೂಲಕ ಲಾಗಿನ್ಆಗಿ, ಎಸ್‌ಎಎಸ್ ಐಡಿ ನಮೂದಿಸಿ ಇ-ಖಾತಾವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ನಾಗರಿಕರನ್ನು ಮಾಲೀಕರ ಹೆಸರನ್ನು ಬಳಸಿಕೊಂಡು ಕಷ್ಟಕರವಾದ ಹುಡುಕಾಟವನ್ನು ತಪ್ಪಿಸುತ್ತದೆ. ನಗರ ಪಾಲಿಕೆಗಳ ಕಚೇರಿಗಳಿಗೆ ಭೇಟಿ ನೀಡದೇ, ಯಾವುದೇ ಸಮಯದಲ್ಲಿ ಆನ್‌ಲೈನ್‌ನಲ್ಲಿ ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಇ-ಖಾತಾ ಅನ್ನು ಪ್ರಸ್ತುತ ಇರುವ ದಾಖಲೆಗಳ ಆಧಾರದ ಮೇಲೆ ಹೇಗಿವೆಯೋ ಹಾಗೆಯೇ ನೀಡಲಾಗುತ್ತದೆ. ಇ-ಖಾತಾವನ್ನು ಸಂಪೂರ್ಣಗೊಳಿಸಲು ಹಾಗೂ ಉಪ ನೋಂದಣಿ ಕಚೇರಿಯಲ್ಲಿ ವ್ಯವಹಾರ ನಡೆಸಲು, ಮಾಲೀಕರ ಆಧಾರ್ ಮತ್ತು ಇ-ಕೆವೈಸಿ, ನೋಂದಾಯಿತ ಮಾರಾಟ ದಸ್ತಾವೇಜು, ಆಸ್ತಿ ವಿವರಗಳು (ಜಿಪಿಎಸ್ ಮತ್ತು ಚಿತ್ರ), ಬೆಸ್ಕಾಂ ಐಡಿ ಅಗತ್ಯ ಎಂದರು.

ನಾಯಿ ದತ್ತು ಸ್ವೀಕಾರ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ–ಪ್ರಾಣಿ ಸಂಘರ್ಷ ತಡೆಯುವ ಜೊತೆಗೆ ಸಹ ಅಸ್ತಿತ್ವವನ್ನು ಉತ್ತೇಜಿಸುವ ಉದ್ದೇಶದಿಂದ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವತಿಯಿಂದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ನಾಯಿ ದತ್ತು ಸ್ವೀಕಾರ ಮೇಳವನ್ನು ಶನಿವಾರ ಆಯೋಜಿಸಲಾಗಿತ್ತು.

ಆಯುಕ್ತ ಡಾ. ಕೆ.ವಿ. ರಾಜೇಂದ್ರ ಮಾತನಾಡಿ, ‘ಸ್ಥಳೀಯ ನಾಯಿಗಳು (ಇಂಡಿ ಡಾಗ್ಸ್) ಇತರೆ ಜಾತಿಯ ನಾಯಿಗಳಿಗಿಂತ ಹೆಚ್ಚು ಹೊಂದಾಣಿಕೆ ಗುಣವನ್ನು ಹಾಗೂ ರೋಗ ತಡೆ ಸಾಮರ್ಥ್ಯವನ್ನು ಹೊಂದಿದ್ದು, ಸ್ಥಳೀಯ ನಾಯಿಗಳನ್ನು ದತ್ತು ಪಡೆಯುವುದು ಉತ್ತಮ’ ಎಂದು ತಿಳಿಸಿದರು.

ಇನ್ನು ಮುಂದೆ ಸ್ಥಳೀಯ ನಾಯಿಗಳನ್ನು ‘ಭೈರೂವ’ ಎಂದು ಕರೆಯಲು ಕರೆ ನೀಡಿದರು. ‘ಭೈರೂವ’ ಕುರಿತ ಕಿರುಚಿತ್ರವನ್ನು ಬಿಡುಗಡೆ ಮಾಡಿ, ಅದರ ಹೃದಯಸ್ಪರ್ಶಿ ನಿರೂಪಣೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ 14 ನಾಯಿ ಮರಿಗಳ ದತ್ತು ಪಡೆದವರನ್ನು, ಈಗಾಗಲೇ 35ಕ್ಕೂ ಹೆಚ್ಚು ನಾಯಿಗಳನ್ನು ದತ್ತು ಪಡೆದ 18 ಮಂದಿ ಹಾಗೂ 300ಕ್ಕೂ ಹೆಚ್ಚು ನಾಯಿಗಳನ್ನು ದತ್ತು ಪಡೆಯಲು ಪ್ರೋತ್ಸಾಹಿಸಿದ ಮೂವರನ್ನು ಸನ್ಮಾನಿಸಲಾಯಿತು. ಆಯುಕ್ತರು ಸ್ವತಃ ನಾಯಿ ದತ್ತು ಪಡೆದಿರುವುದನ್ನು ಉಲ್ಲೇಖಿಸಿದರು.

ವಿಶ್ವ ಪಶುವೈದ್ಯರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದ್ದು, ಪಶ್ಚಿಮ ಪಾಲಿಕೆ ಸೇರಿದಂತೆ ಇನ್ನೂ ನಾಲ್ಕು ಪಾಲಿಕೆಗಳ ಪಶುವೈದ್ಯರು ನಾಯಿಗಳಿಗೆ ರೇಬಿಸ್ ಹಾಗೂ ಸಂಯುಕ್ತ ಲಸಿಕೆ ನೀಡಿದರು.

ವಿಶಾಲ ಪ್ರದೇಶಗಳಲ್ಲಿ ಸುರಕ್ಷಿತವಾಗಿ ನಾಯಿಗಳನ್ನು ಹಿಡಿಯಲು ಟ್ರಾಪ್ ಕೇಜ್‌ಗಳ (ನಾಯಿ ಬೋನು) ಮಹತ್ವವನ್ನು ಮನಗಂಡು, ಪಶ್ಚಿಮ ಪಾಲಿಕೆ ವಿಶೇಷ ಕ್ರಮವಾಗಿ ಈ ವ್ಯವಸ್ಥೆಯನ್ನು ಪ್ರಾರಂಭಿಸಿತು.

ನಾಯಿ ದತ್ತು ತೆಗೆದುಕೊಂಡವರನ್ನು ಕೆ.ವಿ. ರಾಜೇಂದ್ರ ಅವರು ಅಭಿನಂದಿಸಿದರು

ಅಭಿವೃದ್ಧಿಗೆ ತಜ್ಞರ ಸಮಿತಿ ರಚನೆ

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಸೌಕರ್ಯಗಳನ್ನು ಬಲಪಡಿಸುವ ಮತ್ತು ನಾಗರಿಕ ಜೀವನದ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ, ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ಅವರ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ.

ಮಾಹಿತಿ ತಂತ್ರಜ್ಞಾನ ತಜ್ಞ ಪಾರ್ಥಸಾರಥಿ, ನಗರ ವಿನ್ಯಾಸ–ಸಂಚಾರ ತಜ್ಞ ಅಶ್ವಿನ್ ಮಹೇಶ್, ಘನತ್ಯಾಜ್ಯ ನಿರ್ವಹಣಾ ತಜ್ಞೆ ಪದ್ಮಶ್ರೀ, ಎಚ್.ಎಸ್. ಆರ್ ಬಡಾವಣೆ ನಾಗರಿಕ ವೇದಿಕೆಯ ಶಾಂತಿ, ವಾಸ್ತುಶಿಲ್ಪ ತಜ್ಞ ಪ್ರಸನ್ನ ರಾವ್ ಅವರನ್ನು ಒಳಗೊಂಡ ತಜ್ಞರ ಸಮಿತಿಯ ಸಭೆಯನ್ನು ಶನಿವಾರ ನಡೆಸಲಾಯಿತು.

ನಗರ ನಿರ್ವಹಣೆಗೆ ವ್ಯವಸ್ಥಿತವಾದ ಪ್ರಕ್ರಿಯೆ ಮತ್ತು ದಕ್ಷ ಸಂವಹನ ವ್ಯವಸ್ಥೆ ರೂಪಿಸುವುದು. ರಸ್ತೆಗಳು, ಕೆರೆಗಳು, ಉದ್ಯಾನಗಳು, ಒಳಚರಂಡಿ ಮತ್ತು ವಾಣಿಜ್ಯ ಮಳಿಗೆಗಳ ಸಮಗ್ರ ದತ್ತಾಂಶ ವ್ಯವಸ್ಥೆ ಅಭಿವೃದ್ಧಿಪಡಿಸುವುದು. ಮಳೆಗಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮರ್ಪಕ ಮೇಲ್ವಿಚಾರಣಾ ವ್ಯವಸ್ಥೆಯನ್ನು ಜಾರಿಗೆ ತರುವುದು. ದಿನಕ್ಕೆ ಎರಡು–ಮೂರು ಬಾರಿ ಕಸ ಸಂಗ್ರಹಣೆ ಮಾಡುವುದು ಮತ್ತು ‘ಕಸ ಕಿಯೋಸ್ಕ್’ಗಳನ್ನು ಸ್ಥಾಪಿಸುವುದು. ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಕಡ್ಡಾಯವಾಗಿ ತಮ್ಮದೇ ಆದ ಸಂಸ್ಕರಣಾ ವ್ಯವಸ್ಥೆಯನ್ನು ಹೊಂದಲು ಆಗ್ರಹಿಸುವುದು. ಸಮಸ್ಯೆಗಳ ಮೂಲವನ್ನು ಕಂಡುಕೊಳ್ಳಲು ಪಾಲಿಕೆಯ ವತಿಯಿಂದ ಆಂತರಿಕ ಅಧ್ಯಯನಗಳು ನಡೆಯಬೇಕು. ಜೊತೆಗೆ, ನಿರ್ವಹಣಾ ಕಾರ್ಯಗಳಿಗೆ ಅಗತ್ಯವಾದ ಹೆಚ್ಚಿನ ಮಾನವ ಸಂಪನ್ಮೂಲವನ್ನು ನಿಯೋಜಿಸಬೇಕು ಎಂದು ತಜ್ಞರು ಸಲಹೆ ನೀಡಿದರು.

ತಜ್ಞರು ಮತ್ತು ಪಾಲಿಕೆಯ ನಡುವೆ ನಿರಂತರ ಸಂವಹನವನ್ನು ಕಾಯ್ದುಕೊಳ್ಳಲು ಇ-ಮೇಲ್ ಮತ್ತು ವಿಡಿಯೊ ಕಾನ್ಫರೆನ್ಸ್‌ಗಳ ಮೂಲಕ ನಿಯಮಿತ ಸಮಾಲೋಚನೆ ನಡೆಸಲಾಗುವುದು ಎಂದು ಆಯುಕ್ತರು ತಿಳಿಸಿದರು.

ಟರ್ಮಿನಲ್–2ರಲ್ಲಿ ‘ಬೆಂಗಳೂರಿನ ಆತ್ಮ’ ಶಿಲ್ಪ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ‘ಬೆಂಗಳೂರಿನ ಆತ್ಮ’ ಹೆಸರಿನ ಸುಂದರ ಹಾಗೂ ಬೃಹತ್ ಕಲಾತ್ಮಕ ಶಿಲ್ಪವನ್ನು ಲೋಕಾರ್ಪಣೆಗೊಳಿಸಲಾಯಿತು.

ಬಯೊಕಾನ್ ಫೌಂಡೇಷನ್ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಸಹಯೋಗದಲ್ಲಿ ಟರ್ಮಿನಲ್-2ರ ಮುಂಭಾಗದಲ್ಲಿ ಈ ಕಲಾಕೃತಿಯನ್ನು ಸ್ಥಾಪಿಸಲಾಗಿದೆ. ಸ್ಪೇನ್‌ನ ಕಲಾವಿದ ಜೌಮೆ ಪ್ಲೆನ್ಸಾ ಅವರ ಕಲ್ಪನೆಯಲ್ಲಿ ಈ ಶಿಲ್ಪವು ಮೂಡಿ ಬಂದಿದ್ದು, ಪ್ರಯಾಣಿಕರ ಗಮನ ಸೆಳೆಯುತ್ತಿದೆ.

ಭಾರತದಲ್ಲಿನ ಸ್ಪೇನ್ ರಾಯಭಾರಿ ಜುವಾನ್ ಆಂಟೋನಿಯೊ ಮಾರ್ಚ್ ಪೂಜೋಲ್ ಅವರು ಈ ಕಲಾಕೃತಿಯನ್ನು ಲೋಕಾರ್ಪಣೆಗೊಳಿಸಿದರು. ಸಮಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬಯೊಕಾನ್ ಸಂಸ್ಥೆಯ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹರಿ ಮರಾರ್ ಮತ್ತು ಕಲಾವಿದ ಜೌಮೆ ಪ್ಲೆನ್ಸಾ ಉಪಸ್ಥಿತರಿದ್ದರು.

ಕಲಾಕೃತಿಯ ವಿಶೇಷ: ಬಣ್ಣ ಬಳಿದಿರುವ ಸ್ಟೇನ್‌ಲೆಸ್ ಸ್ಟೀಲ್ ಲೋಹದಿಂದ ಈ ಕಲಾಕೃತಿಯನ್ನು ನಿರ್ಮಿಸಿದ್ದು, ಬೆಂಗಳೂರು ನಗರವು ಸಂಸ್ಕೃತಿ, ನಾವೀನ್ಯತೆ ಹಾಗೂ ಸೃಜನಶೀಲತೆಯ ಸಂಗಮವಾಗಿದೆ ಎಂಬುದನ್ನು ಈ ಕಲಾಕೃತಿ ಪ್ರತಿಬಿಂಬಿಸುತ್ತದೆ.

ಟರ್ಮಿನಲ್–2ರಲ್ಲಿ ನಿರ್ಮಿಸಿರುವ ‘ಬೆಂಗಳೂರಿನ ಆತ್ಮ’ ಹೆಸರಿನ ಬೃಹತ್ ಕಲಾತ್ಮಕ ಶಿಲ್ಪ

ವೀರಶೈವ ಸಹಕಾರಿ ಬ್ಯಾಂಕ್ ಲಿ.,

ನಂ. 1732/32, ಎಂ ಸಿ ರಸ್ತೆ, ಎಂ ಸಿ ಲೇಔಟ್, ವಿಜಯನಗರ, ಬೆಂಗಳೂರು–560040, ಕರ್ನಾಟಕ
www.vsbank.in, ದೂ.: 080-23358017/23307070, GSTIN: 29AABAV7651G2Z4, ಇ–ಮೇಲ್: ho@vsbbengaluru.com

ಸಂಖ್ಯೆ: ವಿಎಸ್‌ಬಿ/ನೇಮಕಾತಿ/40/2026–27 ದಿನಾಂಕ 24–04–2026

ನೇಮಕಾತಿ ಪ್ರಕಟಣೆ

ವೀರಶೈವ ಸಹಕಾರಿ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು ಇದರಲ್ಲಿ ಖಾಲಿ ಇರುವ ಕಿರಿಯ ಸಹಾಯಕರು ಮತ್ತು ಅಟೆಂಡರ್ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಆರ್‌ಸಿಎಸ್/ಯುಬಿಸಿ-1/ಯುಸಿಎಸ್/ನಿ.ಪ್ರ.ನೇ/305/2025–26, ದಿನಾಂಕ 06–01–2026ರ ರೀತ್ಯಾ ಅನುಮತಿ ನೀಡಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಬ್ಯಾಂಕಿನ ವೆಬ್‌ಸೈಟ್ www.vsbank.in ರಲ್ಲಿರುವ ಲಿಂಕ್ https://tascguru.com/veerashaiva-sahakari-bank/ ನ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
ಅರ್ಜಿ ಸಲ್ಲಿಸಲು ದಿನಾಂಕ 27–04–2026 ರ ಬೆಳಿಗ್ಗೆ 10.30 ಗಂಟೆಯಿಂದ ದಿನಾಂಕ 27–05–2026 ರ ಸಂಜೆ 5.30 ಗಂಟೆಯವರೆಗೆ ಅವಕಾಶವಿರುತ್ತದೆ.

ಕ್ರ. ಸಂ.	ಹುದ್ದೆಯ ಹೆಸರು	ನಿಗದಿಪಡಿಸಿದ ವಿದ್ಯಾರ್ಹತೆ	ವೇತನ ಶ್ರೇಣಿ	ಒಟ್ಟು ಹುದ್ದೆಗಳು
1.	ಕಿರಿಯ ಸಹಾಯಕರು	1. ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು. 2. ಕಂಪ್ಯೂಟರ್ ಜ್ಞಾನ ಹೊಂದಿರಬೇಕು. 3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಐಚ್ಛಿಕ ಭಾಷೆಯಾಗಿ ಓದಿರಬೇಕು.	49050–1250–92500	10
2.	ಅಟೆಂಡರ್	ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.	34100–800–67600	2

ಅರ್ಜಿಗಳನ್ನು ಬ್ಯಾಂಕಿನ ಆನ್‌ಲೈನ್ ಲಿಂಕ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು, ಬೇರೆ ಯಾವುದೇ ರೂಪದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅರ್ಜಿಗಳನ್ನು ಭರ್ತಿ ಮಾಡುವ ವಿಧಾನ, ನಿಗದಿಪಡಿಸಿದ ಅರ್ಜಿ ಶುಲ್ಕ, ಪಾವತಿಸುವ ವಿಧಾನ, ವಯೋಮಿತಿ ಇನ್ನಿತರೆ ಸಾಮಾನ್ಯ ಸೂಚನೆಗಳ ಸಂಪೂರ್ಣ ಅಧಿಸೂಚನೆಯನ್ನು ಬ್ಯಾಂಕಿನ ವೆಬ್‌ಸೈಟ್ www.vsbank.in ಲಿಂಕ್ https://tascguru.com/veerashaiva-sahakari-bank/ ನ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಅಡಚಣೆಗಳುಂಟಾದಲ್ಲಿ ಅಥವಾ ಸ್ಪಷ್ಟೀಕರಣಕ್ಕಾಗಿ ಹೆಲ್ಪ್‌ಲೈನ್ ಸಂಖ್ಯೆ 8310460727 ಇದಕ್ಕೆ ಸಂಪರ್ಕಿಸುವುದು.

ಸಹಿ/–
ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ವೀರಶೈವ ಸಹಕಾರಿ ಬ್ಯಾಂಕ್ ಲಿ., ಬೆಂಗಳೂರು

ವಿದ್ಯಾರ್ಥಿಗಳ ಸಾಧನೆ

ಬಿಂದು ರಾಮಸ್ವಾಮಿ (ಶೇ 95), ಶ್ರೀವಿದ್ಯಾ ಪಬ್ಲಿಕ್ ಶಾಲೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು

ತೇಜಸ್ ಸಿ.ವಿ. (ಶೇ 97.6), ಸೇಂಟ್ ಯಶ್ ಪಬ್ಲಿಕ್ ಶಾಲೆ, ಕೆಂಪೇಗೌಡನಗರ, ಮಾಗಡಿ ರಸ್ತೆ

ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಘಟಿಕೋತ್ಸವ 27ಕ್ಕೆ

ಬೆಂಗಳೂರು: ‘ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್’ನ ಎರಡನೇ ವಾರ್ಷಿಕ ಘಟಿಕೋತ್ಸವವು ಇದೇ 27ರ ಸೋಮವಾರ ನಡೆಯಲಿದೆ’ ಎಂದು ಕುಲಪತಿ ಪ್ರೊ.ವಿಶ್ವನಾಥ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಘಟಿಕೋತ್ಸವದಲ್ಲಿ ಆರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 17 ವಿದ್ಯಾರ್ಥಿಗಳಿಗೆ ರ್‍ಯಾಂಕ್ ಸೇರಿ ಒಟ್ಟು 171 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಪದವಿ ಪ್ರದಾನವಾದ ತಕ್ಷಣವೇ ಅಂಕಪಟ್ಟಿಗಳನ್ನು ನ್ಯಾಡ್‌ನಲ್ಲಿ (ಎನ್‌ಎಡಿ) ಅಪ್‌ಲೋಡ್ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಅಲ್ಲಿಂದಲೇ ಅಂಕಪಟ್ಟಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು’ ಎಂದು ಮಾಹಿತಿ ನೀಡಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಘಟಿಕೋತ್ಸವ ಉದ್ಘಾಟಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಯೋಜನಾ ಆಯೋಗದ ಮಾಜಿ ಸದಸ್ಯ ಪ್ರೊ.ಬಿ.ಎಲ್.ಮುಂಗೇಕರ್ ಅವರು ಭಾಗಿಯಾಗಲಿದ್ದಾರೆ.

‘ಆರು ನೂತನ ಕೋರ್ಸ್’: ‘ಗಣಿತ ಮತ್ತು ಅರ್ಥಶಾಸ್ತ್ರ ಸಂಯೋಜನೆಯ ಕೋರ್ಸ್‌ಗಳು ರಾಜ್ಯದಲ್ಲಿ ಇಲ್ಲ. ಹೀಗಾಗಿ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಷ್ಟವಾಗಿತ್ತು. ಇದನ್ನು ನಿವಾರಿಸಲು ಆರು ಹೊಸ ಕೋರ್ಸ್‌ಗಳನ್ನು ಆರಂಭಿಸುತ್ತಿದ್ದೇವೆ’ ಎಂದು ಪ್ರೊ.ವಿಶ್ವನಾಥ ಅವರು ಹೇಳಿದರು.

‘ಮೂರು ವರ್ಷಗಳ ಬಿ.ಎಸ್‌ಸಿ ಡೇಟಾ ಅನಾಲಿಟಿಕ್ಸ್, ಎರಡು ವರ್ಷಗಳ ಎಂ.ಎಸ್‌ಸಿ ಡೇಟಾ ಅನಾಲಿಟಿಕ್ಸ್, ಐದು ವರ್ಷಗಳ ಸಂಯೋಜಿತ ಎಂ.ಎ ಅರ್ಥಶಾಸ್ತ್ರ, ಎರಡು ವರ್ಷಗಳ ಎಂ.ಎ ಅರ್ಥಶಾಸ್ತ್ರ, ಎಂ.ಎಸ್‌ಸಿ ಅಭಿವೃದ್ಧಿ ಅರ್ಥಶಾಸ್ತ್ರ ಮತ್ತು ಎಂ.ಎಸ್‌ಸಿ ಸಾರ್ವಜನಿಕ ನೀತಿ ಕೋರ್ಸ್‌ಗಳನ್ನು 2026–27ನೇ ಸಾಲಿನಿಂದ ನೂತನವಾಗಿ ಆರಂಭಿಸಲಾಗುತ್ತಿದೆ’ ಎಂದರು.

ಚಿನ್ನದ ಪದಕ ಪಡೆದವರು: 5 ವರ್ಷಗಳ ಸಂಯೋಜಿತ ಎಂ.ಎಸ್‌ಸಿ ಕೋರ್ಸ್‌ನಲ್ಲಿ ಮೇಘನಾ ಬಿ.ಪ್ರಸೀದ್, ಪಾರ್ವತಿ ಜೆ., ಎರಡು ವರ್ಷಗಳ ಎಂ.ಎಸ್‌ಸಿ ಅರ್ಥಶಾಸ್ತ್ರದಲ್ಲಿ ಗೌರಿ ಅಗರ್‌ವಾಲ್, ದಿವ್ಯಾ.ಯು, ಹಣಕಾಸು ಅರ್ಥಶಾಸ್ತ್ರದಲ್ಲಿ ಎಂ.ನೇಹಾ ಮತ್ತು ಪ್ರಿಯಾಂಶು ಶೇಖರ್ ಚಿನ್ನದ ಪದಕ ಪಡೆದಿದ್ದಾರೆ. ವಿಶ್ವವಿದ್ಯಾಲಯದ ಕುಲಸಚಿವೆ ಮಮತಾದೇವಿ ಜಿ.ಎಸ್., ಪರೀಕ್ಷಾ ನಿಯಂತ್ರಕ (ಪ್ರಭಾರ) ಮಹಮ್ಮದ್ ಶಮೀರ್ ಕೆ. ಮತ್ತು ಹಣಕಾಸು ಅಧಿಕಾರಿ ಎಂ.ವಿ.ಪ್ರಶಾಂತ್‌ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಬಿಸಿಲು ಮತ್ತು ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ. 08/SBC/26, ದಿನಾಂಕ: 16.04.2026

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಬೆಂಗಳೂರು ವಿಭಾಗ: ಉಪ ಕಾಮಗಾರಿ–1:** ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗದ ಡಬ್ಲ್ಯೂಎಫ್‌ಡಿ ವಿಭಾಗದಲ್ಲಿ ಎಫ್‌ಸಿಐ ಸೈಡಿಂಗ್‌ನಲ್ಲಿ 7.05 ಕಿಮೀ. ಉದ್ದದ ದೂರಕ್ಕೆ ಈಗಿರುವ ಸಿಎಸ್‌ಟಿ–9 ಸ್ಲೀಪರುಗಳ ಮೇಲಿನ 90ಆರ್ ರೈಲುಗಳನ್ನು 52 ಕೆಜಿ. ಪಿಎಸ್‌ಸಿ ಸ್ಲೀಪರುಗಳ 90 ಯುಟಿಎಸ್ ರೈಲುಗಳನ್ನಾಗಿ 1540 ಸಾಂದ್ರತೆಯಂತೆ ಸಿಟಿಆರ್(ಎಸ್) ಕಾಮಗಾರಿ (ಉಳಿದಿರುವ ಕಾಮಗಾರಿ). **ಉಪ ಕಾಮಗಾರಿ–2:** ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗದ ಕೆಜೆಎಂ ಯಾರ್ಡ್ ವಿಭಾಗದಲ್ಲಿ ಎಫ್‌ಸಿಐ ಸೈಡಿಂಗ್‌ನಲ್ಲಿ 1.741 ಕಿಮೀ. ಉದ್ದದ ದೂರಕ್ಕೆ ಈಗಿರುವ ಸಿಎಸ್‌ಟಿ–9 ಸ್ಲೀಪರುಗಳ ಮೇಲಿನ 90ಆರ್ ರೈಲುಗಳನ್ನು 52 ಕೆಜಿ. ಪಿಎಸ್‌ಸಿ ಸ್ಲೀಪರುಗಳ 90 ಯುಟಿಎಸ್ ರೈಲುಗಳನ್ನಾಗಿ 1540 ಸಾಂದ್ರತೆಯಂತೆ ಸಿಟಿಆರ್(ಎಸ್) ಕಾಮಗಾರಿ (ಉಳಿದಿರುವ ಕಾಮಗಾರಿ).	ರೂ. 1,95,70,037/-
2	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ–ವಿಭಾಗದಲ್ಲಿ ಬೆಂಗಳೂರು–ಜೋಲಾರಪೇಟೆ ವಿಭಾಗದ ಎಲ್‌ಸಿ ಸಂ. 94, 96, 103, 118, 119, 122, 125, 126, ಯಲಹಂಕ–ಬಂಗಾರಪೇಟೆ ವಿಭಾಗದ ಎಲ್‌ಸಿ ನಂ. 166, 163, 162, 124, 148 ಮತ್ತು ಬಂಗಾರಪೇಟೆ – ಮಾರಿಕುಪ್ಪಂ ವಿಭಾಗದ ಎಲ್‌ಸಿ ನಂ. 1 ರಲ್ಲಿ (ಒಟ್ಟು 14 ಎಲ್‌ಸಿಗಳು) ಪ್ರಸ್ತಾವಿತ ಲೆವೆಲ್ ಕ್ರಾಸಿಂಗ್‌ಗಳ ರಸ್ತೆಯ ಮೇಲ್ಮೈ ಮೇಲಿನ ಅಭಿವೃದ್ಧಿ ಕಾಮಗಾರಿಗಳು. ನಿರ್ವಹಣೆಯ ಅವಧಿ 06 ತಿಂಗಳುಗಳು.	ರೂ. 65,19,809/-
3	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ:** **ಉಪ ಕಾಮಗಾರಿ–1:** ಮುಳನೂರು (ಎಂಎಆರ್) ನಿಲ್ದಾಣದಲ್ಲಿ ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ಪ್ರಸ್ತಾವಿತ ಟೈಪ್–2 ಕ್ವಾರ್ಟರುಗಳ ನಿರ್ಮಾಣ (4 ಘಟಕಗಳು). **ಉಪ ಕಾಮಗಾರಿ–2:** ಸ್ಯಾಟಲೈಟ್ ಗುಡ್ಸ್ ಟರ್ಮಿನಲ್ (ಎಸ್‌ಜಿಟಿ) ವಿಭಾಗದಲ್ಲಿ ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ಕ್ರ್ಯೂ ಲಾಬಿಯ ಪ್ರಸ್ತಾವಿತ ನಿರ್ಮಾಣ. **ಉಪ ಕಾಮಗಾರಿ–3: ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ–ವಿಭಾಗ:** ಟ್ಯಾಕಲ್, ಕಾಮಸಮುದ್ರಂ, ಬಿಸನತ್ತಂ, ಗುಡುಪಲ್ಲಿ, ಮುಳನೂರು, ಪಚ್ಚೂರು, ಕೋರಮಂಡಲ್, ಊರಿಗಂ, ಚಾಂಪಿಯನ್, ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ ನಿಲ್ದಾಣಗಳಲ್ಲಿ ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ದಿವ್ಯಾಂಗಜನರ ಸೌಲಭ್ಯಗಳ ಮೇಲಿನ ಅಭಿವೃದ್ಧಿ ಕೆಲಸಗಳು. ನಿರ್ವಹಣೆಯ ಅವಧಿ 3 ವರ್ಷ. (ಸಂಯುಕ್ತ ಟೆಂಡರು).	ರೂ. 4,67,45,665/-
4	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗ:** ವೈಟ್‌ಫೀಲ್ಡ್ (ಡಬ್ಲ್ಯೂಎಫ್‌ಡಿ) – ಜೋಲಾರಪೇಟೆ (ಜೆಟಿಜೆ) ವಿಭಾಗದ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆ – ಎಲೆಕ್ಟ್ರಿಕಲ್ ಭಾಗವು ಸೇರಿದಂತೆ ಆಟೋ ಗೂಮ್ಟಿಗಳ ಬಿಲ್ಡಿಂಗ್‌ಗಳ ನಿರ್ಮಾಣ. ನಿರ್ವಹಣೆಯ ಅವಧಿ 3 ವರ್ಷಗಳು. (ಸಂಯುಕ್ತ ಟೆಂಡರು)	ರೂ. 8,90,39,648/-
5	**ಸಹಾಯಕ ವಿಭಾಗೀಯ ಇಂಜಿನಿಯರ್/ಬಂಗಾರಪೇಟೆ ಉಪ–ವಿಭಾಗ:** ಬಿಸನತ್ತಂ (ಬಿಎಸ್‌ಎಂ) ನಿಲ್ದಾಣದಲ್ಲಿ ವಿದ್ಯುತ್ ಭಾಗವನ್ನೊಳಗೊಂಡಂತೆ ಪ್ರಸ್ತಾವಿತ ಹೊಸ ಎಸ್ ಮತ್ತು ಟಿ ಕಟ್ಟಡದ ನಿರ್ಮಾಣ. ನಿರ್ವಹಣೆಯ ಅವಧಿ 3 ವರ್ಷಗಳು. (ಸಂಯುಕ್ತ ಟೆಂಡರು)	ರೂ. 1,99,83,973/-
6	**ಬೆಂಗಳೂರು – ಯೆಲಿಯೂರು ವಿಭಾಗ:** ಯಾರ್ಡ್ ಚಲನವಲನಗಳಿಗಾಗಿ ಕೆಂಗೇರಿ (ಕೆಜಿಐ) ಯಾರ್ಡ್‌ನಲ್ಲಿ ಕಿಮೀ. 11/000–100 ರಲ್ಲಿ ಬ್ರಿಡ್ಜ್ ನಂ. 455 ಮತ್ತು ಕಿಮೀ. 11/462 ರಲ್ಲಿ ಬ್ರಿಡ್ಜ್ ಸಂ. 456 ಅನ್ನು ವಿಸ್ತರಣೆ ಮಾಡುವುದು. ನಿರ್ವಹಣೆಯ ಅವಧಿ 4 ವರ್ಷಗಳು.	ರೂ. 1,66,27,717/-
7	**ಬೆಂಗಳೂರು ವಿಭಾಗ:** ವಾಟರ್ ಕೂಲರ್‌ಗಳ ವ್ಯವಸ್ಥೆ: ಕೆಎಸ್‌ಆರ್ ಬೆಂಗಳೂರು (ಎಸ್‌ಬಿಸಿ) – 14 ನಂ., ಯಲಹಂಕ (ವೈಎನ್‌ಕೆ) – 9 ನಂ., ಬಿಡದಿ (ಬಿಐಡಿ) – 1 ನಂ., ಚಾಂಪಿಯನ್ (ಸಿಹೆಚ್‌ಯು) – 1 ನಂ., ಕೋರಮಂಡಲ್ (ಸಿಓಎಲ್) – 1 ನಂ. ಮತ್ತು ಊರಿಗಂ (ಓಜಿಎಂ) – 1 ನಂ. (ಒಟ್ಟು – 27 ನಂ.). ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 31,87,663/-
8	**ಬೆಂಗಳೂರು – ಯೆಲಿಯೂರು ವಿಭಾಗ:** ಚನ್ನಪಟ್ಟಣ (ಸಿಪಿಟಿ) ಯಾರ್ಡ್‌ನಲ್ಲಿ ಪಾದಚಾರಿಗಳ ಚಲನವಲನಕ್ಕಾಗಿ ಎಲ್‌ಸಿ ಸಂ. 47 ರ ಹತ್ತಿರ ಕಿಮೀ. 55/200 ರಲ್ಲಿ ಫುಟ್ ಓವರ್ ಬ್ರಿಡ್ಜ್‌ನ ನಿರ್ಮಾಣ. (ಗ್ಯಾಂಗ್‌ವೇ: 32.0x3.0 ಮೀ, ಸ್ಟೇರ್ ಕೇಸ್: 2x3.0x20ಮೀ). (4ಟಿ ಕ್ರಾಸಿಂಗ್‌ಗಳು) ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 1,88,44,786/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.05.2026, 15:00 ಗಂಟೆಯವರೆಗೆ**

ಟೆಂಡರು ಸೂಚನೆ ಸಂ. 09/SBC/26, ದಿನಾಂಕ: 17.04.2026

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಬೆಂಗಳೂರು – ಯೆಲಿಯೂರು ವಿಭಾಗ:** ಮಂಡ್ಯ (ಎಂವೈಎ) ಕಾಲೊನಿಯಲ್ಲಿ ವಿದ್ಯುತ್ ಭಾಗವನ್ನೊಳಗೊಂಡಂತೆ ಜಿಎಲ್‌ಆರ್ 2 ಲಕ್ಷ ಲೀಟರ್ ಸಾಮರ್ಥ್ಯವುಳ್ಳ 2 ಆರ್‌ಸಿಸಿ ಓವರ್ ಹೆಡ್ ಟ್ಯಾಂಕ್ (ಓಹೆಚ್‌ಟಿ) ನ ನಿರ್ಮಾಣ. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 96,32,952/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.05.2026, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/55/AAF/PRB/SWR/2026-27 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

‘22 ಗ್ರಾಮಗಳಲ್ಲಿ ನಿಗಾ ಪೂರ್ಣ’

ಎಚ್5ಎನ್1 ಸೋಂಕು ನಿಯಂತ್ರಣ ಕಾರ್ಯಾಚರಣೆ ಯಶಸ್ವಿ: ಆರೋಗ್ಯ ಇಲಾಖೆ

ಹಕ್ಕಿ ಜ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಮತ್ತೂರು ಗ್ರಾಮದ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಹಕ್ಕಿ ಜ್ವರ ಪ್ರಕರಣ ಪತ್ತೆಯಾದ ಕಾರಣ, 22 ಗ್ರಾಮಗಳಲ್ಲಿ ಕೈಗೊಂಡಿದ್ದ ಹತ್ತು ದಿನಗಳ ನಿಗಾ ಅವಧಿ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ಕೇಂದ್ರದ ಕೋಳಿಯಲ್ಲಿ ಎಚ್5ಎನ್1 ಸೋಂಕು ಏ.14ರಂದು ದೃಢಪಟ್ಟಿತ್ತು. ಬಳಿಕ ರಾಜ್ಯ ಮತ್ತು ಜಿಲ್ಲಾ ಕ್ಷಿಪ್ರ ಕಾರ್ಯಪಡೆ ತಂಡ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡವು ಸ್ಥಳಕ್ಕೆ ಭೇಟಿ ನೀಡಿ, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿತ್ತು.

> **ಹಕ್ಕಿ ಜ್ವರದ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಆದರೆ, ಕೋಳಿ ಮಾಂಸ ಮತ್ತು ಮೊಟ್ಟೆಯನ್ನು ಚೆನ್ನಾಗಿ ಬೇಯಿಸಿ ಸೇವಿಸಬೇಕು**
>
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

‘ಸೋಂಕಿತ ಪ್ರದೇಶದ 10 ಕಿ.ಮೀ. ವ್ಯಾಪ್ತಿಯೊಳಗಿನ 22 ಗ್ರಾಮಗಳಿಂದ ಒಟ್ಟು 28,172 ಜನರನ್ನು 10 ದಿನಗಳ ನಿಗಾ ವ್ಯವಸ್ಥೆಗೆ ಒಳಪಡಿಸಲಾಗಿತ್ತು. ಅನೇಕ ಸುತ್ತಿನ ನಿಗಾ ಕೈಗೊಂಡ ಬಳಿಕ, ನಿಯಮಾನುಸಾರ ಸ್ವಚ್ಛತಾ ಕ್ರಮಗಳನ್ನು ಪೂರ್ಣಗೊಳಿಸಲಾಗಿದೆ’ ಎಂದು ಇಲಾಖೆ ಹೇಳಿದೆ.

‘ನಿಗಾ ಅವಧಿಯಲ್ಲಿ ಮೊದಲ ಐದು ದಿನಗಳು 10 ಸಿಬ್ಬಂದಿಯ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಿ, ರಾಷ್ಟ್ರೀಯ ವೈರಾಣು ಸಂಸ್ಥೆಯ (ಎನ್‌ಐವಿ) ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅವರ ಮಾದರಿಯಲ್ಲಿ ಎಚ್5ಎನ್1 ಸೋಂಕು ಕಾಣಿಸಿಕೊಂಡಿಲ್ಲ. 10ನೇ ದಿನದಂದು ಮತ್ತೊಮ್ಮೆ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆ ಪರೀಕ್ಷೆಗಳ ವರದಿ ಬರಬೇಕಿದೆ’ ಎಂದು ತಿಳಿಸಿದೆ.

‘ಸೋಂಕಿತ ಮತ್ತು ನಿಗಾ ವಲಯಗಳಲ್ಲಿ ಯಾವುದೇ ಮಾನವ ಎಚ್5ಎನ್1 ಪ್ರಕರಣ ಪತ್ತೆಯಾಗಿಲ್ಲ. ಮುಂಜಾಗ್ರತಾ ಕ್ರಮವಾಗಿ ಮುಂದಿನ 90 ದಿನಗಳ ಕಾಲ ಈ ಭಾಗದಲ್ಲಿ ಕೋಳಿ ಸಾಕಾಣಿಕೆ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದೆ. ಸಾರ್ವಜನಿಕರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಆದರೆ, ಹಕ್ಕಿ ಜ್ವರದ ಬಗ್ಗೆ ಇಲಾಖೆ ನೀಡಿರುವ ಮುನ್ನೆಚ್ಚರಿಕೆಗಳನ್ನು ಪಾಲಿಸಬೇಕು’ ಎಂದು ಹೇಳಿದೆ.

ಸಮಾರಂಭದಲ್ಲಿ ಬಿಎಂಟಿಸಿ ಅಧ್ಯಕ್ಷ ವಿ. ಎಸ್. ಆರಾಧ್ಯ ಅವರಿಗೆ ‘ಶ್ರೀ ಜಗದ್ಗುರು ರೇಣುಕ ಸಿರಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಪಾಲನೇತ್ರ, ಕೆ. ಆರ್. ಅಜಿತ್, ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ವೀರಸೋಮೇಶ್ವರ ಸ್ವಾಮೀಜಿ, ಯು.ಎಂ. ಬಸವರಾಜ್ ಇದ್ದರು –ಪ್ರಜಾವಾಣಿ ಚಿತ್ರ

‘ರೇಣುಕಾಚಾರ್ಯರ ಸಿದ್ಧಾಂತ, ಶರಣರ ಚಿಂತನೆಗಳು ಒಂದೇ’

ಬೆಂಗಳೂರು: ‘ರೇಣುಕಾಚಾರ್ಯರ ತತ್ವ- ಸಿದ್ಧಾಂತಗಳು ಹಾಗೂ 12ನೇ ಶತಮಾನದ ಶರಣರ ಸಾಮಾಜಿಕ ಚಿಂತನೆಗಳು ಒಂದೇ ಆಗಿವೆ’ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದರು.

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ‘ಶ್ರೀ ಜಗದ್ಗುರು ರೇಣುಕ ಸಿರಿ’ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ರೇಣುಕಾಚಾರ್ಯರ ತತ್ವ- ಸಿದ್ಧಾಂತಗಳು ಹಾಗೂ ಶರಣರ ಚಿಂತನೆಗಳಲ್ಲಿ ಕೆಲವರು ಭೇದವನ್ನುಂಟು ಮಾಡುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಪೀಠಗಳು ಅವಕಾಶ ನೀಡುವುದಿಲ್ಲ’ ಎಂದು ತಿಳಿಸಿದರು.

‘ಪ್ರತಿಯೊಬ್ಬರಿಗೂ ಬಸವಣ್ಣನವರ ವಿಚಾರಧಾರೆಗಳು ಮಾತ್ರ ಗೊತ್ತಿವೆ. ಆದರೆ ಬಸವಣ್ಣನವರಿಗಿಂತ ಪೂರ್ವದಲ್ಲಿ ವೀರಶೈವ ಧರ್ಮದ ಮೂಲ ತಾಯಿ ಬೇರು ಆಗಿರುವ ವೀರಶೈವ ಧರ್ಮದ ಸಿದ್ಧಾಂತವನ್ನು ಭೂಮಂಡಲದಲ್ಲಿ ಸ್ಥಾಪಿಸಿದ್ದ ರೇಣುಕಾಚಾರ್ಯರ ಬಗ್ಗೆ ಬಹಳಷ್ಟು ಜನರಿಗೆ ಗೊತ್ತಿಲ್ಲ. ಇವರ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು’ ಎಂದು ಕರೆ ನೀಡಿದರು.

‘ಈ ತಿಳಿವಳಿಕೆ ಇಲ್ಲದ ಕಾರಣ ಸಮಾಜದಲ್ಲಿ ಸಂಘರ್ಷಗಳು ನಡೆಯುತ್ತಿವೆ. ನಾವೆಲ್ಲರೂ ಸತ್ಯ ಹಾಗೂ ಸೈದ್ಧಾಂತಿಕ ಸಂಗತಿಗಳನ್ನು ತೆರೆದ ಮನಸ್ಸಿನಿಂದ ಪ್ರಚಾರ ಮಾಡಬೇಕು. ಅಂದಾಗ ಮಾತ್ರ ರೇಣುಕಾಚಾರ್ಯರ ಹೆಸರು ಜನಮಾನಸದಲ್ಲಿ ಉಳಿಯಲಿದೆ’ ಎಂದರು.

ಇದೇ ಸಂದರ್ಭದಲ್ಲಿ ಬಿಎಂಟಿಸಿ ಅಧ್ಯಕ್ಷ ವಿ.ಎಸ್. ಆರಾಧ್ಯ ಅವರಿಗೆ ‘ಶ್ರೀ ಜಗದ್ಗುರು ರೇಣುಕ ಸಿರಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು.

ಸಿದ್ಧರಬೆಟ್ಟದ ಖಾಸಾ ಶಾಖಾ ಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಯು.ಎಂ. ಬಸವರಾಜ್, ಕರ್ಣಾಟಕ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಯ ಎಜಿಎಂ ಅಜಿತ್ ಕೆ.ಆರ್., ಪತ್ರಕರ್ತ ಪ್ರಶಾಂತ ರಿಪ್ಪನ್‌ಪೇಟೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

‘ಮೇ ತಿಂಗಳಲ್ಲಿಯೂ ತಾಪಮಾನ ಏರಿಕೆ’

ಬೆಂಗಳೂರು: ‘ರಾಜ್ಯದಲ್ಲಿ ಈ ಬಾರಿ ಮೇ ತಿಂಗಳಲ್ಲಿಯೂ ತಾಪಮಾನ ಏರಿಕೆಯ ಹಾದಿಯಲ್ಲಿಯೇ ಸಾಗುವ ಸಾಧ್ಯತೆಯಿದೆ. ಮೇ 15ರ ನಂತರ ದಕ್ಷಿಣ ಒಳನಾಡಿನಲ್ಲಿ ಉಷ್ಣಾಂಶ ಕಡಿಮೆಯಾಗುವ ಸಂಭವವಿದೆ’ ಎಂದು ಹವಾಮಾನ ಇಲಾಖೆ ತಜ್ಞ ಸಿ.ಎಸ್. ಪಾಟೀಲ ತಿಳಿಸಿದರು.

ರಾಜ್ಯದಲ್ಲಿ ತಾಪಮಾನ ಏರಿಕೆಯ ಬಗ್ಗೆ ವಿವರಿಸಿದ ಅವರು, ‘ಮೇ 15ರ ಬಳಿಕ ನೈರುತ್ಯದಿಂದ ಗಾಳಿ ಬೀಸಲಿದೆ. ಆ ಗಾಳಿ ತೇವಾಂಶ ತರುವುದರಿಂದ ದಕ್ಷಿಣ ಒಳನಾಡಿನಲ್ಲಿ ಉಷ್ಣಾಂಶ ಇಳಿಕೆಯಾಗಲಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಬಿಸಿಲು ಜಾಸ್ತಿಯೇ ಇರಲಿದ್ದು, ಆ ಭಾಗದ ಜಿಲ್ಲೆಗಳ ಜನರು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು’ ಎಂದು ಹೇಳಿದರು.

‘ಕಳೆದೊಂದು ವಾರದಿಂದ ಗರಿಷ್ಠ ಉಷ್ಣಾಂಶವು ಉತ್ತರ ಒಳನಾಡು ಹಾಗೂ ಕರಾವಳಿಯ ಜಿಲ್ಲೆಗಳಲ್ಲಿ ವಾಡಿಕೆಗಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ವರದಿಯಾಗಿದೆ. ದಕ್ಷಿಣ ಒಳನಾಡಿನಲ್ಲಿ 2ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಅಧಿಕವಿದೆ. ಕನಿಷ್ಠ ಉಷ್ಣಾಂಶವೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ 26ರಿಂದ 28 ಡಿಗ್ರಿ ಸೆಲ್ಸಿಯಸ್ ಇದ್ದರೆ, ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ 24ರಿಂದ 26 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಕರಾವಳಿ ಜಿಲ್ಲೆಗಳಲ್ಲಿ 23ರಿಂದ 25 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಹಗಲು ಮತ್ತು ರಾತ್ರಿಯಲ್ಲಿ ಉಷ್ಣಾಂಶ ವಾಡಿಕೆಗಿಂತ ಹೆಚ್ಚಿದೆ’ ಎಂದರು.

‘ಉಷ್ಣಾಂಶ ಏರಿಕೆ ಮತ್ತು ಇಳಿಕೆ ನಿರಂತರ ಪ್ರಕ್ರಿಯೆಯಾಗಿದೆ. ಜಗತ್ತಿನಾದ್ಯಂತ ಉಷ್ಣಾಂಶ ಏರಿಕೆಯಾಗುತ್ತಿದೆ. ಗರಿಷ್ಠ ಉಷ್ಣಾಂಶ ವಾಡಿಕೆಗಿಂತ 4ರಿಂದ 5 ಡಿಗ್ರಿ ಸೆಲ್ಸಿಯಸ್ ಹೆಚ್ಚು ವರದಿಯಾದರೆ ಉಷ್ಣ ಅಲೆಗಳೆಂದು ಪರಿಗಣಿಸುತ್ತೇವೆ’ ಎಂದು ಹೇಳಿದರು.

‘ಜಾಗತಿಕ ತಾಪಮಾನ ಏರಿಕೆ ಕೈಗಾರಿಕಾ ಕ್ರಾಂತಿಯಿಂದ ಪ್ರಾರಂಭವಾಯಿತು. ಯಂತ್ರಗಳು ಹಾಗೂ ವಾಹನಗಳ ಅವಲಂಬನೆ ಹೆಚ್ಚಳವಾಗಿದೆ. ಹಸಿರುಮನೆ ಪರಿಣಾಮದಿಂದ ತಾಪಮಾನ ಏರಿಕೆಯಾಗುತ್ತಿದೆ’ ಎಂದರು. ‘ಈ ಬಾರಿ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆಯಾಗುವ ಸಾಧ್ಯತೆಯಿದೆ. ಜುಲೈ–ಆಗಸ್ಟ್ ನಂತರ ಮಳೆ ಪ್ರಬಲವಾಗಬಹುದು’ ಎಂದು ತಿಳಿಸಿದರು.

ಸಿಂಗೆಹಳ್ಳಿ ಸಮೀಪ ಚಿರತೆ ಪ್ರತ್ಯಕ್ಷ

ಕೋಲಾರ: ತಾಲ್ಲೂಕಿನ ಸಿಂಗೆಹಳ್ಳಿ ಸಮೀಪದ ಗುಡ್ಡಗಳಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಕುರಿಗಾಹಿಗಳು ಹಾಗೂ ಜನರು ಆತಂಕಗೊಂಡಿದ್ದಾರೆ.

ಚಿರತೆ ಹಿಡಿಯಲು ಕ್ರಮವಹಿಸುವಂತೆ ಅರಣ್ಯ ಇಲಾಖೆಗೆ ಗ್ರಾಮದ ಮುಖಂಡ ತಿರುಮಲೇಶ್ ಹಾಗೂ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಕಾರಮರಡಿ ಬೆಟ್ಟದಲ್ಲಿ ಚಿರತೆ (ಮಧುಗಿರಿ ವರದಿ): ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕಾರಮರಡಿ ಗ್ರಾಮದ ಬೆಟ್ಟದಲ್ಲಿ ಶನಿವಾರ ಮಧ್ಯಾಹ್ನ ಚಿರತೆ ಕಾಣಿಸಿಕೊಂಡು ಗ್ರಾಮಸ್ಥರನ್ನು ಭಯಭೀತರಾಗುವಂತೆ ಮಾಡಿದೆ. ಹಲವು ಬಾರಿ ಅರಣ್ಯ ಇಲಾಖೆಗೆ ಚಿರತೆ ಹಿಡಿಯುವಂತೆ ಮನವಿ ಮಾಡಿದರೂ ಸೂಕ್ತ ಸ್ಪಂದನೆ ಸಿಕ್ಕಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಸಾಮಾನ್ಯವಾಗಿ ರಾತ್ರಿ ಕಾಣಿಸಿಕೊಳ್ಳುತ್ತಿದ್ದ ಚಿರತೆ ಕರು, ಬೀದಿನಾಯಿ ಹಾಗೂ ಸಾಕುನಾಯಿಗಳನ್ನು ಹೊತ್ತೊಯ್ಯುತ್ತಿದ್ದವು. ಆದರೆ, ಈಗ ಹಗಲಿನಲ್ಲಿ ಬೆಟ್ಟದ ಮೇಲಿನ ಬಂಡೆಯ ಮೇಲೆ ಕುಳಿತಿರುವುದು ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

EDUCATION CORNER ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

WANTED MATHEMATICS and PE TEACHER for High School. Clerk for PUC. 'DVS INSTITUTION', Magadi Main Road, Sunkadakatte. 9535305299.

VIDHYODAYA PUBLIC ENGLISH HIGH SCHOOL
No 34, 31st Main Road, Nandini Layout, Bengaluru -96
WANTED TEACHERS
Head Mistress - MA / M Sc with B.Ed/M.Ed
Asst. Mistress - Math B.Sc with B.Ed
Asst. Mistress - Kannada MA with B.Ed
Asst. Mistress - Science B.Sc P.cm C.bz
Asst. Mistress - English /Social science /Hindi
Gmail: Vidhyodayapublicenglishschool@gmail.com
Phone No.: 9481476037, 8310456547

WANTED TEACHERS
MATHA'S INTERNATIONAL SCHOOL ICSE
(Affiliated School Code KA470)
• ENGLISH • MATHEMATICS • PHYSICS • CHEMISTRY • PHYSICAL EDUCATION TEACHERS • COMPUTER TEACHERS • DATA ENTRY OPERATORS
Education : Any Degree with B.Ed. (Optional) (Relevant Experience)
Salary: Primary -15000 -25000/- High School - 25000-45000/-
WALK IN INTERVIEW Monday to Saturday (10am to 1pm)
11 K.M. Hosur Main Road, Garuvebhavipalya, Kudlu Gate Metro Station Bengaluru-68.
Contact: 94498 14917, 82772 58609 82772 57669, 96068 29599

SRI LAL BAHADUR SHASTRY MEMORIAL HIGH SCHOOL AIDED/UNAIDED KANNADA/ENGLISH MEDIUM
No.19/01, 1st Cross, Cholurpalya, Magadi Road, Bengaluru – 560023.
WANTED
Trained Science (PCMB) and Social Science Teacher
Contact Personally between : 10-00 a.m. to 01-00 p.m.
Or Mobile Number : 9449976761

REQUIRED EXPERIENCED Female Academic Supervisor having 3- 5 years experience, also Primary and High school teachers with B.A., M.A./ B.Ed/ B.Sc., M.Sc./ B.Ed. for Social Science & English. Walk in Interview. Contact: Max Muller Public School, Mahalakshmi Layout, B'lore-96. Mobile: 080-23376050/ 51. Email Id :maxmullerpublicschool.mlayout@gmail.com.

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for Higher Primary & High School Ist Language English, Mathematics, Science, SocialScience & Hindi. STATE & ICSE. Qualification: B.A./B.Sc., B.Ed/ M.A./M.Sc, M.Ed. Only English Medium Candidates need to apply.

REQUIRED PROFESSOR, Anatomy, Medicine, Associate Professor Medicine, Anatomy, Surgery, Assistant Professor Repertory. Contact: Anuradha Homeopathic Medical College & Hospital, No.78/5, Srigandha Kaval, Near Hegganahalli Cross, Bengaluru – 91. Mob - 9731562744

MOUNT CARMEL ENGLISH SCHOOL
Rajarajeshwari Nagar, Bengaluru-98
KNOWLEDGE IS POWER
A Remarkable Achievements Of Our School Toppers - 2025-26
State 3rd Rank

Niharika Venkatesh 623/625 Sanskrit - 125/125 English-100/100 Maths-100/100 Science-100/100 Social-100/100 99.68%
Hrishikesh Markod 602/625 96.32%
Sapna P Lohar 598/625 95.68% Sanskrit - 125/125
A Nagoomi 594/625 95% Sanskrit - 125/125
Impana Jai 580/625 93% Hindi - 100/100
Yashwanth H G 578/625 92%
Poorvi H 574/625 92%
Harshitha N 574/625 92%
Ravikiran Gowda M C 573/625 91.68%
Ankitha Sree Gowda 573/625 91.68%
Deekshith 554/625 89%
Vinay Kumar A 552/625 88% Social- 100/100
Roshini P 551/625 88%
Prarthana R B 539/625 86%
Tejaswi P 574/625 86%
Congratulations to all
ADMISSION OPEN FOR - 2026-27
Pre-Nursey to Grade-IX
Phone: 080-28602294/28602295, Mob: 7899070902
E-mail: mountcarmel.rrnagar@gmail.com Website: mountcarmelrrnagar.com

CAMLIN HIGH SCHOOL, 6th 'C' Main, 4th Cross, Next to 7th Main Hampinagar Bus Stop, Vijayanagar 2nd Stage, Bangalore-560104, WANTED TRAINED TEACHER in M.Sc./ B.Sc., B.Ed (CBZ) for High School. WALK-IN Interview between 10.00a.m. to 12.30p.m. For immediate appointment. Contact: 23301363

HERITAGE PUBLIC SCHOOL Konanakunte requires HIGH SCHOOL TEACHERS for Physics Chemistry Biology PRIMARY TEACHERS for all subjects and KG-COORDINATOR WhatsApp/email resume to: Mob:9901733776 heritagepublicschoolkk@gmail.com

MORE Classifieds IN SUPPLEMENT

Architects

REQUIRED ARCHITECTURAL ASSISTANTS, SITE SUPERVISORS at Hunasamaranahalli near Yelahanka. Salary 20,000/-.Send resume: rkitex@gmail.com 7411639965

General

JUNIOR ACCOUNTANT (Female) B.Com, Experience 2 years ESI, PF, Salary, Tally. AUTOCAD DESIGNER (Female) Coreldraw+ Solid works. Experience. 2 years for Industry in Peenya. 9972410541, 9845915484 infusilindia@infusil.in

WE-ARE- HIRING Male and Female, 10th, PUC, Degree, ITI Diploma. Salary: 18000 to 23000. Benifits: ESI, EPF, OT Canteen and room. Location: Devanahalli, Bangalore. Call: 7259837193

JUPITER HOSPITALS Arishinakunte Required Front Office Executives & Admin, Computer & Good English, Accommodation provided. Contact: 9341220446

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Mallathahally, Nagarabhavi, Bengaluru-560056
Phone: 080-23213282
ADMISSION OPEN - COURSES OFFERED
♦ Computer Science & Engg ♦ Mechanical Engg
♦ Electronics & Commn Engg ♦ Civil Engineering
♦ Electrical & Electronics Engg
For details contact Mobile: 8553344666, 9448865597
RGMP-26701

VEECONS REQUIRE M.E Structural Engineering (Part-Time) B.E (Civil)/ D.C.E with minimum Five years of Experience for Construction Projects Resume. Email: info@veecons.in.

Wanted

WANTED CLERICAL STAFF for Vidhya Jyothi PU College, Begur Road, Hongasandra, Bangalore- 560114. Must know Kannada & English typing. Contact: 9845003279.

EDUCATIONAL

Admission

BECOME A GRADUATE and upgrade to an MBA all Specialisations are Available Please Contact: 9341273990

MATRIMONIAL

Grooms Wanted

Punjabi

WANTED GROOM
SLIM, Fair, Beautiful, Never Married, Punjabi girl, 37, 5'3", born & brought up in Delhi. Working as Strategy Director in MNC in Bangalore, (Rs.60 LPA). Seeks smart, well-settled match based in Bangalore.
Contact: 7837483747

BUSINESS

Business Offers

Business For Sale

SALE HOSPITALS 100_bed multi_speciality hospital near Manyata techpark, 50_bed hospital in Indiranagar, 50_bed hospital near Marthahalli. Call Arun 9845077299.

BHARATH EDUCATION SOCIETY®
BES Pre-University College of Science, Commerce & Arts
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
Email: principalas018@gmail.com
Website: www.besinstitutions.com
080-26637018 / 98863 52466

Sahakara Rathna B.L. Lakke Gowda Founder B.E.S Institutions
Free Integrated Course NEET, JEE, K-CET, COMED-K Affordable Fee for I & II PUC Science

Sri S.T. Somashekhar Hon. President, Bharath Education Society MLA, Yeshwanthpura Constituency, Former Minister, Govt of Karnataka
COURSES OFFERED FOR : 2026-27
PUC PCMB PCMC HEBA SEBA CEBA HEPS
Languages Offered: English, Kannada, Hindi & Sanskrit
BES EVENING PU COLLEGE OF COMMERCE & ARTS
080-26533736 / 95387 98956 Email: beseveningpucollege@gmail.com
PUC HEBA HEPS
Sri Nirmal Kumar K.R. President Bharath Education Society
Prof N.S. Vijaya Secretary Bharath Education Society
Sri Srinivasa C. Principal BES PU College
Sri Suresh Principal BES Evening PU College
BES-26704

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-26701

Machinery & Tools

FURNITURE MANUFACTURING Machineries For Sale Unit is in Tumkur KIADB Shed Contact Owner: 9845048193/ 9972417196

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

PERSONAL

Lost

LOST OF SALE DEED
I, Smt Janaki N S W/o Late N.V.Subbarao residing at No.1941, A block 11th Main Road, 2nd stage, Rajajinagar, Bangalore-560010, Constructed house in same above address have Lost Original Sale deed in the Name of my husband Late Sri.N.V.Subbarao Registered at Rajajinagar Sub Registrar on 09-05-1972 Book No.1, Volume 59, Page No. 187-189, No.730/72-73 while travelling. finder Please Contact: 9886884981

ಜನಸೇವಾ ವಿದ್ಯಾಕೇಂದ್ರ ಬಾಲಕರ ನಿಲಯ ಶಾಲೆಗಳು
ಚನ್ನೇನಹಳ್ಳಿ ಮಾಗಡಿ ರಸ್ತೆ, ಬೆಂಗಳೂರು ನಗರ ಜಿಲ್ಲೆ–562130
ದೂರವಾಣಿ: 9241216119/7022428464
email:123jsvkhighschool@gmail.com
2026–27ನೇ ಸಾಲಿನ ಪ್ರವೇಶಗಳಿಗೆ ಕರೆ

5, 6, 7ನೇ ತರಗತಿಗಳು:	ಉತ್ತಮ ಇಂಗ್ಲೀಷ್ ಭಾಷಾ ಕಲಿಕೆಯಂದಿಗೆ ಕನ್ನಡ ಮಾಧ್ಯಮ
8ನೇ ತರಗತಿ:	ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮ ಪ್ರಥಮ ಭಾಷೆ: ಕನ್ನಡ/ ಸಂಸ್ಕೃತ

ಎಲ್ಲಾ ವಿವರಗಳುಳ್ಳ ಪರಿಚಾಯಿಕೆಗೆ ರೂ.350/–ಮಾತ್ರ
Contact: 9241216119 / 7022428464
ಗೌರವ ಕಾರ್ಯದರ್ಶಿ

JANASEVA P.U.COLLEGE
Residential for Boys
Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com
ADMISSIONS OPEN FOR THE ACADEMIC YEAR 2026-27
First Year PUC Science (PCMB/PCMCs) Commerce (SEBA & CEBA)
Excellent coaching by experienced and highly qualified faculty members, Very Good Hostel Facility in natural environment.
Local Students (Boys & Girls) may also apply
Application forms are available in the college Office between 10 a.m. to 5 p.m.
Mob:080-23901414/9148275341
-Hon Secretary

DH DECCAN HERALD Classifieds More value, more impact
ಪ್ರಜಾವಾಣಿ EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

‘ಸಿಬ್ಬಂದಿ, ಯಂತ್ರೋಪಕರಣ, ಹಣವೂ ಇಲ್ಲ’

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು, ನಗರ ಪಾಲಿಕೆಗಳ ಆಯುಕ್ತರಿಂದ ಉತ್ತರ: ನಾಗರಿಕರ ಸಂಘಗಳ ಆರೋಪ

ಪ್ರಜಾವಾಣಿ ವಾರ್ತೆ

DH | ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ

ಬೆಂಗಳೂರು: ‘ಕಸ, ರಸ್ತೆ, ಒಳಚರಂಡಿ, ನೀರು ಸೇರಿದಂತೆ ಎಲ್ಲ ಸಮಸ್ಯೆಗಳ ಬಗ್ಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತರು, ಐದೂ ನಗರ ಪಾಲಿಕೆಗಳ ಆಯುಕ್ತರಿಗೆ ಅರಿವಿದೆ. ಅವರಿಂದ ಬರುವ ಕೊನೆಯ ಉತ್ತರ ಎಂದರೆ, ‘ಸಿಬ್ಬಂದಿ, ಯಂತ್ರೋಪಕರಣ, ಹಣ ಇಲ್ಲ’ ಎಂದು ನಾಗರಿಕ ಸಂಘಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಹೇಳಿದರು.

‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ವತಿಯಿಂದ ಶನಿವಾರ ಆಯೋಜಿಸಿದ್ದ ‘ಸಿಟಿಜನ್ ಕನೆಕ್ಟ್’ನಲ್ಲಿ 50ಕ್ಕೂ ಹೆಚ್ಚು ಸಂಘಗಳ ಪ್ರತಿನಿಧಿಗಳು, ‘ನಗರದ ಸಮಸ್ಯೆಗಳ ನಿವಾರಣೆಗೆ ಕಾಯ್ದೆಯಲ್ಲಿರುವ ನಿಯಮಗಳನ್ನು ಜಾರಿಗೊಳಿಸಬೇಕು’ ಎಂದು ಅಭಿಪ್ರಾಯಪಟ್ಟರು.

‘ಬಿಬಿಎಂಪಿಯಿಂದ ಗ್ರೇಟರ್ ಬೆಂಗಳೂರು ಆಗಿ ‘ಬೆಟರ್ ಬೆಂಗಳೂರು’ ಆಗುವ ಬದಲು ‘ಬಿಟರ್ ಬೆಂಗಳೂರು’ ಆಗಿದೆ. ನಗರ ಪಾಲಿಕೆಗಳಲ್ಲಿರುವ ಎಂಜಿನಿಯರ್ ಹಾಗೂ ಅಧಿಕಾರಿಗಳಿಗೆ ಸಮಯವೇ ಇಲ್ಲದಂತಾಗಿದೆ. ಸಿಬ್ಬಂದಿ ಕೊರತೆಯಿಂದ ಕೆಲಸಗಳೂ ಆಗುತ್ತಿಲ್ಲ. ತ್ಯಾಜ್ಯ ನಿರ್ವಹಣೆ ಅತ್ಯಂತ ದುರ್ಬಲವಾಗಿದ್ದು, ಸಮಸ್ಯೆ ಅತಿಹೆಚ್ಚಾಗಿದೆ. ಕಸವನ್ನು ಬಡಾವಣೆಗಳಲ್ಲಿ ಸುಡಲಾಗುತ್ತಿದೆ. ರಸ್ತೆಗಳ ಅಭಿವೃದ್ಧಿ ಆಗುತ್ತಿಲ್ಲ. ಮೆಟ್ರೊ ಕಾಮಗಾರಿ ನಿಗದಿತ ಸಮಯಕ್ಕೆ ಮುಗಿಯುತ್ತಿಲ್ಲ’ ಎಂದು ನಿವಾಸಿಗಳ ಸಂಘದ ಪ್ರತಿನಿಧಿ ಪ್ರಕಾಶ್ ದೂರಿದರು.

‘ಈ ಹಿಂದೆ ವಾರ್ಡ್ ಸಮಿತಿಗಳಿದ್ದವು. ಸ್ಥಳೀಯ ಸಮಸ್ಯೆಗಳನ್ನು ಜನರು ಹೇಳಿಕೊಂಡು ಪರಿಹರಿಸಿಕೊಳ್ಳ ಬಹುದಾಗಿತ್ತು. ಈಗ ಅವುಗಳಿಲ್ಲ, ನೋಡಲ್ ಅಧಿಕಾರಿಗಳಿದ್ದಾರೆ. ಅವರಿಂದ ಕೆಲಸ ಆಗುತ್ತಿಲ್ಲ. ಅಧಿಕಾರಿಗಳು ನಮ್ಮಲ್ಲಿ ಸಿಬ್ಬಂದಿ ಇಲ್ಲ, ಯಂತ್ರಗಳಿಲ್ಲ, ಹಣವೂ ಇಲ್ಲ ಎಂದು ತಮ್ಮ ಅಸಹಾಯಕತೆಯನ್ನು ಹೇಳಿಕೊಳ್ಳುತ್ತಿದ್ದಾರೆ’ ಎಂದು ಎಚ್‌ಎಸ್‌ಆರ್ ಲೇಔಟ್‌ನ ಲಲಿತಾಂಬ ಹೇಳಿದರು.

‘ನಗರದಲ್ಲಿ ಹಲವು ಬೃಹತ್ ಯೋಜನೆಗಳು ನಡೆಯುತ್ತಿವೆ. ಆದರೆ, ಅವು ಯಾವಾಗ ಮುಗಿಯುತ್ತವೆ ಎಂದು ಸಮಯ ನಿಗದಿಯಾಗಿಲ್ಲ. ಮೆಟ್ರೊ, ಉಪ ನಗರ ರೈಲು, ಮೇಲ್ಸೇತುವೆ ಸೇರಿದಂತೆ ಎಲ್ಲ ಯೋಜನೆಗಳ ಮುಕ್ತಾಯಕ್ಕೆ ಕಾಲಮಿತಿ ನಿಗದಿಪಡಿಸಬೇಕು. ಯಾವುದೇ ಯೋಜನೆಗಳ ವಿವರಗಳು ಆಯಾ ಸಂಸ್ಥೆಗಳ ವೆಬ್‌ಸೈಟ್‌ನಲ್ಲೂ ಸಿಗುವುದಿಲ್ಲ’ ಎಂದು ‘ನಮ್ಮ ಬೆಂಗಳೂರು ಪ್ರತಿಷ್ಠಾನ’ದ ವಿನೋದ್ ಜಾಕೋಬ್ ದೂರಿದರು.

‘ಬಿಬಿಎಂಪಿಗೆ ಸೇರಿಕೊಂಡಿರುವ 110 ಹಳ್ಳಿಗಳಲ್ಲಿ ಥಣಿಸಂದ್ರವು ಅಭಿವೃದ್ಧಿ ದೃಷ್ಟಿಯಲ್ಲಿ ಈಗಲೂ ಕೊನೆಯ ಸ್ಥಾನದಲ್ಲೇ ಇದೆ. 18 ವರ್ಷಗಳಿಂದ ರಸ್ತೆ, ಒಳಚರಂಡಿ ವ್ಯವಸ್ಥೆಯನ್ನೂ ಈ ಪ್ರದೇಶಗಳು ಕಂಡಿಲ್ಲ’ ಎಂದು ಥಣಿಸಂದ್ರದ ಶ್ರೀನಿವಾಸರಾವ್ ಹೇಳಿದರು.

ಕೋನೇನ ಅಗ್ರಹಾರದ ಪೂರ್ಣಿಮಾ ಶೆಟ್ಟಿ ಮಾತನಾಡಿ, ‘ನಗರದಲ್ಲಿ ನಡೆಯುತ್ತಿರುವ ಎಲ್ಲ ಯೋಜನೆಗಳು ಹಾಗೂ ಕಾಮಗಾರಿಗಳ ಬಗ್ಗೆ ಪಾರದರ್ಶಕವಾಗಿ ನಾಗರಿಕರಿಗೆ ಮಾಹಿತಿ ನೀಡುವ ‘ಪಬ್ಲಿಕ್ ಡ್ಯಾಶ್‌ಬೋರ್ಡ್’ ಅಗತ್ಯವಿದೆ. ನಗರದ ಎಲ್ಲ ನಾಗರಿಕರು ಒಗ್ಗಟ್ಟಾಗಿ, ಸಮಗ್ರವಾಗಿ ಕೆಲಸ ಮಾಡಿದರೆ ಎಲ್ಲ ರೀತಿಯ ಕೆಲಸವನ್ನೂ ಮಾಡಿಸಿಕೊಳ್ಳಬಹುದು’ ಎಂದರು.

‘ಸಿಟಿಜನ್ ಕನೆಕ್ಟ್’ ಸಂಪರ್ಕ

‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ವತಿಯಿಂದ ‘ಸಿಟಿಜನ್ ಕನೆಕ್ಟ್’ಗೆ ನಗರದ ನಾಗರಿಕರು, ನಿವಾಸಿಗಳ ಸಂಘ–ಸಂಸ್ಥೆಗಳು ಸಮಸ್ಯೆ ಹಾಗೂ ಸಲಹೆಗಳನ್ನು ವಾಟ್ಸ್‌ಆ್ಯಪ್ ಹಾಗೂ ಇ–ಮೇಲ್ ಮೂಲಕ ಕಳುಹಿಸಬಹುದು.

8867679293

ಇ–ಮೇಲ್: dhpvcitizenconnect@printersmysore.co.in

‘ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್’ ವತಿಯಿಂದ ಶನಿವಾರ ಆಯೋಜಿಸಿದ್ದ ‘ಸಿಟಿಜನ್ ಕನೆಕ್ಟ್’ನಲ್ಲಿ ನಾಗರಿಕ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು

ಸಮಸ್ಯೆ ನಿವಾರಣೆಗೆ ಸೇತುವೆ ‘ಸಿಟಿಜನ್ ಕನೆಕ್ಟ್’

‘ನಗರದ ನಾಗರಿಕರಿಗೆ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ವತಿಯಿಂದ ‘ಸಿಟಿಜನ್ ಕನೆಕ್ಟ್’ ಮೂಲಕ ಸಮಸ್ಯೆಗಳನ್ನು ಹೇಳಿಕೊಳ್ಳಲು ವೇದಿಕೆ ಕಲ್ಪಿಸಿಕೊಡಲಾಗುತ್ತಿದೆ. ನಗರವು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳಲ್ಲಿ ಪ್ರಮುಖವಾದವುಗಳನ್ನು ಆಯ್ಕೆ ಮಾಡಿಕೊಂಡು ಪರಿಹಾರ ಕಲ್ಪಿಸಲು ಪ್ರಯತ್ನಿಸಲಾಗುವುದು’ ಎಂದು ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ತಿಳಿಸಿದರು.

ಸಿಒಒ ಕಿರಣ್ ಸುಂದರ್ ರಾಜನ್ ಅವರು ‘ಸಿಟಿಜನ್ ಕನೆಕ್ಟ್’ನ ಉದ್ದೇಶವನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್‌ನ ನಿರ್ದೇಶಕಿ ಸೌಭಾಗ್ಯಲಕ್ಷ್ಮಿ ಕೆ.ಟಿ., ‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ‘ಡೆಕ್ಕನ್ ಹೆರಾಲ್ಡ್’ನ ಕಾರ್ಯನಿರ್ವಾಹಕ ಸಂಪಾದಕ ಕೆ.ವಿ. ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಪ್ರತಿನಿಧಿಗಳ ಮಾತು

- ಕಾಯ್ದೆ–ಕಾನೂನುಗಳ ಬಗ್ಗೆ ನಾಗರಿಕರಿಗೆ ಅರಿವು ಮೂಡಿಸುವ ಅಗತ್ಯವಿದೆ. ನಾಗರಿಕ ಹಕ್ಕು ಹಾಗೂ ಕಟ್ಟಡ ನಿರ್ಮಾಣದ ನಿಯಮಗಳನ್ನು ತಿಳಿಸಬೇಕು– ರಾಜಾಶರ್ಮಲು
- ಸುರಂಗ ರಸ್ತೆಯ ಬಗ್ಗೆ ಆಗುವ ದುಷ್ಪರಿಣಾಮಗಳನ್ನು ಶಾಸಕರು, ಸಂಸದರಿಗೂ ಸೇರಿದಂತೆ ನಾಗರಿಕರಿಗೆ ತಿಳಿಸಬೇಕು– ರಾಜ್‌ಕುಮಾರ್ ದುಗರ್
- ಮಕ್ಕಳ ಸಮಸ್ಯೆಗಳ ಬಗ್ಗೆ ಅವರ ಧ್ವನಿಯನ್ನು ನಗರದ ಆಡಳಿತ ನಡೆಸುವ ಅಧಿಕಾರಿಗಳಿಗೆ ತಲುಪಿಸಬೇಕು– ಪ್ರಿಯಾ ಕೃಷ್ಣಮೂರ್ತಿ
- ಕಾಯ್ದೆ ಅಥವಾ ನಿಯಮಗಳಲ್ಲಿ ಎಲ್ಲೂ ಪೇಯಿಂಗ್ ಗೆಸ್ಟ್ (ಪಿ.ಜಿ) ಎಂದು ಇಲ್ಲ. ವಸತಿ ಪ್ರದೇಶಗಳಲ್ಲಿ ಶೇ 95ರಷ್ಟು ಪಿ.ಜಿಗಳು ಅಕ್ರಮವಾಗಿ ನಡೆಯುತ್ತಿವೆ– ಸತೀಶ್ ಜಾಧವ್
- ನಗರದಲ್ಲಿರುವ ಬಡವರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಅಂಗನವಾಡಿ, ಶಾಲೆ, ಆರೋಗ್ಯ ಕೇಂದ್ರಗಳ ಸುಸ್ಥಿತಿಯಲ್ಲಿರಬೇಕು– ಕಾತ್ಯಾಯಿನಿ ಚಾಮರಾಜ್
- ಮಳೆಗಾಲದಲ್ಲಿ ಪ್ರವಾಹ ನಿಯಂತ್ರಿಸುವ ತಾಣಗಳಾದ ಕೆರೆಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಅವುಗಳ ಅಭಿವೃದ್ಧಿಯಲ್ಲಿ ಸಮಗ್ರ ಯೋಜನೆ ಇಲ್ಲ– ರಾಮ್‌ಪ್ರಸಾದ್

ನಗರದ ಹಲವೆಡೆ ಸಂಚಾರ ನಿರ್ಬಂಧ • 30 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ

ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್ ಆಯೋಜಿಸಲಾಗಿದ್ದು, ಏ.26ರ ಬೆಳಿಗ್ಗೆ 5ರಿಂದ 11ರವರೆಗೆ ವಿವಿಧೆಡೆ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಮ್ಯಾರಥಾನ್‌ನಲ್ಲಿ 30 ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಕಬ್ಬನ್‌ರಸ್ತೆ, ಪೊಲೀಸ್ ತಿಮ್ಮಯ್ಯ ಜಂಕ್ಷನ್ ಸೇರಿದಂತೆ ಹಲವೆಡೆ ಸಂಚಾರಕ್ಕೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ. ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಿಂದ ಮ್ಯಾರಥಾನ್ ಆರಂಭವಾಗಲಿದೆ.

ವಾಹನ ನಿಲುಗಡೆಗೆ ಲಭ್ಯವಿರುವ ಸ್ಥಳಗಳು

- ಎಂ.ಎಸ್. ಬಿಲ್ಡಿಂಗ್ ಪಾರ್ಕಿಂಗ್
- ಫ್ರೀಡಂ ಪಾರ್ಕ್ ಎಂ.ಎಲ್.ಸಿ.ಪಿ (ಪಾವತಿ ಆಧಾರದ ಮೇಲೆ)
- ಶಿವಾಜಿನಗರ ಬಸ್ ನಿಲ್ದಾಣ ಮತ್ತು ಯು.ಬಿ. ಸಿಟಿ (ಪಾವತಿ ಆಧಾರದ ಮೇಲೆ
- ಜ್ಞಾನ ಜ್ಯೋತಿ ಸಭಾಂಗಣ ಮತ್ತು ಶಾಸಕರ ಭವನದ ಆವರಣ
- ನೆಹರೂ ಪ್ಲಾನಿಟೋರಿಯಂ ಮತ್ತು ಗರುಡಾ ಮಾಲ್
- ಸ್ವಾಗತ್ ಚಿತ್ರಮಂದಿರ ಹಾಗೂ ಮಣಿಪಾಲ್ ಸೆಂಟರ್
- ಸ್ಕೌಟ್ ಆ್ಯಂಡ್ ಗೈಡ್ಸ್ ಮೈದಾನ, ಅರಮನೆ ರಸ್ತೆ
- ಶೋಭಾ ಮಾಲ್, ಚರ್ಚ್ ಸ್ಟ್ರೀಟ್ (ಪಾವತಿ ಆಧಾರದ ಮೇಲೆ)

ವಾಹನ ನಿಲುಗಡೆ ನಿಷೇಧಿತ ಸ್ಥಳಗಳು

- ಬಿ.ಆರ್.ಅಂಬೇಡ್ಕರ್ ರಸ್ತೆ
- ರಾಜಭವನ ರಸ್ತೆ
- ಕ್ವೀನ್ಸ್ ರಸ್ತೆ
- ಕಬ್ಬನ್ ಉದ್ಯಾನ ಸುತ್ತಮುತ್ತ
- ಕಬ್ಬನ್ ರಸ್ತೆ
- ಇನ್‌ಫೆಂಟ್ರಿ ರಸ್ತೆ
- ಮ್ಯೂಸಿಯಂ ರಸ್ತೆ
- ಕಸ್ತೂರಬಾ ರಸ್ತೆ
- ಸೇಂಟ್ ಮಾರ್ಕ್ಸ್ ರಸ್ತೆ
- ವಾರ್ ಮೆಮೋರಿಯಲ್ ಜಂಕ್ಷನ್
- ಸೇಂಟ್ ಜಾನ್ಸ್ ರಸ್ತೆ
- ಅಜಂತಾ ರಸ್ತೆ ಹಾಗೂ ಕಾಮರಾಜ ರಸ್ತೆ

ಪರ್ಯಾಯ ಮಾರ್ಗ

- ಕ್ವೀನ್ಸ್ ರಸ್ತೆಯಿಂದ ವಿಧಾನಸೌಧ ಕಡೆಗೆ ಸಂಚರಿಸುವ ವಾಹನಗಳನ್ನು ಬಾಳೆಕುಂದ್ರಿ ಜಂಕ್ಷನ್ ಬಳಿ ಕನ್ನಿಂಗ್‌ಹ್ಯಾಂ ರಸ್ತೆಯ ಮೂಲಕ ಚಂದ್ರಿ ಜಂಕ್ಷನ್ ಬಳಿ ಎಡಕ್ಕೆ ತಿರುವು ಪಡೆದು ಚಾಲುಕ್ಯ ಜಂಕ್ಷನ್ ಅರಮನೆ ರಸ್ತೆಯ ಮೂಲಕ ಕೆಂಪೇಗೌಡ ಬಸ್ ನಿಲ್ದಾಣ, ಸಿಟಿ ಮಾರುಕಟ್ಟೆ ಬಸ್ ನಿಲ್ದಾಣದ ಕಡೆಗೆ ಸಂಚರಿಸಬಹುದು
- ಕೆಂಪೇಗೌಡ ಬಸ್ ನಿಲ್ದಾಣ, ಸಿಟಿ ಮಾರುಕಟ್ಟೆ ಬಸ್ ನಿಲ್ದಾಣದ ಕಡೆಯಿಂದ ಬರುವ ವಾಹನಗಳ ಮಾರ್ಗ ಬದಲಾಯಿಸಿ, ಪೊಲೀಸ್ ಕಾರ್ನರ್ ಕಡೆಗೆ ಮತ್ತು ಅರಮನೆ ರಸ್ತೆಯ ಕಡೆಗೆ ಚಲಿಸಲು ಅವಕಾಶ ಕಲ್ಪಿಸಲಾಗಿದೆ
- ಶಿವಾಜಿನಗರ ಬಸ್ ನಿಲ್ದಾಣದಿಂದ ಮೆಜೆಸ್ಟಿಕ್ ಮತ್ತು ಕೆ.ಆರ್. ಮಾರುಕಟ್ಟೆ ಕಡೆಗೆ ಹೋಗುವ ಬಿಎಂಟಿಸಿ ಬಸ್‌ಗಳು ಕಡ್ಡಾಯವಾಗಿ ವೆಂಕಟಸ್ವಾಮಿ ನಾಯ್ಡು ರಸ್ತೆ ಮತ್ತು ಕನ್ನಿಂಗ್‌ಹ್ಯಾಂ ರಸ್ತೆಯ ಮೂಲಕ ಸಂಚರಿಸಬೇಕು
- ಎಂ.ಜಿ ರಸ್ತೆಯಿಂದ ಹಲಸೂರು ಕಡೆಗೆ: ವೆಬ್ಸ್ ಜಂಕ್ಷನ್, ಟ್ರಿನಿಟಿ ಜಂಕ್ಷನ್ ಮೂಲಕ ಸ್ವಾಮಿ ವಿವೇಕಾನಂದ ರಸ್ತೆ ತಲುಪಿ ಹಳೇ ಮದ್ರಾಸ್ ರಸ್ತೆಯ ಕಡೆಗೆ ಸಂಚರಿಸಬಹುದು
- ಹಳೇ ಮದ್ರಾಸ್ ರಸ್ತೆ ಮತ್ತು ಎಂ.ಜಿ ರಸ್ತೆಯ ಮೂಲಕ ಸಂಚರಿಸುವ ಭಾರಿ ವಾಹನಗಳು ಎನ್.ಜಿ.ಇ.ಎಫ್ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಸುರಂಜನ್ ದಾಸ್ ರಸ್ತೆ ಮೂಲಕ ಚಲಿಸಬೇಕು

ಮೆಟ್ರೊ ಸಂಚಾರ ಬೇಗ

ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಓಟದಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅನುಕೂಲ ಆಗುವಂತೆ ಭಾನುವಾರ ಮುಂಜಾನೆ 3.30 ಗಂಟೆಗೆ ‘ನಮ್ಮ ಮೆಟ್ರೊ’ ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಸಂಚಾರ ನಿರ್ಬಂಧಿತ ರಸ್ತೆಗಳು

(ಬೆಳಿಗ್ಗೆ 5ರಿಂದ 11ರವರೆಗೆ)

- ವಿಧಾನಸೌಧದ ಕಡೆಗೆ ಯಾವುದೇ ವಾಹನಗಳ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ
- ಕಬ್ಬನ್ ರಸ್ತೆ, ಸಿಟಿಒ ಜಂಕ್ಷನ್‌ನಿಂದ ಮಣಿಪಾಲ್ ಸೆಂಟರ್, ಮಣಿಪಾಲ್ ಸೆಂಟರ್‌ನಿಂದ ಸಿಟಿಒ ಜಂಕ್ಷನ್‌ವರೆಗೆ
- ಸೇಂಟ್ ಜಾನ್ಸ್ ರಸ್ತೆ (ಡಿಕನ್‌ಸನ್ ರಸ್ತೆಯಿಂದ ವೀರಪಳ್ಳಿ ಸ್ಟ್ರೀಟ್‌ವರೆಗೆ)
- ಕಾಮರಾಜ ರಸ್ತೆ (ಕಬ್ಬನ್ ರಸ್ತೆಯಿಂದ ಡಿಕನ್‌ಸನ್ ಜಂಕ್ಷನ್‌ವರೆಗೆ)
- ಡಿಕನ್‌ಸನ್ ರಸ್ತೆ, ದೋಬಿ ಘಾಟ್ ಜಂಕ್ಷನ್‌ನಿಂದ ಡಿಕನ್‌ಸನ್ ಜಂಕ್ಷನ್‌ವರೆಗೆ
- ಯೂನಿಯನ್ ಸ್ಟ್ರೀಟ್ ರಸ್ತೆ, ಇನ್‌ಫೆಂಟ್ರಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ
- ಲೇಡಿ ಕರ್ಜನ್ ರಸ್ತೆ, ಇನ್‌ಫೆಂಟ್ರಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ
- ಭಾಸ್ಕರನ್ ರಸ್ತೆ ಕಾಮಧೇನು ಜಂಕ್ಷನ್‌ನಿಂದ ಗುರುದ್ವಾರ ಜಂಕ್ಷನ್–ಕೆನ್ಸಿಂಗ್ಟನ್ ಜಂಕ್ಷನ್‌ವರೆಗೆ
- ಗಂಗಾಧರ ಚೆಟ್ಟಿ ರಸ್ತೆ ಗುರುದ್ವಾರ ಜಂಕ್ಷನ್‌ನಿಂದ ಧೋಬಿ ಘಾಟ್ ಜಂಕ್ಷನ್‌ವರೆಗೆ
- ಶ್ರೀಸರ್ಕಲ್ ಜಂಕ್ಷನ್‌ನಿಂದ ಆರ್‌ಬಿಐ ಜಂಕ್ಷನ್ ಕಡೆಗೆ (ಅಜಂತಾ ರಸ್ತೆಯ ಮೂಲಕ ಹೋಗುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ)
- ನಾಗಾ ಜಂಕ್ಷನ್‌ನಿಂದ ಶ್ರೀಸರ್ಕಲ್ ಕಡೆಗೆ (ಸೇಂಟ್ ಜಾನ್ಸ್ ರಸ್ತೆಯ ಮೂಲಕ ಹೋಗುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ)
- ಹಜ್ ಕ್ಯಾಂಪ್‌ನಿಂದ ಥಾಮಸ್ ಕೆಫೆ ಜಂಕ್ಷನ್ ಮೂಲಕ ವಾರ್ ಮೆಮೋರಿಯಲ್ ಜಂಕ್ಷನ್ ಕಡೆಗೆ
- ಕಾಕ್ಸ್‌ಟೌನ್‌ನಿಂದ ಸುಂದರಮೂರ್ತಿ ರಸ್ತೆಯ ಮೂಲಕ ವಾರ್ ಮೆಮೋರಿಯಲ್ ಜಂಕ್ಷನ್ ಕಡೆಗೆ

ಮೋಡಿ ಮಾಡಿದ ಪರ್ವೀನ್ ಗಾಯನ

ಬಿ.ಎನ್. ಗೋಪಾಲ್ ಜನ್ಮಶತಮಾನೋತ್ಸವ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ತಜ್ಞ ಬಿ.ಎನ್. ಗೋಪಾಲ್ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಅದ್ವೈತ ಫೌಂಡೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹಿಂದೂಸ್ತಾನಿ ಸಂಗೀತ ಕಛೇರಿ ಪ್ರೇಕ್ಷಕರ ಮೆಚ್ಚುಗೆಗಳಿಸಿತು.

ಹಿಂದೂಸ್ತಾನಿ ಗಾಯಕಿ ಪರ್ವೀನ್ ಸುಲ್ತಾನ್ ಅವರ ಗಾಯನಕ್ಕೆ ಪ್ರೇಕ್ಷಕರು ತಲೆದೂಗಿದರು. ಅವರಿಗೆ ತಬಲಾದಲ್ಲಿ ವಿಶ್ವನಾಥ ನಾಕೋಡ್ ಹಾಗೂ ಹಾರ್ಮೋನಿಯಂನಲ್ಲಿ ರವೀಂದ್ರ ಗುರುರಾಜ ಕಾಟೋಟಿ ಸಾಥ್ ನೀಡಿದರು. ಕಿಕ್ಕಿರಿದು ಸೇರಿದ್ದ ಭಾರತೀಯ ವಿದ್ಯಾಭವನದ ಸಭಾಂಗಣದಲ್ಲಿ ಸಂಗೀತ ಸುಧೆಯನ್ನು ಹರಿಸಿದರು.

ಮನಸೆಳೆಯುವ ಗಮಕಗಳು, ತಾನ್‌ಗಳಲ್ಲಿನ ವಿಶಿಷ್ಟ ಏರಿಳಿತವು ನೆರೆದಿದ್ದವರನ್ನು ಮಂತ್ರಮುಗ್ಧಗೊಳಿಸಿತು. ‘ಪದ್ಮಭೂಷಣ’ ಪುರಸ್ಕೃತ ಗಾಯಕಿಯಾಗಿರುವ ಅವರು, ಇಳಿ ವಯಸ್ಸಿನಲ್ಲಿಯೂ ಗಾಯನದ ಪ್ರಾರಂಭದಲ್ಲಿ ‘ತಾವು ಈಗಲೂ ಸಂಗೀತದ ವಿದ್ಯಾರ್ಥಿ’ ಎಂದು ಹೇಳುವ ಮೂಲಕ ಸರಳತೆ ಮೆರೆದರು.

ಇದಕ್ಕೂ ಮೊದಲು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರನ್ನು ಗೌರವಿಸಲಾಯಿತು. ಕಾನೂನು ಸಚಿವ ಎಚ್.ಕೆ. ಪಾಟೀಲ, ಬಿ.ಎನ್. ಗೋಪಾಲ್ ಅವರ ಪುತ್ರರೂ ಆಗಿರುವ ಅದ್ವೈತ ಫೌಂಡೇಷನ್ ಅಧ್ಯಕ್ಷ ಬಿ.ಜಿ. ಅರುಣ್ ಕುಮಾರ್, ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್ ಉಪಸ್ಥಿತರಿದ್ದರು.

ಬಿ.ಎನ್. ಗೋಪಾಲ್ ಅವರ ಸಂಗೀತ ಪ್ರೇಮದ ಬಗ್ಗೆ ವಿವರಿಸಿದ ಶಿಕ್ಷಣ ತಜ್ಞ ಕೆ.ಇ.ರಾಧಾಕೃಷ್ಣ, ‘ಬಿ.ಎನ್. ಗೋಪಾಲ್ ಅವರು ಬಹುಮುಖ ಪ್ರತಿಭೆ ಹೊಂದಿದ್ದ ವ್ಯಕ್ತಿಯಾಗಿದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ನಂತರ, ಅನೇಕ ಅತ್ಯುನ್ನತ ಸಾಧನೆ ಮಾಡುವ ಅವಕಾಶವನ್ನು ಹೊಂದಿದ್ದರು. ಆದರೆ, ಅವರು ವಿಭಿನ್ನ ಮಾರ್ಗವನ್ನು ಆಯ್ಕೆ ಮಾಡಿಕೊಂಡು, ಶಿಕ್ಷಣ ಕ್ಷೇತ್ರದಲ್ಲಿ ಮುಂದೆ ಸಾಗಿದರು. ಸಾವಿರಾರು ವಿದ್ಯಾರ್ಥಿಗಳ ಜೀವನವನ್ನು ರೂಪಿಸಿದರು. ಅವರು ಹಿಂದೂಸ್ತಾನಿ ಸಂಗೀತದ ಮೇಲೆ ಅಪಾರ ಪ್ರೀತಿ ಹೊಂದಿದ್ದರು. ಮಿದುಳಿನ ಕ್ಯಾನ್ಸರ್ ಎದುರಿಸಿದ ಅವರಿಗೆ ಆ ವೇಳೆ ಸಂಗೀತವು ಶಕ್ತಿಯಾಯಿತು’ ಎಂದು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ಪರ್ವೀನ್ ಸುಲ್ತಾನ್ ಅವರು ಹಿಂದೂಸ್ತಾನಿ ಸಂಗೀತ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಖರ್ಗೆ ಹೇಳಿಕೆಗೆ ನಡ್ಡಾ ತಿರುಗೇಟು

ಪ್ರಜಾವಾಣಿ ವಾರ್ತೆ

ಜೆ.ಪಿ. ನಡ್ಡಾ

ನವದೆಹಲಿ: ‘ದೇಶದಲ್ಲಿ ರಸಗೊಬ್ಬರಗಳ ಕೊರತೆ ಇಲ್ಲ. ಅಗತ್ಯಕ್ಕಿಂತ ಹೆಚ್ಚಿನ ದಾಸ್ತಾನು ಇದೆ’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಜೆ.ಪಿ.ನಡ್ಡಾ ತಿಳಿಸಿದ್ದಾರೆ.

‘ರಸಗೊಬ್ಬರದ ಕೊರತೆ ಇದೆ’ ಎಂಬ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಜೆ.ಪಿ. ನಡ್ಡಾ, ‘ಖರ್ಗೆ ಅವರು ತಪ್ಪು ಮಾಹಿತಿ ನೀಡುವ ಮೂಲಕ ರೈತರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಇಲ್ಲದ ಆತಂಕವನ್ನು ಸೃಷ್ಟಿಸುತ್ತಿದ್ದಾರೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಖರ್ಗೆ ಇಷ್ಟೊಂದು ತಪ್ಪು ಮಾಹಿತಿಯನ್ನು ಹೊಂದಿದ್ದಾರೆಂಬುದನ್ನು ನಂಬಲು ಕಷ್ಟವಾಗುತ್ತಿದೆ. ಬಹುಶಃ ದೇಶವನ್ನು ದಾರಿ ತಪ್ಪಿಸಲು ಬಯಸುವಂತಹ ವ್ಯಕ್ತಿಗಳು ಅವರ ಸುತ್ತಮುತ್ತ ಇದ್ದು, ಅವರ ಪ್ರಭಾವದಿಂದ ಇಂತಹ ಹೇಳಿಕೆ ನೀಡುತ್ತಿರಬಹುದು’ ಎಂದು ತಿಳಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶದ ರೈತರನ್ನು ಜಾಗತಿಕ ಬೆಲೆಗಳ ಏರಿಳಿತದ ಆಘಾತಗಳಿಂದ ರಕ್ಷಿಸಲಾಗಿದೆ’ ಎಂದಿದ್ದಾರೆ.

‘ಒಂದು ಚೀಲ ಯೂರಿಯಾಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹4 ಸಾವಿರಕ್ಕಿಂತ ಹೆಚ್ಚಿನ ಬೆಲೆ ಇದೆ. ಆದರೆ, ನಮ್ಮ ರೈತರು ಕೇವಲ ₹266ಕ್ಕೆ ಪಡೆಯುತ್ತಿದ್ದಾರೆ. ಕೋವಿಡ್ ಅವಧಿಯಿಂದ ಪ್ರತಿ ಚೀಲ ಡಿಎಪಿಯನ್ನು ₹1,350ಕ್ಕೆ ಪಡೆಯುತ್ತಿದ್ದಾರೆ. ಇದರ ಬೆಲೆ ಜಾಗತಿಕ ಮಟ್ಟದಲ್ಲಿ ₹4 ಸಾವಿರಕ್ಕಿಂತ ಹೆಚ್ಚಿದೆ’ ಎಂದು ಮಾಹಿತಿ ನೀಡಿದ್ದಾರೆ.

ನೀತಿ ಆಯೋಗದ ಸದಸ್ಯರಾಗಿ ಕೆ.ವಿ.ರಾಜು

ನವದೆಹಲಿ: ನೀತಿ ಆಯೋಗವನ್ನು ಕೇಂದ್ರ ಸರ್ಕಾರ ಪುನರ್ ರಚಿಸಿದ್ದು, ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಅಶೋಕ್ ಕುಮಾರ್ ಲಾಹಿರಿ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದೆ.

ಅರ್ಥಶಾಸ್ತ್ರಜ್ಞ ಪ್ರೊ. ಕೆ.ವಿ. ರಾಜು, ಏಮ್ಸ್ ನಿರ್ದೇಶಕ ಎಂ. ಶ್ರೀನಿವಾಸ್ ಸೇರಿದಂತೆ ಐವರು ಪೂರ್ಣಾವಧಿ ಸದಸ್ಯರನ್ನು ಸರ್ಕಾರ ನೇಮಿಸಿದೆ. ನೀತಿ ಆಯೋಗಕ್ಕೆ ಪ್ರಧಾನಿ ಅಧ್ಯಕ್ಷರು.

ಮುತ್ತ್ಯಾಲಮಡುವು, ಬನ್ನೇರುಘಟ್ಟಕ್ಕೆ ಪ್ರವಾಸ ಯೋಜನೆ

ಆನೇಕಲ್: ತಾಲ್ಲೂಕಿನ ಪ್ರವಾಸಿ ತಾಣಗಳಾದ ಬನ್ನೇರುಘಟ್ಟ, ಮುತ್ತ್ಯಾಲಮಡುವಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯಿಂದ ಬೇಸಿಗೆ ರಜೆಯ ಪ್ರಯುಕ್ತ ಹವಾ ನಿಯಂತ್ರಿತ ಬಸ್ ಸೌಲಭ್ಯ ಕಲ್ಪಿಸಲಾಗಿದೆ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯು ಮಂಗಳವಾರ ಹೊರತುಪಡಿಸಿ ಉಳಿದ ಎಲ್ಲಾ ದಿನಗಳು ಯಶವಂತಪುರದಿಂದ ಬನ್ನೇರುಘಟ್ಟ, ಮುತ್ತ್ಯಾಲಮಡುವಿಗೆ ಪ್ರವಾಸದ ವ್ಯವಸ್ಥೆ ಕಲ್ಪಿಸಿದೆ. ಯಶವಂತಪುರದಿಂದ ಪ್ರತಿ ದಿನ ಬಸ್ ಬೆಳಿಗ್ಗೆ 7.15ಕ್ಕೆ ಬಿಡಲಿದ್ದು 7.45ಕ್ಕೆ ಶಾಂತಿನಗರ, 8 ಗಂಟೆಗೆ ಜಯನಗರ ಬಸ್ ನಿಲ್ದಾಣದ ಮಾರ್ಗವಾಗಿ ಸಾಗಲಿದೆ. ₹1,680ರಲ್ಲಿ ಪ್ರವಾಸ ಯೋಜನೆಯಲ್ಲಿ ಬನ್ನೇರುಘಟ್ಟ ಉದ್ಯಾನವನ, ಸಫಾರಿ, ಚಿಟ್ಟೆ ಪಾರ್ಕ್, ಮುತ್ತ್ಯಾಲಮಡುವು ಬೋಟಿಂಗ್, ಸೂರ್ಯಾಸ್ತ ಸೇರಿದಂತೆ ವಿವಿಧ ತಾಣಗಳ ವೀಕ್ಷಣೆಗೆ ಅವಕಾಶ ಕಲ್ಪಿಸಿದೆ. ಯೋಜನೆಯಲ್ಲಿ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ಸಂಜೆಯ ಲಘು ಆಹಾರ ಒಳಗೊಂಡಿರುತ್ತದೆ. ನಿಗಮದ ವೆಬ್‌ಸೈಟ್ ಮೂಲಕ www.kstdc.co ಮೂಲಕ ಸೇವೆ ಪಡೆಯಬಹುದು ಎಂದು ಕೆಎಸ್‌ಟಿಡಿಸಿ ತಿಳಿಸಿದೆ.

ಶಂಕರ ಜಯಂತ್ಯುತ್ಸವದಲ್ಲಿ ಪಾವಗಡ ಪ್ರಕಾಶ್ ರಾವ್ ಮಾತನಾಡಿದರು. ಶಿಲ್ಪಾ ಜತ್ತಿ, ಕೆ.ವಿ. ನರಸಿಂಹನ್, ಶ್ರೀನಿವಾಸ ಹರೀಶ್ ಕುಮಾರ್, ಬಿ.ಎಸ್. ದ್ವಾರಕಾನಾಥ್, ಎಸ್. ರಘುನಾಥ್ ಉಪಸ್ಥಿತರಿದ್ದರು

‘ಶಂಕರಾಚಾರ್ಯರ ಸಾಧನೆ ಅಪಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸನಾತನ ಧರ್ಮ ಕ್ಷೀಣಿಸುತ್ತಿದ್ದ ಕಾಲಘಟ್ಟದಲ್ಲಿ ಶಂಕರಾಚಾರ್ಯರ ಜನ್ಮವಾಗುತ್ತದೆ. ಅವರು ಬದುಕಿದ್ದ 32 ವರ್ಷದಲ್ಲಿ ಅಪಾರ ಸಾಧನೆ ಮಾಡಿದರು’ ಎಂದು ನಿವೃತ್ತ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಹೇಳಿದರು.

ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಶಂಕರ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದರು.

‘ಶಂಕರಾಚಾರ್ಯರ ಸಾಧನೆ ಬಗ್ಗೆ ಎಷ್ಟು ಹೇಳಿದರೂ ಸಾಲದು. ಅವರ ಬಗ್ಗೆ ಪುಸ್ತಕಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ. ಅವರ ಗುರು ಗೋವಿಂದ ಪಾದರ ಆದೇಶದಂತೆ ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪನೆ ಮಾಡಿದರು. ಭಾರತವನ್ನು ಧಾರ್ಮಿಕವಾಗಿ ಒಗ್ಗೂಡಿಸುವುದರ ಜತೆಗೆ ಭೌಗೋಳಿಕವಾಗಿ ಏಕತೆಯನ್ನು ಸ್ಥಾಪನೆ ಮಾಡಿದರು’ ಎಂದು ತಿಳಿಸಿದರು.

‘ದೇಶದಲ್ಲಿ ಸಾಕಷ್ಟು ರಾಜರು ಇದ್ದರು. ಅವರಲ್ಲಿ ಯಾರಲ್ಲೂ ಭಾರತೀಯತೆ ಇರಲಿಲ್ಲ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಒಂದೇ ಒಂದು ನೆಲ ಅಂದರೆ ಭಾರತ. ಅವರನ್ನೆಲ್ಲಾ ಒಂದುಗೂಡಿಸದಿದ್ದರೆ ಸನಾತನ ಧರ್ಮ ಇರುತ್ತಿರಲಿಲ್ಲ’ ಎಂದರು.

‘ದೇಶದ ಸಂವಿಧಾನದಲ್ಲಿ ಜಾತ್ಯತೀತ ತತ್ವ ಸೇರ್ಪಡೆಯಾಗಿದೆ. ಆದರೆ, ಅದರ ನೈಜ ಆಶಯಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ. ಹುಸಿ ಜಾತ್ಯತೀತತೆ ನಡೆಯುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಭಗವಾತ್ಪದರ ಬ್ರಹ್ಮ ಚಿಂತನೆ’ ಕುರಿತು ಅದ್ವೈತ ಮಹಾ ಮಂಡಲ ಅಧ್ಯಕ್ಷ ಪಾವಗಡ ಪ್ರಕಾಶ್ ರಾವ್ ಮಾತನಾಡಿದರು. ನಿವೃತ್ತ ನ್ಯಾಯಮೂರ್ತಿ ಕೆ.ವಿ.ನರಸಿಂಹನ್ ಅಧ್ಯಕ್ಷತೆ ವಹಿಸಿದ್ದರು.

ನಿರ್ದೇಶಕಿ ರೂಪಾ ಅಯ್ಯರ್, ಗಮಕ ಕಲಾವಿದೆ ಗಂಗಮ್ಮ ಕೇಶವ ಮೂರ್ತಿ, ಎಸ್.ಆರ್.ನಂದಿನಿ ದೇವಿ ಹಾಗೂ ‘ಪ್ರಜಾವಾಣಿ’ ಸುದ್ದಿಸಂಪಾದಕ ನಾಗೇಶ್ ಶೆಣೈ ಅವರನ್ನು ಸನ್ಮಾನಿಸಲಾಯಿತು.

ಜತ್ತಿ ಫೌಂಡೇಷನ್ ಟ್ರಸ್ಟಿ ಶಿಲ್ಪಾ ಜತ್ತಿ, ಜ್ಯೋತಿಷಿ ರಾಜಗುರು ಬಿ.ಎಸ್. ದ್ವಾರಕಾನಾಥ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್. ರಘುನಾಥ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ರುಮಟಾಲಜಿ ಜಾಗೃತಿ ಪಾದಯಾತ್ರೆ: ಆಯೋಜನೆ: ಭಾರತೀಯ ರುಮಟಾಲಜಿ ಅಸೋಸಿಯೇಷನ್, ಸ್ಥಳ: ಲಾಲ್‌ಬಾಗ್ ಪಶ್ಚಿಮ ದ್ವಾರ, ಬೆಳಿಗ್ಗೆ 7

ನಿಮಿಷಾಂಬಾದೇವಿ ಜಯಂತಿ: ಬೆಳಿಗ್ಗೆ 7.30ಕ್ಕೆ ನಿಮಿಷಾಂಬಾದೇವಿಗೆ ಅಭಿಷೇಕ, ಪುಷ್ಪಾಲಂಕಾರ, 8ಕ್ಕೆ ದುರ್ಗಾ ಹೋಮ, ಕಳಶಾರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾದೇವಿ ದೇವಸ್ಥಾನ, ಒಟಿಸಿ ರಸ್ತೆ, ಕಾಟನ್‌ಪೇಟೆ

ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ 50ನೇ ವರ್ಷದ ಸುವರ್ಣ ಮಹೋತ್ಸವ: ಅತಿಥಿಗಳು: ವಿಜಯ್‌ಕುಮಾರ್ ರಾಜು, ಕೆ. ವಂಶಿಧರ್ ಬಾಬು, ವಿ.ವಿ. ಕೃಷ್ಣಾರೆಡ್ಡಿ, ಎನ್. ಮೋಹನ್‌ಕುಮಾರ್, ಅಧ್ಯಕ್ಷತೆ: ಜಿ. ಮೋಹನ್, ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ, ಸ್ಥಳ: ಬಂಟ್ಸ್ ಸಂಘದ ಸಭಾಂಗಣ, ವಿಜಯನಗರ, ಬೆಳಿಗ್ಗೆ 7.45

ವಿಶ್ವ ಭೂಮಿ ದಿನ–2026: ಜಾನಪದ, ಶಾಸ್ತ್ರೀಯ ನೃತ್ಯರೂಪಕ: ಅನುಶ್ರುತ ಬಿ.ವೈ., ಉದ್ಘಾಟನೆ: ಸಾಗರ್ ಧರ, ಮೀನಾಕ್ಷಿ ಭರತ್, ಕೆ. ಅಮರನಾರಾಯಣ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್ ಆರ್ಗ್ಯಾನಿಕ್ ಹೋಟೆಲ್, ಮಲ್ಲೇಶ್ವರ, ಬೆಳಿಗ್ಗೆ 9.30ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರಾವಣಿ ಪ್ರಕಾಶ್, ಅತಿಥಿಗಳು: ರಘು ನಂದನ್ ಎಸ್., ಮದನ್ ಜಿ.ಎಚ್., ಆರ್. ರಾಜಾರಾಮ್, ಆಯೋಜನೆ: ಕಲಾನಿಧಿ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಪರಮ್ ಸೈನ್ಸ್ ಎಕ್ಸ್‌ಪೀರಿಯನ್ಸ್ ಸೆಂಟರ್ ಉದ್ಘಾಟನೆ: ಅತಿಥಿಗಳು: ಕ್ರಿಸ್ ಗೋಪಾಕೃಷ್ಣನ್, ಕೆ. ರಾಧಾಕೃಷ್ಣನ್, ಆಯೋಜನೆ: ಪರಮ್ ಫೌಂಡೇಷನ್, ಸ್ಥಳ: ಪಾರ್ಸೆಕ್, ಜೆ.ಪಿ. ಟೆಕ್‌ಪಾರ್ಕ್, ವೈಟ್‌ಫೀಲ್ಡ್, ಬೆಳಿಗ್ಗೆ 10.10

ಬರಗೂರು ರಾಮಚಂದ್ರಪ್ಪ ಅವರ ‘ಶ್ರೇಷ್ಠತೆಯ ಸೊಕ್ಕು’ ಪುಸ್ತಕ ಬಿಡುಗಡೆ: ಬಾನು ಮುಷ್ತಾಕ್, ಅತಿಥಿ: ರಾಜೇಂದ್ರ ಚೆನ್ನಿ, ಅಧ್ಯಕ್ಷತೆ: ಎಚ್.ಎಸ್. ರಾಘವೇಂದ್ರರಾವ್, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಬರಗೂರು ರಾಮಚಂದ್ರಪ್ಪ

‘ನಾದಯೋಗಿ ಶ್ರೀ ಭೈರವಿ ಕೆಂಪೇಗೌಡರು’ ದತ್ತಿ: ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ, ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಬೋಧಿ ಸಪ್ತಾಹ: ಮಹಾಬೋಧಿ ಪಾಲಿ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನೆ: ಜಮೀರ್ ಅಹಮದ್ ಖಾನ್, ಅತಿಥಿಗಳು: ವಾಂಗ್ಚುಕ್ ನೇಗಿ, ಎಂ. ಸುಗತಸಿರಿ ಥೇರಾ, ಆಯೋಜನೆ ಹಾಗೂ ಸ್ಥಳ: ಮಹಾಬೋಧಿ ಸೊಸೈಟಿ, ಗಾಂಧಿನಗರ, ಬೆಳಿಗ್ಗೆ 10.30

ಅಕ್ಷರ ಐಸಿರಿ 11ನೇ ವಾರ್ಷಿಕೋತ್ಸವ: ಅತಿಥಿಗಳು: ಕೆ. ಗೋಪಾಲಯ್ಯ, ಹೇಮಲತಾ ಗೋಪಾಲಯ್ಯ, ಬೈರಮಂಗಲ ರಾಮೇಗೌಡ, ವರ್ಷದ ವ್ಯಕ್ತಿ: ಅಂಬುಜಾ ಪ್ರಕಾಶ್, ಡಾ. ಫಣೀಶ ಎಂ.ಎಸ್., ಎ.ಎಸ್. ಜಯಶ್ರೀ, ಆಯೋಜನೆ: ಅಕ್ಷರ ಐಸಿರಿ, ಸ್ಥಳ: ಬಸವೇಶ್ವರನಗರ ಹಿರಿಯ ನಾಗರಿಕರ ವೇದಿಕೆಯ ಸಭಾಂಗಣ, ಬೆಳಿಗ್ಗೆ 10.30

ಎಸ್‌ಯುಸಿಐ–ಸಿ ಪಕ್ಷದ 78ನೇ ಸಂಸ್ಥಾಪನಾ ವರ್ಷಾಚರಣೆ: ಕೆ. ರಾಧಾಕೃಷ್ಣ, ಸುನೀತ್ ಕುಮಾರ್, ಅಧ್ಯಕ್ಷತೆ: ಎಂ.ಎನ್. ಶ್ರೀರಾಮ್, ಆಯೋಜನೆ: ಎಸ್‌ಯುಸಿಐ–ಸಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ನಿಮಿಷಾಂಬಾದೇವಿ ಜಯಂತಿ: ಮಧ್ಯಾಹ್ನ 2ಕ್ಕೆ ನಿಮಿಷಾಂಬಾದೇವಿ ಮೂರ್ತಿಯ ಆಗಮನ, ಕುಂಕುಮಾರ್ಚನೆ, ದಾನಿಗಳಿಗೆ ಸನ್ಮಾನ, ಪ್ರಸಾದ ವಿತರಣೆ: ಸಂಜೆ 7ಕ್ಕೆ ಲಲಿತಾ ಸಹಸ್ರನಾಮ: ಸೋಮವಂಶ ಆರ್ಯಕ್ಷತ್ರಿಯ ಮಹಿಳಾ ಸಂಘ, ಆಯೋಜನೆ ಮತ್ತು ಸ್ಥಳ: ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ, ನಿಮಿಷಾಂಬಾದೇವಿ ಕಲ್ಯಾಣ ಮಂಟಪ, ರಂಗಸ್ವಾಮಿಗುಡಿ ರಸ್ತೆ.

ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್–2026: ಉಪಸ್ಥಿತಿ: ಭಜನ್‌ಲಾಲ್ ಶರ್ಮಾ, ಆಯೋಜನೆ: ರಾಜಸ್ಥಾನ ಸರ್ಕಾರ, ಸ್ಥಳ: ಹೋಟೆಲ್ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಮಧ್ಯಾಹ್ನ 12

ಡಾ.ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಉಪನ್ಯಾಸ, ಕವಿಗೋಷ್ಠಿ, ಗೀತಗಾಯನ, ರಂಗಗೀತೆ ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ವಿ. ಶ್ರೀನಿವಾಸ ಗುಪ್ತ, ಅತಿಥಿ: ಎಚ್.ಎ. ಪಾರ್ಶ್ವನಾಥ್, ಉಪಸ್ಥಿತಿ: ಬಿ. ಶಾಂತಕುಮಾರ್, ಆಯೋಜನೆ: ಕಲಾಚಂದರಿ ಕಲಾಮಂದಿರ ಟ್ರಸ್ಟ್, ಸ್ಥಳ: ಜೈಪ್ರದ ಗಾನಲಹರಿ ಸಭಾಂಗಣ, ಒಂದನೇ ಅಡ್ಡರಸ್ತೆ, ಸ್ವಾತಂತ್ರ್ಯ ಯೋಧರ ನಗರ, ಮಧ್ಯಾಹ್ನ 2.30

ಬುದ್ಧ–ಬಸವ– ಅಂಬೇಡ್ಕರ್ ಬಗ್ಗೆ ವಿಶೇಷ ಉಪನ್ಯಾಸ: ಎ.ಬಿ. ಬಸವರಾಜು, ಚಲನಚಿತ್ರ ಗೀತೆಗಳ ಗಾಯನ: ಸುಬ್ರಮಣಿ ವಿ., ಅಪೂರ್ವ ಶ್ರೀಕುಮಾರ್, ಆಯೋಜನೆ: ಭಾರತೀ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಮೂರನೇ ಮಹಡಿ, ಇಂದಿರಾನಗರ ಕ್ಲಬ್, ಎಚ್‌ಎಎಲ್, ಮೂರನೇ ಹಂತ, ಮಧ್ಯಾಹ್ನ 3.30

ಅಂತರರಾಷ್ಟ್ರೀಯ ನೃತ್ಯ ದಿನಾಚರಣೆ, ಸೃಷ್ಟಿ ನ್ಯಾಷನಲ್ ಅಚೀವ್‌ಮೆಂಟ್ ಅವಾರ್ಡ್: ಅತಿಥಿಗಳು: ಚಂದ್ರಶೇಖರ ಕಂಬಾರ, ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಶಾಲಿನಿ ರಜನೀಶ್, ಎಂ.ಎ. ಸಲೀಂ, ಭರತನಾಟ್ಯ ಪ್ರದರ್ಶನ: ಪ್ರತಿಭಾ ಪ್ರಹ್ಲಾದ್, ‘ಕರಿಮಾಯಿ’ ನೃತ್ಯ ರೂಪಕ ಪ್ರದರ್ಶನ, ನಿರ್ದೇಶನ: ಬಿ. ಜಯಶ್ರೀ, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್ 3191, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ಕಾನೂನು ಶಿಕ್ಷಕರ ಸಮಾವೇಶದ ಸಮಾರೋಪ: ಅತಿಥಿಗಳು: ಆರ್. ವೆಂಕಟರಾವ್, ವಿ.ಬಿ. ರೆಡ್ಡಿ, ಸಿ. ಬಸವರಾಜು, ಜಿ.ಬಿ. ರೆಡ್ಡಿ, ಅಧ್ಯಕ್ಷತೆ: ಬಿ.ಟಿ. ಕೌಲ್, ಆಯೋಜನೆ ಹಾಗೂ ಸ್ಥಳ: ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಲಾ, ಎಂಎಸ್‌ಆರ್ ನಗರ, ಮಧ್ಯಾಹ್ನ 3.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಲಕ್ಷ್ಮಿ ಅನನ್ಯ ಟಿ., ಅತಿಥಿಗಳು: ಲಕ್ಷ್ಮಿ ಪಂಡಿತರ್, ಆನಂದ್ ಪಾಂಡುರಂಗ, ಸ್ಥಳ: ಸಿಂಬೋಸಿಸ್ ಸಭಾಂಗಣ, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ ಸಿಟಿ ಫೇಸ್–1, ಸಂಜೆ 4ರಿಂದ

ಸಾಹಿತ್ಯ ಸಂಗೀತ ಸಮಾರೋಪ ಜಗದೀಶ ಶರ್ಮಾ ಸಂಪ ಅವರ ‘108 ಸುಭಾಷಿತ’ ಪುಸ್ತಕ ಬಿಡುಗಡೆ: ಅತಿಥಿಗಳು: ಗಜಾನನ ಶರ್ಮ, ರಂಗನಾಥ ಭಾರದ್ವಾಜ್, ರಾಧಿಕಾ ರಾಣಿ, ಉಪಸ್ಥಿತಿ: ಜಮೀಲ್ ಸಾವಣ್ಣ, ಜಿ.ಎಸ್. ಹೆಗಡೆ, ಸಂಗೀತ ಕಛೇರಿ: ಗಾಯನ: ಅರುಂಧತಿ ವಸಿಷ್ಠ, ತಬಲಾ: ಎಸ್. ಅಮಿತ್ ರಾಜ್, ಸೂರ್ಯ ಉಪಾಧ್ಯಾಯ, ಆಯೋಜನೆ: ಸಪ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

ಸಂಗೀತ ಕಛೇರಿ: ಗಾಯನ: ಪ್ರಜ್ಞಾ ಅಡಿಗ, ಪಿಟೀಲು: ಪೃಥ್ವಿ ಭಾಸ್ಕರ್, ಮೃದಂಗ: ರಾಧೇಶ್, ಮೋರ್ಸಿಂಗ್: ಆರ್. ಅಭಿಜಿತ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಮೂರನೇ ಅಡ್ಡರಸ್ತೆ, ಮೂರನೇ ಹಂತ, ಜೆ.ಪಿ. ನಗರ, ಸಂಜೆ 5.30

ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಜನ್ಮಶತಮಾನೋತ್ಸವ ಸಂಭ್ರಮ ‘ಆಕಾಶದ ನೀಲಿಯಲ್ಲಿ’ ಭಾವ ಕಾವ್ಯ ರಾಗ ಸಂಗೀತ: ವಿನಯ್ ನಾಡಿಗ್ ಮತ್ತು ತಂಡ, ಆಯೋಜನೆ: ಅವಿರತ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಸಂಜೆ 5.30

ವೀಕೆಂಡ್ ನಾಟಕೋತ್ಸವ: ‘ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ: ಪ್ರಸ್ತುತಿ: ಅಂತರಂಗ ಬಹಿರಂಗ, ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ–2026: ‘ಮರುಳ್’ ನಾಟಕ ಪ್ರದರ್ಶನ: ಪ್ರಸ್ತುತಿ: ಹಿಲ್ಟಾಪ್ ಸ್ಟುಡಿಯೋಸ್ ಉಡುಪಿ, ಆಯೋಜನೆ: ರಂಗಾಸ್ಥೆ, ಸ್ಥಳ: ಯುವಪಥ, ಜಯನಗರ ನಾಲ್ಕನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಬೇಕು ತಾಲ್ಲೂಕು ಆಸ್ಪತ್ರೆಗೆ 'ಚಿಕಿತ್ಸೆ'

ತಾಲ್ಲೂಕು ಆಸ್ಪತ್ರೆಗಳಲ್ಲಿ ತಿಂಗಳ ಸರಾಸರಿ ಹೆರಿಗೆ

ಹೆರಿಗೆ ಸಂಖ್ಯೆ	30ಕ್ಕಿಂತ ಕಡಿಮೆ	30ರಿಂದ 50	50ರಿಂದ 100	100ರಿಂದ 150	150ರಿಂದ 200	200 ಮೇಲ್ಪಟ್ಟು
ಆಸ್ಪತ್ರೆಗಳ ಸಂಖ್ಯೆ	32	36	49	11	9	10

ವಿರಾಜಪೇಟೆ ತಾಲ್ಲೂಕು ಆಸ್ಪತ್ರೆ

ಮಳೆ ಬಂದಾಗ ಹುನಗುಂದ ಸಾರ್ವಜನಿಕ ಆಸ್ಪತ್ರೆಗೆ ನೀರು ನುಗ್ಗಿರುವುದು

ಒಂದನೇ ಪುಟದಿಂದ..

ಹೀಗಾಗಿ, ತಾಲ್ಲೂಕು ಆಸ್ಪತ್ರೆಗಳ ಸದ್ಯದ ಸ್ಥಿತಿಗತಿ, ವೈದ್ಯರ ಲಭ್ಯತೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ 'ಪ್ರಜಾವಾಣಿ'ಯ ಪ್ರತಿನಿಧಿಗಳು ರಾಜ್ಯದಾದ್ಯಂತ ರಿಯಾಲಿಟಿ ಚೆಕ್ ನಡೆಸಿದ್ದು, ಮೂಲಸೌಕರ್ಯ, ತಜ್ಞ ವೈದ್ಯರು, ವೈದ್ಯಕೀಯ ಸಿಬ್ಬಂದಿ, ಪ್ರಯೋಗಾಲಯ ತಂತ್ರಜ್ಞರು, ಉಪಕರಣಗಳ ಕೊರತೆಯಿಂದ ರಾಜ್ಯದ ಬಹುತೇಕ ತಾಲ್ಲೂಕು ಆಸ್ಪತ್ರೆಗಳು ಕೇವಲ ಶಿಫಾರಸು ಕೇಂದ್ರಗಳಾಗಿ ಮಾರ್ಪಡಾಗುತ್ತಿದೆ. ತಜ್ಞ ವೈದ್ಯರನ್ನು ನೇಮಕ ಮಾಡುವುದಾಗಿ ಸರ್ಕಾರ ಹೇಳಿ ಆರೇಳು ತಿಂಗಳಾದರೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಶುಶ್ರೂಷೆಯ ಗುಣಮಟ್ಟದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಬಿಕೋ ಎನ್ನುವ ಆಸ್ಪತ್ರೆ: 'ಸುರಕ್ಷಿತವಾಗಿ ಹೆರಿಗೆ ಆಗುತ್ತದೆ ಎಂಬ ವಿಶ್ವಾಸದಿಂದ ಬಂದಿದ್ದೇನೆ. ಇಲ್ಲಿ ಹೆರಿಗೆ ಮಾಡಿಸುವ ವೈದ್ಯರೇ ಇಲ್ಲ. ಒಂದು ವೇಳೆ ನರ್ಸ್‌ಗಳು ಹೆರಿಗೆ ಮಾಡಿಸಿದರೂ, ಮಗುವಿನ ಆರೈಕೆಗೆ ಮಕ್ಕಳ ತಜ್ಞರಿಲ್ಲ. ಸ್ತ್ರೀರೋಗಿಗಳ ವಿಭಾಗ ಬಿಕೋ ಎನ್ನುತ್ತಿದೆ. ಅದನ್ನು ಕಂಡು ನಾನು ಬೇರೆಡೆ ಹೋಗಲು ನಿರ್ಧರಿಸಿದ್ದೇನೆ...'

ಇದು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕು ಆಸ್ಪತ್ರೆ ಆವರಣದಲ್ಲಿ ಕುಳಿತಿದ್ದ ತುಂಬು ಗರ್ಭಿಣಿ ಸುಮಿತ್ರಾ ಅವರ ದುಗುಡದ ಮಾತು.

ಪ್ರತಿ ತಿಂಗಳು ತಪಾಸಣೆಗೆ ಬರುವಂತೆ ಬಂದಿದ್ದ ಅವರು, ಈ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಳ್ಳಲು ಸಾಧ್ಯವೇ ಇಲ್ಲವೆಂದು ಮರಳಿ ಹೋದರು. ಇಲ್ಲಿ ಸುಸಜ್ಜಿತ ಕಟ್ಟಡವಿದ್ದರೂ ಅಗತ್ಯ ವೈದ್ಯರಿಲ್ಲ. ಗರ್ಭಿಣಿ ಹಾಗೂ ಬಾಣಂತಿಯರ ಸಂಕಷ್ಟ ಹೇಳತೀರದು. ಇಲ್ಲಿಗೆ ಬರುವ ಅವರನ್ನು 110 ಕಿ.ಮೀ ದೂರದ ಬೆಳಗಾವಿ ಅಥವಾ 50 ಕಿ.ಮೀ ದೂರದ ಅಥಣಿ ಖಾಸಗಿ ಆಸ್ಪತ್ರೆಗಳಿಗೆ ಸಾಗಹಾಕಲಾಗುತ್ತಿದೆ.

ಸ್ಕ್ಯಾನಿಂಗ್ ವ್ಯವಸ್ಥೆಯಿಲ್ಲ: ಉತ್ತರ ಕನ್ನಡದ ಜೊಯಿಡಾ ತಾಲ್ಲೂಕು ಆಸ್ಪತ್ರೆಯಲ್ಲಿ ರೋಗಿಗಳಿಗೆ ಸ್ಕ್ಯಾನಿಂಗ್ ವ್ಯವಸ್ಥೆಯಿಲ್ಲ. ದಂತ ವೈದ್ಯರು, ಮಕ್ಕಳ ತಜ್ಞರೂ ಇಲ್ಲ. ಮಕ್ಕಳ ಆರೋಗ್ಯ ಹದಗೆಟ್ಟರೆ 80 ಕಿ.ಮೀ ದೂರದ ಕಾರವಾರ, ಇಲ್ಲವೇ ದೂರದ ಹುಬ್ಬಳ್ಳಿಗೆ ಹೋಗಬೇಕಿದೆ. ಅಂಕೋಲಾ ತಾಲ್ಲೂಕು ಆಸ್ಪತ್ರೆಗೆ 15 ಜನ ತಜ್ಞ ವೈದ್ಯರ ಅಗತ್ಯವಿದೆ. ಆದರೆ, ಕೇವಲ ನಾಲ್ಕು ವೈದ್ಯರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ.

ಶಿರಸಿಯ ಪಂಡಿತ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮಾಡಲು ವಿಕಿರಣ ತಜ್ಞರಿಲ್ಲ. ನೇತ್ರ ಹಾಗೂ ಕಿವಿ, ಮೂಗು, ಗಂಟಲು ತಜ್ಞ ವೈದ್ಯರ ಹುದ್ದೆಯೂ ಖಾಲಿಯಿದೆ. ದಾಂಡೇಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಅರಿವಳಿಕೆ ತಜ್ಞರು ಹಾಗೂ ವೈದ್ಯರ ಕೊರತೆಯಿದೆ. 100 ಹಾಸಿಗೆಯ ಮುಂಡಗೋಡ ತಾಲ್ಲೂಕು ಆಸ್ಪತ್ರೆಯಲ್ಲಿಯೂ ತಜ್ಞ ವೈದ್ಯರ ಕೊರತೆಯಿದ್ದು, ರೋಗಿಗಳು ಹೊರಗಡೆ ಔಷಧ ಖರೀದಿ ಮಾಡುವುದು ಅನಿವಾರ್ಯ. ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ಶಿಫಾರಸು ಮಾಡುತ್ತಾರೆ.

ಪರಿಣತ ವೈದ್ಯರ ಕೊರತೆ: ಧಾರವಾಡ, ಬಾಗಲಕೋಟೆ, ವಿಜಯಪುರ, ಹಾವೇರಿ ಹಾಗೂ ಗದಗ ಜಿಲ್ಲೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಅಗತ್ಯ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿಲ್ಲ. ಪರಿಣತ ವೈದ್ಯರ ಕೊರತೆಯೂ ಇದೆ. ಕೆಲ ಆಸ್ಪತ್ರೆಗಳಲ್ಲಿ ಇಂದಿಗೂ ಅಗತ್ಯ ಮೂಲಸೌಕರ್ಯವಿಲ್ಲ.

ಧಾರವಾಡ ಜಿಲ್ಲೆಯಲ್ಲಿ ನವಲಗುಂದ, ಕುಂದಗೋಳ ಹಾಗೂ ಕಲಘಟಗಿ ತಾಲ್ಲೂಕುಗಳಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳಿವೆ. ಆ ಆಸ್ಪತ್ರೆಗಳು ವೈದ್ಯರು ಮತ್ತು ಸಿಬ್ಬಂದಿಯ ಕೊರತೆ ಎದುರಿಸುತ್ತಿದ್ದು, ಬಹುತೇಕ ರೋಗಿಗಳು ಖಾಸಗಿ ಆಸ್ಪತ್ರೆಗಳ ಮೇಲೆ ಅವಲಂಬಿತರಾಗಿದ್ದಾರೆ.

ಮೇಲ್ದರ್ಜೆಗೇರಿಲ್ಲ: ಗದಗದ ತಾಲ್ಲೂಕು ಆಸ್ಪತ್ರೆ ಮೇಲ್ದರ್ಜೆಗೇರಿಲ್ಲ. ಇದರಿಂದಾಗಿ ಸಂಕೀರ್ಣ ಹೆರಿಗೆಗಳ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಜಿಲ್ಲಾ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತಿದೆ. ರೋಣ ತಾಲ್ಲೂಕು ಆಸ್ಪತ್ರೆಯಲ್ಲಿ ತಕ್ಕ ಮಟ್ಟಿಗೆ ಎಲ್ಲ ಸೌಲಭ್ಯಗಳು ಇವೆ. ಆದರೆ, ಅವುಗಳನ್ನು ಬಳಸಿ, ಚಿಕಿತ್ಸೆ ನೀಡಲು ವೈದ್ಯರು ಹಾಗೂ ಸಿಬ್ಬಂದಿಯೇ ಅಗತ್ಯದಷ್ಟಿಲ್ಲ.

ವಿಜಯಪುರ ಜಿಲ್ಲೆಯಲ್ಲಿ ಸಿಂದಗಿ, ಇಂಡಿ, ಮುದ್ದೇಬಿಹಾಳ, ಬಸವನ ಬಾಗೇವಾಡಿ ಸೇರಿದಂತೆ ಒಟ್ಟು ನಾಲ್ಕು ತಾಲ್ಲೂಕು ಆಸ್ಪತ್ರೆಗಳಿವೆ. ಇಲ್ಲಿ ಬಹುತೇಕ ವೈದ್ಯರು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ 9 ತಾಲ್ಲೂಕು ಆಸ್ಪತ್ರೆಗಳಿದ್ದು, ತಜ್ಞವೈದ್ಯರ ಕೊರತೆ ಎದುರಿಸುತ್ತಿವೆ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ಹಾನಗಲ್, ಶಿಗ್ಗಾವಿ, ಸವಣೂರು, ಬ್ಯಾಡಗಿ, ಹಿರೇಕೇರೂರು ತಾಲ್ಲೂಕು ಆಸ್ಪತ್ರೆಗೆ ಅಗತ್ಯ ಸೌಕರ್ಯಗಳಿಲ್ಲ. ವೈದ್ಯರ ಕೊರತೆ ಎದುರಾಗಿದೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳು ಚಿಕಿತ್ಸೆಗಾಗಿ ಪರದಾಡುತ್ತಿದ್ದಾರೆ. ಸಿರುಗುಪ್ಪ ತಾಲ್ಲೂಕು ಆಸ್ಪತ್ರೆಯು ಸಮಸ್ಯೆಗಳ ಗೂಡಾಗಿದೆ.

ಮಳೆ ಬಂದರೆ ಸಮಸ್ಯೆ: ಬಾಗಲಕೋಟೆ ಜಿಲ್ಲೆಯ ಬೀಳಗಿ, ಹುನಗುಂದ, ಬಾದಾಮಿ, ಬಾಗಲಕೋಟೆ ಸೇರಿದಂತೆ ಬಹುತೇಕ ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆಯಿದೆ. ಇಲ್ಲಿನ ಆಸ್ಪತ್ರೆಗಳಲ್ಲಿ ರಾತ್ರಿ ವೇಳೆ ತಜ್ಞರು ಸಿಗುವುದು ಅಪರೂಪವಾಗಿದೆ. ಜೋರು ಮಳೆ ಬಂದರೆ ಹುನಗುಂದ ಸಾರ್ವಜನಿಕ ಆಸ್ಪತ್ರೆಯ ಕೆಲವು ಕಡೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ಆಸ್ಪತ್ರೆಯ ಕ್ಷ ಕಿರಣ ಕೊಠಡಿ, ರಕ್ತ ತಪಾಸಣಾ ಕೇಂದ್ರ, ಕಂಪ್ಯೂಟರ್ ಕೊಠಡಿ ಸೇರಿದಂತೆ ಹಲವು ಕೊಠಡಿಗಳಿಗೆ ನೀರು ನಿಲ್ಲುತ್ತದೆ. ಇದರಿಂದ ಕೆಲವೊಮ್ಮೆ ಯಂತ್ರೋಪಕರಣಗಳಿಗೂ ಹಾನಿಯಾಗಿದೆ.

ಬಾದಾಮಿಯ ನೂರು ಹಾಸಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಜನರೇಟರ್ ಇಲ್ಲದ್ದರಿಂದ, ವಿದ್ಯುತ್ ಕಡಿತಗೊಂಡಾಗ ತೊಂದರೆ ಎದುರಾಗುತ್ತಿದೆ.

ವೈದ್ಯರ ಕೊರತೆ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಪೂರ್ಣಪ್ರಮಾಣದ ಆಸ್ಪತ್ರೆಗಳಿಲ್ಲ. ಸಮುದಾಯ ಆರೋಗ್ಯ ಕೇಂದ್ರಗಳಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ. ಅಲ್ಲಿ ಕೂಡ ವೈದ್ಯರ ಕೊರತೆ ತೀವ್ರವಾಗಿ ಕಾಡುತ್ತಿದೆ.

ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯರ ಕೊರತೆಯಿದೆ. ಉಳ್ಳಾಲದಲ್ಲಿ ತಾಲ್ಲೂಕು ಆಸ್ಪತ್ರೆ ಇದ್ದರೂ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಉತ್ತಮ ಸೌಲಭ್ಯಗಳಿಗಾಗಿ ಅಲ್ಲಿ ಹೋರಾಟವೇ ಆರಂಭವಾಗಿದೆ. ಉಡುಪಿ ಜಿಲ್ಲೆಯ ವಿವಿಧ ತಾಲ್ಲೂಕುಗಳ ಸರ್ಕಾರಿ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆಯಿದೆ. ಚಿಕ್ಕಮಗಳೂರಿನ ಮೂಡಿಗೆರೆ, ಕೊಪ್ಪ, ಶೃಂಗೇರಿ, ಎನ್.ಆರ್. ಪುರ, ಕಡೂರು, ತರೀಕೆರೆ ಆಸ್ಪತ್ರೆಯಲ್ಲಿಯೂ ತಜ್ಞ ವೈದ್ಯರ ಕೊರತೆಯಿದೆ. ಅಪಘಾತ ಸಂಭವಿಸಿದರೆ ಚಿಕಿತ್ಸೆಗಾಗಿ ಶಿವಮೊಗ್ಗ, ಹಾಸನ, ಮಂಗಳೂರು ಆಸ್ಪತ್ರೆಗಳನ್ನು ಜಿಲ್ಲೆಯ ಜನ ಅವಲಂಬಿಸುತ್ತಾರೆ.

ಸಿಗದ ಸೇವೆ: ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆ, ಯಳಂದೂರು ಹಾಗೂ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಗಳಿದ್ದು, ಅಪಘಾತ ಸೇರಿ, ತುರ್ತು ಚಿಕಿತ್ಸೆ ಪಡೆಯಲು ಜಿಲ್ಲಾ ಕೇಂದ್ರದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯನ್ನೇ (ಸಿಮ್ಸ್) ರೋಗಿಗಳು ಅವಲಂಬಿಸಿದ್ದಾರೆ. ಜಿಲ್ಲೆಗೊಬ್ಬರೇ ರೇಡಿಯಾಲಜಿ ತಜ್ಞರು ಇರುವುದರಿಂದ, ತಾಲ್ಲೂಕು ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್, ಎಂಆರ್‌ಐ, ಇಕೋ ಸಹಿತ ಇತರೆ ವೈದ್ಯಕೀಯ ಸೇವೆಗಳು ಸಿಗುತ್ತಿಲ್ಲ. ಖಾಸಗಿ ಪ್ರಯೋಗಾಲಯಗಳನ್ನೇ ಅವಲಂಬಿಸಬೇಕಾಗಿದೆ. ಗುಂಡ್ಲುಪೇಟೆ ತಾಲ್ಲೂಕು ಆಸ್ಪತ್ರೆ ಸಿಬ್ಬಂದಿ ಕೊರತೆ ಎದುರಿಸುತ್ತಿದೆ. ಅಪಘಾತದಂತಹ ತುರ್ತು ಸಂದರ್ಭದಲ್ಲಿ ಹೆಚ್ಚಿನ ಚಿಕಿತ್ಸೆ ಪಡೆಯಲು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆಸ್ಪತ್ರೆಗಳಿಗೆ ಕಳಿಸಲಾಗುತ್ತಿದೆ.

ಕೊಡಗು ಜಿಲ್ಲೆಯ ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕು ಆಸ್ಪತ್ರೆಗಳು ಅಗತ್ಯ ಮೂಲಸೌಕರ್ಯಗಳಿಲ್ಲದೆ ನರಳುತ್ತಿವೆ. ಎರಡೂ ಆಸ್ಪತ್ರೆಗಳು ತಜ್ಞ ವೈದ್ಯರ ಕೊರತೆ ಎದುರಿಸುತ್ತಿವೆ. ಕೊಡಗು ವೈದ್ಯಕೀಯ ಕಾಲೇಜಿನಿಂದ ವಾರಕ್ಕೆ ಒಂದು ಅಥವಾ ಎರಡು ದಿನ ವೈದ್ಯರನ್ನು ಈ ಆಸ್ಪತ್ರೆಗಳಿಗೆ ನಿಯೋಜಿಸಲಾಗುತ್ತಿದೆ. ಬಹುತೇಕ ರೋಗಿಗಳು ಜಿಲ್ಲಾ ಕೇಂದ್ರದಲ್ಲಿರುವ ಕೊಡಗು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಬೋಧನಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಕುಟ್ಟ, ಪೊನ್ನಂಪೇಟೆಯ ಕೆಲ ಭಾಗಗಳಲ್ಲಿ ಜನರು ಕೇರಳದ ಮಾನಂದವಾಡಿ ಆಸ್ಪತ್ರೆಗೆ ಚಿಕಿತ್ಸೆಗೆ ತೆರಳುತ್ತಿದ್ದಾರೆ.

ನಿರ್ವಹಣೆ ಸಮಸ್ಯೆ: ದಾವಣಗೆರೆಯಲ್ಲಿ 4 ತಾಲ್ಲೂಕು ಆಸ್ಪತ್ರೆಗಳಿವೆ. ವೈದ್ಯರು ಸೇರಿದಂತೆ ಅಗತ್ಯ ವೈದ್ಯಕೀಯ ಸಿಬ್ಬಂದಿಯಿದ್ದರೂ, ನಿರ್ವಹಣೆಯಲ್ಲಿನ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ಚನ್ನಗಿರಿ, ಹೊನ್ನಾಳಿ, ಜಗಳೂರು ಹಾಗೂ ಹರಿಹರ ತಾಲ್ಲೂಕು ಆಸ್ಪತ್ರೆಗಳ ಸ್ಥಿತಿ ಸುಧಾರಣೆ ಕಂಡಿಲ್ಲ. ಹರಿಹರ ತಾಲ್ಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೇವೆ ಸಿಗದೆ ರೋಗಿಗಳು ದಾವಣಗೆರೆಗೆ ಅಲೆದಾಡುತ್ತಿದ್ದಾರೆ.

ಹೊನ್ನಾಳಿ, ಚನ್ನಗಿರಿ ತಾಲ್ಲೂಕಿನ ಜನರು ವೈದ್ಯಕೀಯ ಸೇವೆಗಾಗಿ ಶಿವಮೊಗ್ಗ ಜಿಲ್ಲಾ ಕೇಂದ್ರವನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳಲ್ಲಿ ಕಾರ್ಯನಿರ್ವಹಿಸುವುದಕ್ಕೂ ಕಡಿವಾಣ ಬಿದ್ದಿಲ್ಲ. ಸಿಬ್ಬಂದಿ ಹಾಗೂ ಅಗತ್ಯ ಪರಿಕರಗಳಿದ್ದರೂ ಜಿಲ್ಲೆಯಲ್ಲಿನ ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ನಿರೀಕ್ಷಿತ ಮಟ್ಟದಲ್ಲಿ ಸಿಗುತ್ತಿಲ್ಲ. ಹೆರಿಗೆ, ಅಪಘಾತ ಸೇರಿದಂತೆ ಗಂಭೀರ ಅನಾರೋಗ್ಯ ಸಮಸ್ಯೆಗಳಿಗೆ ಜಿಲ್ಲಾ ಆಸ್ಪತ್ರೆಗೆ ಶಿಫಾರಸು ಮಾಡುವುದು ಮುಂದುವರಿದಿದೆ.

ದೂರದೂರಿಗೆ ಶಿಫಾರಸು: ಚಿತ್ರದುರ್ಗ ಜಿಲ್ಲೆಯಲ್ಲಿ 5 ತಾಲ್ಲೂಕು ಆಸ್ಪತ್ರೆಗಳಿವೆ. ಮೊಳಕಾಲ್ಮೂರು, ಚಳ್ಳಕೆರೆ, ಹೊಸದುರ್ಗ ಮತ್ತು ಹೊಳಲ್ಕೆರೆಯಲ್ಲಿ ಪೂರ್ಣಾವಧಿ ತಾಲ್ಲೂಕು ಆರೋಗ್ಯಾಧಿಕಾರಿಯೇ ಇಲ್ಲ. ಜಿಲ್ಲೆಯಲ್ಲಿ ವೈದ್ಯರು, ತಂತ್ರಜ್ಞರ ಕೊರತೆಯಿಂದಾಗಿ ಆಸ್ಪತ್ರೆಗಳು ಇದ್ದೂ ಇಲ್ಲದಂತಿವೆ. ಎಲ್ಲದಕ್ಕೂ ಜಿಲ್ಲಾ ಆಸ್ಪತ್ರೆ ಮೇಲೆಯೇ ರೋಗಿಗಳು ಅವಲಂಬಿತರಾಗಿದ್ದಾರೆ. ಇದು ಜಿಲ್ಲಾ ಆಸ್ಪತ್ರೆಗೆ ಹೊರೆಯಾಗಿ ಪರಿಣಮಿಸಿದ್ದು, ದಾವಣಗೆರೆ ಮತ್ತು ಬೆಂಗಳೂರಿನ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಏಳು ತಾಲ್ಲೂಕು ಆಸ್ಪತ್ರೆಗಳಿವೆ. ಸಾಗರ ಹಾಗೂ ಶಿಕಾರಿಪುರದ ಆಸ್ಪತ್ರೆಗಳು ವಿಭಾಗೀಯ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿವೆ. ಎಲ್ಲ ಆಸ್ಪತ್ರೆಗಳಿಗೂ ಖಾಲಿ ಇರುವ ವೈದ್ಯರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ತುಮರಿ, ಬ್ಯಾಕೋಡು ಮೊದಲಾದ ಮಲೆನಾಡಿನ ದ್ವೀಪ ಪ್ರದೇಶಗಳಿಗೆ ವೈದ್ಯರು ಹೋಗಲು, ಹೋದರೂ ಬಹಳ ದಿನ ಇರಲು ಮನಸ್ಸು ಮಾಡುತ್ತಿಲ್ಲ. ಹೀಗಾಗಿ ಜಿಲ್ಲಾ ಕೇಂದ್ರ ಶಿವಮೊಗ್ಗದ ಮೆಗ್ಗಾನ್ ಬೋಧನಾ ಆಸ್ಪತ್ರೆಯ ಮೇಲೆ ಒತ್ತಡ ಹೆಚ್ಚಾಗಿದೆ. ಶಿಫಾರಸಿನ ಹೆಸರಲ್ಲಿ ರೋಗಿಗಳನ್ನು ಶಿವಮೊಗ್ಗಕ್ಕೆ ಸಾಗ ಹಾಕಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಐದು ತಾಲ್ಲೂಕು ಆಸ್ಪತ್ರೆಗಳಿವೆ. ಎಲ್ಲ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಕಾಡುತ್ತಿದೆ. ಬಹುತೇಕ ಆಸ್ಪತ್ರೆಗಳಲ್ಲಿ ಆಂಬುಲೆನ್ಸ್ ಇಲ್ಲದ ಪರಿಣಾಮ ಸಮಸ್ಯೆ ಉಂಟಾಗುತ್ತಿದೆ.

ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ರೋಗಿಗಳಿಗೆ ಸರಿಯಾಗಿ ಸಿಗುವುದಿಲ್ಲ ಎಂಬ ದೂರು ಸಾಮಾನ್ಯವಾಗಿದೆ. ಆಸ್ಪತ್ರೆಯಲ್ಲಿ ಕೆಲವೇ ಔಷಧಗಳನ್ನು ಬಿಟ್ಟರೆ ಉಳಿದವುಗಳ ಪೂರೈಕೆ ಇಲ್ಲದಿರುವುದರಿಂದ ರೋಗಿಗಳು ಖಾಸಗಿ ಔಷಧಾಲಯಗಳಿಗೆ ಹೋಗಬೇಕಾದ ಅನಿವಾರ್ಯತೆ ಇದೆ. ಕ್ಯಾಲ್ಸಿಯಂ ಮಾತ್ರೆ ಸೇರಿದಂತೆ ಮಧುಮೇಹ ರೋಗಿಗಳಿಗೆ ಬೇಕಾದ ಮಾತ್ರೆ ದೊರೆಯುತ್ತಿಲ್ಲ.

ಜಿಲ್ಲಾ ಆಸ್ಪತ್ರೆಗಳ ಮೇಲಿನ ಒತ್ತಡ ಕಡಿಮೆ ಮಾಡುವುದು ಮತ್ತು ಸ್ಥಳೀಯ ಮಟ್ಟದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವುದು ತಾಲ್ಲೂಕು ಆಸ್ಪತ್ರೆಗಳ ನಿರ್ಮಾಣದ ಹಿಂದಿನ ಉದ್ದೇಶ. ಇವು ದ್ವಿತೀಯ ಹಂತದ ಆರೋಗ್ಯ ಸೇವೆಗಳನ್ನು ಒದಗಿಸುವ ಪ್ರಮುಖ ಸರ್ಕಾರಿ ಸಂಸ್ಥೆಗಳಾಗಬೇಕು. ಅಪಘಾತ, ಸಂಕೀರ್ಣ ಹೆರಿಗೆ ಪ್ರಕರಣಗಳು ಬಂದಾಗ ಅವು ಜೀವರಕ್ಷಕವಾಗುವ ಬದಲು, ಸೌಲಭ್ಯ ಹಾಗೂ ತಜ್ಞರ ಕೊರತೆಯ ಕಾರಣವನ್ನೊಡ್ಡಿ ಬೇರೊಂದು ಆಸ್ಪತ್ರೆಗೆ ತೆರಳಲು ಸೂಚಿಸುವುದು ಸಾಮಾನ್ಯವಾಗಿದೆ. ಇದರಿಂದಾಗಿ ತುರ್ತು ಸಂದರ್ಭದಲ್ಲಿ ಚಿಕಿತ್ಸೆಗಾಗಿ ದೂರದ ಪ್ರದೇಶಗಳಿಗೆ ಕರೆದುಕೊಂಡು ಹೋಗುವಾಗಲೇ ಕೆಲ ಜೀವಗಳು ಮಾರ್ಗ ಮಧ್ಯದಲ್ಲಿಯೇ ಕೊನೆಯುಸಿರೆಳೆಯುತ್ತಿವೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಪೂರಕ ಮಾಹಿತಿ: ಜಿಲ್ಲಾ ವರದಿಗಾರರು

ಹೆರಿಗೆ: ಶೇ 33ರಷ್ಟು

ಆರೋಗ್ಯ ಇಲಾಖೆ ಪ್ರಕಾರ ಸರ್ಕಾರಿ ವ್ಯವಸ್ಥೆಯಡಿ ಒಟ್ಟು ಹೆರಿಗೆಗಳಲ್ಲಿ ಶೇ 33 ರಷ್ಟು ಹೆರಿಗೆಗಳು ತಾಲ್ಲೂಕು ಆಸ್ಪತ್ರೆಗಳಲ್ಲಿ ಆಗುತ್ತಿವೆ. ರಾಜ್ಯದಲ್ಲಿರುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಕೇವಲ 10 ಆಸ್ಪತ್ರೆಗಳು ಮಾತ್ರ ಪ್ರತಿ ತಿಂಗಳು 200 ಹಾಗೂ ಅದಕ್ಕಿಂತ ಹೆಚ್ಚಿನ ಹೆರಿಗೆ ಮಾಡಿಸುತ್ತಿವೆ. 32 ಆಸ್ಪತ್ರೆಗಳಲ್ಲಿ 30ಕ್ಕಿಂತ ಕಡಿಮೆ ಹೆರಿಗೆ ಆಗುತ್ತಿವೆ.

ಕೆಲ ಆಸ್ಪತ್ರೆಗಳಲ್ಲಿ ಹೆರಿಗೆ ಸಂಖ್ಯೆ ಕಡಿಮೆಯಾಗಲು ಸ್ತ್ರೀರೋಗ, ಅರಿವಳಿಕೆ ಮತ್ತು ಮಕ್ಕಳ ತಜ್ಞರ ಕೊರತೆ ಪ್ರಮುಖ ಕಾರಣವೆಂದು ವೈದ್ಯರು ಹಾಗೂ ಆರೋಗ್ಯ ಕಾರ್ಯಕರ್ತರು ದೂರುತ್ತಾರೆ.

'ತಾಲ್ಲೂಕು ಆಸ್ಪತ್ರೆಗಳ ಬಲವರ್ಧನೆ'

ತಾಲ್ಲೂಕು ಆಸ್ಪತ್ರೆಗಳ ಬಲವರ್ಧನೆಗೆ ಕ್ರಮಕೈಗೊಂಡಿದ್ದು, ಗುಣಮಟ್ಟದ ವೈದ್ಯಕೀಯ ಸೇವೆ ನಮ್ಮ ಆದ್ಯತೆಯಾಗಿದೆ. ದಿನದ ಎಲ್ಲ ಅವಧಿ ವೈದ್ಯರು ಲಭ್ಯವಾಗಬೇಕು. ಅದರಲ್ಲೂ ಹೆರಿಗೆ ಮಾಡಿಸುವ ವೈದ್ಯರ ತಂಡ 24x7 ಇರಬೇಕು. ಆದ್ದರಿಂದ ತಜ್ಞ ವೈದ್ಯರ ಮರು ಹೊಂದಾಣಿಕೆ ಮಾಡಿದ್ದೇವೆ. ಈ ಕ್ರಮದಿಂದ ತಾಯಿ–ಮಗುವಿನ ಆರೈಕೆಯ ಗುಣಮಟ್ಟ ಸುಧಾರಣೆಯಾಗುವ ಜತೆಗೆ, ತಾಯಿ ಮತ್ತು ನವಜಾತ ಶಿಶುಗಳ ಸಾವಿನ ಪ್ರಮಾಣ ತಗ್ಗಲಿದೆ. ಅಗತ್ಯ ಸಿಬ್ಬಂದಿಯನ್ನೂ ಒದಗಿಸಲಾಗುತ್ತಿದೆ. ನೂತನ ಮಾದರಿ ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ಸಿಬ್ಬಂದಿಯ ಸೇವೆ ಸರಿಯಾದ ರೀತಿಯಲ್ಲಿ ಜನರಿಗೆ ಸಿಗುವಂತೆ ಮಾಡಲಾಗಿದೆ. ವ್ಯವಸ್ಥೆಯ ಸುಧಾರಣೆಗೆ ಇಲಾಖೆ ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ವೈದ್ಯರೇ ಇಲ್ಲದೇ ದೂಳು ತಿನ್ನುತ್ತಿರುವ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕು ಆಸ್ಪತ್ರೆಯ ಶಿಶುರೋಗ ತಜ್ಞ ವೈದ್ಯರ ಕೊಠಡಿ

ವೈದ್ಯರಿಗೆ ಹೆಚ್ಚಿದ ಒತ್ತಡ

'ಬೆಳಿಗ್ಗ ಬೇಗ್ನೆ ಬಂದ್ರು ಕಾಯದೇ ಆಯ್ತದೆ. ಜನನೂ ಜಾಸ್ತಿ ಬತ್ತಾರೆ. ಡಾಕ್ಟ್ರುಗಳೇನೋ ಚೆನ್ನಾಗಿ ನೋಡ್ತಾರೆ. ಆದರೆ, ಅವರೂ ಕಮ್ಮಿನೇ ಇಲ್ಲಿರೋದು. ಕಾಸೇನೂ ತಗಳಕ್ಕಿಲ್ಲ. ಆದ್ರ, ನಮ್ಮನ್ನ ಬೇಗ್‌ಬೇಗ್ನೆ ನೋಡಿ ಕಳಿಸ್ತಾರೆ'

ಜ್ವರದ ಬಾಧೆಯಿಂದ ಬಳಲುತ್ತಿದ್ದ ಬೆಳಗಲಹುಂಡಿ ಗ್ರಾಮದ ಸಿದ್ದಪ್ಪ, ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಅನುಭವವನ್ನು ತೆರೆದಿಟ್ಟಿದ್ದು ಹೀಗೆ. 'ಎಕ್ಸ್‌–ರೇ, ಮಧುಮೇಹ, ಅಧಿಕ ರಕ್ತದೊತ್ತಡ ಪರೀಕ್ಷೆಗೆಲ್ಲ ₹ 50ರಿಂದ ₹ 100 ತಗೊತಾರೆ. ಔಷಧ ಒಂದೊಂದು ಸಾರಿ ಸಿಗುತ್ತದೆ. ಇಲ್ಲಂದ್ರೆ ಇನ್ನೊಂದು ದಿನ ಬರಬೇಕು. ಅದ್ಕೆ ಸಿಗದೇ ಇರದ್ನ ಮೆಡಿಕಲ್ ಶಾಪಲ್ಲಿ ತಗತೀವಿ' ಎಂದರು.

ಆಸ್ಪತ್ರೆಯಲ್ಲಿ 16 ವೈದ್ಯ ಹುದ್ದೆಗಳಲ್ಲಿ ಒಂದು ಹುದ್ದೆಯಷ್ಟೇ ಖಾಲಿ ಇದೆ. ಅಲ್ಲೇ ಇರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಇಬ್ಬರು ಪ್ರಸೂತಿ ತಜ್ಞರು, ಇಬ್ಬರು ಮಕ್ಕಳ ವೈದ್ಯರು ಸೇರಿ ಐವರಿದ್ದಾರೆ. ನಿತ್ಯ 900ಕ್ಕೂ ಮಂದಿ ರೋಗಿಗಳು ಬರುತ್ತಿರುವುದರಿಂದ ತಾಲ್ಲೂಕು ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿನ ವೈದ್ಯರಿಗೆ ಹೆಚ್ಚು ಒತ್ತಡ ಉಂಟಾಗಿದೆ.

'ಔಷಧ ಕೊರತೆ'

'ಕಳೆದೊಂದು ವರ್ಷದಿಂದ ಔಷಧ ಕೊರತೆ ಬಿಟ್ಟೂಬಿಡದೇ ಕಾಡುತ್ತಿದೆ. ಬಡ ರೋಗಿಗಳಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಸ್ಥಳೀಯ ಖಾಸಗಿ ವೈದ್ಯಕೀಯ ವಿತರಕರಲ್ಲಿ ಉದ್ರಿ ವ್ಯವಹಾರ ಮಾಡಿ, ಆಸ್ಪತ್ರೆಗೆ ಔಷಧಗಳನ್ನು ಖರೀದಿಸಲಾಗುತ್ತಿದೆ. ಸರ್ಕಾರದಿಂದ ಬಂದ ಅನುದಾನ ಔಷಧ ಖರೀದಿಗೆ ಸಾಲುತ್ತಿಲ್ಲ. ಇದರಿಂದ ಅನಿವಾರ್ಯವಾಗಿ ಸಾಲ ಮಾಡಿ ಔಷಧ ಖರೀದಿಸಿ, ಸರ್ಕಾರಿ ನೌಕರಿ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ'

–ಇದು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕು ಆಸ್ಪತ್ರೆಯ ವೈದ್ಯರೊಬ್ಬರ ಅಳಲು.

'ಖಾಸಗಿ ಪ್ರಯೋಗಾಲಯ ಅವಲಂಬನೆ'

'ಆಸ್ಪತ್ರೆಯಲ್ಲಿ ವೈದ್ಯರು ಕಾಲಕಾಲಕ್ಕೆ ಬಂದು ತಪಾಸಣೆ ನಡೆಸಿ ಚಿಕಿತ್ಸೆ ನೀಡುತ್ತಿದ್ದಾರೆ. ಆದರೆ, ಕೆಲ ಔಷಧಗಳು ಹೊರಗಿನಿಂದ ತರಲು ಹೇಳುತ್ತಾರೆ. ಏಕೆ ಎಂದು ಕೇಳಿದರೆ ನಮ್ಮಲ್ಲಿ ಸ್ಟಾಕ್ ಇಲ್ಲ ಅಂತಾರೆ' ಎಂಬುದು ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಎಕಂಬಾ ಗ್ರಾಮದ ಜೀಜಾಬಾಯಿ ಅವರ ಬೇಸರದ ಮಾತು.

'ಔರಾದ್ ತಾಲ್ಲೂಕು ಆಸ್ಪತ್ರೆಗೆ ನಿತ್ಯ 250ರಿಂದ 300 ಹೊರ ರೋಗಿಗಳು ಬರುತ್ತಾರೆ. ಆದರೆ, ಜ್ವರ, ಕೆಮ್ಮು, ನೆಗಡಿಯಂಥ ರೋಗಗಳಿಗೆ ಮಾತ್ರ ಕೊಡುತ್ತಾರೆ. ಇತರೆ ರೋಗಗಳಿಗೆ ಹೊರಗಿನಿಂದ ಬರೆದುಕೊಡುತ್ತಾರೆ. ಎಲ್ಲ ಔಷಧ ಆಸ್ಪತ್ರೆಯಲ್ಲಿ ದೊರೆತರೆ ಬಡವರಿಗೆ ಅನುಕೂಲ. ಪ್ರಯೋಗಾಲಯ ತಜ್ಞರು ಇಲ್ಲದೇ ರೋಗಿಗಳು ಹಣ ಕೊಟ್ಟು ಖಾಸಗಿ ಲ್ಯಾಬ್ ಮೊರೆ ಹೋಗುವಂಥ ಪರಿಸ್ಥಿತಿ ಇಲ್ಲಿ ಇದೆ.

ವೈದ್ಯರ ಹಾದಿ ಕಾಯುತ್ತ...

'ನನ್ನ ಮಗನಿಗೆ ಹುಷಾರಿದ್ದಿಲ್ಲ. ಡಾಕ್ಟರ್‌ಗೆ ತೋರಸಾಕ್ ಬೆಳಿಗ್ಗೆ ಒಂಬತ್ತೂವರಿಗೇ ಆಸ್ಪತ್ರೆಗೆ ಬಂದೇನಿ. ಆದ್ರ ವೈದ್ಯರು ಇಲ್ಲದೇ ಅವರಿಗಾಗಿ ಕಾಯುತ್ತಾ ಕುಳಿತಿದ್ದೇನೆ...' –ಇದು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹನುಮಗುಡ್ಡದ ನಿವಾಸಿ ರಾಮಪ್ಪ ಅಸಹಾಯಕತೆ.

ಆಗ ಸಮಯ ಬೆಳಿಗ್ಗೆ 11.30 ಆಗಿತ್ತು. ಮಕ್ಕಳ ತಜ್ಞರು, ವೈದ್ಯರು, ಸ್ತ್ರೀರೋಗ ತಜ್ಞರು, ದಂತ ವೈದ್ಯರು ಸೇರಿದಂತೆ ಇತರೆ ಹಲವು ವೈದ್ಯರು ಆಸ್ಪತ್ರೆಯತ್ತ ಸುಳಿದಿರಲಿಲ್ಲ. ಚಿಕಿತ್ಸೆಗಾಗಿ ಬಂದ ರೋಗಿಗಳು ವೈದ್ಯರಿಗಾಗಿ ಅವರ ಕೊಠಡಿಗಳ ಎದುರು ಕಾಯುತ್ತಾ ಕುಳಿತ ದೃಶ್ಯ ಕಂಡುಬಂತು.

ಊಟ–ಉಪಾಹಾರವಿಲ್ಲ

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಊಟ ಮತ್ತು ಉಪಾಹಾರದ ಭಾಗ್ಯ ಇಲ್ಲವೇ ಇಲ್ಲದಾಗಿದೆ. 'ವಾಂತಿಭೇದಿಯ ಸಮಸ್ಯೆಯಿಂದ ಐದು ದಿನಗಳ ಹಿಂದೆ ಒಳರೋಗಿಯಾಗಿ ಆಸ್ಪತ್ರೆಗೆ ದಾಖಲಾಗಿದ್ದೆ. ಐದು ದಿನಗಳಾದರೂ ಉಪಾಹಾರ ಮತ್ತು ಊಟವನ್ನು ಆಸ್ಪತ್ರೆಯವರು ಕೊಟ್ಟಿಲ್ಲ' ಎನ್ನುತ್ತಾರೆ ಸಿಂಧನೂರು ತಾಲ್ಲೂಕಿನ ಪಗಡದಿನ್ನಿ ಕ್ಯಾಂಪಿನ ಅಮರಮ್ಮ ಮಡಿವಾಳಪ್ಪ.

'ಬಿಪಿ ಹೆಚ್ಚಾಗಿ ಮೂರ ದಿನಗಳಿಂದ ಆಸ್ಪತ್ರ್ಯಾಗ ದಾಖ್ಲಾಗಿದ್ದೆ. ಡಾಕ್ಟರ್ ಸಾಬ್ರು ಭೇಷ್ ನೋಡ್ತಾರ. ಆದ್ರ ನಾಸ್ತಾ, ಊಟ ಮಾತ್ರ ಕೊಟ್ಟಿಲ್ಲ. ಕುಡ್ಯಾಕ್ ನೀರ್ ಹೊರಗಿಂದ ತರಾಕ್ ಹೇಳ್ತಾರ' ಎಂದು ಸಿಂಧನೂರು ತಾಲ್ಲೂಕಿನ ಹರೇಟನೂರು ಗ್ರಾಮದ ಮಲ್ಲಮ್ಮ ಹನುಮಂತಪ್ಪ ಹೇಳುತ್ತಾರೆ.

ಕಲಬುರಗಿ: ಆರೋಗ್ಯಕ್ಕೆ ನಾನಾ ಅಡ್ಡಿ

ಕಲಬುರಗಿಯು ಕಲ್ಯಾಣ ಕರ್ನಾಟಕದ 'ಹೆಲ್ತ್ ಹಬ್' ಆದರೂ, ಸಮರ್ಪಕ ವೈದ್ಯಕೀಯ ಸೇವೆ ದೊರೆಯುತ್ತಿಲ್ಲ. ತಜ್ಞ ವೈದ್ಯರು, ಸಿಬ್ಬಂದಿ ಹಾಗೂ ಔಷಧದ ಕೊರತೆ ಈ ಭಾಗದ ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿದೆ. ಚಿಂಚೋಳಿಯು ಕಲಬುರಗಿ ಜಿಲ್ಲೆಯ ಗಡಿ ತಾಲ್ಲೂಕಾಗಿದ್ದು, ತೆಲಂಗಾಣದೊಂದಿಗೆ ಗಡಿ ಹಂಚಿಕೊಂಡಿದೆ. ಈ ಭಾಗದಲ್ಲಿ ತಾಂಡಾಗಳೇ ಹೆಚ್ಚಿದ್ದು, ಇಲ್ಲಿ ಮಕ್ಕಳ ತಜ್ಞರ ಕೊರತೆ ಕಾಡುತ್ತಿದೆ. ಅಫಜಲಪುರ ತಾಲ್ಲೂಕು ಆಸ್ಪತ್ರೆಯು 'ಭವ್ಯ ಕಟ್ಟಡ'ಕ್ಕೆ ಸೀಮಿತವಾಗಿದೆ. ಜೇವರ್ಗಿ ತಾಲ್ಲೂಕು ಆಸ್ಪತ್ರೆಯು ಅವ್ಯವಸ್ಥೆಯ ಆಗರವಾಗಿದ್ದು, ತಜ್ಞ ವೈದ್ಯರಿಗೆ ಎದುರು ನೋಡುತ್ತಿದೆ. ಚಿತ್ತಾಪುರ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಸ್ತ್ರೀರೋಗ, ಅರಿವಳಿಕೆ ತಜ್ಞರ ಕೊರತೆಯಿದೆ. ಅಗತ್ಯವಿದ್ದಾಗ ವಾಡಿ ಆಸ್ಪತ್ರೆಯಿಂದ ಅರಿವಳಿಕೆ ತಜ್ಞರನ್ನು ಕರೆಯಿಸುವ ಸ್ಥಿತಿ ನಿರ್ಮಾಣವಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ ಶಹಾಪುರ ಮತ್ತು ಸುರಪುರದಲ್ಲಿ ತಾಲ್ಲೂಕು ಆಸ್ಪತ್ರೆಗಳಿವೆ. ವೈದ್ಯಕೀಯ ಉಪಕರಣಗಳ ಜೊತೆಗೆ ಸಿಬ್ಬಂದಿ ಕೊರತೆ ಸಾಮಾನ್ಯವಾಗಿದೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು ಆಸ್ಪತ್ರೆಯಲ್ಲಿ ಅತ್ಯಾಧುನಿಕ ಪ್ರಯೋಗಾಲಯವಿದೆ. ಆದರೆ, ಹೃದ್ರೋಗ, ಅರಿವಳಿಕೆ ತಜ್ಞರ ಕೊರತೆಯಿದೆ. ಸಿಂಧನೂರು ತಾಲ್ಲೂಕು ಆಸ್ಪತ್ರೆ ತಜ್ಞ ವೈದ್ಯರ ಹಾಗೂ ಮೂಲಸೌಕರ್ಯ ಕೊರತೆಯಿಂದ ಬಳಲುತ್ತಿದೆ.

'ತಾಲ್ಲೂಕು ಆಸ್ಪತ್ರೆಗಳಲ್ಲಿ ಅಗತ್ಯ ವೈದ್ಯಕೀಯ ಉಪಕರಣಗಳಿಲ್ಲ. ಚಿಕಿತ್ಸೆ ವೇಳೆ ಸಮಸ್ಯೆಯಾದರೆ ರೋಗಿಗಳ ಸಂಬಂಧಿಕರು ಹಾಗೂ ಊರಿನ ಜನ ಗಲಾಟೆ ಮಾಡುತ್ತಾರೆ. ಸೌಲಭ್ಯಗಳ ಕೊರತೆಯಿದೆ ಎಂದರೆ ಜನ ನಮ್ಮನ್ನೇ ದೂಷಿಸುತ್ತಾರೆ. ಆದ್ದರಿಂದ ಚಿಕಿತ್ಸೆ ತುಸು ಕಷ್ಟವೆನಿಸಿದರೂ ಜಿಲ್ಲಾಸ್ಪತ್ರೆಗೆ ಶಿಫಾರಸು ಮಾಡುವುದು ನಮಗೂ ಅನಿವಾರ್ಯ' ಎಂಬುದು ಕೊಪ್ಪಳ ಜಿಲ್ಲೆಯ ತಾಲ್ಲೂಕು ಆಸ್ಪತ್ರೆ ಸಿಬ್ಬಂದಿ ಹೇಳಿಕೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಪ್ರಜಾವಾಣಿ ಚಿತ್ರ

ವೈದ್ಯರು ಬಂದರಷ್ಟೇ ಸ್ಕ್ಯಾನಿಂಗ್

ಬಂಟ್ವಾಳ ತಾಲ್ಲೂಕು ವಾಮದಪದವು ಗ್ರಾಮದಿಂದ ಬಂಟ್ವಾಳ ಪಟ್ಟಣದಲ್ಲಿರುವ ತಾಲ್ಲೂಕು ಆಸ್ಪತ್ರೆಗೆ ಬೆಳಿಗ್ಗೆಯಿಂದ ಬಂದು ಕಾಯುತ್ತಿದ್ದ ವ್ಯಕ್ತಿಗೆ 11.30 ಆದರೂ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಶುಕ್ರವಾರ ಅಲ್ಲಿ ಸ್ಕ್ಯಾನಿಂಗ್ ಮಾಡುವುದಿಲ್ಲ ಎಂದು ಅವರಿಗೆ ಗೊತ್ತಾದದ್ದು ನಂತರವೇ.

ಹಸಿವೆಯಿಂದ ಕಂಗೆಟ್ಟಿದ್ದ ಅವರ ಬಳಿ ಬಸ್ ಟಿಕೆಟ್‌ಗೆ ಬೇಕಾದ ಮೊತ್ತ ಬಿಟ್ಟರೆ ಬೇರೇನೂ ಇರಲಿಲ್ಲ. ಆದ್ದರಿಂದ ಗಡಿಬಿಡಿಯಲ್ಲಿ ಬಸ್ ನಿಲ್ದಾಣದತ್ತ ನಡೆದರು. ಬಂಟ್ವಾಳ ತಾಲ್ಲೂಕು ಆಸ್ಪತ್ರೆ ಆಧುನೀಕರಣಗೊಂಡು ಹೈಟೆಕ್ ಸ್ಪರ್ಶ ಪಡೆದುಕೊಂಡಿದೆ. ಆದರೆ ಸೇವೆಗೆ ಸಂಬಂಧಪಟ್ಟ ಸಮಸ್ಯೆಗಳು ಉಳಿದಿವೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 26-4-2001

ಆರೋಗ್ಯ ಇಲಾಖೆಯ ಭ್ರಷ್ಟಾಚಾರ: ಕಾರ್ಯಪಡೆ ಕಳವಳ

ಬೆಂಗಳೂರು, ಏ.25– ಆರೋಗ್ಯ ಇಲಾಖೆಯಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರದ ಬಗೆಗೆ ಡಾ.ಎಚ್.ಸುದರ್ಶನ್ ನೇತೃತ್ವದ ಕಾರ್ಯಪಡೆ ತೀವ್ರ ಕಳವಳ ವ್ಯಕ್ತಪಡಿಸಿದ್ದು ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ದೃಷ್ಟಿಯಿಂದ ಇಲಾಖೆಯನ್ನು ಪುನರ್ ಸಂಘಟಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ. ಕಾರ್ಯಪಡೆಯ ಅಧ್ಯಕ್ಷ ಡಾ.ಎಚ್.ಸುದರ್ಶನ್ ಇಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಕಾರ್ಯಪಡೆಯ ಅಂತಿಮ ವರದಿ ಸಲ್ಲಿಸಿದ ನಂತರ ವರದಿಗಾರರ ಜತೆ ಮಾತನಾಡುತ್ತ ಈ ಮಾಹಿತಿ ನೀಡಿದರು.

75 ವರ್ಷಗಳ ಹಿಂದೆ

ಬುಧವಾರ, 26-4-1951

ಬರ್ಮಾದಿಂದ ಅಕ್ಕಿ ಆಮದು

ನವದೆಹಲಿ, ಏ.25– ಅಕ್ಕಿಯ ಆಮದಿಗಾಗಿ ಬರ್ಮಾ ಸರ್ಕಾರದೊಡನೆ ಭಾರತ ಸರಕಾರ ದೀರ್ಘಕಾಲ ಒಪ್ಪಂದವನ್ನು ಮಾಡಿಕೊಳ್ಳಬಹುದೆಂದು ಆಹಾರ ಶಾಖಾ ಉಪ ಸಚಿವರಾದ ಶ್ರೀ ಎಂ. ತಿರುಮಲರಾಯರು ಪಾರ್ಲಿಮೆಂಟ್‌ನಲ್ಲಿ ಇಂದು ತಿಳಿಸಿದರು. ಭಾರತ ಆಹಾರ ಸಚಿವರ ನೇತೃತ್ವದಲ್ಲಿ ನಿಯೋಗವೊಂದು ಬರ್ಮಾಕ್ಕೆ ಹೋಗಲಿದೆ. ಆಹಾರ ಆಮದು 1950ರಲ್ಲಿ ಕಡಿಮೆಯಾಗಿದೆಯೆಂದೂ 15 ಲಕ್ಷ ಟನ್‌ಗಳಷ್ಟು ಆಮದನ್ನು ಖೋತಾ ಮಾಡಲಾಗಿದೆಯೆಂದೂ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

26 ಏಪ್ರಿಲ್ 2026 ಭಾನುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದಶಮಿ ಗಂ. 18-07 ನಕ್ಷತ್ರ: ಮಘ ಗಂ. 20-27 ಯೋಗ: ವೃದ್ಧಿ ಗಂ. 22-28 ಕರಣ: ತೈತಿಲ ಗಂ. 6-14, ಮೇಷ ಮಾಸದ 13 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 4 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00 ಸೂರ್ಯೋದಯ : 06-15 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 7 ಜುಲ್ಕಾದಾ ಅದೃಷ್ಟ ಸಂಖ್ಯೆ : 2, 3

ಮೇಷ: ಎಲ್ಲರನ್ನೂ ಪ್ರೀತಿಯಿಂದ ಗೆಲ್ಲಬೇಕೆಂಬ ಮಾತಿನ ಮಹತ್ವ ನಿಮಗೆ ಅನುಭವದಿಂದಾಗಿ ತಿಳಿದು ಬರಲಿದೆ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು. ಕ್ರೀಡೆಗೆ ಉತ್ತೇಜನ ಪಡೆಯುವಿರಿ.

ವೃಷಭ: ಉತ್ತಮವಾದ ವಾಕ್ ಸಾಮರ್ಥ್ಯವನ್ನು ಹೊಂದಿರುವ ನಿಮಗೆ ಜನರ ಮನಸ್ಸಿನಲ್ಲಿ ಸ್ಥಾನ ಹೊಂದುವುದು ಕಷ್ಟವಾಗದ ವಿಚಾರವಾಗಿರುತ್ತದೆ. ಮನೆಗೆ ನೂತನ ಸಾಕು ಪ್ರಾಣಿಯ ಆಗಮನ ಮಕ್ಕಳಲ್ಲಿ ಸಂತೋಷ ಮೂಡಿಸಲಿದೆ.

ಮಿಥುನ: ನಿಮ್ಮ ಬುದ್ಧಿವಂತಿಕೆಯ, ನಿಮ್ಮ ಸಾಮರ್ಥ್ಯದ ಅರಿವು ನಿಮಗಿಲ್ಲ, ಧೈರ್ಯದಿಂದ ಮುನ್ನಡೆದರೆ ಯಶಸ್ಸು ನಿಮ್ಮದು. ನಿಮ್ಮ ಉತ್ಸಾಹ ಹೆಚ್ಚಿಸಿಕೊಳ್ಳುವ ಸಮಯ. ಮಡದಿ ಜತೆಗಿನ ಮನಸ್ತಾಪಗಳೆಲ್ಲಾ ಸರಿ ಹೋಗುವುದು.

ಕರ್ಕಾಟಕ: ಪಾಲುದಾರಿಕೆಯಲ್ಲಿ ನಿರೀಕ್ಷೆಗೂ ಮೀರಿದ ಲಾಭವಾದರೂ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಕೆಲಸದಲ್ಲಿ ವಿಘ್ನ ಎದುರಾಗಲಿದೆ. ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡ ಬೇಕಾಗಬಹುದು.

ಸಿಂಹ: ನಿಮ್ಮ ಉದಾತ್ತ ಚಿಂತನೆಯ ಲಾಭವನ್ನು ನಿಮ್ಮ ಸುತ್ತ ಮುತ್ತಲಿನವರು ಪಡೆವ ಸುದಿನ. ಕುಟುಂಬದಲ್ಲಿನ ಕಲಹ, ಮಾನಸಿಕ ಕ್ಷೋಭೆ, ಸಮಸ್ಯೆ ಹಂತ ಹಂತವಾಗಿ ದೂರಾಗುವುದು. ಹಿರಿಯರ ಆರೋಗ್ಯದಲ್ಲಿ ಪ್ರಗತಿ.

ಕನ್ಯಾ: ಬಹಳ ದಿನಗಳ ನಂತರ ಸೋದರನ ಆಗಮನದಿಂದಾಗಿ ಮನೆಯಲ್ಲಿ ಸಂಭ್ರಮ. ಹಣದ ವಿಚಾರದಲ್ಲಿ ತಪ್ಪು ಪುನರಾವರ್ತನೆ ಆಗದಂತೆ ಎಚ್ಚರ ವಹಿಸುವಿರಿ. ಕಷ್ಟಪಟ್ಟು ದುಡಿಯುವುದರಿಂದ ಹಣ ಕೈಯಲ್ಲಿ ನಿಲ್ಲುವುದು.

ತುಲಾ: ಕರ್ತವ್ಯ ನಿಷ್ಠೆ ಬಗ್ಗೆ ನಿಮ್ಮ ಮೇಲೆ ಆರೋಪ ಬರದಂತೆ ನಿಮ್ಮ ವ್ಯವಹಾರ ಇರುವುದು ಉತ್ತಮ. ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಉತ್ತಮ ಲಾಭವಾಗುವುದು. ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವಿರಿ.

ವೃಶ್ಚಿಕ: ನಿಮ್ಮದೇ ಜನರನ್ನು ನೀವು ನಿಯಂತ್ರಿಸುವ ಕೆಲಸದಲ್ಲಿ ಚಾಣಾಕ್ಷತನ ತೋರಿಸುವುದು ಅನಿವಾರ್ಯವಾಗುತ್ತದೆ. ಗರ್ವ ತೋರಿಸುವ ಜನರನ್ನು ದೂರವಿಡುವಂತಹ ಉಪಾಯ ಮಾಡುವುದು ಒಳ್ಳೆಯದು.

ಧನು: ಮನೆ ನಿರ್ಮಾಣ ಕೆಲಸಗಳು ಪೂರ್ಣಗೊಂಡು ನೆಮ್ಮದಿ ಪ್ರಾಪ್ತಿ. ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರ ಗೊಳಿಸಲು ಕಾರಣ ವಾಗುವುದು. ಪರರ ಟೀಕೆ ಟಿಪ್ಪಣಿಗೆ ಕಿವಿಗೊಡುವ ಮನಸ್ಥಿತಿಯನ್ನು ಬದಲಿಸಿಕೊಳ್ಳಿರಿ.

ಮಕರ: ಮಾತುಕತೆಯಿಂದ ಬಗೆಹರಿಸಿಕೊಳ್ಳಬಹುದಾದ ಹಲವು ಸಮಸ್ಯೆಗಳನ್ನು ನಿಮ್ಮ ಮೌನದಿಂದಾಗಿ ಹೆಚ್ಚು ಮಾಡಿಕೊಳ್ಳುವಿರಿ. ಈ ದಿನ ಆತ್ಮ ಗೌರವ, ರಕ್ಷಣೆ ದೃಷ್ಟಿಯಿಂದ ತಪ್ಪುಗಳನ್ನು ಮಾಡಬೇಕಾದ ಪರಿಸ್ಥಿತಿ ಬರುವುದು.

ಕುಂಭ: ಯಾರನ್ನು ನಿರ್ಲಕ್ಷ್ಯ ಮಾಡುತ್ತಿರುವಿರೋ ಅವರಿಂದಲೇ ನಿಮ್ಮ ಕೆಲಸ ಆಗುವ ಸಾಧ್ಯತೆಗಳಿದೆ. ಶುಭ ಕಾರ್ಯಗಳಿಗೆ ಉತ್ತಮ ಕಾಲವಾದರೂ ಬರುವ ಅವಕಾಶಗಳಿಂದ ವಂಚಿತರಾಗದಿರಿ. ಕೃಷಿ ಯಂತ್ರ, ವಾಹನ ಖರೀದಿಸಬಹುದು.

ಮೀನ: ಪ್ಲಂಬರಿಂಗ್ ವ್ಯವಹಾರದಲ್ಲಿ ಮತ್ತು ಎಲೆಕ್ಟ್ರಾನಿಕ್ ವ್ಯಾಪಾರದಲ್ಲಿ ಲಾಭ ಪಡೆಯುವಿರಿ, ಆದರೆ ಹಣ ಕೈಯಲ್ಲಿ ಉಳಿಯುವುದು ಕಷ್ಟಕರ ವಿಷಯ. ಕೆಲಸ ಬದಲಿಸುವ ಯೋಚನೆಯನ್ನು ಮಾಡುವವರಿಗೆ ಇಂದು ಸಕಾಲ.

ಪದಬಂಧ 6385

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹರನ ಹತ್ತಿರವಿರಿಸಿದ ಮಣ್ಣಿನ ಬಾನಿ (3)
4.ಗಾಯಕನಿಗಾದ ಪೆಟ್ಟು! (2)
6.ಅರಸರಿಗೆ ಅರಸನಾದವನು (5)
8.ಗುಲಾಬಿ ಹೂ ನೀಡಿದ ಸೇವಕ (3)
10.ಮಾತು ಕೊಡುವುದು (3)
11.ರೇಷ್ಮೆ ನಗರ ಎಂದು ಪ್ರಸಿದ್ಧವಾಗಿರುವ ಜಿಲ್ಲೆ (5)
12.ಮೊದಲನೇ ವಿಭಕ್ತಿ! (3)
13.ವಾದ್ಯವನ್ನು ನುಡಿಸುವುದು (3)
15.ಹಳೆಯದನ್ನು ಹೊಸದು ಮಾಡುವಿಕೆ ಹಿಂದು ಮುಂದಾಗಿದೆಯಲ್ಲಾ! (5)
17.ನಾಲ್ಕು ಸೇರಿನ ಅಳತೆ (2)
18.ದುರಸ್ತಿಯನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ
1.ಹಗುರವಾಗಿರುವ ನೌಕೆ ಇಲ್ಲಿಕಾಣುತ್ತಿದೆ (3)
2.ಬಿಡುವು ಅಥವಾ ವಿಶ್ರಾಂತಿ (3)
3.ಅಕ್ಷರಗಳು ಒಂದುಗೂಡುವುದು (2)
5.ಮಾನವುಳ್ಳ ಒಡೆಯ (4)
7.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ ಇಲ್ಲಿದೆ (4)
9.ಚಿಗುರು ಇಲ್ಲಿ ಕಾಣುತ್ತಿದೆ (3)
11.ರಾಮನ ಚರಿತೆಯನ್ನು ಕುರಿತ ಕಾವ್ಯ (4)
12.ಪ್ರತಿಫಲಿತವಾದ ಬಿಂಬ (4)
13.ನರಿ ಹತ್ತಿರವಿರುವ ಹೆಣ್ಣು ಮಂಗ (3)
14.ನರಿ ಹಿಡಿದಿರುವ ಜೇನುತುಪ್ಪ (3)
16.ಕಕ್ಕಾಬಿಕ್ಕಿ ಯಾಗಿರುವ ಚಿಕ್ಕಪ್ಪನ ಹೆಂಡತಿ! (2)



6384ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಸ್ಥಾನ 3.ಮಹತ್ತರ 6.ಶತಮಾನ 7.ರಜತ 10.ಮಡದಿ 12.ಹಯಗ್ರೀವ 15.ರಗಾಲಜ 16.ಯಕೃತ್ತು

ಮೇಲಿಂದ ಕೆಳಕ್ಕೆ:
1.ಸಂಹಿತೆ 2.ನಮಸ್ಕಾರ 4.ಧೀರಶ 5.ಅನಸೂಯೆ 8.ತತ್ಸಮ 9.ಮನೋಹರ 11.ದಿಗ್ವಿಜಯ 13.ವರಹ 14.ಸಂಪತ್ತು

ಸುಡೊಕು 6768

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		8				7
	7		1		6			
3		5		2			8	
	8	7					1	
		4	7	6	3	8		9
5	9						7	
		2		7		1		5
1			2		5		9	
	5			4		2		8

6767 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಒಳಮೀಸಲಾತಿ: ಭಿನ್ನಾಭಿಪ್ರಾಯಕ್ಕಿಲ್ಲ ಜಾಗ’

ಕುಟುಂಬದಲ್ಲಿ ಒಡಕು ಬೇಡ: ಪರಿಶಿಷ್ಟ ಸಮುದಾಯಕ್ಕೆ ಮುನಿಯಪ್ಪ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವೆಲ್ಲರೂ ಒಂದೇ ಕುಟುಂಬ. ಅಣ್ಣ–ತಮ್ಮಂದಿರು. ನಮ್ಮ ಪಾಲನ್ನು ನಾವು ಹಂಚಿಕೊಂಡಿದ್ದೇವೆ. ಭಿನ್ನಾಭಿಪ್ರಾಯ-ಗಳಿಗೆ ಜಾಗ ಇಲ್ಲ. ಒಗ್ಗಟ್ಟಿನಿಂದ ಮುಂದೆ ಸಾಗೋಣ’ ಎಂದು ಕರ್ನಾಟಕ ಮಾದರ ಮಹಾಸಭಾದ ಅಧ್ಯಕ್ಷರೂ ಆಗಿರುವ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಪರಿಶಿಷ್ಟ ಸಮುದಾಯಕ್ಕೆ ಮನವಿ ಮಾಡಿದ್ದಾರೆ.

ಕೆ.ಎಚ್. ಮುನಿಯಪ್ಪ

‘ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಿ ವಿಶೇಷ ಸಚಿವ ಸಂಪುಟ ಸಭೆ ತೆಗೆದುಕೊಂಡ ತೀರ್ಮಾನ, ಕೇವಲ ಒಂದು ತೀರ್ಮಾನವಲ್ಲ. 40 ವರ್ಷಗಳ ನೋವು, ಹೋರಾಟದ ಗೆಲುವು’ ಎಂದು ಅವರು ಬಣ್ಣಿಸಿದ್ದಾರೆ.

‘ನಿರಂತರ ಹೋರಾಟ ನಡೆಸಿದ ಹೋರಾಟಗಾರರು, ಚಿಂತಕರು ಹಾಗೂ ಮಹನೀಯರು ಮಾಡಿದ ತ್ಯಾಗದ ಫಲ ಒಳ ಮೀಸಲಾತಿ ಹಂಚಿಕೆ ಮೂಲಕ ಸಿಕ್ಕಿದೆ. ಇದು ಅಂತ್ಯ ಅಲ್ಲ. ಒಂದು ಹೊಸ ಆರಂಭ. ಸಮಾನತೆ, ಗೌರವ ಮತ್ತು ಹಕ್ಕುಗಳಿಗಾಗಿ ಹೋರಾಟ ಮುಂದುವರಿಯಲಿದೆ’ ಎಂದಿದ್ದಾರೆ.

‘ಒಳ ಮೀಸಲಾತಿ ಹಂಚಿಕೆಯು ಮಾದಿಗ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿಯ ಎಲ್ಲ 101 ಸಮುದಾಯಗಳ ಬಹುದಿನಗಳ ಬೇಡಿಕೆಗೆ ನ್ಯಾಯ ಒದಗಿಸಿದ ಐತಿಹಾಸಿಕ ನಿರ್ಧಾರ. ಸರ್ಕಾರ ನೀಡಿರುವ ಈ ಸೌಲಭ್ಯದಡಿ ಉತ್ತಮ ಶಿಕ್ಷಣ, ಸರ್ಕಾರಿ ಉದ್ಯೋಗ ಮತ್ತಿತರ ಅವಕಾಶಗಳನ್ನು ಪಡೆಯಲು ಸಮುದಾಯ ಜಾಗೃತಿ ಹೊಂದಬೇಕು’ ಎಂದು ಅವರು ಹೇಳಿದ್ದಾರೆ.

‘ಚಿತ್ರದುರ್ಗದಲ್ಲಿ ನಡೆದ ಪರಿಶಿಷ್ಟ ಜಾತಿಯ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯದಂತೆ ಮತ್ತು 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಭರವಸೆಯಂತೆ ಸರ್ಕಾರ ಈ ತೀರ್ಮಾನ ತೆಗೆದುಕೊಂಡಿದೆ. ಮಾತು ಕೊಟ್ಟರೆ ನೆರವೇರಿಸುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿ’ ಎಂದಿದ್ದಾರೆ.

ಮುಖ್ಯಾಂಶಗಳು
- 40 ವರ್ಷಗಳ ನೋವು–ಹೋರಾಟದ ಗೆಲುವು
- ಒಳ ಮೀಸಲಾತಿ ಹಂಚಿಕೆ ಮೂಲಕ ಸಿಕ್ಕಿದೆ, ಅಂತ್ಯ ಅಲ್ಲ, ಹೊಸ ಆರಂಭ
- ಕೊಟ್ಟ ಮಾತನ್ನು ಕಾಂಗ್ರೆಸ್ ನೆರವೇರಿಸಿದೆ

ಎಲ್ಲ ಪರಿಶಿಷ್ಟ ಜಾತಿಗಳಿಗೂ ಅನ್ಯಾಯ: ಬಿಜೆಪಿ

ಬೆಂಗಳೂರು: ಒಳ ಮೀಸಲಾತಿ ಕುರಿತು ರಾಜ್ಯ ಸರ್ಕಾರ ತೆಗೆದುಕೊಂಡ ನಿರ್ಧಾರ ಪರಿಶಿಷ್ಟರ 101 ಜಾತಿಗಳಿಗೂ ಮಾಡಿದ ಅನ್ಯಾಯ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ ದೂರಿದ್ದಾರೆ.

ಛಲವಾದಿ ನಾರಾಯಣಸ್ವಾಮಿ

ಗೋವಿಂದ ಕಾರಜೋಳ

‘ಒಳಮೀಸಲಾತಿ ಪ್ರಮಾಣವನ್ನು ಶೇ 15ಕ್ಕೆ ಇಳಿಸಿ, ಹಂಚಿಕೆ ಮಾಡಿರುವುದು ಐತಿಹಾಸಿಕ ಮೋಸ ಮತ್ತು ಪರಿಶಿಷ್ಟರ ಬೆನ್ನಿಗೆ ಚೂರಿ ಹಾಕುವ ಕೆಲಸ. ಸುಪ್ರಿಂ ಕೋರ್ಟ್ ಆದೇಶದಂತೆ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ಹಂಚಿಕೆ ಮಾಡಲು ಎರಡೂವರೆ ವರ್ಷ ಕಾಲಹರಣ ಮಾಡಿದೆ’ ಎಂದು ವಿಜಯೇಂದ್ರ ಆರೋಪಿಸಿದ್ದಾರೆ.

‘ಒಳ ಮೀಸಲಾತಿ ಜಾರಿ ನಿರ್ಧಾರ ಬೀಸುವ ದೊಣ್ಣೆಯಿಂದ ತಪ್ಪಿಸಿ-ಕೊಳ್ಳುವ ತಂತ್ರ. ಸಿದ್ದರಾಮಯ್ಯ ಸಂಪುಟದ ಸಚಿವರು ತಮ್ಮ ಜನರ ಪರವಾಗಿ ನಿಲ್ಲದೆ, ಕಾಂಗ್ರೆಸ್‌ಗೆ ಸೀಮಿತರಾಗಿದ್ದಾರೆ. ಸಮಾಜದ ಜನರಿಗೆ ಮೋಸ ಮಾಡಿದ್ದಾರೆ. ಸುಮಾರು ಮೂರು ವರ್ಷಗಳ ನಾಟಕದ ನಂತರ ಒಳ ಮೀಸಲಾತಿ ವಿಚಾರಕ್ಕೆ ಕೊನೆಯ ಮೊಳೆ ಹೊಡೆದಿದ್ದಾರೆ. ದಲಿತ ಸಮುದಾಯವನ್ನು ದಿಕ್ಕು ತಪ್ಪಿಸುವ ತೀರ್ಮಾನ ಮಾಡಿದ್ದಾರೆ’ ಎಂದು ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿದ್ದಾರೆ.

‘ರಾಜ್ಯ ಸರ್ಕಾರವೇ ನೇಮಿಸಿದ್ದ ನ್ಯಾ.ನಾಗಮೋಹನ್‌ದಾಸ್ ಅವರ ವರದಿಯನ್ನು ತಿರಸ್ಕರಿಸಲಾಗಿದೆ. ಬೆಟ್ಟ ಅಗೆದು ಇಲಿ ಹಿಡಿದಂತೆ ಒಳ ಮೀಸಲಾತಿ ಜಾರಿಯ ನಿರ್ಧಾರ ಪ್ರಕಟಿಸಿದ್ದಾರೆ. ಸಿದ್ದರಾಮಯ್ಯ ಅವರಿಗೆ ಬದ್ಧತೆ ಇಲ್ಲ. ಜನರಿಗೆ ಮೋಸ ಮಾಡಿ, ಬಡವರನ್ನು ದಾರಿ ತಪ್ಪಿಸಿ ಅಧಿಕಾರಕ್ಕೆ ಬರುವುದೊಂದೇ ಅವರ ಗುರಿ. ಹೊಂದಾಣಿಕೆ ರಾಜಕಾರಣಿ ಆಗಿದ್ದಾರೆ ಎಂದು ಅವರದೇ ಸಂಪುಟದ ಸತೀಶ ಜಾರಕಿಹೊಳಿ ಹೇಳಿದ್ದಾರೆ. ಅದು ಸತ್ಯವೇ’ ಎಂದು ಗೋವಿಂದ ಕಾರಜೋಳ ಪ್ರಶ್ನಿಸಿದ್ದಾರೆ.

ಮೇಲ್ಮನವಿ ಸಲ್ಲಿಸಿದ ವಿನಯ ಕುಲಕರ್ಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ, ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ಜಾಮೀನು ಹಾಗೂ ಶಿಕ್ಷೆಗೆ ತಡೆ ಕೋರಿ ಸಲ್ಲಿಸಲಾಗಿರುವ ಈ ಅರ್ಜಿಗಳು ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇ-ಕಿದೆ. ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಅವರು ವಿನಯ ಕುಲಕರ್ಣಿ ಪರ ವಕಾಲತ್ತು ವಹಿಸಿದ್ದಾರೆ.

ಪ್ರಕರಣದಲ್ಲಿ 17 ಜನ ಆರೋಪಿಗಳನ್ನು ಅಪರಾಧಿಗಳು ಎಂದು ತೀರ್ಮಾನಿಸಿರುವ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 16 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, #22, 17ನೇ ‘ಎಫ್’ ಅಡ್ಡರಸ್ತೆ, ಹಳೇಮದ್ರಾಸ್ ರಸ್ತೆ, ಇಂದಿರಾನಗರ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038.
ದೂರವಾಣಿ: 080–25196159 ಫ್ಯಾಕ್ಸ್: 080–25196110
ಇ–ಮೇಲ್: info@kuidfc.com, ವೆಬ್‌ಸೈಟ್: www.kuidfc.com
ದಿನಾಂಕ: 24.04.2026

ಕಂಪನಿ ಕಾರ್ಯದರ್ಶಿ/ಸಮಾಲೋಚಕರ ನೇಮಕಾತಿ

ಕೆಯುಐಡಿಎಫ್‌ಸಿಯು ಕಂಪನಿ ಕಾರ್ಯದರ್ಶಿ ಹುದ್ದೆಗೆ ಸಮಾಲೋಚಕರಾಗಿ ನೇಮಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳನ್ನು ಸಂಸ್ಥೆಯ ಜಾಲತಾಣದಲ್ಲಿ **ದಿನಾಂಕ: 27.04.2026** ರಿಂದ ಲಭ್ಯವಿದ್ದು, **www.kuidfc.com/Careers** ರಲ್ಲಿ ಆನ್ ಲೈನ್ ಮುಖಾಂತರ ಮಾತ್ರ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. ಸಂಸ್ಥೆಯ ಜಾಲತಾಣದಲ್ಲಿ ಅರ್ಜಿ ನಮೂನೆ ಮತ್ತು ಎಲ್ಲಾ ವಿವರಗಳನ್ನು ಪಡೆಯ ಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:04.05.2026** ಆಗಿರುತ್ತದೆ.
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಆ.&ಮಾ.ಸಂ.), ಕೆಯುಐಡಿಎಫ್‌ಸಿ

‘ವರ್ಗೀಕರಣ ನ್ಯಾಯಯುತವಲ್ಲ ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಪರಿಶಿಷ್ಟ ಜಾತಿಯನ್ನು ‘ಎ’, ‘ಬಿ’ ಮತ್ತು ‘ಸಿ’ ಎಂದು ವರ್ಗೀಕರಿಸಿ, ಅವು ಜಾತಿಗಳಲ್ಲ, ಗುಂಪುಗಳು ಎಂದು ನ್ಯಾ. ನಾಗಮೋಹನ್‌ದಾಸ್ ವರದಿಯಲ್ಲಿ ಉಲ್ಲೇಖಿಸಿರು-ವುದೇ ನ್ಯಾಯಯುತವಲ್ಲ’ ಎಂದು ಕೊಳ್ಳೇಗಾಲದ ಕಾಂಗ್ರೆಸ್ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಎ.ಆರ್. ಕೃಷ್ಣಮೂರ್ತಿ

‘ನಮ್ಮಲ್ಲಿರುವ ಪ್ರಬಲ ಎರಡು ಜಾತಿಗಳೇ ಇದಕ್ಕೆ ಅವಕಾಶ ಮಾಡಿಕೊಟ್ಟಿವೆ. ಪರಿಶಿಷ್ಟ ಜಾತಿಯವರನ್ನು ಒಡೆದು ಆಳುವ ತೀರ್ಮಾನಗಳು ಆಗುತ್ತಿವೆ. ಒಳ ಮೀಸಲಾತಿ ವಿಷಯವು ಜೇನುಗೂಡಿಗೆ ಕೈ ಹಾಕಿದಂತೆ. ಇದು ಇವತ್ತಿಗೆ ನಿಲ್ಲುವುದಿಲ್ಲ’ ಎಂದು ಅವರು ಶನಿವಾರ ಹೇಳಿದರು.

ಕೆಎಸ್‌ಒಯು ಕಾವೇರಿ ಸಭಾಂಗಣದಲ್ಲಿ ನಡೆದ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ 21ನೇ ಮಹಾಸಮ್ಮೇಳನ ಮತ್ತು ರಜತ ಮಹೋ-ತ್ಸವದಲ್ಲಿ ಅವರು ಮಾತನಾಡಿದರು.

‘ಇಷ್ಟು ವಿಂಗಡಣೆಗಳ ಬಳಿಕ ನಾವು ಮುಖ್ಯಮಂತ್ರಿ ಸ್ಥಾನ ಪಡೆಯಲು ಸಾಧ್ಯವೇ ಎಲ್ಲ ಒಂದಾಗಿ ನಾಯಕರನ್ನು ಬೆಳೆಸಿದಾಗ ಗಟ್ಟಿಧ್ವನಿ ಮೂಡುತ್ತದೆ. ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇ 15ರಷ್ಟು ಮೀಸಲಾತಿಯಲ್ಲಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ‘ಎ’, ‘ಬಿ’, ‘ಸಿ’ ವರ್ಗಗಳ ಸ್ಥಾನ ಏನು ಎಂಬುದನ್ನು ಖಚಿತಪಡಿಸಬೇಕು’ ಎಂದು ಅವರು ಹೇಳಿದರು.

ವಸತಿ ಶಾಲೆಗಳಿಗೆ ಶೇ 99.41 ಫಲಿತಾಂಶ

ಪಿಯು ಪ್ರವೇಶ: ಅರ್ಜಿ ಸಲ್ಲಿಕೆಗೆ ಏ.29 ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವ್ಯಾಪ್ತಿಯ ವಸತಿ ಶಾಲೆಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 99.41 ಫಲಿತಾಂಶ ಪಡೆದಿವೆ.

788 ವಸತಿ ಶಾಲೆಗಳ 35,014 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 34,809 ವಿದ್ಯಾರ್ಥಿಗಳು ತೇರ್ಗಡೆ-ಯಾಗಿದ್ದಾರೆ. ಕಳೆದ ವರ್ಷಕ್ಕಿಂತ ಶೇ 8.37ರಷ್ಟು ಹೆಚ್ಚುವರಿ ಫಲಿತಾಂಶ ಬಂದಿದೆ. ಬಹುತೇಕ ವಸತಿ ಶಾಲೆಗಳು ಶೇ 100ರಷ್ಟು ಫಲಿತಾಂಶ ಪಡೆದಿವೆ.

30,971 ವಿದ್ಯಾರ್ಥಿಗಳು ಉನ್ನತ ಹಾಗೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಹಾಜರಾದ 20,178 ಬಾಲಕಿಯರಲ್ಲಿ 20,075 ಹಾಗೂ 14,836 ಬಾಲಕರಲ್ಲಿ 14,734 ಗಂಡು ಮಕ್ಕಳು ತೇರ್ಗಡೆಯಾಗಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ ಸೇರಿದಂತೆ ಎಲ್ಲ ವರ್ಗದ ವಿದ್ಯಾರ್ಥಿಗಳೂ ಶೇ 99ಕ್ಕಿಂತ ಅಧಿಕ ಫಲಿತಾಂಶ ಪಡೆದಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಚ್.ಸಿ. ಮಹದೇವಪ್ಪ

ಪ್ರಥಮ ಪಿಯು ಪ್ರವೇಶ ಪ್ರಕ್ರಿಯೆ ಆರಂಭ: ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಇಂದಿರಾ ಗಾಂಧಿ ವಸತಿ ಪದವಿಪೂರ್ವ ಕಾಲೇಜುಗಳು ಸೇರಿದಂತೆ 104 ಆಂಗ್ಲ ಮಾಧ್ಯಮ ವಸತಿ ಕಾಲೇಜುಗಳಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಿವೆ. ಪ್ರತಿ ತರಗತಿಗೆ 80ರಂತೆ 8,320 ಸೀಟುಗಳು ಲಭ್ಯವಿವೆ ಎಂದು ಮಹದೇವಪ್ಪ ಹೇಳಿದರು.

ಅರ್ಜಿಗಳನ್ನು ವೆಬ್‌ಸೈಟ್ ಮೂಲಕ www.kreis.karnataka.gov.in ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಏ.29 ಕೊನೆಯ ದಿನ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಈ ಸೌಲಭ್ಯ ಪಡೆಯಬಹುದು ಎಂದರು.

ಶಾಲೆಗಳಲ್ಲಿ ಕನ್ನಡ ಪತ್ರಿಕೆ ಓದು ಕಡ್ಡಾಯ

ಬೆಂಗಳೂರು: ಶಾಲೆಗಳಲ್ಲಿ ಪ್ರತಿ ದಿನ 10 ನಿಮಿಷ ಕನ್ನಡ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆಯ ನಂತರ ವಿದ್ಯಾರ್ಥಿಗಳು ಕನ್ನಡ ಪತ್ರಿಕೆಗಳನ್ನು ಓದಬೇಕು. ಶಾಲೆಗಳಲ್ಲಿ ಪ್ರತಿದಿನ ಕನಿಷ್ಠ 10ರಿಂದ 15 ನಿಮಿಷ ಪತ್ರಿಕೆಗಳನ್ನು ಓದುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯಲ್ಲಿ ಸಹಾಯವಾಗುತ್ತದೆ. ಪ್ರಸ್ತುತ ಘಟನೆಗಳ ಕುರಿತು ಸಾಮಾನ್ಯ ಜ್ಞಾನ ಹೆಚ್ಚುತ್ತದೆ. ಪದಸಂಪತ್ತು, ಭಾಷೆ ಹಾಗೂ ಬರವಣಿಗೆ ಕೌಶಲಗಳೂ ಉತ್ತಮವಾಗುತ್ತವೆ ಎಂದು ಶಾಲಾ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ–582103
ದೂರವಾಣಿ ಸಂಖ್ಯೆ: 08372–200601 E-mail ID: gimsgadag@gmail.com
web: www.gimsgadag.karnataka.gov.in

ಸಂಖ್ಯೆ: ಕೆ.ಎಚ್.ಪಿವೈವಿಸಂ/ಟೆಂಡರ್/CPRT/07/2026–27 ದಿನಾಂಕ: 24.04.2026

ಇ–ಟೆಂಡರ್ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜೀವ ರಸಾಯನ ವಿಭಾಗಕ್ಕೆ Cost Per Reportable Test ಮುಖಾಂತರ ವೈದ್ಯಕೀಯ ಪ್ರಯೋಗ ಶಾಲಾ ಪರೀಕ್ಷೆಗಳಿಗಾಗಿ ಬಾಡಿಗೆ ಆದಾರದ ಮೇಲೆ ಸರಬರಾಜುವಿಗಾಗಿ ಕರೆದ ಟೆಂಡರ್ ಆಸಕ್ತಿಯುಳ್ಳ ಸಂಘ–ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ್ ಕರೆಯಲಾಗಿದ್ದು, ದಿನಾಂಕ: 25.04.2026 ರಿಂದ ದಿನಾಂಕ: 14.05.2026ರ ಸಾಯಂಕಾಲ 4:00 ಗಂಟೆವರೆಗೆ ಇ–ಪೋರ್ಟಲ್ ಸಂಖ್ಯೆ: DME/2025-26/IND2145 (https://kppp.karnataka.gov.in/) ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಚೇರಿಗೆ ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು,
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ವಾ.ಸಾ.ಸಂ.ಇ/ಗದಗ/40/ದೇಶಪಾಂಡೆಪಬ್ಲಿಸಿಟಿ/2026–27

ಶಾಂತಿಯಾತ್ರೆ...

ಪಿಟಿಐ ಚಿತ್ರ

ಮಹಾಬೋಧಿ ಸೊಸೈಟಿಯು ಶನಿವಾರ ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ ಶಾಂತಿಯಾತ್ರೆಯಲ್ಲಿ ಭಾಗವಹಿಸಿದ್ದ ಬೌದ್ಧಭಿಕ್ಕುಗಳು ವಿಶ್ವಶಾಂತಿಗಾಗಿ ಪ್ರಾರ್ಥನೆ ಸಲ್ಲಿಸಿದರು

ಕುಡಿಯುವ ನೀರು ₹45 ಕೋಟಿ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು ಪೂರೈಕೆಯ ತುರ್ತು ಕಾಮಗಾರಿಗಳಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ಸ್ವಚ್ಛತಾ ಇಲಾಖೆಯು ₹45 ಕೋಟಿ ಅನುದಾನ ಹಂಚಿಕೆ ಮಾಡಿದೆ.

‘ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಅಭಾವ ಎದುರಾದರೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು, ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಪಡೆಯಲು ಹಾಗೂ ಇತರೆ ತುರ್ತು ಕ್ರಮಗಳಿಗೆ ಈ ಅನುದಾನವನ್ನು ಅಗತ್ಯಕ್ಕೆ ಅನುಸಾರವಾಗಿ ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ’ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಬೆಳಗಾವಿ, ಕಲಬುರಗಿ, ಕೋಲಾರ, ರಾಯಚೂರು, ರಾಮನಗರ ಮತ್ತು ಉಡುಪಿ ಜಿಲ್ಲೆಗೆ ತಲಾ ₹2 ಕೋಟಿ, ಬಾಗಲಕೋಟೆ, ಬೆಂಗಳೂರು, ಬೆಂಗಳೂರು (ಗ್ರಾ), ಬೆಂಗಳೂರು (ನಗರ), ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಹಾವೇರಿ, ಕೊಪ್ಪಳ, ಮೈಸೂರು, ಶಿವಮೊಗ್ಗ, ವಿಜಯನಗರ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗೆ ತಲಾ ₹1.50 ಕೋಟಿ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಕೊಡಗು, ಮಂಡ್ಯ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗೆ ತಲಾ ₹1 ಕೋಟಿಯಂತೆ ಹಣ ಬಿಡುಗಡೆ ಮಾಡಲಾಗಿದೆ.

‘ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಆದ್ಯತೆ ನೀಡಬೇಕು, ಸ್ಥಗಿತಗೊಂಡಿರುವ ಕೊಳವೆಬಾವಿಗಳನ್ನು ಮತ್ತಷ್ಟು ಆಳಕ್ಕೆ ಕೊರೆಯಲು ಪ್ರಯತ್ನಿಸಬೇಕು, ಅನಿವಾರ್ಯ-ವಾದರೆ ಭೂವಿಜ್ಞಾನಿಗಳ ಸಲಹೆ ಪಡೆದು ಹೊಸ ಕೊಳವೆಬಾವಿ ಕೊರೆಯಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ತುರ್ತು ಕಾಮಗಾರಿಗಳಿಗೆ ಕಾರ್ಯಪಡೆ ಸಮಿತಿಯಲ್ಲಿ ಅನುಮೋದನೆ ಪಡೆಯಲು ಸಿಇಒಗಳಿಗೆ ತಿಳಿಸಲಾಗಿದೆ. ಯೋಜನೆಗಳ ಅನುಷ್ಠಾನದಲ್ಲಿ ಗುಣಮಟ್ಟ ಮತ್ತು ಪಾರದರ್ಶಕತೆ ಪಾಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕಾರ್ಯಗಳ ಪ್ರಗತಿಯನ್ನು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿ-ಕಾರಿಗಳು ಹಾಗೂ ಸಂಬಂಧಿಸಿದ ಎಂಜಿನಿಯರ್‌ಗಳು ನಿಯಮಿತವಾಗಿ ಪರಿಶೀಲಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕು’ ಎಂದೂ ಸಚಿವರು ನಿರ್ದೇಶನ ನೀಡಿದ್ದಾರೆ.

ಪೊಲೀಸರಿಗೆ ಪ್ರೇಮಿಗಳ ಹಿಂದೆ ಸುತ್ತುವ ತವಕ!

ಒಂದನೇ ಪುಟದಿಂದ...

‘ಭೇಟಿಯ ದಿನಾಂಕ ಅಖೈರುಗೊಳಿಸಲು ವಿಳಂಬವಾಗುತ್ತಿದೆ’ ಎಂದು ಹೇಳಿದರು.

ಇದಕ್ಕೆ ವಕೀಲರೂ ಆದ ದೂರುದಾರ ಪ್ರಶಾಂತ ಮೆಥಲ್, ‘ಕರ್ನಾಟಕದ ಪೊಲೀಸರು ಬಹಳಷ್ಟು ಪವರ್ ಫುಲ್ ಇದ್ದಾರೆ ಮತ್ತು ಬಹಳಷ್ಟು ಸುರಕ್ಷತೆಯನ್ನೂ ಒದಗಿಸಬಲ್ಲವರಾಗಿ-ದ್ದಾರೆ. ಅಷ್ಟಕ್ಕೂ, ಬೇಕಾದರೆ ರಣವೀರ್ ಖಾಸಗಿ ಭದ್ರತಾ ಸಿಬ್ಬಂದಿ ನೆರವು ಪಡೆದು ದೇವಿಯ ದರ್ಶನ ಪಡೆಯಲಿ’ ಎಂದರು.

ಕೂಡಲೇ ಈ ಮಾತಿಗೆ ತಡೆ ಹಾಕಿದ ನ್ಯಾ.ನಾಗಪ್ರಸನ್ನ ಅವರು, ‘ಕರ್ನಾಟಕ ಪೊಲೀಸರು ಎಷ್ಟು ಪವರ್ ಫುಲ್ ಎಂಬುದನ್ನು ನಾನು ದಿನಾ ನೋಡುತ್ತಲೇ ಇದ್ದೇನೆ. ಇವರೆಲ್ಲಾ ಬರೀ 69ರ (ಭಾರತೀಯ ನ್ಯಾಯ ಸಂಹಿತಾ-2023) ಪ್ರಕರಣಗಳನ್ನೇ ಬೆನ್ನುಹತ್ತುತ್ತಾ ನೈಜ ಅಪರಾಧಗಳ ತನಿಖೆಯನ್ನೇ ಮಾಡುತ್ತಿಲ್ಲ. ಇವರ ಕ್ಷಮತೆಯೆಲ್ಲಾ ಗೊತ್ತಿದೆ ಬಿಡಿ’ ಎಂದು ಛೇಡಿಸಿದರು.

ಅಂತಿಮವಾಗಿ ರಣವೀರ್ ಸಿಂಗ್ ಅವರ ಬೇಷರತ್ ಕ್ಷಮಾಪಣೆಯ ಪರಿಷ್ಕೃತ ಪ್ರಮಾಣ ಪತ್ರವನ್ನು ಸ್ವೀಕರಿಸಿದ ನ್ಯಾಯಮೂರ್ತಿಗಳು, ರಣವೀರ್ ಒಂದು ತಿಂಗಳ ಒಳಗಾಗಿ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವ ಬಗ್ಗೆ ಸೂಕ್ತ ನಿರ್ದೇಶನ ನೀಡುವುದಾಗಿ ತಿಳಿಸಿ ಅರ್ಜಿ ವಿಲೇವಾರಿ ಮಾಡಿದರು. ದೂರುದಾರರ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಶಿಜಿ ಮಲಯಾಳಿ ಹಾಜರಿದ್ದರು.

ಕಲಂ 69 ಏನು ಹೇಳುತ್ತದೆ?

‘ಮದುವೆಯಾಗುವ ಆಸೆ ತೋರಿಸಿ ಅಥವಾ ಉದ್ಯೋಗ ಅಥವಾ ಬಡ್ತಿಯ ಸುಳ್ಳು ಹೇಳಿ, ನಂತರ ದೈಹಿಕ ಸಂಪರ್ಕ ಬೆಳೆಸಿ, ಭರವಸೆಯನ್ನು ಈಡೇರಿಸದಿ-ದ್ದರೆ ಅಪರಾಧ’ ಎಂದು ಬಿಎನ್‌ಎಸ್ ಕಲಂ 69 ವಿವರಿಸುತ್ತದೆ. ಈ ಅಪರಾಧಕ್ಕೆ 10 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ದಂಡ ಇದೆ.

ಮುಖ್ಯಾಂಶಗಳು
- ಚಾಮುಂಡಿ ದೈವದ ಅಪಹಾಸ್ಯ ಆರೋಪ ಪ್ರಕರಣ
- ಬಾಲಿವುಡ್ ನಟ ರಣವೀರ್ ಸಿಂಗ್ ಅರ್ಜಿ ವಿಲೇವಾರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–2,3,4,5/.ಟೆಂಡರ್.ಅಧಿಸೂಚನೆ/2026–27/268 ದಿನಾಂಕ: 22.04.2026

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಬಿವೃದ್ಧಿ ಯೋಜನೆಯಡಿಯಲ್ಲಿ (CMIDP) 20 ಕಾಮಗಾರಿಗಳು, ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ 11 ಕಾಮಾಗಾರಿಗಳು, ಎಸ್.ಎಫ್.ಸಿ ಯೋಜನೆಯಡಿಯಲ್ಲಿ 05, 5054 ಅಪೆಂಡಿಕ್ಸ ಇ ಯೋಜನೆಯಡಿಯಲ್ಲಿ 03, 5054 KRDCL BRIDGE ಯೋಜನೆಯಡಿಯಲ್ಲಿ 05 ಕಾಮಾಗಾರಿಗಳು, 2059 ನಿರ್ವಹಣೆ ಯೋಜನೆಯಡಿಯಲ್ಲಿ 01 ಕಾಮಾಗಾರಿ ಮತ್ತು MLC LAD ಯೋಜನೆಯಡಿಯಲ್ಲಿ 01 ಕಾಮಾಗಾರಿ ಒಟ್ಟು 48 ಕಾಮಗಾರಿಗಳಿಗೆ ಟೆಂಡರ ಆವ್ಹಾನಿಸಲಾಗಿದೆ ಇಂಡೆಂಟ್ ಸಂಖ್ಯೆ: 35777 (work Reserved for ST Category), 33928, 33929 (work Reserved for SC Category), 35541,35827 (work Reserved for 2A Category), 35004, 35005, 35006, 35544, 35816, 35693, 35817, 35797, 35770, 35815, 35692, 35691, 35808, 35807, 35628, 35629, 35733, 35740, 35763, 35845, 35831, 35833, 35796, 33840, 33841, 34035, 34379, 33942, 35762, 35630, 35087, 34451, 35759, 35764, 34446, 35467, 35529, 34406, 35765, 35678, 33484, 34954, SE0622. 2) ಕಾಮಗಾರಿ ಅಂದಾಜು ಮೊತ್ತ : **ಕನಿಷ್ಠ ರೂ. 10.00 ಲಕ್ಷಗಳು ಗರಿಷ್ಠ ರೂ. 800.00 ಲಕ್ಷಗಳು**, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ : ಕನಿಷ್ಠ ರೂ. 21,500.00 ಗರಿಷ್ಠ ರೂ. 10,17,000.00, 5) ಪ್ರೀ ಬಿಡ್ ಮೀಟಿಂಗ್ : **04.05.2026 (11.00 Hrs)**, 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **05.05.2026 (17.30 Hrs)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **06.05.2026 (16.00 Hrs)**, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07.05.2026 (16.30 Hrs)**, 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **08.05.2026 (16.30 Hrs)**, 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ. 11) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು. 12) ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in, 13) ಗಮನಿಸಬೇಕಾದ ಅಂಶಗಳು : **ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/73/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–1,
ಮೊಬೈಲ್: 9448999424 WEB SITE: (http://www.schooleducation.kar.nic.in)

No:DPI-CPI0PLN1/IVA-TENDER/2026-27 Date:24/04/2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕರ್ನಾಟಕದಲ್ಲಿ 500 ಕೆ.ಪಿ.ಎಸ್ ಶಾಲೆಗಳನ್ನು ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ ರವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, Independent Verification Agency ಯನ್ನು ಆಯ್ಕೆ ಮಾಡಲು ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1	ಟೆಂಡರ್ ಉಲ್ಲೇಖ ಸಂಖ್ಯೆ	DPI/2026-27/SE0441
2	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಲು ಪ್ರಾರಂಭ ದಿನಾಂಕ	24/04/2026 ರಿಂದ
3	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	30/04/2026 5:30 PM
4	ಪೂರ್ವ–ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ	30/04/2026 11:00 ಗಂಟೆಗೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯ ಸಭಾಂಗಣ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು–560001
5	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	11/05/2026 5:00 PM
6	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಇ–ಟೆಂಡರ್ ಅರ್ಜಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	12/05/2026 5:10 PM
7	ಇ–ಟೆಂಡರ್ ಅರ್ಜಿಗಳನ್ನು ತೆರೆಯುವ ಸ್ಥಳ	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ
8	ಪ್ರಾಜೆಕ್ಟ್ ವಿಧಾನದ ಪ್ರಸ್ತುತಿಪಡಿಸುವ ದಿನಾಂಕ ಮತ್ತು ಸಮಯ	15/05/2026 ರಂದು ಮಧ್ಯಾಹ್ನ 12:00 ಗಂಟೆಗೆ
9	ಸಂಪರ್ಕ ವಿಳಾಸ	ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು–560001. ಇ–ಮೇಲ್ ವಿಳಾಸ: ddpiplanning@gmail.com, ದೂರವಾಣಿ: 080–22270072, 9448999424.

ಗಮನಿಸಿ 1) ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರುದಾರರು ತಮ್ಮ ಬಳಕೆದಾರ ಐಡಿ ಬಳಸಿ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು. 2) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ನಿರ್ದಿಷ್ಟ ದಿನಾಂಕವು ಖರೀದಿದಾರರಿಗೆ ರಜಾ ದಿನವೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನದಂದು ತಾಂತ್ರಿಕ ಬಿಡ್/ಆರ್ಥಿಕ ಬಿಡ್ ತೆರೆಯಲಾಗುತ್ತದೆ. 3) ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಪ್ರಶ್ನೆಗಳನ್ನಷ್ಟೇ ಸ್ವೀಕರಿಸಲಾಗುತ್ತದೆ. ಪತ್ರಗಳು, ಇಮೇಲ್‌ಗಳು ಅಥವಾ ಯಾವುದೇ ಇತರ ವಿಧಾನಗಳ ಮೂಲಕ ಕಳುಹಿಸಲಾದ ಪ್ರಶ್ನೆಗಳು ಪರಿಗಣಿಸಲಾಗುವುದಿಲ್ಲ.

ಸಹಿ/–
ಉಪ ನಿರ್ದೇಶಕರು(ಯೋಜನೆ)
ವಾಸಾಸಂಇ/ವಾಪ್ರ/ಜಿಎ/361/2026–27

ಶಿವಮೊಗ್ಗ ಜಿಲ್ಲೆಯ ಬೇಸೂರು ಗ್ರಾಮ ● ಜನವಸತಿ ಪ್ರದೇಶದಲ್ಲಿ ಹೆಚ್ಚಿದ ಆತಂಕ

ಬೇಸೂರು: ಅಣುವಿದ್ಯುತ್ ಸ್ಥಾವರಕ್ಕೆ ಸಮೀಕ್ಷೆ?

● ಎಂ.ರಾಘವೇಂದ್ರ

ಸಾಗರ (ಶಿವಮೊಗ್ಗ): ತಾಲ್ಲೂಕಿನ ಆವಿನಹಳ್ಳಿ ಹೋಬಳಿಯ ಬೇಸೂರು ಗ್ರಾಮದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆ ಸಂಬಂಧ ಈಚೆಗೆ ವೈಮಾನಿಕ ಸಮೀಕ್ಷೆ ನಡೆಸಲಾಗಿದ್ದು, ಇದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

ಕೇಂದ್ರ ಸರ್ಕಾರದ ಅಧೀನದ ರಾಷ್ಟ್ರೀಯ ಅಣು ವಿದ್ಯುತ್ ನಿಗಮ (ಎನ್‌ಟಿಪಿಸಿ) ಜ.31ರಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದು, ಅಣುವಿದ್ಯುತ್ ಸ್ಥಾವರ ಸ್ಥಾಪಿಸಲು ಸಂಭಾವ್ಯ ಜಾಗಗಳ ಪಟ್ಟಿ ಕೋರಿದೆ.

ಇದರಲ್ಲಿ 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ 1,200 ಎಕರೆ, 4,000 ಮೆ.ವಾ. ಉತ್ಪಾದನೆಗೆ 1,600 ಎಕರೆ, 6,000 ಮೆ.ವಾ. ಉತ್ಪಾದನೆಗೆ 2,000 ಎಕರೆ ಜಾಗದ ಅಗತ್ಯವಿದೆ. ಅಲ್ಲದೆ ಕಾಲೊನಿ ನಿರ್ಮಾಣಕ್ಕೆ ಪ್ರತ್ಯೇಕವಾಗಿ 100 ರಿಂದ 150 ಎಕರೆ ಜಾಗ ಬೇಕಾಗಿದೆ ಎಂದು ಉಲ್ಲೇಖಿ-ಸಲಾಗಿದೆ.

ರಾಜ್ಯ ಸರ್ಕಾರವು ವಿಜಯಪುರ, ಕೊಪ್ಪಳ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿನ ನಾಲ್ಕು ಗ್ರಾಮಗಳನ್ನು ಸಂಭಾವ್ಯ ಸ್ಥಾವರಕ್ಕಾಗಿ ಗುರುತಿಸಿದೆ. ಇದರಲ್ಲಿ ತಾಲ್ಲೂಕಿನ ಬೇಸೂರಿನ ಹೆಸರೂ ಇದೆ.

ಶಿವಮೊಗ್ಗದ ಜಿಲ್ಲಾಧಿಕಾರಿ ದೂರವಾಣಿ ಮೂಲಕ ಕೇಳಿರುವ ಮಾಹಿತಿ ಮೇರೆಗೆ ಸಾಗರದ ತಾಲ್ಲೂಕು ಕಚೇರಿಯಿಂದ ಫೆ. 2ರಂದು ಪತ್ರ ಬರೆಯಲಾಗಿದೆ. ಅದರಲ್ಲಿ ಬೇಸೂರು ಗ್ರಾಮದಲ್ಲಿ 3,190.39 ಎಕರೆ ಪ್ರದೇಶ ಲಭ್ಯವಿದೆ ಎಂದು ತಿಳಿಸುವ ಜೊತೆಗೆ ಭೂಮಿಯ ಸ್ವರೂಪ, ಖಾತೆದಾರರ ವಿವರಗಳನ್ನೂ ನೀಡಲಾಗಿದೆ.

‘ಬೇಸೂರು ಗ್ರಾಮವು ಶರಾವತಿ ಹಿನ್ನೀರು ಪ್ರದೇಶಕ್ಕೆ ಹತ್ತಿರದಲ್ಲಿದ್ದು, ಅಣುವಿದ್ಯುತ್ ಸ್ಥಾವರಕ್ಕೆ ಬೇಕಾದ ತಂಪಾದ ವಾತಾವರಣ ಇಲ್ಲಿದೆ. ಈ ಕಾರಣಕ್ಕೆ ಈ ಪ್ರದೇಶದಲ್ಲಿ ಸ್ಥಾವರ ಸ್ಥಾಪನೆಯ ಪ್ರಸ್ತಾಪ ಮುನ್ನೆಲೆಗೆ ಬಂದಿದೆ’ ಎನ್ನುತ್ತಾರೆ ಆಪ್ಸ್ ಕೋಸ್ ಸಂಸ್ಥೆಯ ಅಧ್ಯಕ್ಷ ಬಿ.ಎ.ಇಂದೂಧರ ಗೌಡ ಬೇಸೂರು.

‘ಬೇಸೂರು ಗ್ರಾಮ ಜನವಸತಿ ಪ್ರದೇಶವಾಗಿದೆ. ಇಲ್ಲಿ ಕೃಷಿ ಭೂಮಿಯನ್ನು ಹಂಚಿಕೆ ಕೋರಿ ಹಲವು ರೈತರು ಅರ್ಜಿ ಸಲ್ಲಿಸಿದ್ದು, ಅವು ಪರಿಶೀಲನೆಯ ಹಂತದಲ್ಲಿವೆ. ಈ ಮಾಹಿತಿಯನ್ನು ಜಿಲ್ಲಾಧಿಕಾರಿಗೆ ತಲುಪಿಸುವ ಕೆಲಸ ಆಗಬೇಕಿದೆ’ ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು
- ಮತ್ತೊಂದು ಹೋರಾಟಕ್ಕೆ ಮಲೆನಾಡಿಗರ ಚಿಂತನೆ
- ಕೃಷಿ ಭೂಮಿ ನೀಡಲು ರೈತರ ಅರ್ಜಿ ಪರಿಶೀಲನೆ
- ಕಾಡು, ನೀರು ಉಳಿಸುವುದು ನಮ್ಮ ಆದ್ಯತೆ: ತಜ್ಞರು

> **ಮಲೆನಾಡಿನ ಜನರು ಜಲವಿದ್ಯುತ್ ಯೋಜನೆಗಾಗಿ ಎರಡು ಬಾರಿ ಮುಳುಗಡೆ ಸಂತ್ರಸ್ತರಾಗಿದ್ದಾರೆ. ಮತ್ತೆ ಸಂತ್ರಸ್ತರಾಗಲು ಸರ್ಕಾರಗಳು ಅವಕಾಶ ಮಾಡಿಕೊಡಬಾರದು**
> **ಬಿ.ಎ.ಇಂದೂಧರ ಗೌಡ ಬೇಸೂರು,** ಅಧ್ಯಕ್ಷ, ಆಪ್ಸ್ ಕೋಸ್ ಸಂಸ್ಥೆ

> **ಇದು ಪರಿಸರ ಸೂಕ್ಷ್ಮ ಪ್ರದೇಶ. ಇಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆಗೆ ಅವಕಾಶ ನೀಡುವುದಿಲ್ಲ. ಕೈಗಾ ಅಣುಸ್ಥಾವರದಿಂದಾದ ಅನಾಹುತಗಳು ಕಣ್ಣ ಮುಂದಿವೆ**
> **ಗೋಪಾಲಕೃಷ್ಣ ಬೇಳೂರು,** ಸಾಗರ ಶಾಸಕ

> **ಜಿಲ್ಲಾಧಿಕಾರಿ ಕಚೇರಿಯಿಂದ ಕೇಳಿದ್ದಂತೆ ಬೇಸೂರು ಗ್ರಾಮದಲ್ಲಿನ ಭೂ–ಪ್ರದೇಶದ ಮಾಹಿತಿ ಒದಗಿಸಿದ್ದು, ಅಣುಸ್ಥಾವರ ಸ್ಥಾಪನೆ ಕುರಿತು ಯಾವುದೇ ಬೆಳವಣಿಗೆಯಾಗಿಲ್ಲ ಆತಂಕ ಅನಗತ್ಯ**
> **ವೀರೇಶ್ ಕುಮಾರ್,** ಉಪವಿಭಾಗಾಧಿಕಾರಿ, ಸಾಗರ

‘ಸಿಗಂದೂರು ಕ್ಷೇತ್ರಕ್ಕೂ ಅಪಾಯ’

‘ಸಾಗರ ತಾಲ್ಲೂಕಿನ ಬೇಸೂರು ಗ್ರಾಮದಲ್ಲಿ ಒಂದೊಮ್ಮೆ ಅಣು ವಿದ್ಯುತ್ ಸ್ಥಾವರ ಸ್ಥಾಪನೆಯಾದರೆ ಸುತ್ತಮುತ್ತಲಿನ ಪ್ರದೇಶಕ್ಕೂ ಅಣು ವಿಕಿರಣದ ದುಷ್ಪರಿಣಾಮ ಬೀರುವುದು ನಿಶ್ಚಿತ’ ಎಂದು ಪರಿಸರ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

‘ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಸಿಗಂದೂರು ಕ್ಷೇತ್ರಕ್ಕೆ ಅಪಾರ ಪ್ರವಾಸಿಗರು ಬರುತ್ತಾರೆ. ಇಲ್ಲಿ ಸ್ಥಾವರ ಸ್ಥಾಪಿಸಿದರೆ ಈ ಕ್ಷೇತ್ರಕ್ಕೂ ಅಪಾಯ ಕಟ್ಟಿಟ್ಟ ಬುತ್ತಿ’ ಎಂಬ ಅಭಿಪ್ರಾಯಗಳಿವೆ.

ಸಾಗರ ತಾಲ್ಲೂಕಿನ ಬೇಸೂರು ಗ್ರಾಮದಲ್ಲಿರುವ ಕೃಷಿ ಭೂಮಿ

ಜವಳಿ ರಫ್ತು ಇಳಿಕೆ

ನವದೆಹಲಿ (ಪಿಟಿಐ): 2025–26ರ ಆರ್ಥಿಕ ವರ್ಷದಲ್ಲಿ ದೇಶದ ಜವಳಿ ಮತ್ತು ಉಡುಪುಗಳ ರಫ್ತು ಶೇ 2.2 ರಷ್ಟು ಇಳಿಕೆಯಾಗಿ, ₹3.37 ಲಕ್ಷ ಕೋಟಿಯಷ್ಟಾಗಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್ಐ) ತಿಳಿಸಿದೆ.

ಹತ್ತಿ ಸೇರಿದಂತೆ ಪ್ರಮುಖ ವಸ್ತುಗಳ ರಫ್ತು ಇಳಿಕೆಯಾಗಿದೆ. ಹೀಗಾಗಿ, ಒಟ್ಟಾರೆ ರಫ್ತು ಪ್ರಮಾಣ ಕೂಡ ಕಡಿಮೆ ಆಗಿದೆ ಎಂದು ಶನಿವಾರ ತಿಳಿಸಿದೆ. ಹತ್ತಿಯ ಬಟ್ಟೆ ಉತ್ಪನ್ನ, ಸಿದ್ಧಪಡಿಸಿದ ಉಡುಪುಗಳು ಮತ್ತು ನೆಲಹಾಸುಗಳ ರಫ್ತು ಇಳಿದಿದೆ. ಕರಕುಶಲ ವಸ್ತುಗಳ ರಫ್ತು ಮಾತ್ರ ಶೇ 1.5ರಷ್ಟು ಹೆಚ್ಚಳವಾಗಿದೆ ಎಂದಿದೆ.

ಮುಂಬೈ ಧಾರಣೆ (ಶೇಂಗಾ)	
25-04-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಪಾಮ್ ವಾರದ ಡೆಲಿವರಿ	1448 (1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1555)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,900 (1,50,400)
ಬೆಳ್ಳಿ ಕೆ.ಜಿಗೆ	2,44,600 (2,42,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಒಳ ಮೀಸಲಾತಿಯನ್ನು 5.25, 5.25, 4.5ಕ್ಕೆ ನಿಗದಿಪಡಿಸಿರುವುದು ಸಮ್ಮತವೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅಧಿಕ ತಾಪ: ಮೀನುಗಾರರ ವೃತ್ತಿ ಬದಲು

ದುಬಾರಿಯಾದ ಸೀಮೆಎಣ್ಣೆ ದರ • ನಿರೀಕ್ಷಿತ ಆದಾಯ ಸಿಗದೇ ಬೇಸರ

• ಗಣಪತಿ ಹೆಗಡೆ

ಕಾರವಾರ: ಜಲಚರಗಳು ಕೂಡ ಬಿಸಿಲ ಝಳದ ಪರಿಣಾಮವಾಗಿ ತೊಂದರೆ ಅನುಭವಿಸುತ್ತಿವೆ, ಶಾಖದಿಂದ ರಕ್ಷಿಸಿಕೊಳ್ಳಲು ಸಮುದ್ರದ ತೀರ ಪ್ರದೇಶದಿಂದ ಆಳ ಸಮುದ್ರಕ್ಕೆ ಮೀನುಗಳು ಸಾಗುತ್ತಿವೆ. ಇದರಿಂದಾಗಿ ಸಾಂಪ್ರದಾಯಿಕ ಮೀನುಗಾರಿಕೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ.

ಕಡಲತೀರದಿಂದ ಸಾಮಾನ್ಯವಾಗಿ 5 ನಾಟಿಕಲ್ ಮೈಲಿ ವ್ಯಾಪ್ತಿಯೊಳಗೆ ಮೀನುಗಾರಿಕೆ ನಡೆಸುವ ನಾಡದೋಣಿ ಮೀನುಗಾರರು ಒಂದೂವರೆ ತಿಂಗಳಿನಿಂದ ಬಹುತೇಕ ಚಟುವಟಿಕೆ ಸ್ಥಗಿತಗೊಳಿಸಿದ್ದಾರೆ. ಮೀನುಗಾರಿಕೆ ವೃತ್ತಿ ತೊರೆದು ಅನ್ಯ ಕೆಲಸಗಳನ್ನು ಅರಸುತ್ತ ಸಾಗಿದ್ದಾರೆ.

‘ರಾಜ್ಯದ ಕರಾವಳಿ ಭಾಗದ ಮೂರು ಜಿಲ್ಲೆಗಳಲ್ಲಿ 8,985 ನಾಡದೋಣಿಗಳಿವೆ. ಲಕ್ಷಾಂತರ ಮೀನುಗಾರರು ನಾಡದೋಣಿ ನಂಬಿ ಬದುಕು ಕಟ್ಟಿಕೊಂಡಿದ್ದಾರೆ. ಆದರೆ, ಈಗ ದುಡಿಮೆಗೆ ಅನ್ಯಮಾರ್ಗ ಹುಡುಕಬೇಕಿದೆ’ ಎಂದು ಸಾಂಪ್ರದಾಯಿಕ ಮೀನುಗಾರರು ಹೇಳಿದರು.

‘ಬಿಸಿಲ ಝಳ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚಿದೆ. ಅದರ ಪರಿಣಾಮ ಮೀನುಗಳು ಸಿಗುತ್ತಿಲ್ಲ. ತಾರ್ಲೆ, ಬಂಗುಡೆ ಸೇರಿ ಹೇರಳವಾಗಿ ಸಿಗಬೇಕಿದ್ದ ಮೀನುಗಳು, ಶಾಖದಿಂದ ರಕ್ಷಣೆಗಾಗಿ ಆಳ ಸಮುದ್ರಕ್ಕೆ ವಲಸೆ ಹೋಗುತ್ತಿವೆ. ನಸುಕಿನ ಜಾವ ಮೀನುಗಾರಿಕೆಗೆ ತೆರಳಿದರೂ ಕನಿಷ್ಠ 50ರಿಂದ 60 ಬಂಗುಡೆ ಮೀನು ತರಲೂ ಸಾಧ್ಯವಾಗುತ್ತಿಲ್ಲ’ ಎಂದು ಮೀನುಗಾರ ವಿಜಯ್ ಬಾನಾವಳಿ ಹೇಳಿದರು.

ಭಟ್ಕಳ ಬಂದರು ಪ್ರದೇಶದ ಬಳಿ ಮೀನುಗಾರಿಕೆ ಚಟುವಟಿಕೆ ನಡೆಸದೆ ನಿಂತಿರುವ ನಾಡದೋಣಿಗಳು

‘ಹವಾಮಾನ ವೈಪರೀತ್ಯದಿಂದಾಗಿ ಮೀನುಗಾರಿಕೆ ಕಷ್ಟವಾಗಿದೆ. ಸೀಮೆಎಣ್ಣೆ ದರವೂ ದುಬಾರಿಯಾಗಿದೆ. ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ಪ್ರತಿ ಲೀಟರ್ ಸೀಮೆಎಣ್ಣೆ ದರ ಒಂದೂವರೆ ತಿಂಗಳಲ್ಲೇ ₹64ರಿಂದ ₹117ಕ್ಕೆ ಏರಿಕೆಯಾಗಿದೆ. ಗಾಯದ ಮೇಲೆ ಬರೆ ಎಳೆದಂತಾಗಿದೆ’ ಎಂದು ನಾಡದೋಣಿ ಮೀನುಗಾರರ ಸಂಘದ ರಾಜ್ಯ ಘಟಕದ ಕಾರ್ಯದರ್ಶಿ ಸೋಮನಾಥ ಮೊಗೇರ ತಿಳಿಸಿದರು.

‘ನಾಡದೋಣಿಗೆ ದಿನಕ್ಕೆ ಸರಾಸರಿ 20 ಲೀಟರ್ ಸೀಮೆಎಣ್ಣೆ ಬೇಕು. ಈಗಿನ ದರದಲ್ಲಿ ಅಷ್ಟೊಂದು ವೆಚ್ಚ ಮಾಡಿದರೂ ಮೀನುಗಳು ಸಿಗುತ್ತಿಲ್ಲ. ಇದರಿಂದ ಮೀನುಗಾರಿಕೆಯಲ್ಲಿ ತೊಡಗಿದ್ದವರು ಕೆಲಸ ಬಿಟ್ಟು, ಹೋಟೆಲ್ ಬಾಣಸಿಗರಾಗಿ, ಬಾವಿ ತೋಡುವ ಕೆಲಸಕ್ಕೆ ಸೇರಿದಂತೆ ಕೈಗೆ ಸಿಕ್ಕ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ’ ಎಂದರು.

> ಸೂಪರ್ ಎಲ್‌ನಿನೊ ಪರಿಣಾಮದಿಂದ ಸಮುದ್ರದ ನೀರಿನಲ್ಲಿ ಶಾಖ ಹೆಚ್ಚಿದೆ. ತೀರಕ್ಕೆ ಸಮೀಪದಲ್ಲಿರುವ ಮೀನುಗಳು 30ರಿಂದ 40 ನಾಟಿಕಲ್ ಮೈಲು ದೂರ ವಲಸೆ ಹೋಗುತ್ತಿವೆ
>
> **ಶಿವಕುಮಾರ ಹರಗಿ,** ಮುಖ್ಯಸ್ಥ, ಕಾರವಾರ ಕಡಲಜೀವಶಾಸ್ತ್ರ ಅಧ್ಯಯನ ಕೇಂದ್ರ

> ಸೀಮೆಎಣ್ಣೆ ದರ ದುಬಾರಿಯಾಗಿದೆ. ಅತಿಯಾದ ಶಾಖದಿಂದ ಮೀನುಗಳು ಸಿಗುತ್ತಿಲ್ಲ. ಅತಿಯಾದ ಬಿಸಿಲಿನಿಂದ ಮೀನುಗಾರಿಕೆ ಕಷ್ಟವಾಗಿದೆ
>
> **ಸೋಮನಾಥ ಮೊಗೇರ,** ಕಾರ್ಯದರ್ಶಿ, ನಾಡದೋಣಿ ಮೀನುಗಾರರ ಸಂಘ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1505 (1500)
ಸೂರ್ಯಕಾಂತಿ (ರಿಫೈನ್ಡ್)	₹1665 (1660)
ಪಾಮೋಲಿನ್	₹1450 (1445)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹575
	12 ಕ್ಕೆ	₹78
ಮೈಸೂರು:	100 ಕ್ಕೆ	₹580

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹250-621
ದ್ವಿತಳಿ (ಬಿ.ವಿ)	₹356-799

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹236
ಆರ್‌ಎಸ್‌ಎಸ್-5	₹230
ಗುಡ್ ಲಾಟ್	₹207

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹24250
ಎಸಿ	₹14150
ಆರ್‌ಪಿ	₹18350
ಆರ್‌ಸಿ	₹9925

ಸುದ್ದಿ 2 ನಿಮಿಷ

ಸಾಗರೋತ್ಪನ್ನಗಳ ರಫ್ತು ₹72,325 ಕೋಟಿಗೆ ಏರಿಕೆ

ಮಂಗಳೂರು: 2025–26ನೇ ಆರ್ಥಿಕ ವರ್ಷದಲ್ಲಿ ಭಾರತದ ಸಾಗರೋತ್ಪನ್ನಗಳ ರಫ್ತು ₹72,325 ಕೋಟಿ ಆಗಿದ್ದು, ರಫ್ತು ಪ್ರಮಾಣವು 19.92 ಲಕ್ಷ ಟನ್‌ಗಳಷ್ಟಾಗಿದೆ. ಇದು ಸಾರ್ವಕಾಲಿಕ ದಾಖಲೆ ಎಂದು ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಂಪೆಡಾ) ತಿಳಿಸಿದೆ.

ರಫ್ತು ಬೆಳವಣಿಗೆಯಲ್ಲಿ ಸಿಗಡಿ ಪ್ರಮುಖ ಸ್ಥಾನದಲ್ಲಿದ್ದು, ಒಟ್ಟು ರಫ್ತು ಗಳಿಕೆಯ ಮೂರನೇ ಎರಡರಷ್ಟು (₹47,973 ಕೋಟಿ) ಪಾಲನ್ನು ಹೊಂದಿದೆ. ಸಿಗಡಿ ಸಾಗಣೆಯ ಪ್ರಮಾಣದಲ್ಲಿ ಶೇ 4.6 ಮತ್ತು ಮೌಲ್ಯದಲ್ಲಿ ಶೇ 6.35ರಷ್ಟು ಹೆಚ್ಚಾಗಿದೆ. ಸಾಗರೋತ್ಪನ್ನ ರಫ್ತಿಗೆ ಅಮೆರಿಕ ಮತ್ತು ಚೀನಾ ದೇಶಗಳು ಭಾರತದ ಪ್ರಮುಖ ಮಾರುಕಟ್ಟೆಗಳಾಗಿವೆ.

ಅಮೆರಿಕ ಈ ಬಾರಿಯೂ ಮೊದಲ ಸ್ಥಾನ ಉಳಿಸಿಕೊಂಡಿದೆ. ಆದರೆ, ಅಮೆರಿಕಕ್ಕೆ ಸಾಗಣೆ ಪ್ರಮಾಣ ಶೇ 19.8 ಹಾಗೂ ಮೌಲ್ಯದಲ್ಲಿ ಶೇ 14.5ರಷ್ಟು ಕುಸಿತವಾಗಿದೆ. ಚೀನಾಕ್ಕೆ ಸಾಗಣೆ ಪ್ರಮಾಣ ಶೇ 20.1ರಷ್ಟು ಹೆಚ್ಚಳವಾಗಿದೆ. ಆಗ್ನೇಯ ಏಷ್ಯಾಕ್ಕೆ ರಫ್ತು ಪ್ರಮಾಣ ಶೇ 28.2, ಐರೋಪ್ಯ ಒಕ್ಕೂಟಕ್ಕೆ ಶೇ 35.2ರಷ್ಟು ಹೆಚ್ಚಳವಾಗಿರುವ ಕಾರಣ ಅಮೆರಿಕದಲ್ಲಿ ಆಗಿರುವ ಕುಸಿತ ಸರಿದೂಗಿದೆ.

ಶೀತಲೀಕರಿಸಿದ ಮೀನು, ಸ್ಕ್ವಿಡ್, ಕಟ್ಲ್‌ಫಿಶ್, ಒಣ ಮೀನು ಉತ್ಪನ್ನಗಳು ಮತ್ತು ಜೀವಂತ ಮೀನುಗಳ ರಫ್ತು ಬೆಳವಣಿಗೆ ಕಂಡಿದ್ದರೆ, ತಂಪು ಉತ್ಪನ್ನಗಳು ಕುಸಿತ ಕಂಡಿವೆ. ವಿಶಾಖಪಟ್ಟಣ, ಜೆಎನ್‌ಪಿಟಿ, ಕೊಚ್ಚಿ, ಕೋಲ್ಕತ್ತಾ ಮತ್ತು ಚೆನ್ನೈ ಬಂದರುಗಳ ಮೂಲಕ ಶೇ 64ರಷ್ಟು ಉತ್ಪನ್ನಗಳು ರಫ್ತಾಗುತ್ತವೆ ಎಂದು ಎಂಪೆಡಾದ ಸಹಾಯಕ ನಿರ್ದೇಶಕ ಎಸ್. ಸುಬ್ರಮಣಿಯನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಬೇಡಿಕೆ 252 ಗಿಗಾವಾಟ್

ನವದೆಹಲಿ (ಪಿಟಿಐ): ಬಿಸಿಗಾಳಿ ಹೆಚ್ಚಳದಿಂದ ದೇಶದಲ್ಲಿ ಹವಾ-ನಿಯಂತ್ರಕಗಳು ಹಾಗೂ ಕೂಲರ್‌ಗಳ ಬಳಕೆ ಹೆಚ್ಚಿದೆ. ಇದರಿಂದ ಏಪ್ರಿಲ್ 24ರಂದು ದೇಶದಲ್ಲಿ ವಿದ್ಯುತ್ ಬೇಡಿಕೆ 252.07 ಗಿಗಾವಾಟ್‌ಗೆ ತಲುಪಿದೆ. ಇದು ಈವರೆಗಿನ ಗರಿಷ್ಠ ಮಟ್ಟದ ವಿದ್ಯುತ್ ಬೇಡಿಕೆಯಾಗಿದೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯವು ತಿಳಿಸಿದೆ.

2024ರ ಮೇ ತಿಂಗಳಿನಲ್ಲಿ ವಿದ್ಯುತ್ ಬೇಡಿಕೆ 250 ಗಿಗಾ-ವಾಟ್‌ನಷ್ಟಿತ್ತು. ಅದು ಆವರೆಗಿನ ಗರಿಷ್ಠ ಮಟ್ಟದ ವಿದ್ಯುತ್ ಬೇಡಿಕೆ ಆಗಿತ್ತು. ಈ ವರ್ಷದ ಏಪ್ರಿಲ್ 23ರಂದು ವಿದ್ಯುತ್ ಬೇಡಿಕೆ 240.12 ಗಿಗಾವಾಟ್‌ಗೆ ತಲುಪಿತ್ತು. ಮರುದಿನವೇ (ಏಪ್ರಿಲ್ 24ರಂದು) 252 ಗಿಗಾವಾಟ್ ದಾಟಿದೆ.

ಈ ವರ್ಷದ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯು ದಿನವೊಂದಕ್ಕೆ 270 ಗಿಗಾವಾಟ್‌ಗೆ ತಲುಪಲಿದೆ ಎಂದು ವಿದ್ಯುತ್ ಸಚಿವಾಲಯವು ಈಗಾಗಲೇ ಅಂದಾಜಿಸಿದೆ. ಕಳೆದ ವರ್ಷದ ಬೇಸಿಗೆಯಲ್ಲಿ 242.77 ಗಿಗಾವಾಟ್ ವಿದ್ಯುತ್‌ಗೆ ಬೇಡಿಕೆ ಉಂಟಾಗಿತ್ತು.

ಈ ಬಾರಿ ಬೇಸಿಗೆಯಲ್ಲಿ ಬಿಸಿಲು ಹೆಚ್ಚಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

‘ಪಿಪಿಬಿಎಲ್ ವಿರುದ್ಧದ ಕ್ರಮ, ಪೇಟಿಎಂ ಮೇಲೆ ಪರಿಣಾಮ ಇಲ್ಲ’

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್‌ನ (ಪಿಪಿಬಿಎಲ್) ಪರವಾನಗಿಯನ್ನು ರದ್ದು ಮಾಡಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಕ್ರಮವು ಕಂಪನಿಯ ಹಣಕಾಸು ಅಥವಾ ವ್ಯವಹಾರದ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಪೇಟಿಎಂನ ಮಾತೃಸಂಸ್ಥೆ ‘ಒನ್ 97 ಕಮ್ಯುನಿಕೇಷನ್’ ತಿಳಿಸಿದೆ.

ಈ ಪೇಮೆಂಟ್ಸ್ ಬ್ಯಾಂಕ್‌ನೊಂದಿಗೆ ಕಂಪನಿಯು ಯಾವುದೇ ಮಹತ್ವದ ವ್ಯವಹಾರ ಹೊಂದಿಲ್ಲ ಎಂದು ಹೇಳಿದೆ. ಪಿಪಿಬಿಎಲ್ ಸ್ವತಂತ್ರವಾಗಿ ಕಾರ್ಯಾಚರಿಸುತ್ತಿದ್ದು, ಪೇಟಿಎಂನ ಆಡಳಿತ ಮಂಡಳಿಯು ಪಿಪಿಬಿಎಲ್‌ನಲ್ಲಿ ಪ್ರಾತಿನಿಧ್ಯ ಹೊಂದಿಲ್ಲ ಎಂದು ಕಂಪನಿಯು ಷೇರುಪೇಟೆಗೆ ಶನಿವಾರ ತಿಳಿಸಿದೆ.

2024ರ ಮಾರ್ಚ್ 1ರಂದು ಕಂಪನಿಯು, ‘ಪಿಪಿಬಿಎಲ್ ನೊಂದಿಗೆ ಯಾವುದೇ ವ್ಯವಹಾರ ಹೊಂದಿಲ್ಲ. ಕಂಪನಿಯು ಒದಗಿಸುವ ಸೇವೆಗಳು ಪಿಪಿಬಿಎಲ್‌ನೊಂದಿಗೆ ಪಾಲುದಾರಿಕೆ ಹೊಂದಿಲ್ಲ’ ಎಂದು ತಿಳಿಸಿತ್ತು.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್, ಠೇವಣಿದಾರರ ಹಿತಾಸಕ್ತಿಗೆ ವಿರುದ್ಧವಾದ ರೀತಿಯಲ್ಲಿ ವ್ಯವಹಾರಗಳನ್ನು ನಡೆಸುತ್ತಿದೆ. ಅಲ್ಲದೆ, ಬ್ಯಾಂಕ್‌ನ ಆಡಳಿತ ಮಂಡಳಿಯ ವರ್ತನೆಯು ಠೇವಣಿದಾರರು ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಹೀಗಾಗಿ, ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಭವಿಷ್ಯದಲ್ಲಿ ಯಾವುದೇ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸದಂತೆ ಬ್ಯಾಂಕಿಂಗ್ ಪರವಾನಗಿಯನ್ನು ರದ್ದುಗೊಳಿಸಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಯೆಜ್ಡಿ, ಬಿಎಸ್‌ಎ ಸ್ಕ್ರ್ಯಾಂಬ್ಲರ್ ಬಿಡುಗಡೆ

350 ಸಿ.ಸಿ ಸಾಮರ್ಥ್ಯ ಹಾಗೂ 650 ಸಿ.ಸಿ ಸಾಮರ್ಥ್ಯದ ದ್ವಿಚಕ್ರ ವಾಹನಗಳು

• ವಿಠಲ

ಮುಂಬೈ: 350 ಸಿ.ಸಿ ಸಾಮರ್ಥ್ಯದ ಯೆಜ್ಡಿ ಸ್ಕ್ರ್ಯಾಂಬ್ಲರ್ ಮತ್ತು 650 ಸಿ.ಸಿ ಸಾಮರ್ಥ್ಯದ ಬಿಎಸ್‌ಎ ಸ್ಕ್ರ್ಯಾಂಬ್ಲರ್ ಬೈಕ್‌ಗಳನ್ನು ಕ್ಲಾಸಿಕ್ ಲೆಜೆಂಡ್ಸ್‌ನ ಸಹ-ಸಂಸ್ಥಾಪಕ ಅನುಪಮ್ ತರೇಜಾ ಮತ್ತು ಬೋಮನ್ ಇರಾನಿ ಗುರುವಾರ ಮುಂಬೈನಲ್ಲಿ ಬಿಡುಗಡೆ ಮಾಡಿದರು.

‘ಯೆಜ್ಡಿ ಸ್ಕ್ರ್ಯಾಂಬ್ಲರ್ 350’, 174 ಕೆ.ಜಿ ತೂಕದ ದ್ವಿಚಕ್ರ ವಾಹನ. ಇದರಲ್ಲಿ ‘ಕಟಾರ್’ ಎಂಬ ಹೊಸ ಲಿಕ್ವಿಡ್-ಕೂಲ್ಡ್ ಎಂಜಿನ್ ಬಳಸಲಾಗಿದೆ. ಇದರ ಆರಂಭಿಕ ಬೆಲೆ ₹1,99,950.

ಬಿಎಸ್‌ಎ ಸ್ಕ್ರ್ಯಾಂಬ್ಲರ್ ವಾಹನವು ಸಿಂಗಲ್ ಸಿಲಿಂಡರ್ ಎಂಜಿನ್ ಹೊಂದಿದೆ. ಇದು 45 ಬಿಎಚ್‌ಪಿ ಶಕ್ತಿ ಮತ್ತು 55 ಎನ್‌ಎಂ ಟಾರ್ಕ್ ಉತ್ಪಾದಿಸುತ್ತದೆ. ಇದರ ಆರಂಭಿಕ ಬೆಲೆ ₹3,24,950.

ಎರಡೂ ಬೈಕ್‌ಗಳಿಗೆ 4 ವರ್ಷ ಅಥವಾ 50,000 ಕಿ.ಮೀ.ವರೆಗೆ ವಾರಂಟಿ ನೀಡಲಾಗುತ್ತದೆ. ಎರಡು ವಿಭಿನ್ನ ಸ್ಕ್ರ್ಯಾಂಬ್ಲರ್ ಮೋಟಾರ್ ಬೈಕ್‌ಗಳು ನಗರ ಪ್ರದೇಶ, ಸಾಹಸ ಪ್ರವೃತ್ತಿ ಹೊಂದಿರುವವರಿಗೆ ಮತ್ತು ಹೆದ್ದಾರಿಗಳಲ್ಲಿ ಆರಾಮದಾಯಕ ಪಯಣ ಬಯಸುವವರಿಗಾಗಿ ವಿನ್ಯಾಸಗೊಳಿಸಲಾಗಿದೆ.

ಬಿಎಸ್‌ಎ ಸ್ಕ್ರ್ಯಾಂಬ್ಲರ್ 650 ಸಿ.ಸಿ ಸಾಮರ್ಥ್ಯದ ಬೈಕ್ ಅನ್ನು ಕ್ಲಾಸಿಕ್ ಲೆಜೆಂಡ್ಸ್‌ನ ಸಹ ಸಂಸ್ಥಾಪಕರಾದ ಬೋಮನ್ ಇರಾನಿ, ಅನುಪಮ್ ತರೇಜಾ ಅವರು ಮುಂಬೈನಲ್ಲಿ ಬಿಡುಗಡೆಗೊಳಿಸಿದರು

ಅನುಪಮ್ ತರೇಜಾ ಮಾತನಾಡಿ, ‘ಸ್ಕ್ರ್ಯಾಂಬ್ಲರ್‌ಗಳು ಭಾರತದಲ್ಲಿನ ಬೈಕ್ ಚಾಲನಾ ಸಂಸ್ಕೃತಿಯನ್ನು ಮರು ವ್ಯಾಖ್ಯಾನಿಸುವಂತಿವೆ. ಇವು ದ್ವಿಚಕ್ರ ವಾಹನ ಜಗತ್ತಿನ ಎಸ್‌ಯುವಿಗಳು’ ಎಂದರು.

ಬೋಮನ್ ಇರಾನಿ ಮಾತನಾಡಿ, ‘ಯೆಜ್ಡಿ ಯಾವಾಗಲೂ ವಿಶಿಷ್ಟ ಶೈಲಿ ಒಳಗೊಂಡಿರುತ್ತದೆ. ಪ್ರತಿ ಸವಾರಿಯೂ ವಿಶಿಷ್ಟ ಅನುಭವ ನೀಡುತ್ತದೆ, ಸಂಸ್ಥೆಯು ಇದೀಗ ಹಗುರವಾದ, ಹೆಚ್ಚಿನ ಟಾರ್ಕ್ ಮತ್ತು ಹೆಚ್ಚಿನ ಕಾರ್ಯಕ್ಷಮತೆ ಹೊಂದಿರುವ ಎರಡು ಹೊಸ ಸ್ಕ್ರ್ಯಾಂಬ್ಲರ್‌ಗಳನ್ನು ಬಿಡುಗಡೆ ಮಾಡಿದೆ’ ಎಂದರು.

ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಮುಂಬೈಗೆ ತೆರಳಿದ್ದರು

ಯೆಜ್ಡಿ ಸ್ಕ್ರ್ಯಾಂಬ್ಲರ್ ವೈಶಿಷ್ಟ್ಯ

ಈ ದ್ವಿಚಕ್ರ ವಾಹನವು ಸೆಮಿ-ನಾಬಿ ಟೈರ್ ಮತ್ತು ಅತ್ಯುತ್ತಮ ಬ್ರೇಕಿಂಗ್ ವ್ಯವಸ್ಥೆ ಹೊಂದಿದೆ. ಬಹಳ ಜನಪ್ರಿಯತೆ ಗಳಿಸಿದ್ದ ಬಿಎಸ್‌ಎ ಸ್ಕ್ರ್ಯಾಂಬ್ಲರ್‌ಗಳಾದ ‘ಗೋಲ್ಡ್ ಸ್ಟಾರ್ ಕ್ಯಾಟಲಿನಾ’ ಮತ್ತು ‘ಎ10 ಸ್ಪಿಟ್‌ಫೈರ್’ ಮಾದರಿಗಳಿಂದ ಇವು ಪ್ರೇರಿತವಾಗಿದೆ. ಕ್ರೋಮ್ ಫಿನಿಶ್ ಇರುವ ಟ್ಯಾಂಕ್, ಫ್ಲಾಟ್ ರಿಬ್ಬಡ್ ಸೀಟ್, ಸಿಗ್ನೇಚರ್ ‘65’ ಓವಲ್ ಸೈಡ್ ಪ್ಯಾನಲ್ ಮತ್ತು ಎಕ್ಸ್‌ಪೋಸ್ಡ್ ಸಬ್‌ಫ್ರೇಮ್ ಹೊಂದಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

18ನೇ ವರ್ಷದ ಸವಿನೆನಪು



ಶ್ರೀ ಎನ್. ರಮೇಶ್

ಜನನ: 22-11-1966 ಮರಣ: 26-04-2008

ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗುಳಿದಿರುವುದು.

ಇಂತಿ ದುಃಖತಪ್ತರು: ಶ್ರೀಮತಿ ಪಾಪಮ್ಮ ಮತ್ತು ನಂಜಪ್ಪರೆಡ್ಡಿಯವರ ಕುಟುಂಬದವರು ಮಾರತ್ತಹಳ್ಳಿ, ಬೆಂಗಳೂರು-37

47 ನಕ್ಸಲರ ಶರಣಾಗತಿ

ಹೈದರಾಬಾದ್ (ಪಿಟಿಐ): ಭೂಗತವಾಗಿದ್ದ 47 ಮಂದಿ ಸಿಪಿಐ (ಮಾವೋವಾದಿ) ನಕ್ಸಲರು ತೆಲಂಗಾಣ ಪೊಲೀಸರಿಗೆ ಶನಿವಾರ ಶರಣಾಗಿದ್ದಾರೆ. ಶರಣಾದ ನಕ್ಸಲರು ಛತ್ತೀಸಗಢದವರು ಎಂದು ತೆಲಂಗಾಣ ಡಿಜಿಪಿ ಶಿವಧರ್ ರೆಡ್ಡಿ ತಿಳಿಸಿದ್ದಾರೆ.

ದಂಡಕಾರಣ್ಯ ವಿಶೇಷ ಪ್ರದೇಶ ಸಮಿತಿಯ ಸದಸ್ಯ, ಸಿಪಿಐ (ಮಾವೋವಾದಿ) ಸ್ಥಳೀಯ ಮುಖ್ಯಸ್ಥ ಹೆಮ್ಲಾ ಐಥು ಅಲಿಯಾಸ್ ವಿಜ್ಜ ಕೂಡ ಶರಣಾಗಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ನಕ್ಸಲರ ಶರಣಾಗತಿ ಇದೇ ಕೊನೆಯದಾಗಿರಬಹುದು. ಇನ್ನೂ ಕೆಲವರಷ್ಟೆ ಸಕ್ರಿಯರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಎಚ್–1ಬಿ’ ವೀಸಾ 3 ವರ್ಷ ಸ್ಥಗಿತ: ಮಸೂದೆ ಮಂಡನೆ

ಒಂದನೇ ಪುಟದಿಂದ....

ಅಮೆರಿಕದ ತಂತ್ರಜ್ಞಾನ ಸಂಸ್ಥೆಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಎಚ್–1ಬಿ ವೀಸಾಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತಿವೆ. ಟೆಕಿಗಳು ಹಾಗೂ ವೈದ್ಯರು ಸೇರಿದಂತೆ ಎಚ್–1ಬಿ ವೀಸಾ ಹೊಂದಿರುವವರ ಪೈಕಿ ಭಾರತೀಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ಮಸೂದೆಯು ಅಂಗೀಕೃತವಾದರೆ ಹೆಚ್ಚಿನ ಸಂಖ್ಯೆಯ ಭಾರತೀಯರು ಸಂಕಷ್ಟಕ್ಕೀಡಾಗಲಿದ್ದಾರೆ.

ತನ್ನದೇ ಜನರ ವಿರುದ್ಧ ರೂಪಿಸಲಾಗಿರುವ ವ್ಯವಸ್ಥೆಯನ್ನು ಈ ಮಸೂದೆಯು ಅಂತ್ಯಗೊಳಿಸುತ್ತದೆ. ಇದು ಅಮೆರಿಕನ್ನರ ಉದ್ಯೋಗಾವಕಾಶಕ್ಕೆ ಬಲ ನೀಡುತ್ತದೆ ಎಂದು ಸಂಸದ ಪಾಲ್ ಗೋಸರ್ ಹೇಳಿದರು.

ಮಸೂದೆಯಲ್ಲಿರುವ ಪ್ರಮುಖ ಅಂಶಗಳು

- ಇದೀಗ ವಾರ್ಷಿಕ 65,000ರವರೆಗೆ ಎಚ್–1ಬಿ ವೀಸಾಗಳನ್ನು ವಿತರಿಸಲಾಗುತ್ತಿದ್ದು, ಈ ಸಂಖ್ಯೆಯನ್ನು 25,000ಕ್ಕೆ ಇಳಿಸಬೇಕು
- ಎಚ್–1ಬಿ ವೀಸಾ ಅಡಿ ಅಮೆರಿಕಕ್ಕೆ ಬರುವ ಉದ್ಯೋಗಿಗಳ ವಾರ್ಷಿಕ ಸಂಬಳವು ₹1.88 ಕೋಟಿ (2 ಲಕ್ಷ ಡಾಲರ್) ಮೀರಬಾರದು
- ಈ ವೀಸಾ ಹೊಂದಿರುವವರು ಅವಲಂಬಿತರನ್ನು ಅಮೆರಿಕಕ್ಕೆ ಕರೆತರಬಾರದು
- ವೀಸಾ ವಿತರಣೆಗೆ ಲಾಟರಿ ವ್ಯವಸ್ಥೆ ಬದಲು ವೇತನ ಆಧಾರಿತ ವ್ಯವಸ್ಥೆಯನ್ನು ಉದ್ಯೋಗದಾತರು ಅನುಸರಿಸಬೇಕು
- ಉದ್ಯೋಗದಾತರು ಎಚ್–1ಬಿ ಮೂಲಕ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಮೊದಲು, ಆ ಹುದ್ದೆಗೆ ಅಮೆರಿಕದಲ್ಲಿ ಅರ್ಹ ಉದ್ಯೋಗಿ ಸಿಕ್ಕಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು
- ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅಮೆರಿಕದ ಯಾವುದೇ ಉದ್ಯೋಗಿಯನ್ನು ವಜಾ ಮಾಡಿಲ್ಲ ಎಂಬುದನ್ನು ಖಾತರಿಪಡಿಸಬೇಕು
- ಎಚ್–1ಬಿ ಹೊಂದಿರುವ ಉದ್ಯೋಗಿಗಳು ಒಂದಕ್ಕಿಂತ ಹೆಚ್ಚು ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು
- ಯಾವುದೇ ಏಜೆನ್ಸಿ ಮೂಲಕ ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಬೇಕು

ಅಮೆರಿಕದ ಪಾಕ್ ಪ್ರವಾಸ ರದ್ದು

ಒಂದನೇ ಪುಟದಿಂದ...

ಈ ಸಂದರ್ಭದಲ್ಲಿ ಇರಾನ್ ಡೆಪ್ಯೂಟಿ ವಿದೇಶಾಂಗ ಸಚಿವ ಕಾಜೆಂ ಘಾರಿಬಾಬಾದಿ, ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯ್, ರಾಯಭಾರಿ ರೆಜಾ ಅಮಿರಿ ಮೊಘದಂ ಅವರು ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಪಾಕಿಸ್ತಾನ ಗೃಹ ಸಚಿವ ಮೊಹಸಿನ್ ನಖ್ವಿ ಮತ್ತು ಇತರ ಅಧಿಕಾರಿಗಳು ಇದ್ದರು ಎಂದು ಇರಾನ್‌ನ ರಾಯಭಾರ ಕಚೇರಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದೆ.

ಯಾವ ವಿಷಯಗಳ ಕುರಿತು ಮಾತುಕತೆ ನಡೆಯಿತು ಎಂಬುದನ್ನು ಅದು ಹಂಚಿಕೊಂಡಿಲ್ಲ.

ನಮ್ಮ ಅಭಿಪ್ರಾಯ ತಿಳಿಸಿದ್ದೇವೆ: ‘ಇರಾನ್ ಮತ್ತು ಅಮೆರಿಕ ಜತೆಗೆ ಯಾವುದೇ ಸಭೆಯ ನಿಗದಿಯಾಗಿಲ್ಲ. ಇರಾನ್ ತನ್ನ ಅಭಿಪ್ರಾಯ ಮತ್ತು ಅವಲೋಕನಗಳನ್ನು ಪಾಕಿಸ್ತಾನಕ್ಕೆ ತಿಳಿಸಿದೆ’ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರ ನೇತೃತ್ವದ ನಿಯೋಗ ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ನೇತೃತ್ವದ ನಿಯೋಗವನ್ನು ಶನಿವಾರ ಭೇಟಿಯಾಗಿ ಮಾತುಕತೆ ನಡೆಸಿತು —ಎಎಫ್‌ಪಿ ಚಿತ್ರ

ಇಸ್ಲಾಮಾಬಾದ್ ಪ್ರವಾಸ ಕೈಗೊಳ್ಳುವುದಕ್ಕೂ ಮುನ್ನ ಅರಾಘ್ಚಿ ಅವರು, ‘ಇಸ್ಲಾಮಾಬಾದ್, ಮಸ್ಕತ್ ಮತ್ತು ಮಾಸ್ಕೊಗೆ ಪ್ರವಾಸ ಕೈಗೊಳ್ಳುತ್ತಿದ್ದೇನೆ. ದ್ವಿಪಕ್ಷೀಯ ವಿಷಯಗಳಲ್ಲಿ ನಮ್ಮ ಪಾಲುದಾರರ ಜತೆ ನಿಕಟವಾಗಿ ಸಮನ್ವಯ ಸಾಧಿಸುವುದು ಇದರ ಉದ್ದೇಶವಾಗಿದೆ. ಅಲ್ಲದೆ ಪ್ರಾದೇಶಿಕ ಬೆಳವಣಿಗೆಗಳ ಕುರಿತು ಈ ವೇಳೆ ಸಮಾಲೋಚಿಸಲಾಗುವುದು. ನೆರೆ ಹೊರೆಯವರ ಜತೆ ಉತ್ತಮ ಸಂಬಂಧ ಹೊಂದುವುದು ನಮ್ಮ ಆದ್ಯತೆ’ ಎಂದು ಹೇಳಿದ್ದರು.

‘ನಿವೃತ್ತರು ವ್ಯವಸ್ಥೆಯ ಮಾರ್ಗದರ್ಶಕರು: ಸಿಜೆಐ ಸೂರ್ಯಕಾಂತ್

ಜೈಪುರ (ಪಿಟಿಐ): ‘ನ್ಯಾಯಾಂಗ ಮತ್ತು ಅದಕ್ಕೆ ಸಂಬಂಧಿಸಿದ ಸಂಸ್ಥೆಗಳು ಸಾರ್ವಜನಿಕ ನಂಬಿಕೆ ಹೊಂದಿದ್ದು, ಇದನ್ನು ಬಲಪಡಿಸುವುದು ಅವುಗಳ ಜವಾಬ್ದಾರಿಯಾಗಿದೆ’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಶನಿವಾರ ಇಲ್ಲಿ ಹೇಳಿದರು.

ನಿವೃತ್ತ ನ್ಯಾಯಾಧೀಶರ ಸಂಘವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸವಾಲಿನ ಸಮಯದಲ್ಲಿ ನಿವೃತ್ತರು ವ್ಯವಸ್ಥೆಗೆ ಮಾರ್ಗದರ್ಶನ ನೀಡುವ ಅರಿವಿನ ಜಲಾಶಯವಿದ್ದಂತೆ’ ಎಂದು ಬಣ್ಣಿಸಿದರು.

‘ಕಷ್ಟದ ಸಂದರ್ಭದಲ್ಲಿ ಯಾವುದು ಸರಿ– ತಪ್ಪು ಎಂಬುದರ ಕುರಿತಂತೆ ಮಾರ್ಗದರ್ಶನಕ್ಕಾಗಿ ನಾವು ಈ ಅನುಭವಿ ನಿವೃತ್ತ ನ್ಯಾಯಮೂರ್ತಿಗಳತ್ತ ನೋಡುತ್ತೇವೆ’ ಎಂದರು.

‘ನಿವೃತ್ತ ನ್ಯಾಯಾಧೀಶರು ಮಧ್ಯವರ್ತಿಗಳು ಹಾಗೂ ಮಧ್ಯಸ್ಥಗಾರರಾಗಿ ವಿಶೇಷವಾಗಿ ವಾಣಿಜ್ಯ, ಕೌಟುಂಬಿಕ ವಿಷಯಗಳಲ್ಲಿ ಸಲಹೆಗಾರರ ಪಾತ್ರವನ್ನು ನಿರ್ವಹಿಸುವ ಮೂಲಕ ನಾಗರಿಕರಿಗೆ ಹಕ್ಕುಗಳನ್ನು ತಿಳಿಸಬೇಕು’ ಎಂದರು.

‘ನಿವೃತ್ತ ನ್ಯಾಯಮೂರ್ತಿಗಳ ಅನುಭವವನ್ನು ಪರ್ಯಾಯ ವಿವಾದ ಪರಿಹಾರ (ಎಡಿಆರ್) ಕಾರ್ಯವಿಧಾನದಲ್ಲಿ ಬಳಸಿಕೊಳ್ಳಲು ರಚನಾತ್ಮಕ ರಾಷ್ಟ್ರೀಯ ಚೌಕಟ್ಟು ರಚಿಸುವಂತೆಯೂ’ ಸಿಜೆಐ ಸಲಹೆ ನೀಡಿದರು.

ನೌಕಾ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಯೋಗಾಲದ ವಿಶಾಖಪಟ್ಟಣ ಘಟಕಕ್ಕೆ ಹಸ್ತಾಂತರ

ದೇಶೀಯ ಟಾರ್ಪಿಡೊ ಹಸ್ತಾಂತರಿಸಿದ ಬಿಡಿಎಲ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭಾರತ್ ಡೈನಾಮಿಕ್ಸ್ ಲಿಮಿಟೆಡ್ (ಬಿಡಿಎಲ್) ದೇಶೀಯ ರಕ್ಷಣಾ ಸಲಕರಣೆಗಳ ಉತ್ಪಾದನೆಯಲ್ಲಿ ಮಹತ್ವದ ಮೈಲುಗಲ್ಲು ಸಾಧಿಸಿದೆ. ಭಾರಿ ತೂಕದ ವೈರ್ ಗೈಡೆಡ್ ಟಾರ್ಪಿಡೊವನ್ನು (ಸ್ಫೋಟಕಗಳನ್ನು ಒಳಗೊಂಡಿರುವ ಜಲಾಂತರ್ಗಾಮಿ ಶಸ್ತ್ರಾಸ್ತ್ರ) ನೌಕಾ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಯೋಗಾಲದ (ಎನ್‌ಎಸ್‌ಟಿಎಲ್) ವಿಶಾಖಪಟ್ಟಣ ಘಟಕಕ್ಕೆ ಹಸ್ತಾಂತರಿಸಿದೆ.

ಅತ್ಯಾಧುನಿಕ ನೌಕಾ ಶಸ್ತ್ರಾಸ್ತ್ರ ವ್ಯವಸ್ಥೆಯ ತಯಾರಿಕೆ ಮೂಲಕ ಭಾರತ ಸರ್ಕಾರದ ಆತ್ಮ ನಿರ್ಭರ ಭಾರತ ಉಪಕ್ರಮಕ್ಕೆ ಮತ್ತಷ್ಟು ಬಲ ನೀಡಿದೆ. ಈ ಟಾರ್ಪಿಡೊ ಸದಾ ಕಾಲ ಕಾರ್ಯಾಚರಣೆ, ಶೋಧ, ದಾಳಿ ಮತ್ತು ಮರುದಾಳಿಗೆ ಸನ್ನದ್ಧ ಸ್ಥಿತಿಯಲ್ಲಿರುತ್ತದೆ. ಇದು ಭಾರತದ ನೌಕಾಪಡೆಗೆ ಮತ್ತಷ್ಟು ಬಲ ನೀಡಲಿದೆ.

ಶತ್ರುಪಾಳಯದ ಯುದ್ಧನೌಕೆಗಳನ್ನು ನಾಶಪಡಿಸುವ ಜಲಾಂತರ್ಗಾಮಿ ಶಸ್ತ್ರಾಸ್ತ್ರಗಳಿಗೆ ಟಾರ್ಪಿಡೊ ಎನ್ನಲಾಗುತ್ತದೆ. ಇವುಗಳನ್ನು ನೀರಿನ ಮೇಲ್ಪದರ ಅಥವಾ ಒಳಗಡೆಯಿಂದ ಹಾರಿಸಲಾಗುತ್ತದೆ. ನಿರ್ದೇಶಿತ ಗುರಿಗೆ ಅಪ್ಪಳಿಸಿದಾಗ ಇಲ್ಲವೇ ಅವುಗಳ ಸಮೀಪ ಹೋದಾಗ ಈ ಸಿಡಿತಲೆಗಳು ಸ್ಫೋಟಗೊಳ್ಳುತ್ತವೆ.

ಟಾರ್ಪಿಡೊ ವಿಶೇಷತೆ

1.25 ಟನ್–ಟಾರ್ಪಿಡೊ ತೂಕ

250 ಕೆ.ಜಿ ಸಿಡಿತಲೆ ಹೊರುವ ಸಾಮರ್ಥ್ಯ

38 ನಾಟ್–ಶಸ್ತ್ರಾಸ್ತ್ರ ಸಾಗುವ ವೇಗ

ವಿಶಾಖಪಟ್ಟಣದ ಎನ್‌ಎಸ್‌ಟಿಎಲ್‌ನಿಂದ ವಿನ್ಯಾಸ

ದೇಶದ ಮೊದಲ ಖಾಸಗಿ ಕಕ್ಷೀಯ ರಾಕೆಟ್‌ಗೆ ಚಾಲನೆ

ಹೈದರಾಬಾದ್: ಖಾಸಗಿಯಾಗಿ ಅಭಿವೃದ್ಧಿಪಡಿಸಿದ ಭಾರತದ ಮೊದಲ ಕಕ್ಷೀಯ ರಾಕೆಟ್ ವಿಕ್ರಮ್–1ಕ್ಕೆ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರು ಹೈದರಾಬಾದ್‌ನ ಸ್ಪೇಸ್–ಟೆಕ್ ಸ್ಟಾರ್ಟ್‌ಪ್ ‘ಸ್ಕೈರೂಟ್ ಏರೊಸ್ಪೇಸ್’ನಿಂದ ಶನಿವಾರ ಚಾಲನೆ ನೀಡಿದರು.

ಈ ರಾಕೆಟ್ ಸದ್ಯ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದತ್ತ ಸಾಗಿ ಬರುತ್ತಿದೆ.

‘ಮುಂದಿನ ಉಡಾವಣೆಗಳು ಭಾರತದ ಖಾಸಗಿ ಬಾಹ್ಯಾಕಾಶ ವಲಯದಲ್ಲಿ ಮಹತ್ವದ ಮೈಲುಗಲ್ಲುಗಳಾಗಲಿವೆ’ ಎಂದು ಸ್ಕೈರೂಟ್ ಸಹ ಸಂಸ್ಥಾಪಕ ಮತ್ತು ಸಿಇಒ ಪವನ್ ಕುಮಾರ್ ಚಂದನಾ ವರ್ಣಿಸಿದರು.

ವಿಕ್ರಮ್–1 ಬಹುಹಂತದ ಉಡಾವಣಾ ವಾಹನವಾಗಿದ್ದು, 350 ಕೆ.ಜಿ. ತೂಕದ ಸಣ್ಣ ಉಪಗ್ರಹಗಳನ್ನು ಭೂಮಿಯ ಕೆಳಹಂತದ ಕಕ್ಷೆಗೆ ಕೊಂಡೊಯ್ಯುವ ಸಾಮರ್ಥ್ಯವನ್ನು ಹೊಂದಿದೆ.

ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರು ಹೈದರಾಬಾದ್‌ನ ಸ್ಪೇಸ್–ಟೆಕ್ ಸ್ಟಾರ್ಟ್‌ಪ್ ಸ್ಕೈರೂಟ್ ಏರೊಸ್ಪೇಸ್‌ನಿಂದ ವಿಕ್ರಮ್–1ಕ್ಕೆ ಶನಿವಾರ ಚಾಲನೆ ನೀಡಿದರು

ಇರಾನ್: ಮತ್ತೊಬ್ಬ ವ್ಯಕ್ತಿಗೆ ಗಲ್ಲು

ದುಬೈ (ಎಪಿ): ಇಸ್ರೇಲ್‌ನ ಮೊಸಾದ್ ಜೊತೆಗೆ ಸಂಬಂಧ ಹೊಂದಿದ್ದ ಮತ್ತು ಜನವರಿಯಲ್ಲಿ ನಡೆದ ಸರ್ಕಾರಿ ವಿರೋಧಿ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದ ಆರೋಪದ ಮೇಲೆ ವ್ಯಕ್ತಿಯೊಬ್ಬರನ್ನು ಇರಾನ್ ಶನಿವಾರ ಗಲ್ಲಿಗೇರಿಸಿದೆ.

ಇರ್ಫಾನ್ ಕಿಯಾನಿ ಗಲ್ಲು ಶಿಕ್ಷೆಗೊಳಗಾದ ವ್ಯಕ್ತಿ.

ಜನವರಿ ವೇಳೆ ಅಸ್ಫಾನ್ ನಗರದಲ್ಲಿ ಭದ್ರತಾ ಪಡೆಗಳ ಮೇಲಿನ ದಾಳಿ ಸೇರಿದಂತೆ ಇತರ ಆರೋಪಗಳಲ್ಲಿ ಇರ್ಫಾನ್ ದೋಷಿ ಎಂದು ಇರಾನ್‌ನ ನ್ಯಾಯಾಂಗ ಸುದ್ದಿ ಸಂಸ್ಥೆ ಮೀಝಾನ್ ಘೋಷಿಸಿದೆ.

ಇರ್ಫಾನ್ ಮೊಸಾದ್‌ಗಾಗಿ ಕಾರ್ಯಾಚರಣೆ ನಡೆಸುತ್ತಿದ್ದ ಎಂದು ಸುದ್ದಿ ಸಂಸ್ಥೆಯು ಯಾವುದೇ ಪುರಾವೆಗಳನ್ನು ನೀಡದೆ ಹೇಳಿಕೊಂಡಿದೆ.

ಇತ್ತೀಚೆಗೆ ಇರಾನ್‌ನಲ್ಲಿ ಪ್ರತಿಭಟನಾಕಾರರನ್ನು ಮತ್ತು ಇರಾನ್ ಗಡಿಪಾರು ಮಾಡಿದ ವಿರೋಧಿ ಗುಂಪಿನೊಂದಿಗೆ ಸಂಬಂಧ ಹೊಂದಿದ್ದವರನ್ನು ಗೂಢಚಾರರು ಎಂದು ಆರೋಪಿಸಿ ಗಲ್ಲಿಗೇರಿಸಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore

SITES FOR SALE
30x40 sites in D&E Block, Vijayanagar 3rd Stage, Mysore
80x43 Commercial Site South-East corner in 80ft-60ft road, Mysore
Also available 20x30, 30x43, 40x50, 40x75, 46x83, 15 years old layout, in middle of Vasathnagar, Mysore
Contact: 97419 05998

House

Yelahanka

ಸೈಟ್ ಮಾರಾಟಕ್ಕಿದೆ 45x35 ಪೂರ್ವ/ ಉತ್ತರ ಮೂಲೆ ನಿವೇಶನ, ನಿಸರ್ಗ ಬಡಾವಣೆ, ಅನಂತಪುರ, ಯಲಹಂಕ, ಬೆಂಗಳೂರು. ಸಂಪರ್ಕಿಸಿ: 9241385139.

CONNECT

ಬಾಡಿಗೆ, ಲೀಸ್ ಅಥವಾ ಖರೀದಿಗೆ ಜಾಗ ಬೇಕಾಗಿದೆ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನ್ ಸೊಸೈಟಿ, ಉಜಿರೆ, ಬೆಂಗಳೂರಿನಲ್ಲಿ ಶಾಲೆ ನಿರ್ಮಿಸಲು ಒಂದರಿಂದ ಎರಡು ಎಕರೆ ಜಾಗ ಬಾಡಿಗೆ / ಲೀಸ್ ಅಥವಾ ಖರೀದಿಗೆ ಬನ್ನೇರುಘಟ್ಟ ರಸ್ತೆ (ಬನ್ನೇರುಘಟ್ಟ ಮೆಟ್ರೋ ಸ್ಟೇಷನ್ ನಿಂದ 10 ಕಿ.ಮೀ. ಒಳಗೆ) ಯಿಂದ ಎಲೆಕ್ಟ್ರಾನಿಕ್ಸ್ ಸಿಟಿ ಮಧ್ಯ ಭಾಗದಲ್ಲಿ ಜಾಗ ಬೇಕಾಗಿದೆ. ಇಚ್ಛಿಸಿದವರು ಈ ಕೆಳಗೆ ಸಂಪರ್ಕಿಸಿ.
ಧರ್ಮಸ್ಥಳದ ಬೆಂಗಳೂರು ಅಫೀಸ್
ದೂರವಾಣಿ ಸಂಖ್ಯೆ: 9845324503
ಇ-ಮೇಲ್ : kuduma19@gmail.com

ಉದ್ಯೋಗಾವಕಾಶ

Security & Detectives

ಬೇಕು: ಸೆಕ್ಯುರಿಟಿ ಗಾರ್ಡ್‌ಗಳು/ಮೇಲ್ವಿಚಾರಕರು ತುರ್ತು 10ನೇ/ 12ನೇ ಉತ್ತೀರ್ಣ ವೇತನ: Rs 20,400/ Rs 20,800 8 ಗಂಟೆಗಳ 26 ದಿನಗಳ ESI PF ಹೆಚ್ಚುವರಿ. ದೂರವಾಣಿ: 8754440730/ 9384842068/ 8939815417

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

General

WANTED 1 ACRE TO 100 ACRE LAND. CONTACT : 87548 09650 /93637 61543

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 01.05.2026 06ದಿನಗಳು ಸಂಪೂರ್ಣ ಅಹೋಬಲಂ ನವನಾರಸಿಂಹ,ಶ್ರೀಶೈಲಂ ಮಹಾನಂದಿ,ಯಾಗಂಟಿ ಬೇಲಂಗುಹೆ,ಗಂಡಿಕೋಟ ಮಂತ್ರಾಲಯ.06.05.2026 12ದಿನಗಳು ಅಖಂಡ ಕೇರಳ ರಾಜ್ಯ ಕನ್ಯಾಕುಮಾರಿ,ರಾಮೇಶ್ವರಂ ಮಧುರೈ.23.05.2026 10ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯ ಪ್ರವಾಸ. 16.05.2026 07ದಿನಗಳು ಕಾಶಿ,ಅಯೋಧ್ಯೆ,ಪ್ರಯಾಗ್ ಗಯಾ.20.05.2026 12ದಿನಗಳು ಆದಿಕೈಲಾಸ.ಓಂಪರ್ವತ ನೈನಿತಾಲ್,ಇತರೆ. 8073824856 9206979202 9606032154

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ರಾಷ್ಟ್ರೀಯ ಶರಣಾಗತಿ ಸಂಘ’

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿರುದ್ಧ ಕಾಂಗ್ರೆಸ್, ರಾಹುಲ್ ಗಾಂಧಿ ಕಿಡಿ

ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ‘ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ‘ರಾಷ್ಟ್ರೀಯ ಶರಣಾಗತಿ ಸಂಘ’ ವಾಗಿ ಮಾರ್ಪಟ್ಟಿದೆ. ರಾಮ್ ಮಾಧವ್ ಅವರೇ ಆರ್‌ಎಸ್‌ಎಸ್‌ನ ನಕಲಿ ರಾಷ್ಟ್ರೀಯತೆ ಹಾಗೂ ಅಮೆರಿಕದ ವಿಷಯದಲ್ಲಿ ಅದರ ಶುದ್ಧ ಗುಲಾಮಗಿರಿಯನ್ನು ಬಹಿರಂಗಪಡಿಸಿದ್ದಾರೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಅಮೆರಿಕದಲ್ಲಿ ಇತ್ತೀಚೆಗೆ ಹಡ್ಸನ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಆರ್‌ಎಸ್‌ಎಸ್ ಮುಖಂಡ ರಾಮ್ ಮಾಧವ್ ಅವರು ಮಾತನಾಡಿದ ವಿಡಿಯೊವನ್ನು ಹಂಚಿಕೊಂಡು, ರಾಹುಲ್ ಗಾಂಧಿ ಈ ಆರೋಪ ಮಾಡಿದ್ದಾರೆ.

‘ಅಮೆರಿಕದ ಒತ್ತಡದಂತೆ ಇರಾನ್ ಹಾಗೂ ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ನಿಲ್ಲಿಸಲು ಭಾರತ ನಿರ್ಧರಿಸಿದೆ. ಅಮೆರಿಕವು ವಿಧಿಸಿರುವ ಹೆಚ್ಚಿನ ಸುಂಕವನ್ನು ಒಪ್ಪಿಕೊಂಡಿದೆ’ ಎಂದು ರಾಮ್ ಮಾಧವ್ ಅವರು ಹೇಳಿದ ಮಾತು ವಿಡಿಯೊದಲ್ಲಿದೆ.

ಈ ವಿಚಾರ ವಿವಾದ ಸ್ವರೂಪ ಪಡೆಯುತ್ತಿದ್ದಂತೆಯೇ, ರಾಮ್ ಮಾಧವ್ ಕ್ಷಮೆ ಕೋರಿ ಸ್ಪಷ್ಟನೆ ನೀಡಿದ್ದಾರೆ.

‘ನಾನು ಹೇಳಿರುವುದು ವಾಸ್ತವದಲ್ಲಿ ತಪ್ಪಾಗಿದೆ. ರಷ್ಯಾದಿಂದ ಕಚ್ಚಾತೈಲ ಖರೀದಿ ನಿಲ್ಲಿಸಲು ಒಪ್ಪಿಲ್ಲ, ಅಮೆರಿಕ ವಿಧಿಸಿರುವ ಶೇಕಡ 50ರಷ್ಟು ಸುಂಕಕ್ಕೆ ಭಾರತವು ತೀವ್ರ ಪ್ರತಿಭಟನೆ ದಾಖಲಿಸಿದೆ’ ಎಂದು ರಾಮ್ ಮಾಧವ್ ಹೇಳಿದ್ದಾರೆ.

ವೇಣುಗೋಪಾಲ್ ಆಕ್ರೋಶ: ‘ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಹುದ್ದೆಯಲ್ಲಿ ಮುಂದುವರಿಯುವ ಅಧಿಕಾರವನ್ನು ಕಳೆದುಕೊಂಡಿದ್ದಾರೆ. ಮೋದಿ ಅವರು ವಾಷಿಂಗ್ಟನ್‌ನ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎನ್ನುವುದು ರಾಮ್ ಮಾಧವ್ ಹೇಳಿಕೆಯಿಂದ ಸಾಬೀತಾಗಿದೆ’ ಎಂದು ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್ ಟೀಕಿಸಿದ್ದಾರೆ.

‘ಜಾಗತಿಕ ವೇದಿಕೆಯಲ್ಲಿ ಭಾರತವು ತನ್ನ ಸ್ವತಂತ್ರ ಧ್ವನಿಯನ್ನು ಕಳೆದುಕೊಂಡಿದೆ. ಒಂದು ಕಾಲದಲ್ಲಿ ಅಮೆರಿಕ ಏಳನೇ ನೌಕಪಡೆಯು ಬಂಗಾಳದಲ್ಲಿತ್ತು. ಆಗ ಭಾರತವು ಅದಕ್ಕೆ ಮಣಿದಿರಲಿಲ್ಲ. ರಾಜಿ ಮಾಡಿಕೊಂಡ ಪ್ರಧಾನಿ ಮೋದಿ ಅವರು ಭಾರತದ ಸಾರ್ವಭೌಮತ್ವವನ್ನು ಅಮೆರಿಕಕ್ಕೆ ಹಸ್ತಾಂತರಿಸಿದ್ದಾರೆ’ ಎಂದು ಕಿಡಿಕಾರಿದ್ದಾರೆ.

‘4 ಮಕ್ಕಳಿರಲಿ, ಒಂದನ್ನು ಆರ್‌ಎಸ್‌ಎಸ್‌ಗೆ ಸೇರಿಸಿ’

ಮುಂಬೈ: ‘ಮರಾಠರ ರಾಜ ಛತ್ರಪತಿ ಶಿವಾಜಿ ಮಹಾರಾಜರು ತಮ್ಮ ರಾಜ್ಯವನ್ನು ಆಧ್ಯಾತ್ಮಿಕ ಗುರು ಸಮರ್ಥ ರಾಮದಾಸರಿಗೆ ಅರ್ಪಿಸಲು ಮುಂದಾಗಿದ್ದರು’ ಎಂದು ಮಧ್ಯಪ್ರದೇಶದ ಬಾಗೇಶ್ವರ ಧಾಮದ ಪೀಠಾಧೀಶ ಧೀರೇಂದ್ರಕೃಷ್ಣಶಾಸ್ತ್ರಿ ಹೇಳಿಕೆ ನೀಡಿದ್ದಾರೆ.

‘ಭಾರತೀಯರು ನಾಲ್ಕು ಮಕ್ಕಳನ್ನು ಹೆರಬೇಕು, ಇದರಲ್ಲಿ ಒಂದು ಮಗುವನ್ನು ಆರ್‌ಎಸ್‌ಎಸ್‌ಗೆ ಸೇರಿಸಬೇಕು’ ಎಂದು ಇದೇ ವೇಳೆ ಹೇಳಿದ್ದಾರೆ.

ನಾಗ್ಪುರದಲ್ಲಿ ಶುಕ್ರವಾರ ರಾತ್ರಿ ನಡೆದ ‘ಭಾರತ್ ದುರ್ಗಾ ಶಕ್ತಿಸ್ಥಳ’ ದೇವಾಲಯದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

‘ತಮ್ಮ ಜೀವನದ ಕೊನೆ ದಿನಗಳ ಯುದ್ಧಗಳಲ್ಲಿ ದಣಿದಿದ್ದ ಶಿವಾಜಿ ಮಹಾರಾಜರು ತಮ್ಮ ಆಡಳಿತದ ಜವಾಬ್ದಾರಿಯನ್ನು ಮರಾಠರ ರಾಜ ಸಂತ ರಾಮದಾಸ್ ಅವರಿಗೆ ವಹಿಸಲು ನಿರ್ಧರಿಸಿದ್ದರು’ ಎಂದು ಹೇಳಿದ್ದಾರೆ.

ಶಿವಾಜಿ ಮಹಾರಾಜರ ಕುರಿತಂತೆ ಹೇಳಿಕೆ ನೀಡಿದ ಬೆನ್ನಲ್ಲೇ, ವಿವಾದದ ಸ್ವರೂಪ ಪಡೆದುಕೊಂಡಿದೆ.

‘ನಮಗೆ ಲಭ್ಯವಿರುವ ಐತಿಹಾಸಿಕ ದಾಖಲೆ, ಪುಸ್ತಕಗಳಲ್ಲಿ ಈ ವಿಚಾರದ ಪ್ರಸ್ತಾಪವಿಲ್ಲ. ಮಹಾನ್ ವ್ಯಕ್ತಿಗಳ ಕುರಿತ ಕಥೆಯು ಕಾಲಕ್ರಮೇಣ ವಿಭಿನ್ನವಾಗಿ ವಿಕಸನಗೊಳ್ಳುತ್ತವೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳುವ ಮೂಲಕ ವಿವಾದ ತಣ್ಣಗಾಗಿಸಲು ಮುಂದಾಗಿದ್ದಾರೆ.

ವಿರೋಧ ಪಕ್ಷಗಳ ಕಿಡಿ: ‘ಜಗದ್ಗುರು ಸಂತ ಮಹಾರಾಜರು, ಸಂತ ಧ್ಯಾನೇಶ್ವರ ಮೌಳಿ ಸೇರಿದಂತೆ ಹಲವರ ಕುರಿತಂತೆ ಧೀರೇಂದ್ರ ಶಾಸ್ತ್ರಿ ಈ ಹಿಂದೆಯೂ ವಿಷ ಕಕ್ಕಿದ್ದರು. ಮಹಾರಾಷ್ಟ್ರದ ಸಂತ ಪರಂಪರೆಯನ್ನು ಅವಹೇಳನ ಮಾಡುವುದೇ ಒಂದು ಹಂತದ ಕಾರ್ಯಸೂಚಿಯಾಗಿದೆ. ಅವರೆಂದೂ ಕೂಡ ಮಹಾರಾಷ್ಟ್ರದಲ್ಲಿ ಕಾಣಿಸಿಕೊಳ್ಳಬಾರದು. ಇಲ್ಲದಿದ್ದರೆ, ಅವರು ಹಾಗೂ ಸರ್ಕಾರ ಭಾರಿ ಬೆಲೆ ತೆರಬೇಕಾಗುತ್ತದೆ’ ಎಂದು ಎನ್‌ಸಿಪಿ (ಎಸ್‌ಪಿ) ಶಾಸಕ ರೋಹಿತ್ ಪವಾರ್ ಎಚ್ಚರಿಕೆ ನೀಡಿದ್ದಾರೆ.

ಕೇಜ್ರಿವಾಲ್ ಐಷಾರಾಮಿ ಜೀವನ: ಬಿಜೆಪಿ ಆರೋಪ

ನವದೆಹಲಿ (ಪಿಟಿಐ): ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರಿಗೆ ಲೋಧಿ ಎಸ್ಟೇಟ್‌ನಲ್ಲಿ ನೀಡಿರುವ ಬಂಗಲೆಯನ್ನು ‘ಶೀಶ ಮಹಲ್–2’ ಎಂದು ಬಿಜೆಪಿ ಕರೆದಿದೆ.

ಖಾಸಗಿ ಹಣವನ್ನು ವ್ಯಯಿಸಿ ಹಲವು ಅತ್ಯಾಧುನಿಕ ಸೌಕರ್ಯ ನಿರ್ಮಿಸಲಾಗಿದೆ ಎಂದು ಆರೋಪಿಸಿ, ಈ ವಿಚಾರಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್ ಅವರ ವಿರುದ್ಧವಾಗ್ದಾಳಿ ನಡೆಸಿದೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ದೆಹಲಿ ಲೋಕೋಪಯೋಗಿ ಇಲಾಖೆ ಸಚಿವ ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ ಅವರು, ‘ಕೇಜ್ರಿವಾಲ್ ಅವರು ಐಷಾರಾಮಿ ಜೀವನ ಸಾಗಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಧುರಂಧರ’ರು (ದೆಹಲಿಯ ಮತದಾರರು) ಶೀಶ ಮಹಲ್‌ನಿಂದ ಕೇಜ್ರಿವಾಲ್ ಅವರನ್ನು ಓಡಿಸಿದ ಬಳಿಕ, ಪಂಜಾಬ್‌ಗೆ ಸ್ಥಳಾಂತರಗೊಂಡಿದ್ದಾರೆ. ಅಲ್ಲೊಂದು ಬಂಗಲೆ ಪಡೆದಿದ್ದಾರೆ. ಅದನ್ನು ಶೀಶ ಮಹಲ್–2 ಆಗಿ ಪರಿವರ್ತಿಸಿದ್ದಾರೆ’ ಎಂದು ಹೇಳಿದರು.

ಕೇಂದ್ರ ಸರ್ಕಾರವು ಕೇಜ್ರಿವಾಲ್ ಅವರಿಗೆ ಹಂಚಿಕೆ ಮಾಡಿರುವ ಬಂಗಲೆ ಫೋಟೊಗಳನ್ನು ಹಂಚಿಕೊಂಡಿರುವ ಅವರು, ‘ಕೇಂದ್ರೀಯ ಲೋಕೋಪಯೋಗಿ ಇಲಾಖೆಯು ಬಂಗಲೆಗೆ ಇಷ್ಟು ಹಣವನ್ನು ವ್ಯಯಿಸಿಲ್ಲ. ಖಾಸಗಿ ಹಣ ಬಳಸಿ ಅತ್ಯಾಧುನಿಕ ಸೌಕರ್ಯಗಳನ್ನು ಮಾಡಿಸಿಕೊಳ್ಳಲಾಗಿದೆ’ ಎಂದರು.

ಬಂಗಲೆಯ ಮೇಲೆ ಎಷ್ಟು ಹಣ ವ್ಯಯಿಸಲಾಗಿದೆ ಎಂದು ಎಎಪಿ ಮತ್ತು ಕೇಜ್ರಿವಾಲ್ ಅವರು ಉತ್ತರಿಸಬೇಕು ಎಂದು ಅವರು ಒತ್ತಾಯಿಸಿದರು.

ಫೋಟೊಗಳು ನಕಲಿ: ಎಎಪಿ

‘ಶೀಶ ಮಹಲ್–2’ ಎಂಬ ಬಿಜೆಪಿಯ ಆರೋಪವನ್ನು ಎಎಪಿ ಅಲ್ಲಗಳೆದಿದೆ.

ಎಎಪಿ ನಾಯಕಿ ಆತಿಶಿ ಅವರು ‘ಎಕ್ಸ್’ನಲ್ಲಿ, ‘ಪರ್ವೇಶ್ ವರ್ಮಾ ಅವರು ಬಿಡುಗಡೆ ಮಾಡಿರುವ ಫೋಟೊಗಳು ನಕಲಿ. ಅವುಗಳು ಕೇಜ್ರಿವಾಲ್ ಅವರ ನಿವಾಸದ ಫೋಟೊಗಳಲ್ಲ’ ಎಂದು ಹೇಳಿದ್ದಾರೆ.

‘ಯಾರ ಮನೆ ಎಷ್ಟು ಐಷಾರಾಮಿ ಆಗಿದೆ ಎಂದು ತಿಳಿಯಲು, ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರ ನಿವಾಸಕ್ಕೆ ಪ್ರವೇಶ ನೀಡಲಿ. ಕೇಜ್ರಿವಾಲ್ ಅವರ ನಿವಾಸವು ಮುಕ್ತವಾಗಿದೆ. ನಂತರ ಜನರೇ ಅದನ್ನು ನಿರ್ಧರಿಸುತ್ತಾರೆ’ ಎಂದು ಹೇಳಿದ್ದಾರೆ.

ಟಿಆರ್‌ಎಸ್ ಕಟ್ಟಿದ ಕೆಸಿಆರ್ ಪುತ್ರಿ

ಹೈದರಾಬಾದ್ (ಪಿಟಿಐ): ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಅಧ್ಯಕ್ಷ ಮತ್ತು ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರ ಪುತ್ರಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯೆ ಕಲ್ವಕುಂಟ್ಲ ಕವಿತಾ ಅವರು ಹೊಸ ರಾಜಕೀಯ ಪಕ್ಷ ‘ತೆಲಂಗಾಣ ರಾಷ್ಟ್ರ ಸೇನಾ’ (ಟಿಆರ್‌ಎಸ್) ಕಟ್ಟಿರುವುದಾಗಿ ಘೋಷಿಸಿದ್ದಾರೆ.

ಬಿಆರ್‌ಎಸ್ ಪಕ್ಷದಿಂದ ಅಮಾನತುಗೊಂಡ ಕೆಲವೇ ತಿಂಗಳುಗಳಲ್ಲಿ ಅವರು ಹೊಸ ಪಕ್ಷ ಸ್ಥಾಪಿಸಿದ್ದು, ತಂದೆ ಕೆಸಿಆರ್ ಪರಂಪರೆಯಿಂದ ಹಿಂದೆ ಸರಿದಿದ್ದಾರೆ. ಶನಿವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಹೆಸರು ಮತ್ತು ಕಾರ್ಯಸೂಚಿಯನ್ನು ಕವಿತಾ ಪ್ರಕಟಿಸಿದರು.

ಆಡಳಿತಾರೂಢ ಕಾಂಗ್ರೆಸ್, ಬಿಜೆಪಿ ಮತ್ತು ಬಿಆರ್‌ಎಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕವಿತಾ, ಈ ಮೂರೂ ಪಕ್ಷಗಳು ಭ್ರಷ್ಟಾಚಾರದಲ್ಲಿ ಮುಳುಗಿವೆ’ ಎಂದು ದೂರಿದರು.

₹5ಕ್ಕೆ ಊಟ: ಪ್ರಧಾನಿಗೆ ಟಿಎಂಸಿ ಆಹ್ವಾನ

ಬಂಗಾಳದ ಮಾ ಕ್ಯಾಂಟೀನ್‌ಗೆ ಬಂದು ತರಕಾರಿ ಊಟ ಸವಿಯಿರಿ: ಘೋಷ್

ಕೋಲ್ಕತ್ತ (ಪಿಟಿಐ): ಹೂಗ್ಲಿ ನದಿಯಲ್ಲಿ ದೋಣಿ ವಿಹಾರ ನಡೆಸಿ, ಬಂಗಾಳದ ಬೀದಿ ಬದಿಯ ಜನಪ್ರಿಯ ತಿನಿಸು ‘ಜಾಲ್ ಮುರಿ’ ಸವಿದಿರುವ ಪ್ರಧಾನಿ ಅವರನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ), ಅಲ್ಲಿನ ‘ಮಾ ಕ್ಯಾಂಟೀನ್’ಗೆ ಐದು ರೂಪಾಯಿಯ ಊಟ ಸವಿಯಲು ಆಹ್ವಾನಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟಿಎಂಸಿ ವಕ್ತಾರ ಕುನಾಲ್ ಘೋಷ್, ಪ್ರಧಾನಿ ಮೋದಿ ಅವರನ್ನು ಮಾ ಕ್ಯಾಂಟೀನ್‌ಗೆ ಊಟಕ್ಕೆ ಆಹ್ವಾನಿಸಿದರು.

‘ಪ್ರಧಾನಿ ಅವರೇ, ನಿಮಗೆ ಮಾ ಕ್ಯಾಂಟೀನ್‌ನಲ್ಲಿ ಮಧ್ಯಾಹ್ನ ₹5ಕ್ಕೆ ಅನ್ನ, ಬೇಳೆ, ತರಕಾರಿಯೊಂದಿಗೆ ಸ್ವಾದಿಷ್ಟ ಊಟ ಸಿಗುತ್ತದೆ. ನಿಮ್ಮೊಂದಿಗೆ ಇನ್ನೊಬ್ಬರಿದ್ದರೆ ₹10ಕ್ಕೆ ಇಬ್ಬರಿಗೂ ಊಟ ಸಿಗುತ್ತದೆ’ ಎಂದು ರಾಜ್ಯಸಭೆಯ ಮಾಜಿ ಸಂಸದರೂ ಆಗಿರುವ ಕುನಾಲ್ ಘೋಷ್ ಹೇಳಿದ್ದಾರೆ.

ಮೋದಿ ಅವರು ಬಂಗಾಳದ ಬೀದಿ ಬದಿಯ ಅಂಗಡಿಯಿಂದ ‘ಜಾಲ್‌ಮುರಿ’ ರುಚಿ ನೋಡಿದ್ದಾರೆ. ಈ ಅಂಗಡಿ ಇಟ್ಟುಕೊಳ್ಳಲು ವ್ಯಾಪಾರಿಗೆ ನೆರವು ನೀಡಿದ್ದು ಮಮತಾ ಬ್ಯಾನರ್ಜಿ ಸರ್ಕಾರ ಎನ್ನುವುದು ನಿಮಗೆ ನೆನಪಿರಲಿ. ಹೂಗ್ಲಿ ನದಿಯ ನೀರು ಸ್ವಚ್ಛವಾಗಿದೆ ಹಾಗಾಗಿ ಮೋದಿ ಅವರು ಇಲ್ಲಿ ದೋಣಿ ವಿಹಾರ ನಡೆಸಿ ಛಾಯಾಚಿತ್ರಕ್ಕೆ ಪೋಸ್ ನೀಡಿದ್ದಾರೆ. ಆದರೆ, ದೆಹಲಿಯ ಯಮುನಾ ನದಿಯಲ್ಲಿ ನೀವು ಇದನ್ನು ಊಹಿಸಿಕೊಳ್ಳಲೂ ಆಗುವುದಿಲ್ಲ, ಅಷ್ಟೊಂದು ಮಾಲಿನ್ಯ ತುಂಬಿದೆ’ ಎಂದು ಅವರು ಕುಟುಕಿದ್ದಾರೆ.

‘ಬಂಗಾಳದ ಜನರು ಸಹಿಸುವುದಿಲ್ಲ’

‘ಪ್ರಧಾನಿ ಪಶ್ಚಿಮ ಬಂಗಾಳಕ್ಕೆ ಬಂದಾಗಲೆಲ್ಲ ‘ನುಸುಳುಕೋರರ’ ಸಮಸ್ಯೆ ಪ್ರಸ್ತಾಪಿಸುತ್ತಾರೆ. ಆ ಮೂಲಕ ಅಜಾಗರೂಕತೆಯಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೇ ಟೀಕಿಸುತ್ತಿದ್ದಾರೆ. ಯಾಕೆಂದರೆ ಶಾ ಜವಾಬ್ದಾರಿಯಲ್ಲಿ ಗಡಿ ಭದ್ರತೆಯೂ ಸೇರಿದೆ’ ಎಂದು ಕುನಾಲ್ ಘೋಷ್ ಹೇಳಿದರು.

ಪೌರತ್ವ ಸಾಬೀತುಪಡಿಸಲು ಸಾಧ್ಯವಾಗದ ಕಾರಣ, ನುಸುಳುಕೋರರ ಹೆಸರಿನಲ್ಲಿ ಬಿಜೆಪಿ ಸಾವಿರಾರು ಬಂಗಾಳಿ ಹಿಂದೂಗಳನ್ನು ಬಂಧಿಸಿದೆ. ಅಸ್ಸಾಂ ಮಾದರಿಯಲ್ಲಿ ಬಂಗಾಳದಲ್ಲೂ ಬಂಧನ ಶಿಬಿರಗಳನ್ನು ತೆರೆಯಲು ಹೊರಟಿದೆ. ಇದನ್ನು ಬಂಗಾಳದ ಜನತೆ ಸಹಿಸುವುದಿಲ್ಲ’ ಎಂದಿದ್ದಾರೆ.

ಪ್ರಜಾಮತ
ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2026

ಬಿಜೆಪಿ ಅಭ್ಯರ್ಥಿ ಸಿಂಗ್ ವಿರುದ್ಧ 119 ಕ್ರಿಮಿನಲ್ ಪ್ರಕರಣ

ಅರ್ಜುನ್ ಸಿಂಗ್

ಕೊಲ್ಕತ್ತಾ (ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ನೋಪಾರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅರ್ಜುನ್ ಸಿಂಗ್ ಅವರು, ಚುನಾವಣಾ ಅಫಿಡವಿಟ್‌ನಲ್ಲಿ ತಮ್ಮ ವಿರುದ್ಧ ಬಾಕಿ ಇರುವ 119 ಕ್ರಿಮಿನಲ್ ಪ್ರಕರಣಗಳನ್ನು ಉಲ್ಲೇಖಿಸಿದ್ದಾರೆ.

ಅರ್ಜುನ್ ಸಿಂಗ್ ವಿರುದ್ಧ 2019ರಲ್ಲಿ 24 ಪ್ರಕರಣಗಳು ಇದ್ದವು. ಇದು 7 ವರ್ಷಗಳಲ್ಲಿ ಹಲವು ಪಟ್ಟು ಹೆಚ್ಚಿದೆ ಎನ್ನುವುದು ಗಮನಾರ್ಹ.

ಬ್ಯಾರಕ್‌ಪೋರ್‌ನ ಮಾಜಿ ಸಂಸದರೂ ಆಗಿರುವ ಸಿಂಗ್, ನಾಮಪತ್ರದ ಜತೆಗೆ ತಮ್ಮ ಆದಾಯ, ಆಸ್ತಿ, ಸಾಲ ಮತ್ತಿತರ ಮಾಹಿತಿ ಒಳಗೊಂಡ ಸುದೀರ್ಘ 93 ಪುಟಗಳ ಅಫಿಡವಿಟ್ ಸಲ್ಲಿಸಿದ್ದಾರೆ. ಅಫಿಡವಿಟ್ ಪ್ರಕಾರ ಅವರ ವಾರ್ಷಿಕ ಆದಾಯವು ಕಳೆದ ಐದು ವರ್ಷಗಳಲ್ಲಿ ಭಾರಿ ಏರಿಳಿತ ಕಂಡಿದೆ.

2020–21ರಲ್ಲಿ ಅವರು ₹13.41 ಲಕ್ಷ ಆದಾಯ ಘೋಷಿಸಿಕೊಂಡಿದ್ದರು. 2021–22ರಲ್ಲಿ ಇದು ₹12.26 ಲಕ್ಷಕ್ಕೆ ಕುಸಿದಿದ್ದಾಗಿ ಹೇಳಿದ್ದಾರೆ. 2023–24ರಲ್ಲಿ ₹18.87 ಲಕ್ಷ ಆದಾಯ ಉಲ್ಲೇಖಿಸಿದ್ದ ಸಿಂಗ್ 2024–25ರಲ್ಲಿ ಈ ಆದಾಯ ಮತ್ತೆ ₹13.65 ಲಕ್ಷಕ್ಕೆ ಕುಸಿದಿದ್ದಾಗಿ ಹೇಳಿದ್ದಾರೆ.

ಸದ್ಯ ₹25 ಸಾವಿರ ನಗದು, ₹5 ಲಕ್ಷ ಠೇವಣಿ, ಕಂಪನಿಯೊಂದರಲ್ಲಿ ₹24 ಲಕ್ಷ ಹೂಡಿಕೆ, ಎನ್‌ಎಸ್‌ಸಿಯಲ್ಲಿ ₹1.65 ಲಕ್ಷ ಉಳಿತಾಯ, ಟೊಯೊಟಾ ಫಾರ್ಚೂನರ್ ಕಾರು, ₹3.89 ಲಕ್ಷ ಮೌಲ್ಯದ ಚಿನ್ನಾಭರಣ, ಜಗದಲ್ ಮತ್ತು ಚಂದನಗರ್‌ನಲ್ಲಿ ₹4 ಕೋಟಿ ಮೊತ್ತದ ಸ್ಥಿರಾಸ್ತಿ ಹೊಂದಿರುವುದಾಗಿ ಈ ಬಾರಿಯ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ಇಡೀ ಸಂಪುಟ ಬಂದರೂ ಗೆಲ್ಲಲಾಗದು’

ಮಮತಾ

‘ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಗೆಲ್ಲುವುದಕ್ಕಾಗಿ ಪ್ರಧಾನಿ ಸೇರಿದಂತೆ ಇಡೀ ಕೇಂದ್ರ ಸಂಪುಟವನ್ನೇ ಬಿಜೆಪಿ ನಿಯೋಜಿಸಿದೆ. ಜತೆಗೆ ಎನ್‌ಡಿಎ ಆಡಳಿತದ 19 ರಾಜ್ಯಗಳ ಮುಖ್ಯಮಂತ್ರಿಗಳೂ ಇಲ್ಲಿ ಪ್ರಚಾರಕ್ಕೆ ಮುಂದಾಗಿದ್ದಾರೆ. ಈ ಎಲ್ಲಾ ಆರ್ಭಟಗಳು ಮೇ 4ಕ್ಕೆ ನೆಲಕಚ್ಚಲಿವೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶನಿವಾರ ಹೇಳಿದ್ದಾರೆ.

ಹೂಗ್ಲಿ ಜಿಲ್ಲೆಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿರುವ ಮಮತಾ, ‘ಸುಮಾರು 50 ಹೆಲಿಕಾಪ್ಟರ್‌ಗಳು ಪಶ್ಚಿಮ ಬಂಗಾಳಕ್ಕೆ ಬಂದಿಳಿದಿದ್ದು, ಪ್ರಧಾನಿ ಸೇರಿದಂತೆ ಇಡೀ ಕೇಂದ್ರ ಸಂಪುಟವೇ ಬಂದಿದೆ. ಆದರೆ, ಟಿಎಂಸಿ ಮೂರು ಹೆಲಿಕಾಪ್ಟರ್‌ಗಳಲ್ಲೇ ಇಡೀ ರಾಜ್ಯದಾದ್ಯಂತ ಪ್ರಚಾರ ನಡೆಸುತ್ತಿದೆ’ ಎಂದಿದ್ದಾರೆ.

ಹೋದ ಕಡೆಯಲ್ಲೆಲ್ಲಾ ಕೇಂದ್ರ ಪಡೆಗಳು ಕಾಣುತ್ತಿದ್ದು, ಶಸ್ತ್ರ ಸಜ್ಜಿತ ವಾಹನಗಳನ್ನೂ ಅವರು ರಾಜ್ಯಕ್ಕೆ ತಂದಿದ್ದಾರೆ. ಎಲ್ಲಿ ಅವುಗಳ ಅವಶ್ಯಕತೆ ಇದೆಯೋ ಅಲ್ಲಿ ನಿಯೋಜಿಸಿಲ್ಲ ಎಂದೂ ಮಮತಾ ಟೀಕಿಸಿದ್ದಾರೆ.

‘ಬಿಜೆಪಿ ಅಧಿಕಾರಕ್ಕೆ ಬಂದರೆ ಟಿಎಂಸಿ ಬೆಂಬಲಿತ ಗೂಂಡಾಗಳನ್ನು ತಲೆಕೆಳಗಾಗಿ ನೇತುಹಾಕಲಾಗುವುದು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿರುವ ಬಗ್ಗೆಯೂ ಮಮತಾ ಕಿಡಿಕಾರಿದ್ದಾರೆ.

‘ಒಬ್ಬ ಗೃಹ ಸಚಿವ ಮತ್ತು ಜವಾಬ್ದಾರಿಯುತ ನಾಯಕರಾಗಿ ನೀವು ಅಂಥ ಮಾತುಗಳನ್ನು ಆಡಬಾರದು. ನೀವು ಭಯೋತ್ಪಾದಕರ ಭಾಷೆಯಲ್ಲಿ ಮಾತನಾಡುತ್ತಿದ್ದೀರಿ. ಇದಕ್ಕಾಗಿ ನಿಮ್ಮ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ ಎಂಬುದು ನನಗೆ ಗೊತ್ತು. ಆದರೂ. ನಿಮ್ಮ ಭಾಷಣದ ವಿಡಿಯೊಗಳನ್ನು ಮಾಡಿ, ಅದನ್ನೇ ನ್ಯಾಯಾಲಯದ ಮುಂದೆ ಇಡುವಂತೆ ನಾನು ನಮ್ಮವರಿಗೆ ಹೇಳಿದ್ದೇನೆ’ ಎಂದೂ ಮಮತಾ ಹೇಳಿದ್ದಾರೆ.

ಮಣಿಪುರ ಮುಖ್ಯಮಂತ್ರಿ ನಿವಾಸದ ಕಡೆಗೆ ಹೊರಟಿದ್ದ ಮೆರವಣಿಗೆ

ಪ್ರತಿಭಟನಕಾರರು, ಪೊಲೀಸರ ನಡುವೆ ಘರ್ಷಣೆ

ಇಂಫಾಲ್ (ಪಿಟಿಐ): ಗಲಭೆಪೀಡಿತ ಮಣಿಪುರದಲ್ಲಿ ಶಾಂತಿ ನೆಲಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮುಖ್ಯಮಂತ್ರಿ ನಿವಾಸದ ಕಡೆಗೆ ಮೆರವಣಿಗೆ ಹೊರಟಿದ್ದ ಸಾವಿರಾರು ಮಂದಿ ಪ್ರತಿಭಟನಕಾರರನ್ನು ಪೊಲೀಸರು ಶನಿವಾರ ತಡೆದಿದ್ದು, ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಕಾರ ನಡುವೆ ಘರ್ಷಣೆ ನಡೆಯಿತು.

ಬಳಿಕ, ಮುಖ್ಯಮಂತ್ರಿ ವೈ. ಖೇಮ್‌ಚಂದ್ ಸಿಂಗ್ ಅವರನ್ನು ಭೇಟಿ ಮಾಡಲು ಪ್ರತಿಭಟನಕಾರರ ಗುಂಪಿಗೆ ಅವಕಾಶ ಕಲ್ಪಿಸಿದ್ದು, ತಮ್ಮ ಬೇಡಿಕೆಗಳ ಕುರಿತು ಮನವಿ ಸಲ್ಲಿಸಿದರು.

ಮೈತೇಯಿ ಸಮುದಾಯವನ್ನು ಪ್ರತಿನಿಧಿಸುವ ಸಂಸ್ಥೆಗಳ ವೇದಿಕೆಯಾದ ‘ಮಣಿಪುರ ಏಕತೆ ಸಮನ್ವಯ ಸಮಿತಿ’ (ಸಿಒಸಿಒಎಂಐ) ನೇತೃತ್ವದಲ್ಲಿ ಪ್ರತಿಭಟನಕಾರರು ನಾಲ್ಕು ಪ್ರತ್ಯೇಕ ರ‍್ಯಾಲಿಗಳನ್ನು ಹಮ್ಮಿಕೊಂಡಿದ್ದರು. ಬಾಬುಪಾರ ಪ್ರದೇಶದಲ್ಲಿರುವ ಮುಖ್ಯಮಂತ್ರಿ ನಿವಾಸಕ್ಕೆ ಹೋಗುವ ನಾಲ್ಕು ದಿಕ್ಕುಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿದ್ದು, ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿತ್ತು.

ಇಂಫಾಲ್‌ದಲ್ಲಿ ಮುಖ್ಯಮಂತ್ರಿ ನಿವಾಸದ ಬಳಿಗೆ ಮೆರವಣಿಗೆಯಲ್ಲಿ ಬಂದ ಪ್ರತಿಭಟನಕಾರರನ್ನು ಪೊಲೀಸರು ತಡೆದರು ಪಿಟಿಐ ಚಿತ್ರ

ಮುಖ್ಯಮಂತ್ರಿ ನಿವಾಸದಿಂದ ಸುಮಾರು 2 ಕಿ.ಮೀ. ದೂರದಲ್ಲಿ ಪ್ರತಿಭಟನಕಾರರು ಬ್ಯಾರಿಕೇಡ್‌ಗಳನ್ನು ಭೇದಿಸಲು ಪ್ರಯತ್ನಿಸಿದಾಗ, ಭದ್ರತಾ ಪಡೆಗಳು ಅನೇಕ ಸುತ್ತು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು.

‘ಬಿಷ್ಣುಪುರ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಬಾಂಬ್ ಸ್ಫೋಟದಲ್ಲಿ ಮೃತಪಟ್ಟ ಇಬ್ಬರು ಮಕ್ಕಳಿಗೆ ನ್ಯಾಯ ಕಲ್ಪಿಸಬೇಕು ಮತ್ತು ಜನಾಂಗೀಯ ಸಂಘರ್ಷದಿಂದ ಬೇರೆಡೆಗೆ ಸ್ಥಳಾಂತರಗೊಂಡವರಿಗೆ ಪುನರ್ವಸತಿ ಕಲ್ಪಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ಪ್ರತಿಭಟನೆ ತೀವ್ರಗೊಳಿಸುತ್ತೇವೆ’: ಮುಖ್ಯಮಂತ್ರಿ ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಒಸಿಒಎಂಐ ಸಂಚಾಲಕ ವೈ.ಕೆ. ಧಿರೇನ್, ‘ಜನರ ಬೇಡಿಕೆ ಈಡೇರಿಕೆಗಾಗಿ ಸಂಘಟನೆ ಪ್ರತಿಭಟನೆ ತೀವ್ರಗೊಳಿಸುತ್ತದೆ. ಮಣಿಪುರ ಬಿಕ್ಕಟ್ಟಿಗೆ ಯಾವುದೇ ನಿರ್ದಿಷ್ಟ ಪರಿಹಾರ ದೊರೆತಿಲ್ಲ. ರಾಜಕೀಯ ಇಚ್ಛಾಶಕ್ತಿಯ ಕೊರತೆಯು ಶಾಂತಿ ಪ್ರಯತ್ನಗಳಿಗೆ ಅಡ್ಡಿಯಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

EXCELLENT MOODUBIDIRE
Kallabettu, Moodubidire-574227
76194 30144
99000 99652 / 653
www.excellentinstitution.org

Congratulations

II PUC STATE RANK ACHIEVERS
RESULT 100% | APPEARED 1112 | DISTINCTION 818 | 100 OUT OF 100 IN SUBJECTS 423

TANMAI A KOTI 597/600; K H ADITI BHUSHAN 597; SHEIKH M RAMIZ 595; SUVITH BHANDARI 594; SHRAVANI M 594; GOKUL M 593; POORVI P SHETTY 593
VARUN R 593; NAKSHA V PATEL 593; SUHANA SACHIN 593; HAMSIKA H S 592; SAMARTHA K S 592; SHYAMKALYAN B 592; THARUNIKA S 592
SATHWIK D BOYA 592; SHAMANTH K M 592; HRUTHIK M N 592; HARSHIT S KALAL 592; VIKRAM 592; SWARUPA M SHETTY 591; KUSUMA S 591
M R ASHMITHA R 591; KARTHIK S AGADI 591; HIMAVANTH P 590; GURUCHARAN M S 590; HIMESH S 590; BHARGAV S BHAT 590; NITHIN TALWAR 590
NIKHIL S S 589; LAAKSHYA Y 589; HEMA U 589; SANJANA H 589; RITISHA J K 589; NISHCHAYA PAI 589; SAMIKSHA P K 589
NAVEEN B M 589; CHINMAY G BELLUR 588; DHRUVANTH K 588; JAGADISH A H 588; KOMALA S K 588; NITHIN D V 588; SAMANVITHA P 588
CHINMAYI P 588; DHIKSHITH V 588; SUJAL S SHETTY 588

THE GROWTH STORY

	No. of Students at the Beginning of course 2023–24	No. of Students at Course End 2026
Above 98%	03	45
Above 95%	39	216
Above 90%	211	625
Above 85%	397	818

SSLC STATE RANK ACHIEVERS
RESULT 100% | APPEARED 203 | DISTINCTION 151 | ABOVE 600+ 45 STUDENTS | 100 OUT OF 100 IN SUBJECTS 141

SACHIN D NAIK 622; NAKSHATRA V 620; GAGAN PATIL 618; DEVANAND H G BIRADAR 618; ANMOL R PATIL 618
PRATEEK SANGRESHI 617; C HARIPREETH V PAI 616; AARYAN KUMAR HALLI 616; AKANKSH M JAIN 616

ADMISSIONS OPEN
LONG TERM NEET RESIDENTIAL BATCH 2027

6th to 10th Std TOPPERS
Are you aiming to join IIT / AIIMS / AFMC / JIPMER ...
Join "SUPER 36" BATCH
STATE / CBSE

COLLEGE "TOPPERS BATCH"
SCHOLARSHIP UPTO 2.7 LAKH
96% & above (State) and 94% & above (CBSE or ICSE) in 10th Std. only

ವಿಶಿಷ್ಟ ಆಟವಿದು!

ಈ ಆಟದಲ್ಲಿ ಅಂಪೈರ್, ರೆಫರಿ ಇರುವುದಿಲ್ಲ. ಮನಸ್ತಾಪ, ಜಗಳಕ್ಕೆ ಅವಕಾಶ ನೀಡದೆ ಎಲ್ಲವನ್ನೂ ಕ್ರೀಡಾಪಟುಗಳೇ ನಿಭಾಯಿಸಬೇಕು. ಯಾವುದೀ ಆಟ?

11

ಗುರ್ತು ಹಾಕೀನಿ ಕಣಣ್ಣೋ...

ಅಕ್ಕಿರಾಂಪುರ ಕುರಿ–ಮೇಕೆ ಸಂತೆಯೊಳ್...

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಅಕ್ಕಿರಾಂಪುರ ಕುರಿ–ಮೇಕೆ ಸಂತೆಯಲ್ಲಿ ಬೆಲೆ ಅಂದರೆ ಕೇವಲ ವ್ಯವಹಾರವಲ್ಲ; ಅದರ ಹಿಂದೆ ರೈತರ ಶ್ರಮ, ಸಾಲ, ನಿರೀಕ್ಷೆಗಳ ಕಥೆಗಳಿವೆ. ಬೇಡಿಕೆಯ ಏರಿಳಿತವೇ ಅವರ ಜೇಬಿನ ಗಾತ್ರವನ್ನು ನಿರ್ಧರಿಸುವ ಈ ಸಂತೆಯ ನಿಜವಾದ ವೈಶಿಷ್ಟ್ಯ ಏನು? ಈ ಕುರಿತಾದ ಒಳನೋಟ ಇಲ್ಲಿದೆ.

• ಮೈಲಾರಿ ಲಿಂಗಪ್ಪ

ಶುಕ್ರವಾರ ರಾತ್ರಿ ಅಕ್ಕಿರಾಂಪುರದ ಎಪಿಎಂಸಿ ಮೈದಾನ ಇನ್ನೂ ಕತ್ತಲೆಯ ಮಡಿಲಲ್ಲೇ ಮಲಗಿತ್ತು. ಆದರೆ ದೂರದಿಂದ ಬರುವ ಟ್ರಕ್‌ಗಳ, ಪಿಕ್‌ಅಪ್ ವಾಹನಗಳ, ಆಟೊಗಳ ಬೆಳಕು ಆ ಕತ್ತಲೆಯನ್ನು ನಿಧಾನವಾಗಿ ಹಿಮ್ಮೆಟ್ಟಿಸುತ್ತಿತ್ತು. ಹೆಡ್‌ಲೈಟ್‌ಗಳ ತೀಕ್ಷ್ಣ ಬೆಳಕು ಮಣ್ಣಿನ ಮೈದಾನದಲ್ಲಿ ಉದ್ದನೆಯ ನೆರಳು ಬಿಡಿಸುತ್ತಿತ್ತು– ಕಾಲಕಾಲಕ್ಕೆ ಚಲಿಸುವ, ಮರುಕ್ಷಣದಲ್ಲೇ ಅಳಿದುಹೋಗುವ ನೆರಳು.

ಒಂದು ಟ್ರಕ್ ನಿಲ್ಲುತ್ತದೆ. ಎಂಜಿನ್ ಶಬ್ದ ನಿಧಾನವಾಗಿ ಕಡಿಮೆಯಾಗುತ್ತದೆ. ಹಿಂಭಾಗದ ಬಾಗಿಲು ತೆರೆದುಕೊಳ್ಳುತ್ತದೆ. ಒಟ್ಟಿಗೆ ಹೊರಬೀಳುವ ಶಬ್ದ: ‘ಮೇ... ಮೇ...’

ಕುರಿ–ಮೇಕೆಗಳು ಒಂದರ ಮೇಲೊಂದು ತುಳಿದು, ಹಗ್ಗಕ್ಕೆ ಸಿಕ್ಕಿಕೊಂಡಂತೆ, ಮಣ್ಣಿನ ಮೇಲೆ ಇಳಿಯುತ್ತವೆ. ಕೆಲವು ಕ್ಷಣ ಗಾಬರಿಯಿಂದ ನಿಂತು, ನಂತರ ಗುಂಪಾಗಿ ಸಾಗಲು ಶುರುಮಾಡುತ್ತವೆ. ಅವುಗಳ ಕಾಲಿನ ತಾಳಕ್ಕೆ ದೂಳು ಮೇಲೇಳುತ್ತದೆ. ಗಾಳಿಯಲ್ಲಿ ಮಣ್ಣು, ಪ್ರಾಣಿಗಳ ವಾಸನೆ, ಚಹಾದ ಬಿಸಿ ಹೊಗೆ ಎಲ್ಲವೂ ಒಂದೇ ಬಾರಿ ಮೂಗಿಗೆ ತಾಕುತ್ತವೆ. ಆ ವಾಸನೆಗೆ ಈ ಸಂತೆಯದೇ ಆದ ಒಂದು ಗುರುತು ಇದೆ.

ಹೀಗೆ ಆ ಸಂತೆ ಆರಂಭವಾಗುತ್ತದೆ. ಇದು ಸಾಮಾನ್ಯ ಮಾರುಕಟ್ಟೆಯಲ್ಲ. ಸುಮಾರು ಏಳು ದಶಕಗಳ ಇತಿಹಾಸ ಹೊಂದಿರುವ, ರಾಜ್ಯದ ಅತಿ ದೊಡ್ಡ ಗ್ರಾಮೀಣ ಭಾಗದ ಕುರಿ–ಮೇಕೆ ವಹಿವಾಟು ಕೇಂದ್ರಗಳಲ್ಲಿ ಒಂದಾದ ಅಕ್ಕಿರಾಂಪುರದ ಸಂತೆ. ಇಲ್ಲಿ ವ್ಯಾಪಾರ ಮಾತ್ರ ನಡೆಯೋದಿಲ್ಲ; ಜನರ ಜೀವನವೇ ನಡೆಯುತ್ತದೆ.

ಶುಕ್ರವಾರ ರಾತ್ರಿಯಿಂದಲೇ ಇಲ್ಲಿ ಚಟುವಟಿಕೆಗಳು ಆರಂಭವಾಗುತ್ತವೆ. ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಮಧುಗಿರಿ ಭಾಗಗಳಿಂದ, ಹಾಗೇ ಆಂಧ್ರಪ್ರದೇಶದ ಹಿಂದೂಪುರ, ಮಡಕಶಿರಾ, ಪೆನುಗೊಂಡ ಪ್ರದೇಶಗಳಿಂದ ವಾಹನಗಳು ಸಾಲುಗಟ್ಟಿ ಬರುತ್ತವೆ. ಕೆಲವು ವಾಹನಗಳು ಮಧ್ಯರಾತ್ರಿ ತಲುಪುತ್ತವೆ. ಇನ್ನೂ ಕೆಲವು ಮುಂಜಾನೆ ಮುಟ್ಟುತ್ತವೆ.

ಮೇಕೆಗಳನ್ನು ಟೆಂಪೊಗೆ ತುಂಬುತ್ತಿರುವುದು...

ಪ್ರತಿ ಟ್ರಕ್ ಒಂದೊಂದು ಕಥೆ ಹೊತ್ತು ತರುತ್ತದೆ. ಒಂದು ಕುಟುಂಬದ ಆಸೆ, ಹಲವು ತಿಂಗಳ ಶ್ರಮ, ಕೆಲವೊಮ್ಮೆ ಸಾಲದ ಒತ್ತಡ.

ಕೆಲವರು ಟ್ರಕ್‌ಗಳಲ್ಲಿ, ಕೆಲವರು ಟೆಂಪೊಗಳಲ್ಲಿ, ಇನ್ನೂ ಕೆಲವರು ಆಟೊಗಳಲ್ಲಿ ಕುರಿ–ಮೇಕೆಗಳನ್ನು ತರುತ್ತಾರೆ. ಹಗ್ಗಕ್ಕೆ ಬಿಗಿದ ಅವುಗಳು ಗಾಬರಿಯಿಂದ ಬೆದರಿ ಒಂದೇ ಸಮನೆ ಅರುಚುತ್ತಲೇ ಇರುತ್ತವೆ. ಕೆಲವೊಮ್ಮೆ ಒಮ್ಮೆಗೇ ಕೂಗು. ಕೆಲವೊಮ್ಮೆ ಮೌನ. ಅದು ಇನ್ನಷ್ಟು ಗಾಢ.

ರೈತರು ಮಾರುಕಟ್ಟೆಯ ಶೆಡ್‌ಗಳಲ್ಲಿ, ವಾಹನಗಳ ಪಕ್ಕದಲ್ಲಿ, ಹಗ್ಗದ ಮೇಲೆ ತಲೆ ಇಟ್ಟು ಮಲಗುತ್ತಾರೆ. ಕೆಲವರು ಕಣ್ಣು ಮುಚ್ಚಿದರೂ, ಕಿವಿ ಸದಾ ಎಚ್ಚರದಲ್ಲೇ ಇರುತ್ತದೆ. ಚಹಾ ಅಂಗಡಿಗಳ ಬಳಿ ಸಣ್ಣ ಗುಂಪುಗಳು. ಒಂದು ಕಪ್ ಚಹಾ, ಒಂದು ಧಮ್, ಆಗಾಗ ಲೋಕಾಂತರ ಹರಟೆ. ಆಮ್ಲೆಟ್, ಬಿರಿಯಾನಿ ಅಂಗಡಿಗಳ ಪರಿಮಳ ಹೊಟ್ಟೆ ನೆನಪಿಸುತ್ತದೆ. ಅಂಗಡಿಯಿಂದ ಕೇಳಿಬರುವ ರಾಜ್‌ಕುಮಾರ್ ಹಳೆಯ ಹಾಡುಗಳು, ಕೈಯಲ್ಲಿರುವ ಮೊಬೈಲ್ ರೀಲ್ಸ್‌ಗಳು ಇವೆಲ್ಲ ಸೇರಿ ಸಂತೆಯನ್ನು ಎಚ್ಚರವಾಗಿರಿಸುತ್ತವೆ.

ಮಾರುಕಟ್ಟೆಯಲ್ಲಿ ಹಗ್ಗ, ಅಲಂಕಾರಿಕ ವಸ್ತುಗಳ ಮಾರಾಟ

ಬೆಳಗಿನ 2 ಗಂಟೆಗೆ ವಹಿವಾಟು ಆರಂಭವಾಗುತ್ತದೆ. ಇಲ್ಲಿ ತೂಕದ ಯಂತ್ರಗಳಿಗಿಂತ ಅನುಭವವೇ ಮುಖ್ಯ. ಒಬ್ಬ ಖರೀದಿದಾರ ಕುರಿ–ಮೇಕೆಯ ಸೊಂಟದ ಭಾಗವನ್ನು ಒತ್ತಿ, ಅದರ ಹಲ್ಲುಗಳನ್ನು ನೋಡಿ ತೂಕ, ಆರೋಗ್ಯ, ಮಾಂಸದ ಗುಣವನ್ನು ಅಂದಾಜು ಮಾಡುತ್ತಾನೆ. ಅವನ ಬೆರಳುಗಳಿಗೆ ವರ್ಷಗಳ ಅನುಭವ ಜೋಡಿಸಿಕೊಂಡಿರುತ್ತದೆ.

‘ಎಷ್ಟು ಯೇಳಪ್ಪ?’

ರೈತನ ಬೆಲೆ ಸ್ವಲ್ಪ ಜಾಸ್ತಿ. ಅವನ ಕಣ್ಣಿನಲ್ಲಿ ನಿರೀಕ್ಷೆ.

‘ಇಷ್ಟು ಸಣ್ಣ ಮರೀಗೆ ರೇಟ್ ಜಾಸ್ತಿ ಆಯ್ತು!’

ಮಧ್ಯೆ ಚೌಕಾಶಿ. ಸಣ್ಣ ಜಗಳದಂತೆ ಕಾಣುವ ಮಾತುಕತೆ. ಧ್ವನಿ ಸ್ವಲ್ಪ ಏರುತ್ತದೆ, ಮತ್ತೆ ಇಳಿಯುತ್ತದೆ. ಕೊನೆಗೆ ಒಂದು ರೇಟ್ ಫಿಕ್ಸ್ ಆಗುತ್ತದೆ. ಅಲ್ಲಿಗೆ ಚೌಕಾಸಿ ಮುಗಿಯುತ್ತದೆ. ರೈತ ಮತ್ತು ಖರೀದಿದಾರ ಇಬ್ಬರ ಮುಖದಲ್ಲೂ ಗೆಲುವಿನ ಗೆರೆಗಳು ಮೂಡುತ್ತವೆ.

‘ತೂಕದ ಯಂತ್ರ ತರಬೇಕು’ ಎನ್ನುವ ಒತ್ತಾಯವೂ ಇದೆ. ತಮಿಳುನಾಡು ಭಾಗದ ಖರೀದಿದಾರರು ಒಂದು ವಾರ ಪ್ರತಿ ಕೆ.ಜಿಗೆ ₹410 ನೀಡಿ ಮರಿ ಖರೀದಿಸಿದ್ದರು. ಆದರೆ ಗ್ರಾಮೀಣ ರೈತರು ಇನ್ನೂ ‘ಕೈಯ ತೂಕ’ದ ಮೇಲೆಯೇ ನಂಬಿಕೆ ಇಟ್ಟುಕೊಂಡಿದ್ದಾರೆ. ‘ಮುಂದಿನ ದಿನಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಬಹುದು’ ಎನ್ನುತ್ತಾರೆ ಮೈಲಾರಲಿಂಗೇಶ್ವರ ಕುರಿ ಸಾಕಾಣಿಕೆ ಮತ್ತು ಉಣ್ಣೆ ಉತ್ಪಾದಕರ ಸಂಘದ ಕಾರ್ಯದರ್ಶಿ ಲಕ್ಷ್ಮೀಶರೆಡ್ಡಿ.

ಅಂಕಿಗಳ ಹಿಂದೆ ಇರುವ ಬದುಕು

ಮೂರು ತಿಂಗಳ ಮರಿ ₹5 ಸಾವಿರದಿಂದ ₹8 ಸಾವಿರ. ಆರು ತಿಂಗಳ ಮರಿ ₹8 ಸಾವಿರದಿಂದ ₹18 ಸಾವಿರ. ಹಬ್ಬದ ಸಮಯದಲ್ಲಿ ಅಂದರೆ ಯುಗಾದಿ, ರಂಜಾನ್, ಬಕ್ರೀದ್, ಆಯುಧಪೂಜೆಯಲ್ಲಿ ಬೆಲೆ ಗಗನಕ್ಕೇರುತ್ತದೆ. ಬೇಡಿಕೆ ಹೆಚ್ಚಾದಂತೆ, ನಿರೀಕ್ಷೆಯೂ ಏರುತ್ತದೆ.

ಮಾರ್ಚ್ 7ರಂದು ನಡೆದ ಸಂತೆಯಲ್ಲಿ 2,400 ಕುರಿ–ಮೇಕೆಗಳು ಮಾರಾಟವಾಗಿದ್ದವು. ಯುಗಾದಿ ಹಿಂದಿನ ವಾರ ಮಾರ್ಚ್ 14ರಂದು 3,500. ಹಬ್ಬದ ಮುನ್ನಾದಿನ ಮಾರ್ಚ್ 18ರಂದು ನಡೆದ ವಿಶೇಷ ಸಂತೆಯಲ್ಲಿ 3,000. ಮಾರ್ಚ್ 21ರಂದು 1,000 ಮರಿ ಖರೀದಿಯಾಗಿದ್ದವು. ಈ ಸಂಖ್ಯೆಗಳು ಕೇವಲ ಅಂಕಿಗಳಲ್ಲ. ಪ್ರತಿ ಮರಿ ಹಿಂದೆ ಒಂದು ಕುಟುಂಬದ ಶ್ರಮ, ಒಂದು ಮನೆಯ ಆರ್ಥಿಕ ಲೆಕ್ಕ, ಒಂದು ಆಶಾಭಾವವಿದೆ.

ಮಧುಗಿರಿ ತಾಲ್ಲೂಕಿನ ಜೋಗೇರಹಳ್ಳಿಯ ಚಿಕ್ಕತಿಮ್ಮಯ್ಯ ತಮ್ಮ ಮರಿಗಳನ್ನು ಸಾಲಿನಲ್ಲಿ ನಿಲ್ಲಿಸುತ್ತಾರೆ. ಅವರ ಕಣ್ಣುಗಳು ಯಾವಾಗಲೂ ಖರೀದಿದಾರರನ್ನು ಹುಡುಕುತ್ತವೆ. ಒಬ್ಬನು ನಿಂತರೆ ಸಾಕು, ಅವನತ್ತ ನಡೆದು ಹೋಗಲು ಸಿದ್ಧ.

‘ಈ ವಾರ ಒಳ್ಳೆ ರೇಟು ಸಿಗ್ಬೇಕು...’

ಅವರ ಮಾತಿನಲ್ಲಿ ಆಸೆಯೂ ಇದೆ, ಆತಂಕವೂ ಇದೆ. ಕೈಯಲ್ಲಿ ಹಿಡಿದಿರುವ ಹಗ್ಗವು ಕೇವಲ ಕುರಿಯನ್ನು ಹಿಡಿದಿಲ್ಲ, ಬದುಕನ್ನೇ ಹಿಡಿದಿದೆ.

‘ಒಂದು ವಾರ ಲಾಭ, ಇನ್ನೊಂದು ವಾರ ನಷ್ಟ. ಇದನ್ನೇ ಜೀವನ ಅಂತ ಒಪ್ಪಿಕೊಳ್ಳಬೇಕು’.

11ನೇ ಪುಟಕ್ಕೆ...

ಪೊಲೀಸ್ ನಾಯಿಗಳಿಗೆ ಕೂಲರ್ ಭಾಗ್ಯ!

ಬಿಸಿಲು ಕಾಡಿದಾಗ ಮನುಷ್ಯರು ನೆರಳನ್ನು ಹುಡುಕುತ್ತಾರೆ; ಆದರೆ ಮಾತಿಲ್ಲದ ಜೀವಿಗಳಾದ ಪೊಲೀಸ್ ನಾಯಿಗಳು? ಅಪರಾಧ ಪತ್ತೆಯಂತಹ ಕಠಿಣ ಕೆಲಸದಲ್ಲಿ ದಿನವೂ ಮೈಮರೆತು ಕೆಲಸ ಮಾಡುವ ಈ ಶಿಸ್ತಿನ ಸಿಪಾಯಿಗಳಿಗೆ ಬೇಸಿಗೆ ಇನ್ನಷ್ಟು ಸವಾಲು. ಸೂರ್ಯನ ತಾಪ ದಿನೇ ದಿನೇ ಏರಿಕೆಯಾಗುತ್ತಿದ್ದಂತೆ, ಅವುಗಳ ಮೇಲೆ ಬೀಳುವ ಒತ್ತಡವೂ ಹೆಚ್ಚುತ್ತದೆ. ಇದೇ ಸವಾಲನ್ನು ಮನಗಂಡು ಕಲಬುರಗಿ, ಬಳ್ಳಾರಿ, ಕೊಪ್ಪಳ, ಬೀದರ್, ಯಾದಗಿರಿ, ಬಾಗಲಕೋಟೆ ಹಾಗೂ ವಿಜಯನಗರ ಜಿಲ್ಲೆಯ ಹೊಸಪೇಟೆ ಪೊಲೀಸರು ತಮ್ಮ ನಾಯಿಗಳಿಗೆ ‘ತಂಪಿನ ಆರೈಕೆ’ ಎಂಬ ವಿಶಿಷ್ಟ ವ್ಯವಸ್ಥೆಯನ್ನು ರೂಪಿಸಿದ್ದಾರೆ. ಇದು ಕೇವಲ ಆರೈಕೆ ಮಾತ್ರವಲ್ಲ, ಕಾರ್ಯಕ್ಷಮತೆಯನ್ನು ಉಳಿಸಿಕೊಳ್ಳುವ ಜಾಣ್ಮೆಯ ಕ್ರಮವೂ ಆಗಿದೆ.

ಆಹಾ...ಎಷ್ಟು ತಂಪಾದ ಗಾಳಿ...ಎನ್ನುತ್ತಿರಬಹುದೇ ಕಲಬುರಗಿಯ ಈ ಮೂಕ ಜೀವಿಗಳು... ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿಯಲ್ಲಿ ‘ಕೂಲ್ ಕೂಲ್’

• ಬಷೀರಅಹ್ಮದ್ ನಗಾರಿ

ಕಲಬುರಗಿಯ ಜಿಲ್ಲಾ ಪೊಲೀಸ್ ಶ್ವಾನ ದಳದ ಕೆನಲ್‌ನಲ್ಲಿ ಮಂಕಾಗಿ ಮಲಗಿದ್ದ ನಾಯಿಗಳು, ತರಬೇತುದಾರರನ್ನು ಕಂಡ ಕೂಡಲೇ ಚುರುಕಾಗುತ್ತವೆ. ಕೂಲರ್ ಆನ್ ಮಾಡಿದ ಕ್ಷಣವೇ ಗಾಳಿಯತ್ತ ಮುಖ ಮಾಡಿ ನಿಂತುಕೊಳ್ಳುವ ಅವುಗಳಿಗೆ ಬಿಸಿಲಿನ ಬೇಗೆಯಿಂದ ಮುಕ್ತಿ ಸಿಕ್ಕ ಖುಷಿ. ಗಾಳಿಯ ಮುಂದೆ ನಿಂತುಕೊಂಡು ಕಣ್ಣು ಮುಚ್ಚಿಕೊಳ್ಳುವ ಅವುಗಳ ಶಾಂತ ಭಾವನೆ, ತಂಪು ಗಾಳಿಯನ್ನು ಹೇಗೆ ಅನುಭವಿಸುತ್ತವೆ ಎಂಬುದನ್ನು ಹೇಳುತ್ತದೆ.

ಇಲ್ಲಿ ಬೇಸಿಗೆ ಬಂದರೆ ನಾಯಿಗಳಿಗೆ ಕೂಲರ್ ಅಳವಡಿಸಲಾಗುತ್ತದೆ. ಬಿಸಿಲಿನಲ್ಲಿ ಕಾಯ್ದುಕೆಂಡವಾದ ನೆಲದ ಮೇಲೆ ಅವುಗಳು ಕೆಲವೊಮ್ಮೆ ಕೆಲಸ ಮಾಡಬೇಕಾಗುವುದರಿಂದ ಪುಟಾಣಿ ಶೂಗಳನ್ನೂ ಒದಗಿಸಲಾಗಿದೆ.

10ನೇ ಪುಟಕ್ಕೆ...

ಬಳ್ಳಾರಿಯಲ್ಲಿ ‘ಅನಿವಾರ್ಯ ತಂಪು’

• ಹರಿಶಂಕರ್ ಆರ್

ಬಳ್ಳಾರಿಯಲ್ಲಿ ಬಿಸಿಲಿನ ತಾಪಮಾನ 42 ಡಿಗ್ರಿ ದಾಟಿದಾಗ ಪರಿಸ್ಥಿತಿ ಇನ್ನೂ ಕಠಿಣವಾಗುತ್ತದೆ. ಬಿಸಿ ಗಾಳಿಯ ಹೊಡೆತವೇ ದೇಹವನ್ನು ಹಿಂಸೆ ಮಾಡುವಂತಿರುತ್ತದೆ. ಇಲ್ಲಿ ಪೊಲೀಸ್ ನಾಯಿಗಳಿಗೆ ಕೂಲರ್ ಸೌಲಭ್ಯ ಒದಗಿಸುವುದು ಆಯ್ಕೆಯಲ್ಲ; ಅನಿವಾರ್ಯತೆ. ತಂಪಿಲ್ಲದೆ ಅವುಗಳನ್ನು ಕಾರ್ಯನಿರ್ವಹಿಸಲು ಬಿಡುವುದು ಅಪಾಯಕರವೂ ಆಗಬಹುದು.

ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಡಿಎಆರ್) ಮೈದಾನದಲ್ಲಿರುವ ಕೊಠಡಿಗಳಲ್ಲಿ ನಾಯಿಗಳನ್ನು ಪ್ರತ್ಯೇಕವಾಗಿ ಇಟ್ಟು, ಬೆಳಿಗ್ಗೆ 11ರಿಂದ ಸಂಜೆ 7ರವರೆಗೆ ಕೂಲರ್ ವ್ಯವಸ್ಥೆಯಲ್ಲಿ ಇರಿಸಲಾಗುತ್ತದೆ. ಫ್ಯಾನ್‌ಗಳು ದಿನಪೂರ್ತಿ ಕಾರ್ಯನಿರ್ವಹಿಸುತ್ತವೆ. ಬಿಸಿಲಿನ ತೀವ್ರತೆಯಿಂದ ಹೊರ ಚಟುವಟಿಕೆಗಳನ್ನೂ ನಿಯಂತ್ರಿಸಲಾಗಿದೆ. ಅಗತ್ಯವಿದ್ದಾಗ ಮಾತ್ರ ಶ್ವಾನಗಳನ್ನು ಹೊರಗೆ ಕರೆದುಕೊಂಡು ಹೋಗಲಾಗುತ್ತದೆ.

ಆಹಾರದಲ್ಲೂ ಬದಲಾವಣೆ ಸ್ಪಷ್ಟ. ಬೆಳಿಗ್ಗೆ ಗಂಜಿ, ಹಾಲು, ಮೊಟ್ಟೆ; ಮಧ್ಯಾಹ್ನ ಎಳನೀರು, ಮಜ್ಜಿಗೆ, ಗ್ಲೂಕೋಸ್; ಸಂಜೆ ಮಟನ್–ತರಕಾರಿ ಮಿಶ್ರಿತ ಅನ್ನ. ಬೇಗ ಜೀರ್ಣವಾಗುವ ದ್ರವ ಆಹಾರಕ್ಕೆ ಹೆಚ್ಚು ಆದ್ಯತೆ.

10ನೇ ಪುಟಕ್ಕೆ...

ಬಳ್ಳಾರಿಯಲ್ಲಿ ಶ್ವಾನಗಳಿಗೆ ಕುಡಿಯಲು ಎಳನೀರು

ಉಚಿತ ಆರೋಗ್ಯ ಸೇವೆಗೆ 50 ವರ್ಷ

• ಗಾಣಧಾಳು ಶ್ರೀಕಂಠ

ಆ ತೋಟದ ಮನೆಯ ಅಂಗಳ ಪ್ರತಿ ಭಾನುವಾರ ಆಸ್ಪತ್ರೆಯಾಗಿ ರೂಪಾಂತರಗೊಳ್ಳುತ್ತದೆ. ವಿಶಾಲ ಗೇಟ್ ಎದುರು ಶಿಸ್ತಾಗಿ ಸರತಿಯಲ್ಲಿ ನಿಲ್ಲುವ ಜನರು, ಗೇಟ್ ತೆರೆಯುತ್ತಿದ್ದಂತೆಯೇ ಒಳ ಹೋಗಿ ವೈದ್ಯರ ಮುಂದೆ ಕುಳಿತುಕೊಳ್ಳುತ್ತಾರೆ. ಕೆಲವರು ರಾತ್ರಿಯೇ ಬಂದವರು; ಕೆಲವರು ಬೆಳಗಿನ ಮೊದಲ ಬಸ್ಸಿನಲ್ಲಿ ಇಳಿದವರು. ದೂರದ ಹಳ್ಳಿಗಳಿಂದ ಬಂದವರ ಕೈಯಲ್ಲಿ ಚಿಕ್ಕ ಚೀಲ, ವರದಿಗಳ ಕಡತ, ಕೆಲವರ ಮುಖದಲ್ಲಿ ದಣಿವು, ಕೆಲವರಲ್ಲಿ ನಿರೀಕ್ಷೆ. ಇಲ್ಲಿ ಚಿಕಿತ್ಸೆ, ಔಷಧ, ಮಾತ್ರೆಗಳು ಎಲ್ಲವೂ ಉಚಿತ. ಕೆಲವೊಮ್ಮೆ ಅಗತ್ಯವಿರುವವರಿಗೆ ಔಷಧೀಯ ಪರಿಕರಗಳೂ. ಫಲಕವಿಲ್ಲದ ಈ ‘ವಾರದ ಆರೋಗ್ಯ ಕ್ಲಿನಿಕ್’ಗೆ ಸರತಿಯಲ್ಲಿರುವ ಜನರೇ ವಿಳಾಸ; ಇದೇ ಅದರ ಗುರುತು, ಇದೇ ಅದರ ನಂಬಿಕೆ.

ಇದು ಬೆಂಗಳೂರಿನ ಹೃದ್ರೋಗ ತಜ್ಞ ಡಾ.ರಮಣ್ ರಾವ್ ಅವರ ‘ಭಾನುವಾರದ ಗ್ರಾಮೀಣ ಚಿಕಿತ್ಸಾಲಯ’. ಬೆಂಗಳೂರಿನಿಂದ ತುಮಕೂರಿಗೆ ಹೋಗುವ ರಸ್ತೆಯಲ್ಲಿ ನೆಲಮಂಗಲ ದಾಟಿದ ನಂತರ ಟಿ.ಬೇಗೂರು–ಬ್ಯಾಡರಹಳ್ಳಿ ಗೇಟ್ ಸಿಗುತ್ತದೆ. ಗೇಟ್‌ನಿಂದ ಎಡಕ್ಕೆ ತಿರುಗಿ 200 ಮೀಟರ್ ನಡೆದರೆ ತೋಟದ ಮನೆ ಕಾಣಿಸುತ್ತದೆ. ಒಳಗೆ ಚಟುವಟಿಕೆಯಿಂದ ಕೂಡಿರುವ ಚಿಕಿತ್ಸಾಲಯ–ಇದೊಂದೇ ಇದರ ವಿಶೇಷತೆ. 1973ರಲ್ಲಿ ಆರಂಭವಾದ ಈ ಕಾರ್ಯ ಈಗ ಐದು ದಶಕಗಳನ್ನು ದಾಟಿದೆ. ಪ್ರತಿ ಭಾನುವಾರ 700 ರಿಂದ 1000 ರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಬೆಳಿಗ್ಗೆ 9ಕ್ಕೆ ಶುರುವಾಗುವ ಚಿಕಿತ್ಸಾ ಕಾರ್ಯ, ಸರತಿಯಲ್ಲಿರುವ ಕೊನೆಯ ರೋಗಿ ಹೊರಡುವವರೆಗೂ ಮುಂದುವರಿಯುತ್ತದೆ. ಕೆಲವೊಮ್ಮೆ ಸಂಜೆಗೂ ದಾಟುತ್ತದೆ. ಈವರೆಗೆ ಸುಮಾರು 20 ಲಕ್ಷ ಮಂದಿ ಇಲ್ಲಿ ಆರೋಗ್ಯ ಚಿಕಿತ್ಸೆ ಪಡೆದಿದ್ದಾರೆ ಎನ್ನುವ ಅಂದಾಜಿದೆ.

ಭಾನುವಾರ ಬೆಳಿಗ್ಗೆ ಡಾ.ರಮಣ್ ರಾವ್ ಗಣಪತಿಗೆ ಪೂಜೆ ಸಲ್ಲಿಸಿ, ಸರತಿಯಲ್ಲಿರುವವರಿಗೆ ನಮಸ್ಕರಿಸಿ ಸೇವೆ ಆರಂಭಿಸುತ್ತಾರೆ.

ಹೇಗಿದ್ದೀರಿ...? ಸರತಿಯಲ್ಲಿ ನಿಂತಿರುವವರೊಂದಿಗೆ ಕ್ಷೇಮ–ಕುಶಲ ಚಿತ್ರಕೃಪೆ: ಡಾ.ರಮಣ್‌ರಾವ್ ಗ್ರಾಮೀಣ ಚಿಕಿತ್ಸಾಲಯ

ಒಳಗೆ ವರನಟ ಡಾ.ರಾಜ್‌ಕುಮಾರ್ ಅವರ ಗೀತೆಗಳು ನಿಧಾನವಾಗಿ ಕೇಳಿಬರುತ್ತಿದ್ದರೆ, (ಡಾ.ರಮಣ್ ರಾವ್ ರಾಜ್ ಕುಟುಂಬದ ವೈದ್ಯರು ಮತ್ತು ಅಭಿಮಾನಿ) ಹೊರಗೆ ಸ್ವಯಂ ಸೇವಕರು ರೋಗಿಗಳ ನೋಂದಣಿ ಮತ್ತು ಪ್ರಾಥಮಿಕ ಪರೀಕ್ಷೆಗಳಲ್ಲಿ ತೊಡಗಿರುತ್ತಾರೆ. ಒಂದೆಡೆ ರಕ್ತದ ಒತ್ತಡ ಪರೀಕ್ಷೆ, ಮತ್ತೊಂದೆಡೆ ಮಧುಮೇಹ ತಪಾಸಣೆ, ಇನ್ನೊಂದೆಡೆ ದಂತ ಚಿಕಿತ್ಸೆಯ ಸಿದ್ಧತೆ–ಹೀಗೆ ಒಂದೇ ಸ್ಥಳದಲ್ಲಿ ಹಲವು ಸೇವೆಗಳು ಸಾಗುತ್ತವೆ. ಹೃದ್ರೋಗದಿಂದ ದಂತ ಸಮಸ್ಯೆಯವರೆಗೂ, ಮಧುಮೇಹದಿಂದ ಮೂಳೆನೋವಿನವರೆಗೂ ವಿವಿಧ ಕಾಯಿಲೆಗಳೊಂದಿಗೆ ಬಂದವರು ಇಲ್ಲಿ ಒಂದೇ ಸಾಲಿನಲ್ಲಿ ಕುಳಿತುಕೊಳ್ಳುತ್ತಾರೆ. ಚಿಕಿತ್ಸೆ ಮಾತ್ರವಲ್ಲ, ಮಾತಿನಲ್ಲೂ ಆತ್ಮೀಯತೆ ಬೆಳೆಯುತ್ತದೆ; ಅದೇ ಇವರಿಗೆ ಧೈರ್ಯ ನೀಡುತ್ತದೆ.

‘ಕಾಲು ಬಾತುಕೊಂಡಿತ್ತು. ನಾಲ್ಕು ವರ್ಷದಿಂದ ಇಲ್ಲಿಗೆ ಬರ್ತಿದ್ದೀನಿ. ಈಗ ಪರವಾಗಿಲ್ಲ. ಡಾಕ್ಟ್ರು ಚೆನ್ನಾಗಿ ನೋಡ್ತಾರೆ. ದುಡ್ಡು ತಗೊಳ್ಳಲ್ಲ’ ಎಂದು ಹೇಳುವ ಚಳ್ಳಕೆರೆ ಸಮೀಪದ ಮೈಲಹಳ್ಳಿಯ ಕೃಷಿಕ ಭೀಮಣ್ಣನ ಕಣ್ಣಲ್ಲಿ ಕೃತಜ್ಞತೆ ಇತ್ತು. ಯಡಿಯೂರು ಪಕ್ಕದ ಶೆಟ್ಟಹಳ್ಳಿಯ ಜಯಲಕ್ಷ್ಮಮ್ಮ ಇಪ್ಪತ್ತಾರು ವರ್ಷಗಳ ಹಿಂದೆ ಅಸ್ತಮಾಕ್ಕೆ ಚಿಕಿತ್ಸೆಗಾಗಿ ಬಂದವರು. ಗುಣಮುಖರಾದ ನಂತರ ಈಗ ಸ್ವಯಂ ಸೇವಕಿಯಾಗಿ ವಾರಕ್ಕೊಮ್ಮೆ ಸೇವೆ ಸಲ್ಲಿಸುತ್ತಿದ್ದಾರೆ. ‘ನಾನು ಪಡೆದ ಸೇವೆ, ಇತರರಿಗೆ ಕೊಡಬೇಕು’ ಎನ್ನುವ ಮನೋಭಾವದಿಂದ ಅವರು ಇಲ್ಲಿ ನಿಂತಿದ್ದಾರೆ. ಇಂಥವರೇ ಇಲ್ಲಿನ ಶಕ್ತಿಯಾಗಿದ್ದಾರೆ. ಐವತ್ತಕ್ಕೂ ಹೆಚ್ಚು ಸ್ವಯಂ ಸೇವಕರು ಈ ಚಿಕಿತ್ಸಾಲಯದ ನಾಡಿಯಂತೆ ಕೆಲಸ ಮಾಡುತ್ತಾರೆ.

‘ಇಲ್ಲಿ ಚಿಕಿತ್ಸೆ ಮಾತ್ರವಲ್ಲ, ಪ್ರೀತಿ ಸಿಗುತ್ತದೆ’ ಎನ್ನುತ್ತಾರೆ ಬ್ಯಾಡರಹಳ್ಳಿಯ ರಾಜಶೇಖರ್. ಇಲ್ಲಿಗೆ ಬರುವ ಅನೇಕರ ಅನುಭವ ಇದೇ ಆಗಿದೆ. ವೈದ್ಯರು ರೋಗಿಯನ್ನು ಕೇಳುವ ರೀತಿ, ಸಮಾಧಾನ ಹೇಳುವ ದನಿ–ಇವೆಲ್ಲವೂ ಚಿಕಿತ್ಸೆ ಭಾಗವಾಗುತ್ತವೆ. ಚಿಕಿತ್ಸೆ ಪಡೆದು ಹೊರಡುವ ಮುಖಗಳಲ್ಲಿ ಕಾಣುವ ಸಮಾಧಾನ, ನೆಮ್ಮದಿ ಈ ಸ್ಥಳದ ನಿಜವಾದ ಗುರುತು.

ಈ ಸೇವೆಯ ಬೀಜ ಬಾಲ್ಯದಲ್ಲೇ ಬಿತ್ತನೆ ಆಯಿತು. ಡಾ.ರಮಣ್ ರಾವ್ ಅವರ ತಂದೆ ತುಂಗಭದ್ರಾ ಅಣೆಕಟ್ಟು ಯೋಜನೆಯಲ್ಲಿ ಮುಖ್ಯ ಎಂಜಿನಿಯರ್ ಆಗಿದ್ದರು. ಹೊಸಪೇಟೆ ಸಮೀಪದ ವಡ್ಡರಹಟ್ಟಿಯಲ್ಲಿ ನೆಲೆಸಿದ್ದಾಗ ಸುತ್ತಮುತ್ತಲಿನ ಹಳ್ಳಿಗಳ ಜನರು ಸಣ್ಣ ಕಾಯಿಲೆಗಳಿಗೂ ಪಟ್ಟಣದತ್ತ ತೆರಳುತ್ತಿದ್ದ ದೃಶ್ಯ, ರಾವ್ ಅವರ ಮನಸ್ಸಿನಲ್ಲಿ ಪ್ರಶ್ನೆ ಮೂಡಿಸಿತು. ‘ನೀನು ವೈದ್ಯನಾದರೆ ಇವರ ನೋವನ್ನು ಕಡಿಮೆ ಮಾಡಬಹುದು’ ಎಂಬ ತಂದೆಯ ಮಾತು, ದಿಕ್ಕು ತೋರಿಸಿತು.

10ನೇ ಪುಟಕ್ಕೆ...

ಉಚಿತ ಊಟ, ಉಪಹಾರ

ಚಿಕಿತ್ಸೆಗೆ ರಾತ್ರಿಯೇ ಬರುವವರಿಗೆ ಲಘು ಉಪಹಾರ, ಭಾನುವಾರ ಮಧ್ಯಾಹ್ನ ಊಟದ ವ್ಯವಸ್ಥೆಯೂ ಇದೆ. ದೂರದಿಂದ ಬರುವವರಿಗೆ ಇದು ದೊಡ್ಡ ನೆರವು. ರೊಟರೇರಿಯನ್ ಜಯರಾಮ್ ಅವರ ಸಮಗ್ರ ಜನಾಭಿವೃದ್ಧಿ ಸಂಸ್ಥೆ (ಐಪಿಡಿಪಿ) ಈ ಕಾರ್ಯ ನೋಡಿಕೊಳ್ಳುತ್ತದೆ. ರೋಗಿಗಳ ಅನುಕೂಲಕ್ಕಾಗಿ ತಾತ್ಕಾಲಿಕ ಶೌಚಾಲಯಗಳನ್ನೂ ನಿರ್ಮಿಸಲಾಗಿದೆ. ಸಣ್ಣಸಣ್ಣ ಸೌಲಭ್ಯಗಳೇ ಇಲ್ಲಿ ಬರುವವರಿಗೆ ದೊಡ್ಡ ಸಮಾಧಾನ.

ಚಿಕಿತ್ಸೆ ಪಡೆದು ಬಂದವರಿಗೆ ಊಟೋಪಚಾರದ ವ್ಯವಸ್ಥೆ

ಗ್ರಾಮಾಭಿವೃದ್ಧಿಯ ಪರ್ವ

ಚಿಕಿತ್ಸೆಯೊಂದಿಗೆ ಗ್ರಾಮಾಭಿವೃದ್ಧಿಯತ್ತಲೂ ಟ್ರಸ್ಟ್ ಗಮನ ಹರಿಸಿದೆ. ಟಿ.ಬೇಗೂರು ಮತ್ತು ಬ್ಯಾಡರಹಳ್ಳಿ ಪಂಚಾಯಿತಿಯ ಹಳ್ಳಿಗಳಲ್ಲಿ ಶೌಚಾಲಯ ನಿರ್ಮಾಣ, ಕುಡಿಯುವ ನೀರಿಗಾಗಿ ಕೊಳವೆಬಾವಿ, ಹಬ್ಬಗಳಲ್ಲಿ ಧಾನ್ಯ ವಿತರಣೆ, ಶಾಲಾ ಮಕ್ಕಳಿಗೆ ನೋಟ್‌ಪುಸ್ತಕ, ವಿಟಮಿನ್ ಮಾತ್ರೆಗಳು ನೀಡುವಂತಹ ಹಲವು ಕಾರ್ಯಗಳು ನಡೆಯುತ್ತಿವೆ. ಕೆಲವು ಶಾಲೆಗಳ ಕೊಠಡಿಗಳ ದುರಸ್ತಿ, ದೇವಾಲಯ ನಿರ್ಮಾಣಕ್ಕೂ ಸಹಾಯ ನೀಡಲಾಗಿದೆ. ಈ ಸೇವೆಗಳು ಗ್ರಾಮಸ್ಥರ ಬದುಕಿನಲ್ಲಿ ತಣ್ಣಗೆ ಬದಲಾವಣೆ ತಂದಿವೆ; ಆರೋಗ್ಯದಿಂದ ಆರಂಭವಾದ ಸೇವೆ, ಬದುಕಿನ ವಿವಿಧ ಆಯಾಮಗಳನ್ನು ಸ್ಪರ್ಶಿಸಿದೆ.

ದೀಪ ಅಥವಾ ಮೇಣದಬತ್ತಿ ಬೆಳಕಿನಲ್ಲಿ ಗುಹಾಂತರ ಅಂಕಲಿ ಗುರುಪೀಠದ ದರ್ಶನ ಒಂದು ಅನನ್ಯ ಅನುಭವ. ಶಿಲಾಯುಗದ ವಾಸಸ್ಥಾನ, ರಾಜಮನೆತನಗಳ ಭದ್ರತಾ ತಾಣದಿಂದ ಗುರುಪೀಠದ ತನಕ ಇದರ ಇತಿಹಾಸ ಸುದೀರ್ಘವಾಗಿದೆ...

ಗುಹೆಯೊಳಗಿನ ನೀರಿನ ತೊಟ್ಟಿ, ಸ್ನಾನದ ಮನೆ

ಮೇಣದಬತ್ತಿ ಬೆಳಕಲ್ಲಿ ಇತಿಹಾಸ ದರ್ಶನ

• ಎಂ.ಎನ್.ಯೋಗೇಶ್

ಅದು ಎಂಬತ್ತು ಅಡಿ ಆಳದವರೆಗೆ ಹರಡಿಕೊಂಡಿರುವ ಗುಹಾಂತರ ಗುಡಿ. ಪ್ರಾಗೈತಿಹಾಸಿಕ ಕಾಲದಿಂದ ನವಶಿಲಾಯುಗ, ಶಾತವಾಹನ, ಕದಂಬ, ರಾಷ್ಟ್ರಕೂಟ, ಚಾಲುಕ್ಯ ಹಾಗೂ ವಿಜಯನಗರ, ನಾಯಕ ಅರಸರ ಕಾಲದವರೆಗೂ ಮಾನವ ವಿಕಾಸದ ಹಾದಿಗೆ ಸಾಕ್ಷಿಯಾಗಿರುವ ಅಮೂಲ್ಯ ಸ್ಮಾರಕ. ಇದನ್ನು ದೀಪದ ಬೆಳಕಿನಲ್ಲಿ ವೀಕ್ಷಿಸಬೇಕು ಎಂಬುದು ಶಿಲ್ಪಕಲೆ ಅಧ್ಯಯನಕಾರ ಎಂ. ದ್ವಾರಕೀಶ್ ಅವರ ಮಾತು.

ಚಿತ್ರದುರ್ಗದ ಚಂದ್ರವಳ್ಳಿ ತೋಟದಲ್ಲಿರುವ 'ಅಂಕಲಿ ಗುರುಪೀಠ'ದ ಮುಂದೆ ನಿಂತಾಗ ಆ ಮಾತು ಮತ್ತೆ ನೆನಪಾಯಿತು. ಸುತ್ತಲಿನ ಕಲ್ಲುಬಂಡೆಗಳು ಮತ್ತು ಹಳೆಯ ಭೂದೃಶ್ಯವೇ ಒಂದು ಪುರಾತನ ಕಥೆಯನ್ನು ಹೇಳುತ್ತಿದ್ದಂತೆ ಭಾಸವಾಯಿತು. ನಮ್ಮ ತಂಡದವರ ಮುಂದೆ ಆ ಮಾತನ್ನು ಹಂಚಿಕೊಂಡಾಗ, 'ದೀಪ ಎಲ್ಲಿಂದ ತರೋದು? ಎಣ್ಣೆ ಬೇಕಲ್ಲವೇ? ಗುಹೆಯೊಳಗೆ ಹೊಗೆ ತುಂಬಿದರೆ?' ಎಂಬ ಪ್ರಶ್ನೆಗಳ ಮಳೆಯೇ ಸುರಿಯಿತು. ಚರ್ಚೆಯ ನಂತರ 'ಮೇಣದಬತ್ತಿ ಬೆಳಕಿನಲ್ಲಿ ನೋಡೋಣ' ಎಂಬ ತೀರ್ಮಾನಕ್ಕೆ ಎಲ್ಲರೂ ಒಪ್ಪಿಕೊಂಡೆವು.

ಹೀಗೆ ಮೇಣದಬತ್ತಿ ಬೆಳಕಿನಲ್ಲಿ ಗುಹಾಂತರ ಅಂಕಲಿ ಗುರುಪೀಠದ ದರ್ಶನ ಆರಂಭವಾಯಿತು. ಸ್ಥಳದಲ್ಲಿದ್ದ ಪ್ರವಾಸಿ ಮಾರ್ಗದರ್ಶಿ ಎಸ್. ಬಸವರಾಜು ಅವರಿಗೆ ಇದು ಅಪರೂಪದ ಅನುಭವವಾಗಿತ್ತು. ಅವರ ಕೈಯಲ್ಲಿದ್ದ ಟಾರ್ಚ್ ಆರಿಸಿ, ಅವರು ಸಹ ಗೌರವದಿಂದ ಮೇಣದಬತ್ತಿಯನ್ನು ಹಿಡಿದರು. ಆ ಬೆಳಕಿನ ಕಂಪನವೇ ನಮ್ಮ ಮನಸ್ಸಿನಲ್ಲಿ ಉತ್ಸಾಹ ಮೂಡಿಸಿತು.

ಗುಹೆ ಪ್ರವೇಶಿಸುವ ಮೊದಲು ಪಕ್ಕದಲ್ಲಿದ್ದ, ಪಂಚಪಾಂಡವರು ಸ್ಥಾಪಿಸಿದ್ದಾರೆ ಎನ್ನಲಾದ ಪಂಚಲಿಂಗೇಶ್ವರ ದೇವಾಲಯದಲ್ಲಿ ದರ್ಶನ ಮಾಡಿದೆವು. ಆ ದೇವಾಲಯದ ಮೌನವೇ ಒಂದು ತಪಸ್ಸಿನಂತೆ ಅನಿಸಿತು. ನಂತರ ನಂದಿ ಬಾಗಿಲ ಮೂಲಕ ಗುಹೆ ಪ್ರವೇಶ. ಬಾಗಿಲ ಮೇಲಿನ ನಂದಿ ಶಿಲ್ಪದ ದೃಷ್ಟಿಯೇ ನಮ್ಮನ್ನು ಒಳಗೆ ಎಳೆದಂತೆ ತೋರಿತು. ಮೊದಲಿಗೆ ಐದು ಮೆಟ್ಟಿಲು ಇಳಿದು, ನಂತರ ಏಳು ಮೆಟ್ಟಿಲು. 'ಏಳು-ಬೀಳು' ಎಂಬಂತೆ ಶತ್ರುಗಳು ಕತ್ತಲಲ್ಲಿ ಪ್ರವೇಶಿಸಿದರೆ ತಕ್ಷಣ ಅಡ್ಡಿಪಡಿಸುವ ರಚನೆ ಇದಾಗಿರಬಹುದು ಎಂಬ ವಿವರಣೆ ದೊರಕಿತು. ಆ ಮೆಟ್ಟಿಲುಗಳ ಪ್ರತಿಯೊಂದು ಹೆಜ್ಜೆಯೂ ಕಾಲವನ್ನು ಹಿಂದಕ್ಕೆ ಕರೆದೊಯ್ಯುತ್ತಿದ್ದಂತೆ ಅನಿಸಿತು.

ಮಧ್ಯಾಹ್ನದ ಬಿರುಬಿಸಿಲಿನಿಂದ ಒಳಗೆ ಪ್ರವೇಶಿಸಿದ ಕ್ಷಣದಲ್ಲಿ ತಂಪಾದ ಗಾಳಿ ನಮ್ಮನ್ನು ಸ್ವಾಗತಿಸಿತು. ಗಾಳಿಯ ಹರಿವು ಇಲ್ಲದಿದ್ದರೂ ಒಳಗಿನ ತಂಪು ಎಲ್ಲರಿಗೂ ಅಚ್ಚರಿಯಾಯಿತು. ಕೆಲ ಕ್ಷಣ ನಾವು ಮಾತೇ ಇಲ್ಲದೆ ನಿಂತಿದ್ದೆವು. ಸುಣ್ಣ, ಗಾರೆ, ಬೆಲ್ಲ ಮತ್ತು ವನಸ್ಪತಿಗಳ ಮಿಶ್ರಣದಿಂದ ನಿರ್ಮಿತ ಗೋಡೆಗಳೇ ಈ ತಂಪಿಗೆ ಕಾರಣವೆಂಬ ಮಾಹಿತಿ ತಿಳಿದುಬಂತು. ಆ ಕ್ಷಣದಲ್ಲಿ ಪ್ರಕೃತಿಯೂ ಮಾನವ ಕೌಶಲ್ಯವೂ ಒಂದಾಗಿ ಕೆಲಸ ಮಾಡಿದಂತೆ ಭಾಸವಾಯಿತು.

ಮೆಟ್ಟಿಲುಗಳ ಎರಡೂ ಬದಿಗಳಲ್ಲಿದ್ದ ದೀಪದ ಗೂಡುಗಳು ಹಳೆಯ ಕಾಲದ ಬೀದಿ ದೀಪಗಳ ಸಾಲನ್ನು ನೆನಪಿಸಿದವು. ಗೋಡೆಗಳ ಮೇಲೆ ಮೂಡಿದ್ದ ನೆರಳುಗಳು ಚಲಿಸುತ್ತಿದ್ದಂತೆ ಕಾಣುತ್ತಿದ್ದವು. ಆ ಕ್ಷಣದಲ್ಲಿ ಟಾರ್ಚ್ ಬೆಳಕು ಅನಗತ್ಯವೆನಿಸಿತು. ಮೇಣದಬತ್ತಿಯ ಬೆಳಕೇ ಸಾಕು ಎಂಬ ಭಾವ ಮೂಡಿತು. ಶತಮಾನಗಳ ಹಿಂದಿನ ವಾತಾವರಣದಲ್ಲಿ ನಾವು ಕಾಲಿಡುತ್ತಿರುವ ಅನುಭವವಾಗಿತ್ತು.

ಮೆಟ್ಟಿಲುಗಳ ಇಳಿಜಾರಿನಲ್ಲಿ ಕಾವಲುಗಾರನ ಪೀಠ ಕಂಡಿತು. ಹೊರಗಿನ ಬೆಳಕಿನಿಂದ ಒಳಗಿನವರನ್ನು ಗುರುತಿಸುವ ರೀತಿಯಲ್ಲಿ ಕತ್ತಲಲ್ಲಿ ನಿರ್ಮಿತವಾದ ರಚನೆ ಅದು. ಶತ್ರುಗಳನ್ನು ದಾರಿ ತಪ್ಪಿಸುವ ಉದ್ದೇಶವೂ ಇದಕ್ಕಿದ್ದಿರಬಹುದು ಎಂಬ ಕಲ್ಪನೆ ಮನಸ್ಸಿನಲ್ಲಿ ಮೂಡಿತು.

ಮುಂದೆ ಗಣೇಶ ಬಾಗಿಲು ಕಾಣಿಸಿತು. ಮೇಲ್ಭಾಗದಲ್ಲಿ ಗಣಪತಿ ಶಿಲ್ಪ, ಎರಡೂ ಕಡೆ ಪೂರ್ಣಕುಂಭಗಳು. ಬಾಗಿಲ ಪಕ್ಕದ ಕಲ್ಲಿನ ಆನೆಗಳು ಜೀವಂತವಾಗಿಯೇ ನಿಂತಿರುವಂತೆ ತೋಚಿದವು. ಆ ಆನೆಗಳನ್ನು ಸ್ಪರ್ಶಿಸುತ್ತಾ ಇಳಿದಾಗ 'ಸಿಂಹಾಸನ ಪೀಠ' ಕಣ್ಮುಂದೆ ಬಂತು. ಅದರ ಪಕ್ಕದಲ್ಲಿದ್ದ ಟೀಪಾಯ್ ರೀತಿಯ ಶಿಲ್ಪವೂ ಗಮನ ಸೆಳೆಯಿತು.

ಸ್ವಲ್ಪ ದೂರದಲ್ಲಿ ಬೃಹತ್ ಶಿವಲಿಂಗ ಕಂಡು ಎಲ್ಲರಲ್ಲೂ ಭಾವನಾತ್ಮಕ ರೋಮಾಂಚನ ಉಂಟಾಯಿತು. ಮೇಣದಬತ್ತಿಯ ಬೆಳಕಿನಲ್ಲಿ ಶಿವನಿಗೆ ದೀಪಾರಾಧನೆ ಮಾಡುತ್ತಿರುವಂತೆ ಅನುಭವವಾಯಿತು. ಮಯೂರವರ್ಮನ ಕಾಲದಲ್ಲಿ ಇಲ್ಲಿ ಶಿವಲಿಂಗ ಸ್ಥಾಪನೆಯಾಗಿರಬಹುದೆಂಬ ಮಾಹಿತಿ ಮತ್ತಷ್ಟು ಆಶ್ಚರ್ಯ ತಂದಿತು. ಮೇಲಿನಿಂದ ಭಕ್ತರು ಹಾಕುವ ನಾಣ್ಯಗಳು ನೇರವಾಗಿ ಶಿವಲಿಂಗದ ಬಳಿ ಬೀಳುವ ವ್ಯವಸ್ಥೆಯೂ ಅದ್ಭುತವಾಗಿತ್ತು.

ಗುಹೆಯ ಪ್ರವೇಶ ದ್ವಾರ

ಮುಂದಿನ ಅಂತಸ್ತಿನಲ್ಲಿ ಹಳೆಯ ಕಾಲದ ಎಂಜಿನಿಯರಿಂಗ್ ಕೌಶಲ್ಯಗಳು ಸ್ಪಷ್ಟವಾಗಿ ಗೋಚರಿಸಿದವು. ಸ್ನಾನಗೃಹಕ್ಕೆ ಜಲಸಂಪರ್ಕ ಕಲ್ಪಿಸಿರುವ ವ್ಯವಸ್ಥೆ, ಕಿರಿದಾದ ಕಾಲುವೆಗಳ ಮೂಲಕ ನೀರು ಹರಿಯುವ ವಿನ್ಯಾಸ–ಇವುಗಳು ಅಚ್ಚರಿಯೇ ಆಗಿದ್ದವು. ಕಲ್ಲಿನಿಂದಲೇ ನಿರ್ಮಿತ ಹಾಸಿಗೆಗಳು, ತಲೆದಿಂಬಿನ ವ್ಯವಸ್ಥೆ ಎಲ್ಲ ಜಾಗದ ಸದುಪಯೋಗದ ಪಾಠ ಹೇಳುತ್ತಿದ್ದವು. ಆ ಕಾಲದ ಬುದ್ಧಿವಂತಿಕೆ ನಮ್ಮನ್ನು ಚಕಿತಗೊಳಿಸಿತು.

ಸಿಂಹದ ಮುಖದ ಬಾಗಿಲು ಮತ್ತೊಂದು ರಹಸ್ಯವನ್ನು ತೆರೆದಿತು. ಬಾಣದ ಗುರುತುಗಳ ಬದಲು ಸಿಂಹದ ಮುಖದ ದಿಕ್ಕು ಮುಂದಿನ ಕೊಠಡಿಗೆ ದಾರಿ ತೋರಿಸುತ್ತಿತ್ತು. ಚಿತ್ರಕಲೆಗೇ ಮೀಸಲಾದ ಕೊಠಡಿಯ ಗೋಡೆಗಳ ಮೇಲೆ ಹಳೆಯ ಬಣ್ಣದ ಚಿತ್ರಗಳು ಇನ್ನೂ ಕಥೆ ಹೇಳುತ್ತಿದ್ದಂತೆ ಕಂಡವು. ಕೆಲವು ಚಿತ್ರಗಳು ಕಾಲದ ಹೊಡೆತದಿಂದ ಮಸುಕಾಗಿದ್ದರೂ, ಅವುಗಳ ಅರ್ಥ ಇನ್ನೂ ಜೀವಂತವಾಗಿದ್ದಂತೆ ತಿಳಿಯಿತು.

ಅಂತಿಮವಾಗಿ ತಲುಪಿದ 'ಸೀಕ್ರೆಟ್ ಚೇಂಬರ್' ಸಂಪೂರ್ಣ ಮೌನ ಮತ್ತು ಕತ್ತಲೆಯ ಲೋಕವಾಗಿತ್ತು. ಧ್ವನಿಯೇ ಇಲ್ಲದ ಆ ಕೊಠಡಿಯಲ್ಲಿ ಕ್ಷಣಕಾಲ ಭಯವೂ ಉಂಟಾಯಿತು. ನಮ್ಮ ಉಸಿರಿನ ಶಬ್ದ ಕೇಳಿಸುತ್ತಿತ್ತು. ಮೇಣದಬತ್ತಿ ಆರಿಸಿ ಮತ್ತೆ ಬೆಳಕು ಹಚ್ಚಿದಾಗ ಆ ಜಾಗವೇ ಬೇರೆ ಲೋಕದಂತೆ ಕಾಣಿಸಿತು.

ಅಂತಿಮವಾಗಿ ದೇವಾಲಯದ ಪ್ರಾಂಗಣ. ಗರ್ಭಗುಡಿಯಂತಿರುವ ಸ್ಥಳದಲ್ಲಿ ದೇವರ ಪ್ರತಿಮೆ ಇಲ್ಲದಿದ್ದರೂ ಹಂಸ ಮತ್ತು ನವಿಲಿನ ಶಿಲ್ಪಗಳು ಶಾರದಾ ಮತ್ತು ಸುಬ್ರಹ್ಮಣ್ಯ ದೇವಾಲಯಗಳ ಸೂಚನೆ ನೀಡುವಂತಿದ್ದವು. ಆ ಶಿಲ್ಪಗಳ ನಾಜೂಕು ಕೆಲಸವು ಶಿಲ್ಪಿಗಳ ಕೈಚಳಕವನ್ನು ಸಾರಿ ಹೇಳುತ್ತಿದ್ದವು.

ಈ ಗುಹೆ ಶಿಲಾಯುಗದ ವಾಸಸ್ಥಾನದಿಂದ ಆರಂಭಿಸಿ ರಾಜಮನೆತನಗಳ ಭದ್ರತಾ ತಾಣ, ನಂತರ ಧಾರ್ಮಿಕ ಕೇಂದ್ರ ಮತ್ತು ಗುರುಪೀಠವಾಗಿ ರೂಪಾಂತರಗೊಂಡಿರುವುದು ಇದರ ಇತಿಹಾಸದ ವೈಶಿಷ್ಟ್ಯ. ಪ್ರತಿಯೊಂದು ಕಲ್ಲೂ ಒಂದು ಕಾಲದ ಕಥೆಯನ್ನು ಹೊತ್ತಿರುವಂತೆ ಅನಿಸಿತು.

ಒಂದೂವರೆ ಗಂಟೆಗೂ ಹೆಚ್ಚು ಮೇಣದಬತ್ತಿ ಬೆಳಕಿನಲ್ಲಿ ನಡೆದ ಈ ಅನುಭವ ಕಾಲಯಾನದಂತಿತ್ತು. ಹೊರಬಂದಾಗ ಸೂರ್ಯನ ಬೆಳಕು ಕಣ್ಣುಗಳನ್ನು ಚುಚ್ಚಿದರೂ, ಮನಸ್ಸಿನಲ್ಲಿ ಉಳಿದದ್ದು ಒಂದು ಅಜ್ಞಾತ ಲೋಕದಿಂದ ಮರಳಿ ಬಂದ ಅನುಭವ–ಆ ಕ್ಷಣ ಇನ್ನೂ ಸ್ವಲ್ಪ ಹೊತ್ತು ಅಲ್ಲೇ ನಿಲ್ಲಬೇಕೆನಿಸುವಷ್ಟು ಗಾಢವಾಗಿತ್ತು.

ಮೂಲ ಹುಡುಕುತ್ತಾ...

ಅಂಕಲಿ ಗುರುಪೀಠದ ಮೂಲ ನವಶಿಲಾಯುಗದವರೆಗೆ ಹಿಂತಿರುಗುತ್ತದೆ. ಚಂದ್ರವಳ್ಳಿ ಪ್ರದೇಶವು ಪ್ರಾಚೀನ ಮಾನವ ವಸತಿಯ ಪ್ರಮುಖ ಕೇಂದ್ರವಾಗಿತ್ತು. ಶಾತವಾಹನರು ಇಲ್ಲಿ ಸೀಸದ ಲೋಹ ಠಂಕಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಚಾಲುಕ್ಯರು ಗುಹಾಂತರ ದೇವಾಲಯಗಳನ್ನು ನಿರ್ಮಿಸಿರುವ ಸಾಧ್ಯತೆಗಳಿವೆ.

ಕೆಲ ಕಾಲದಲ್ಲಿ ಈ ಗುಹೆ ಬಂಕರ್ ರೀತಿಯ ಭದ್ರತಾ ತಾಣವಾಗಿಯೂ ಬಳಸಲ್ಪಟ್ಟಿತ್ತು. ನಂತರ ನಾಯಕ ಅರಸರ ಕಾಲದಲ್ಲಿ ಇದು ವಿದ್ಯಾಕೇಂದ್ರ ಮತ್ತು ದಾಸೋಹ ಭವನವಾಗಿ ಅಭಿವೃದ್ಧಿಯಾಯಿತು.

ಚಂದ್ರವಳ್ಳಿಯಲ್ಲಿ ರೋಮನ್ ನಾಣ್ಯಗಳು ಪತ್ತೆಯಾಗಿರುವುದು ಈ ಪ್ರದೇಶವು ಅಂತರರಾಷ್ಟ್ರೀಯ ವ್ಯಾಪಾರ ಸಂಪರ್ಕ ಹೊಂದಿದ್ದುದನ್ನು ಸೂಚಿಸುತ್ತದೆ. 1901ರಲ್ಲಿ ಆರ್. ನರಸಿಂಹಾಚಾರ್ ಅವರು ಹಾಗೂ ನಂತರ ಎಂ.ಎಚ್. ಕೃಷ್ಣ ಅವರ ನೇತೃತ್ವದಲ್ಲಿ ನಡೆದ ಉತ್ಖನನಗಳು ಇದರ ಪ್ರಾಚೀನತೆಯನ್ನು ದೃಢಪಡಿಸಿವೆ.

ಪ್ರಸ್ತುತ ಚಂದ್ರವಳ್ಳಿ ನಿರ್ವಹಣೆ ಮುರುಘಾ ಮಠದ ಕೈಯಲ್ಲಿದೆ. ಆದರೆ ಇದು ಇನ್ನೂ ಪೂರ್ಣ ಪ್ರಮಾಣದಲ್ಲಿ ಪುರಾತತ್ವ ಸಂರಕ್ಷಿತ ಪ್ರವಾಸಿ ತಾಣವಾಗಿ ಅಭಿವೃದ್ಧಿಯಾಗಿಲ್ಲ ಎಂಬುದು ಸಂಶೋಧಕರ ಅಭಿಪ್ರಾಯ.

ಗುಡಿಯೊಳಗಿನ ಕುಸುರಿ ಕಲೆ

ಚಿತ್ರಗಳು: ಚಂದ್ರಪ್ಪ ವಿ

ಇದು ಟಾಯ್ಲೆಟ್ ಮ್ಯೂಸಿಯಂ!

• ಡಾ. ಕೆ.ಎಸ್. ಚೈತ್ರಾ

'ಶ್ಶೀ... ನಾನಂತೂ ಅಲ್ಲಿಗೆ ಬರಲ್ಲ. ಎಷ್ಟೋ ಮ್ಯೂಸಿಯಂ ನೋಡಿದ್ದೇನೆ. ಆದರೆ ಇದು ಯಾವುದು?' ಎಂದು ಅಮ್ಮ ತಕ್ಷಣ ನಿರಾಕರಿಸಿದರು. ಅಪ್ಪ ಕೂಡ ಸ್ವಲ್ಪ ಅನುಮಾನದಿಂದಲೇ ಒಪ್ಪಿಕೊಂಡರು. ಕಾರು ಚಾಲಕ ಸಿಂಗ್‌ಜೀ ದೆಹಲಿಯವರೇ ಆಗಿದ್ದರೂ, ಇಂಥ ಮ್ಯೂಸಿಯಂ ಬಗ್ಗೆ ತನಗೆ ತಿಳಿದಿಲ್ಲವೆಂದು ಆಶ್ಚರ್ಯಪಟ್ಟರು.

ಇಷ್ಟೆಲ್ಲ ಸಂಶಯಗಳ ಮಧ್ಯೆ ನಾವು ಹೊರಟಿದ್ದು ಸುಲಭ್ ಅಂತರರಾಷ್ಟ್ರೀಯ ಶೌಚಾಲಯ ಸಂಗ್ರಹಾಲಯ, ಅಂದರೆ ಟಾಯ್ಲೆಟ್ ಮ್ಯೂಸಿಯಂ ಕಡೆ!

ದೆಹಲಿಯ ಪಾಲಂ–ದಾಬ್ರಿ ರಸ್ತೆಯ ಕಿರಿದಾದ ಬೀದಿಗಳ ಮಧ್ಯೆ ಇರುವ ಈ ಪುಟ್ಟ ಮ್ಯೂಸಿಯಂ ಒಳಗೆ ಕಾಲಿಟ್ಟ ಕ್ಷಣದಲ್ಲೇ ನಮ್ಮ ಕಲ್ಪನೆಗಳನ್ನು ಬದಲಿಸಿತು. ಸ್ವಚ್ಛ ವಾತಾವರಣ, ನಗೆಮೊಗದ ಸಿಬ್ಬಂದಿ, ಅಮ್ಮ ಸೇರಿ ನಮಗೆಲ್ಲರಿಗೂ ಉತ್ಸಾಹ ಹೆಚ್ಚಿಸಿತು. ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಉಚಿತ ಪ್ರವೇಶವಿದ್ದು, ಪ್ರತಿ ವಿಭಾಗದ ವಿವರವನ್ನು ಸಿಬ್ಬಂದಿಯೇ ವಿವರಿಸುವ ವ್ಯವಸ್ಥೆ ಇದೆ.

ಟೈಮ್ಸ್ ವರದಿ ಪ್ರಕಾರ, ಜಗತ್ತಿನ ವಿಚಿತ್ರವಾದ ಆದರೆ ವಿಶಿಷ್ಟ ಸಂಗ್ರಹಾಲಯಗಳ ಪಟ್ಟಿಯಲ್ಲಿ ಇದಕ್ಕೂ ಸ್ಥಾನವಿದೆ. 1992ರಲ್ಲಿ ಬಿಂದೇಶ್ವರ್ ಪಾಠಕ್ ಸ್ಥಾಪಿಸಿದ ಈ ಮ್ಯೂಸಿಯಂ, ಶೌಚಾಲಯಗಳ ಇತಿಹಾಸವನ್ನು ದಾಖಲಿಸುವುದರ ಜೊತೆಗೆ ಸ್ವಚ್ಛತೆ ಮತ್ತು ಆರೋಗ್ಯದ ಮಹತ್ವವನ್ನು ತಿಳಿಸುವ ಉದ್ದೇಶ ಹೊಂದಿದೆ. ಸುಲಭ್ ಶೌಚಾಲಯಗಳ ಮೂಲಕ ಭಾರತದಲ್ಲಿ ಸಾಮಾಜಿಕ ಕ್ರಾಂತಿ ತಂದವರೇ ಅವರು.

ಮ್ಯೂಸಿಯಂ ಪ್ರವೇಶಿಸುವ ಮೊದಲು ಅಂಗಳದಲ್ಲೇ ವಿವಿಧ ಕಡಿಮೆ ವೆಚ್ಚದ ಶೌಚಾಲಯ ಮಾದರಿಗಳ ಪ್ರದರ್ಶನವಿದೆ. ಎರಡು ಗುಂಡಿಗಳ ವ್ಯವಸ್ಥೆಯ ಈ ವಿನ್ಯಾಸದಲ್ಲಿ ಒಂದು ತುಂಬಿದ ನಂತರ ಮತ್ತೊಂದು ಬಳಕೆಗೆ ಬರುತ್ತದೆ. ಹೀಗಾಗಿ ತ್ಯಾಜ್ಯ ಗೊಬ್ಬರವಾಗಲು ಸಮಯ ಸಿಗುತ್ತದೆ. ಈಚಲು ಕಡ್ಡಿ, ಬಿದಿರು, ಕಲ್ಲು, ಇಟ್ಟಿಗೆ, ಗೋಣಿಚೀಲ ಮುಂತಾದ ವಸ್ತುಗಳಿಂದ ನಿರ್ಮಿಸಬಹುದಾದ ಮಾದರಿಗಳ ವಿವರಗಳು ಪ್ರಾಯೋಗಿಕವಾಗಿವೆ. ಬೇಕಾದರೆ ಒಳಗೆ ಹೋಗಿ ಅನುಭವಿಸಿಯೂ ಬರಬಹುದು!

ಇತಿಹಾಸದೊಳಗೆ ಒಂದು ಪ್ರವೇಶ

ಮ್ಯೂಸಿಯಂ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ–ಪ್ರಾಚೀನ, ಮಧ್ಯಯುಗ ಮತ್ತು ಆಧುನಿಕ.

ಪ್ರಾಚೀನ ವಿಭಾಗದಲ್ಲಿ ಸಿಂಧೂ ಕಣಿವೆಯ ನಾಗರಿಕತೆ, ಬ್ಯಾಬಿಲೋನ್, ಗ್ರೀಸ್ ಮತ್ತು ರೋಮ್‌ಗಳ ಶೌಚ ವ್ಯವಸ್ಥೆಗಳ ಚಿತ್ರಣವಿದೆ. ಗುಜರಾತಿನ ಲೋಥಾಲ್‌ನಲ್ಲಿ ಕ್ರಿ.ಪೂ. 2300ರಲ್ಲಿಯೇ ಮನೆಗಳಿಗೆ ಪ್ರತ್ಯೇಕ ಶೌಚಾಲಯಗಳಿದ್ದು, ಮಣ್ಣಿನ ಕೊಳವೆಗಳ ಮೂಲಕ ಅವು ಪರಸ್ಪರ ಸಂಪರ್ಕ ಹೊಂದಿದ್ದವು ಎಂಬ ಮಾಹಿತಿ ನಿಜಕ್ಕೂ ಆಶ್ಚರ್ಯ ಹುಟ್ಟಿಸುತ್ತದೆ.

ಮಧ್ಯಯುಗ ವಿಭಾಗದಲ್ಲಿ ಅರಮನೆಗಳು, ಕೋಟೆಗಳಲ್ಲಿದ್ದ ಶೌಚಾಲಯ ಮಾದರಿಗಳು, ಚೇಂಬರ್ ಪಾಟ್‌ಗಳು ಮತ್ತು ಬೇಟೆ ಸಂದರ್ಭಗಳಲ್ಲಿ ಬಳಸುತ್ತಿದ್ದ ಪೋರ್ಟಬಲ್ ಕಮೋಡ್‌ಗಳು ಕಾಣಿಸುತ್ತವೆ.

ಇಲ್ಲಿ ವಿಶೇಷ ಗಮನ ಸೆಳೆಯುವುದು ಫ್ರಾನ್ಸ್‌ನ ರಾಜ ಲೂಯಿ 14ನೇಯವರ ಸಿಂಹಾಸನದ ಪ್ರತಿಕೃತಿ. ಮಲಬದ್ಧತೆಯಿಂದ ಬಳಲುತ್ತಿದ್ದ ರಾಜ ಸಭೆ ಮಧ್ಯೆ ಎದ್ದು ಹೋಗುವುದನ್ನು ತಪ್ಪಿಸಲು, ಸಿಂಹಾಸನದಲ್ಲೇ ಶೌಚ ವ್ಯವಸ್ಥೆ ಮಾಡಿಸಿಕೊಂಡಿದ್ದನಂತೆ! ಆಶ್ಚರ್ಯವೆಂದರೆ, ಭೋಜನಕ್ಕೆ ಏಕಾಂತ ಬಯಸುತ್ತಿದ್ದ ರಾಜ, ಶೌಚವನ್ನು ಸಭೆಯಲ್ಲೇ ನಡೆಸುತ್ತಿದ್ದ. ಅದನ್ನು ನೋಡುವುದೇ ಶುಭವೆಂದು ಜನರು ಭಾವಿಸುತ್ತಿದ್ದರು!

ಬ್ರಿಟಿಷರು ಬೇಟೆಗೆ ಹೋಗುವಾಗ ಬಳಸುತ್ತಿದ್ದ ಆಭರಣ ಪೆಟ್ಟಿಗೆಯಂತೆ ಕಾಣುವ ಕಮೋಡ್‌ಗಳು, ಕಳ್ಳರು ಕದ್ದರೆ ಅವರಿಗೆ ಆಗುವ ಆಘಾತದ ಕಲ್ಪನೆಗೂ ನಗು ಬರುತ್ತದೆ. ಇನ್ನೊಂದು ವಿಚಿತ್ರ ಮಾದರಿ–ಟೇಬಲ್ ಟಾಪ್ ಟಾಯ್ಲೆಟ್! ಮೇಜಿನಂತೆ ಕಾಣುವ ಇದರ ಮೇಲೆ ಊಟ ಬಡಿಸಲಾಗುತ್ತಿತ್ತು; ಅವಸರ ಬಂದರೆ ಮೇಲ್ಭಾಗ ತೆರೆದರೆ ಅದೇ ಶೌಚಾಲಯ.

ಸಿಂಹಾಸನ ಪ್ರತಿಕೃತಿಯ ಶೌಚಾಲಯ

ಪುಸ್ತಕ ರೂಪದ ಶೌಚಾಲಯ

ರೋಮನ್ ಕಾಲದಲ್ಲಿ ಬಂಗಾರ, ಬೆಳ್ಳಿ ಚೇಂಬರ್ ಪಾಟ್‌ಗಳನ್ನು ಬಳಸಲಾಗುತ್ತಿತ್ತು. ರಾಣಿ ವಿಕ್ಟೋರಿಯಾ ಬಳಸಿದ್ದ ಅಲಂಕೃತ ಪಾಟ್ ಕೂಡ ಇಲ್ಲಿ ಇದೆ. ಆದರೆ ತ್ಯಾಜ್ಯ ನಿರ್ವಹಣೆ ದೊಡ್ಡ ಸಮಸ್ಯೆಯಾಗಿದ್ದು, ಯುರೋಪಿನಲ್ಲಿ ಕಿಟಕಿಯಿಂದಲೇ ಬೀದಿಗೆ ಸುರಿಯುತ್ತಿದ್ದುದರಿಂದ ಜನರು ಎತ್ತರದ ಚಪ್ಪಲಿ ಧರಿಸುತ್ತಿದ್ದರು.

1920ರ ಅಮೆರಿಕದಲ್ಲಿ ಕಚೇರಿಗಳಲ್ಲಿದ್ದ ಎರಡು ಅಂತಸ್ತಿನ ಶೌಚಾಲಯ ಮಾದರಿಯೂ ಇಲ್ಲಿ ಇದೆ. ಮೇಲಿನ ಅಂತಸ್ತು ಅಧಿಕಾರಿಗಳಿಗೆ, ಕೆಳಗಿನದು ನೌಕರರಿಗೆ.

ಆಧುನಿಕ ವಿಭಾಗದಲ್ಲಿ ಇಂದಿನ ಶೌಚ ವ್ಯವಸ್ಥೆಗಳ ಅಭಿವೃದ್ಧಿಯನ್ನು ಕಾಣಬಹುದು. ಜಪಾನ್‌ನ ಸ್ವಯಂ ಸ್ವಚ್ಛಗೊಳಿಸುವ ಟಾಯ್ಲೆಟ್, ಹೀಟಿಂಗ್ ಮತ್ತು ಮಸಾಜ್ ಸೌಲಭ್ಯಗಳ ಆಸನ, ಸೌರಶಕ್ತಿಯಿಂದ ಮಲವನ್ನು ಬೂದಿಯನ್ನಾಗಿ ಪರಿವರ್ತಿಸುವ ವ್ಯವಸ್ಥೆ; ಇವೆಲ್ಲವೂ ತಂತ್ರಜ್ಞಾನದ ಅದ್ಭುತ ಉದಾಹರಣೆಗಳು.

ಇಲ್ಲಿ ಕೇವಲ ಉಪಕರಣಗಳಷ್ಟೇ ಅಲ್ಲ, ಶೌಚಕ್ಕೆ ಸಂಬಂಧಿಸಿದ ಸೃಜನಶೀಲ ಅಭಿವ್ಯಕ್ತಿಯೂ ಇದೆ. ಫೋಟೊಗಳು, ಚಿತ್ರಗಳು, ಕವನಗಳು, ಕಾರ್ಟೂನ್‌ಗಳು, ಉಕ್ತಿಗಳು ಮನರಂಜಿಸುತ್ತವೆ.

ಮಕ್ಕಳಿಗೆ ಶೌಚಾಲಯದ ಅಭ್ಯಾಸ ಬೆಳೆಸಲು ಜಪಾನ್‌ನಲ್ಲಿ ತಯಾರಾದ ಆಟಿಕೆ ವಿಶೇಷ. ನಾಣ್ಯ ಹಾಕಿದರೆ ಫ್ಲಶ್ ಶಬ್ದ ಬರುತ್ತದೆ! ಥಾಯ್ಲೆಂಡ್‌ನಲ್ಲಿ ಆನೆಗಳಿಗೆ ಕಮೋಡ್ ಬಳಸುವ ತರಬೇತಿ ನೀಡುವ ಚಿತ್ರವೂ ಗಮನ ಸೆಳೆಯುತ್ತದೆ.

ಸುಮಾರು ಎರಡು ಗಂಟೆಗಳ ವೀಕ್ಷಣೆಯ ನಂತರ ಹೊರಬರುವಾಗ, ನಾವು ಮಾತನಾಡಲೂ ಸಂಕೋಚ ಪಡುವ ವಿಷಯ ಶೌಚಾಲಯ ಎಷ್ಟು ಮಹತ್ವದ ಇತಿಹಾಸ ಮತ್ತು ಸಾಮಾಜಿಕ ಪಾತ್ರ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಸ್ವಚ್ಛ ಮತ್ತು ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಇದರ ಪಾತ್ರ ಅನಿವಾರ್ಯ ಎಂಬ ಅರಿವು ಮನಸ್ಸಿನಲ್ಲಿ ಗಾಢವಾಗಿ ಉಳಿಯುತ್ತದೆ


ಮ್ಯೂಸಿಯಂ ಒಳನೋಟ

ಮುನ್ನೋಟ 26-04-2026 ರಿಂದ 02-05-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಅತಿಯಾದ ಆತ್ಮಗೌರವವಿರುತ್ತದೆ. ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಆಸ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುತ್ತದೆ. ಕಾಲಿಗೆ ಸಂಬಂಧಿಸಿದ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯಿಂದ ಆರ್ಥಿಕ ಸಹಕಾರ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸುಂದರವಾಗಿ ಕಾಣಿಸಲು ಬಹಳ ಪ್ರಯತ್ನಪಡುವಿರಿ. ಆದಾಯವು ಉತ್ತಮವಾಗಿರುತ್ತದೆ. ಕೃಷಿಭೂಮಿ ಖರೀದಿ ಯೋಗವಿದೆ. ವಿದ್ಯಾರ್ಥಿಗಳು ತಮ್ಮ ಫಲಿತಾಂಶಕ್ಕಾಗಿ ಕಷ್ಟಪಡಬೇಕು. ಕೆಲವರಿಗೆ ಕಾಲು ಅಥವಾ ಹೊಟ್ಟೆ ನೋವು ಕಾಣಿಸಬಹುದು. ಸಂಗಾತಿಯ ಹೆಸರಲ್ಲಿ ಆಸ್ತಿ ಮಾಡಿಕೊಳ್ಳಬಹುದು. ಅನಿರೀಕ್ಷಿತ ಆದಾಯ ಕೆಲವರಿಗೆ ಇರುತ್ತದೆ. ವಿದೇಶದಲ್ಲಿ ಉದ್ಯೋಗ ಹುಡುಕುತ್ತಿರುವವರಿಗೆ ಕೆಲಸ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಉಪನ್ಯಾಸಕರಿಗೆ ಬಹಳ ಗೌರವ ದೊರೆಯುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ಸ್ವಲ್ಪ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಕೃಷಿಭೂಮಿ ವ್ಯವಹಾರ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಇರುತ್ತದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರದಿಂದಿರಿ. ಸಂಗಾತಿಯ ಸಹಕಾರದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭದಲ್ಲಿ ಚಿಂತೆ ಹೆಚ್ಚಾಗಿರುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ದೊರೆಯುತ್ತದೆ. ಆಹಾರ ವ್ಯತ್ಯಾಸದಿಂದ ಉದರ ದೋಷಗಳು ಕಾಣಿಸಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ನಿರೀಕ್ಷೆಗೆ ಮೀರಿದ ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ನಿರ್ಧಾರಗಳಲ್ಲಿ ಬಹಳ ದ್ವಂದ್ವವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಹಿರಿಯರ ಸಹಕಾರದಿಂದ ಉದ್ಯೋಗದಲ್ಲಿ ಹೆಚ್ಚು ಅನುಕೂಲವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶ ದೊರೆಯುವ ಯೋಗವಿದೆ. ಕಾಲು ನೋವು ಅಥವಾ ಮೂಳೆ ನೋವು ನಿಮ್ಮನ್ನು ಕಾಡಬಹುದು. ಸಂಗಾತಿಯ ಸಹಾಯದಿಂದ ವಿದೇಶಕ್ಕೆ ಹೋಗಬಹುದು. ಗಣಿಗಾರಿಕೆ ಮಾಡುವವರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಿಭಿನ್ನ ರೀತಿಯ ಆಲೋಚನೆಗಳು ನಿಮ್ಮಲ್ಲಿ ಇರುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಸಂಗಾತಿಯ ಕಡೆಯಿಂದ ಆಸ್ತಿ ದೊರೆಯುವ ಸಾಧ್ಯತೆಗಳಿವೆ. ಆಸ್ತಿ ಕೊಳ್ಳಲು ಬೇಕಾದ ಹಣಕಾಸಿನ ಮಾರ್ಗ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಈಗ ಸಾಮಾನ್ಯ ಫಲಿತಾಂಶ ಇರುತ್ತದೆ. ಸ್ನಾಯುಗಳ ಸೆಳೆತ ಕೆಲವರನ್ನು ಕಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಬಂಧುಗಳ ಸಹಕಾರ ದೊರೆಯುತ್ತದೆ. ಕೃಷಿಭೂಮಿಯನ್ನು ಅಭಿವೃದ್ಧಿಪಡಿಸುವವರಿಗೆ ಆದಾಯ ಹೆಚ್ಚುತ್ತದೆ. ನರಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಜತೆಗೂಡಿ ಮಾಡಿದ ಸರ್ಕಾರಿ ವ್ಯವಹಾರಗಳಲ್ಲಿ ಲಾಭವಿರುತ್ತದೆ. ನಿಮ್ಮ ಸಂಗಾತಿಯ ಮುನಿಸು ನಿಮಗೆ ಮುಜುಗರ ತರಬಹುದು. ಕುಟುಂಬದ ವ್ಯವಹಾರಗಳಲ್ಲಿ ನಿಮಗೆ ಲಾಭವಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಯಾವುದೇ ಕೆಲಸವನ್ನು ಸಾಧಿಸುವ ಉತ್ಸಾಹ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಲ್ಲಿ ಕೆಲವರು ಮಾತ್ರ ನಿಮಗೆ ಸಹಕಾರ ನೀಡುವವರು. ವಿದೇಶದಲ್ಲಿರುವವರಿಗೆ ಸ್ಥಿರಾಸ್ತಿ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ನೇತ್ರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಸಂತಸಕ್ಕಾಗಿ ಹಣ ಖರ್ಚಾಗುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಕೆಲಸ ಕಾರ್ಯಗಳಲ್ಲಿ ಸಂಗಾತಿಯ ನೆರಳನ್ನು ಕಾಣಬಹುದು. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಬಂಧುಗಳಿಂದ ಸಾಕಷ್ಟು ವಿರೋಧ ಎದುರಾಗುತ್ತದೆ. ಆಡಳಿತಾತ್ಮಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಬಹುದು. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ನೆರವಿನಿಂದ ಆದಾಯ ಹೆಚ್ಚುವುದು. ಸ್ವಂತ ಬುದ್ಧಿವಂತಿಕೆಯಿಂದ ಉದ್ಯೋಗದಲ್ಲಿ ಅಭಿವೃದ್ಧಿ ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಎಲ್ಲರ ವಿರೋಧದ ನಡುವೆಯೂ ನಿಮ್ಮ ಕೆಲಸಕಾರ್ಯಗಳನ್ನು ಸಾಧಿಸುವಿರಿ. ಆಮದು ಮತ್ತು ರಫ್ತು ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಬಂಧುಗಳಿಂದ ಸ್ವಲ್ಪಮಟ್ಟಿನ ಸಹಕಾರ ದೊರೆಯುತ್ತದೆ. ಫ್ಯಾಷನ್ ಡಿಸೈನಿಂಗ್ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಸುಗಂಧ ದ್ರವ್ಯ ತಯಾರಕರಿಗೆ ಬೇಡಿಕೆ ಹೆಚ್ಚುತ್ತದೆ. ಪಿತ್ತವಿಕಾರಗಳು ಕೆಲವರನ್ನು ಕಾಡಬಹುದು. ಸಂಗಾತಿಯು ನಿಮ್ಮ ಮೇಲೆ ಕೋಪಗೊಳ್ಳುವ ಸಾಧ್ಯತೆಗಳಿವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದೇಶಕ್ಕೆ ಹೋಗಬೇಕೆಂದು ಪ್ರಯತ್ನಿಸುತ್ತಿದ್ದವರಿಗೆ ಈಗ ಯೋಗ ಕೂಡಿಬರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಹಿರಿಯರ ಸಹಕಾರ ದೊರೆಯುತ್ತದೆ. ಹೂವು ಬೆಳೆಯುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅಪೇಕ್ಷಿತ ವಿಷಯಗಳಲ್ಲಿ ಓದುವ ಅವಕಾಶ ದೊರೆಯುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಅದಿರು ವ್ಯಾಪಾರ ಮಾಡುವವರ ಆದಾಯ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ಮನಸ್ಸಿನ ಆಲೋಚನೆಗಳು ಒಂದೇ ರೀತಿ ಇರುವುದಿಲ್ಲ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಬಂಧುಗಳ ಸಹಕಾರ ಸಕಾಲಕ್ಕೆ ದೊರೆಯುತ್ತದೆ. ಧರ್ಮ ಕಾರ್ಯಗಳನ್ನು ಮಾಡುವವರಿಗೆ ಸಮಾಜದ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಸ್ವಲ್ಪ ಹಿನ್ನಡೆಯಾಗಬಹುದು.

ಪದಬಂಧ 2941

ಮೇಲಿಂದ ಕೆಳಕ್ಕೆ

1.ಆಕಸ್ಮಿಕ ಪ್ರಮಾದವಾಗಿದೆ 'ಮನ್ನಿಸಿ' ಎನ್ನುವ ಒಕ್ಕಣೆ	5
2.ಹಣದೊಡತಿಯ ಒಡೆಯ	4
3. ಜೇನಾದ ಕೃಷ್ಣಮಿತ್ರ	4
4. ಮಳೆಗೆ ಅಧಿದೇವನೆಂಬ ದಿಕ್ಪಾಲಕ	3
6. ಕಾಪಾಡುವ ವ್ಯವಸ್ಥೆ	3
7. ಬಲೆ ಬೀಸಿ ವಶಪಡಿಸಿಕೊಳ್ಳುವವನ ಹೆಸರು ಪಂಜಾಬಿನ ಪಟ್ಟಣವೊಂದರಿಂದ ಬಂದಿದೆ	4
8. ಕೋರ್ಟು ಕಚೇರಿಗಳಲ್ಲಿ ಮಂಡಿಸುವ ತರ್ಕ ವಿತರ್ಕ	5
9. ನಮ್ಮನ್ನೆಲ್ಲಾ ಕಾಯುವ ತೋಟದ ಪ್ರಭು ತಲೆಕೆಳಕು	3
10. ಹೊಟ್ಟೆ ಮತ್ತು ತಲೆಗೆ ಏನಾದರೂ ಹೆಚ್ಚಾದರೆ ವಾಂತಿ ಬರುವ ಹಾಗಾಗುವ ಸ್ಥಿತಿ	4
11. ಪಳಗಿದ ಕೈಯಲ್ಲಿ 'ಹ'ಕಾರ ಲೋಪವಾಗಿದೆ	3
13. ಬೆಡಗಿನಿಂದ ಬೆಳಗುವ ಸುಂದರಿಯ ಸೊಬಗು	3
15. ಪಾಂಡವ ಕೌರವರ ವ್ಯಾಜ್ಯಕ್ಕೆ ಕಾರಣವಾದ ಆನೆಯ ಹೆಸರಿನ ಪಟ್ಟಣ	5
16. ವ್ಯತಿರಿಕ್ತ ಪರಿಸ್ಥಿತಿಯಿಂದ ಹೊರಬರಲು ಹೆಣದಂತೆ ಸೆಣಸಾಡು	4
17. ಮಾರಾಟದ ಬೆಲೆಯಲ್ಲಿ ತೋರಿಸುವ ಸೋಡಿ ಔದಾರ್ಯ	4
18. ಪವಿತ್ರ ಪಾವನನಾಗಿರುವವ ನಮ್ಮ ಕನ್ನಡದ ರಾಜಕುವರನಂತೆ	3

ಎಡದಿಂದ ಬಲಕ್ಕೆ

1.ಮನ್ನಿಸುವುದೇ ಇವನ ಔದಾರ್ಯ ಗುಣ	4
3. ತ್ಯಾಗರಾಜರ ಕೃತಿಯಲ್ಲಿ ದೊಡ್ಡಚೇತನದಲ್ಲೊಬ್ಬ	5
5. ಕೊನೆಯಲ್ಲಿ ಒಡವೆಯೆನಿಸುವ ನಾಟಕ ವೇದಿಕೆ	5
7. ಮತ ಕುಲಗಳ ಜಗಳದ ಒಳಸಿದ್ಧಾಂತ	4
9. ಕೆಟ್ಟಿದೆ ಎನ್ನುವ ಕಳಂಕ ಹೊತ್ತ ಪ್ರಸಕ್ತ ಯುಗ ಶೂನ್ಯದಲ್ಲಿ ಕೊನೆಯಾಗಿದೆ	4
10. ಕಾಶಿ, ಬನಾರಸಿಯ ಪೂರ್ವನಾಮ ಈಗ ಮತ್ತೆ ವಾಪಾಸು	4
12. ಕೊರಳಲ್ಲಿ ಹಾರವನ್ನು ಹೊತ್ತಿರುವವ	4
14. ಕಾಸೆಲ್ಲಾ ಖರ್ಚಾಗಿರುವ ಬರಿಯ ಕೈ	4
16. ಭಯ, ಭೀತಿ, ಅಂಜಿಕೆಗೆ ಪರ್ಯಾಯ	4
18. ಒಳ್ಳೆಯ ಕರ್ಮದಿಂದ ಒಳ್ಳೆಯ ಕೀರ್ತನೆ ಕೇಳುವ ಭಾಗ್ಯ	5
19. ತಮಿಳು ಮಾತೃಭಾಷೆಯಾಗಿರುವ ನಮ್ಮ ನೆರೆ ರಾಜ್ಯ	5
20. ಏಳು ಮಲೆಯ ಶ್ರೇಷ್ಠ ಒಡೆಯನ ಕ್ಷೇತ್ರ	4



ಪದಬಂಧ ಉತ್ತರ -2940

ಮೇಲಿಂದ ಕೆಳಕ್ಕೆ

1.ಅಯೋಮಯ 2.ತ್ರಿಕಾಲಿನಿ 3. ಭಾವಸಂಗಮ 4.ಶತ್ರುವಿನಾಶ 8.ಜನಿವಾರ 9.ಕೆರೆಕಟ್ಟೆ 10.ರಾಜಗೃಹ 11.ದೇವವ್ರತ 13.ಹಣವಂತರು 14.ಕಲಶಪೂಜೆ 16.ರಿಪುಹರ 17.ನೆನೆಗುದಿ

ಎಡದಿಂದ ಬಲಕ್ಕೆ

1.ಅಹೋರಾತ್ರಿ 3.ಭಾರತೀಶ 5.ಕಾಲಭೈರವ 6.ಸಂತಕವಿ 7.ಯಜಮಾನಿಕೆ 10.ರಾಮಸಂದೇಶ 12.ಕನಿಜ 13.ಹರಟೆಕಟ್ಟೆ 15.ಹರಿಚಿಂತನೆ 18.ವಂಗದೇಶ 19.ಪೂರ್ಣಪ್ರವಾಹ 20.ರುದ್ರಪೂಜೆ 21.ರಥಬೀದಿ

ಕಳಿಂಗ ಯುದ್ಧದ ಕಥೆಯನ್ನು ಮೌನವಾಗಿ ಹೇಳುವ ದೌಲಿಗಿರಿಯಲ್ಲಿ ಶಾಂತಿ ಸಾರುವ ಬೌದ್ಧ ಸ್ತೂಪ ಎದ್ದುನಿಂತಿದೆ. ಅಶೋಕ ಚಕ್ರವರ್ತಿ ಮನಸನ್ನು ಬದಲಿಸಿದ ಜಾಗವೀಗ ಅನೇಕರಿಗೆ ಮನಶ್ಶಾಂತಿ ನೀಡುವ ತಾಣವಾಗಿ ಪರಿವರ್ತನೆಗೊಂಡಿದೆ. ಇತಿಹಾಸದ ಪಾಠ ಮತ್ತು ಆಧ್ಯಾತ್ಮಿಕ ಶಾಂತಿ ಎರಡೂ ನೆಲೆಗೊಂಡಿರುವ ಈ ವಿಶಿಷ್ಟ ಪ್ರವಾಸಿ ತಾಣದ ಇತಿಹಾಸವನ್ನು ಮೆಲುಕು ಹಾಕುವ ಯತ್ನ ಇಲ್ಲಿದೆ...

ಬೌದ್ಧ ಸ್ತೂಪ

ದೌಲಿಗಿರಿಯಲ್ಲಿ ಕಳಿಂಗ ಯುದ್ಧದ ನೆನಪು

• ಕೆ.ಟಿ. ವಿಜಯಕುಮಾರ್

ಕೆಲಸದ ನಿಮಿತ್ತ ಒಡಿಶಾದ ರಾಜಧಾನಿ ಭುವನೇಶ್ವರ ನಗರಕ್ಕೆ ಭೇಟಿ ನೀಡಿದ್ದೆ. ದೇವಾಲಯಗಳ ನಾಡು ಎನ್ನಿಸಿಕೊಳ್ಳುವ ಈ ನಗರ ತನ್ನ ಇತಿಹಾಸದ ನಿಶ್ಯಬ್ದ ಗಂಭೀರತೆಯೊಂದಿಗೆ ಪ್ರವಾಸಿಗರನ್ನು ಸೆಳೆಯುತ್ತದೆ. ಅಲ್ಲಿಂದ ಸುಮಾರು 15 ಕಿಲೋಮೀಟರ್ ದೂರದಲ್ಲಿರುವ ದೌಲಿಗಿರಿ ಕಡೆಗೆ ಹೊರಟಾಗ, ನಗರ ಗದ್ದಲ ನಿಧಾನವಾಗಿ ಹಸಿರು ಮೌನಕ್ಕೆ ಮಾರ್ಪಟ್ಟಿತು.

ತಿರುವು-ಮುರುವುಗಳ ರಸ್ತೆ, ಎರಡೂ ಬದಿಗಳಲ್ಲಿ ಎತ್ತರದ ಮರಗಳ ಸಾಲು, ಗೂಡು ಕಟ್ಟಿಕೊಂಡಿರುವ ಹಕ್ಕಿಗಳ ಕಲರವ—ಇವುಗಳೆಲ್ಲ ದೌಲಿಗಿರಿಯ ಪ್ರವೇಶದ್ವಾರದಲ್ಲಿ ಪ್ರಕೃತಿಯ ಸ್ವಾಗತದಂತೆ ಅನಿಸಿತು. ಬೆಟ್ಟದ ಮೇಲೇರಿದ ಕೂಡಲೇ ಕಣ್ಣಿಗೆ ಬೀಳುವ ಬೌದ್ಧ ಸ್ತೂಪ ಕ್ಷಣಕಾಲ ಮನಸ್ಸನ್ನು ವಿಸ್ಮಯಗೊಳಿಸುತ್ತದೆ. ಮೆಟ್ಟಿಲುಗಳನ್ನು ಏರಿದಂತೆ, ಶಾಂತವಾಗಿ ಮಂದಹಾಸಿಸುವ ಬುದ್ಧ ಮೂರ್ತಿ ಎದುರಾದಾಗ, ಆ ನಗು ಮನದೊಳಗೆ ಎಲ್ಲೋ ನೆಲೆಸುತ್ತದೆ. ಪ್ರವಾಸಿಗನಾಗಿ ಹೋದ ನನ್ನ ಹೆಜ್ಜೆ, ಆ ಕ್ಷಣದಲ್ಲಿ ಒಳಗಿನ ಶಾಂತಿಯನ್ನು ಹುಡುಕುವ ಯಾತ್ರೆಯಾಗಿ ಬದಲಾಗಿದೆ.

ದೌಲಿಗಿರಿ ಕೇವಲ ಪ್ರಕೃತಿ ಸೌಂದರ್ಯದ ತಾಣವಲ್ಲ; ಇದು ಇತಿಹಾಸದ ಜೀವಂತ ಅಧ್ಯಾಯ. ಉತ್ಕಳ ಪ್ರದೇಶದಲ್ಲಿ ಕ್ರಿ.ಪೂ. 261ರಲ್ಲಿ ನಡೆದ ಕಳಿಂಗ ಯುದ್ಧದ ಕಥೆಯನ್ನು ಈ ನೆಲ ಮೌನವಾಗಿ ಹೇಳುತ್ತದೆ. ಪರಾಕ್ರಮಿ ಸಾಮ್ರಾಟನಾಗಿ ಹೆಸರಾದ ಅಶೋಕ ಚಕ್ರವರ್ತಿ, ತನ್ನ ಮೌರ್ಯ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಉದ್ದೇಶದಿಂದ ಸಮೃದ್ಧ ಕಳಿಂಗ ರಾಜ್ಯದ ಮೇಲೆ ದಾಳಿ ನಡೆಸಿದನು. ಪೂರ್ವ ಕಡಲತೀರದ ಮೇಲೆ ಹಿಡಿತವಿದ್ದ ಕಳಿಂಗವು ವ್ಯಾಪಾರ ಹಾಗೂ ಆರ್ಥಿಕವಾಗಿ ಬಹುಮುಖ್ಯವಾಗಿತ್ತು. ಈ ಭಾಗವನ್ನು ತನ್ನ ಹಿಡಿತಕ್ಕೆ ತರಲು ಅವನು ದಂಡೆತ್ತಿ ಬಂದನು.

ದಾಯಾ ನದಿ ದಂಡೆಯ ದೌಲಿ ಎಂಬ ಜಾಗದಲ್ಲಿ ನಡೆದ ಆ ಯುದ್ಧವು ಇತಿಹಾಸದಲ್ಲೇ ಕ್ರೂರ ಅಧ್ಯಾಯವಾಗಿ ಉಳಿಯಿತು. ಲಕ್ಷಾಂತರ ಜನರು ಪ್ರಾಣ ಕಳೆದುಕೊಂಡರು. ಅನೇಕರು ಅಂಗವೈಕಲ್ಯಕ್ಕೆ ಒಳಗಾದರು. ರಕ್ತದ ಹನಿಗಳು ಮಣ್ಣಿನಲ್ಲಿ ಬೆರೆತು, ದಾಯಾ ನದಿಯ ನೀರು ಕೆಂಪು ಹೊಳೆಯಂತೆ ಹರಿದಿತೆಂದು ಇತಿಹಾಸ ಹೇಳುತ್ತದೆ. ಕಳಿಂಗಕ್ಕಾಗಿ ಹೋರಾಡಿದ ಮಹಿಳೆಯರು, ಎಳೆ ಮಕ್ಕಳು, ಚೆಲ್ಲಾಪಿಲ್ಲಿಯಾಗಿದ್ದ ಸೈನಿಕರ ದೇಹಗಳು-ಈ ದೃಶ್ಯಗಳು ಅಶೋಕನ ಮನಸ್ಸನ್ನು ತೀವ್ರವಾಗಿ ಕದಡಿದವು.

ಹಿಂಸೆ ಮತ್ತು ಯುದ್ಧದಿಂದ ಏನನ್ನೂ ಸಾಧಿಸಲಾಗುವುದಿಲ್ಲ ಎಂಬ ಸತ್ಯವನ್ನು ಅರಿತ ಕ್ಷಣವೇ ಅವನ ಜೀವನದ ತಿರುವುಬಿಂದು. ಮನಶ್ಶಾಂತಿಯ ಹುಡುಕಾಟದಲ್ಲಿ ಅವನು ಬುದ್ಧನ ಕಡೆ ತಿರುಗಿದನು. ನಂತರ ತನ್ನ ಉಳಿದ ಜೀವನವನ್ನು ಧಮ್ಮ ಪ್ರಚಾರಕ್ಕೆ ಅರ್ಪಿಸಿ, ಅಹಿಂಸೆಯ ಮಾರ್ಗವನ್ನು ಜಗತ್ತಿಗೆ ಸಾರಿದನು. 'ದೇವನಾಂಪ್ರಿಯ' ಎಂದು ಶಾಸನಗಳಲ್ಲಿ ತನ್ನನ್ನು ಕರೆಸಿಕೊಂಡ ಅವನ ಹೆಜ್ಜೆ ಗುರುತುಗಳು ಭಾರತದ ಅನೇಕ ಭಾಗಗಳಲ್ಲಿ ಕಂಡುಬರುತ್ತವೆ; ಕನ್ನಡದ ಮಣ್ಣಿನಲ್ಲೂ ಅವುಗಳ ನೆನಪುಗಳಿವೆ.

ಇಂದು ದೌಲಿಗಿರಿಯ ಮೇಲೆ ಶಾಂತಿ ಬೌದ್ಧ ಸ್ತೂಪ ಎದ್ದುನಿಂತಿದೆ. 1972ರಲ್ಲಿ ಜಪಾನ್ ಬೌದ್ಧ ಸಂಘ ಮತ್ತು ಕಳಿಂಗ ಬೌದ್ಧ ಸಂಘದ ಆಶ್ರಯದಲ್ಲಿ ನಿರ್ಮಿಸಲಾದ ಈ ಶಾಂತಿ ಸ್ತೂಪ, ಅಹಿಂಸೆಯ

ಬುದ್ಧನ ಪ್ರತಿಮೆ

ಸಂಕೇತವಾಗಿ ಕಂಗೊಳಿಸುತ್ತದೆ. ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಬುದ್ಧ ಮೂರ್ತಿಗಳು ಸ್ಥಾಪಿತವಾಗಿವೆ. ಗೋಡೆಗಳ ಮೇಲೆ ಕೆತ್ತಿದ ಬುದ್ಧನ ಚರಿತ್ರೆ, ಸಿಂಹಲಾಂಛನ, ಧಮ್ಮಚಕ್ರ–ಎಲ್ಲಾ ಸೇರಿ ಸ್ತೂಪದ ಸೌಂದರ್ಯವನ್ನು ಹೆಚ್ಚಿಸಿವೆ. ಹಸಿರು ಪರ್ವತ ಶ್ರೇಣಿಯ ಮಧ್ಯೆ ಬಿಳಿ ಸ್ತೂಪವು ಆಧ್ಯಾತ್ಮಿಕ ಶಾಂತಿಯ ದೀಪದಂತೆ ಕಾಣುತ್ತದೆ.

ಸಂಜೆ ಹೊತ್ತಿನಲ್ಲಿ ನಡೆಯುವ ಬೆಳಕಿನ ಅಲಂಕಾರ ಮತ್ತು ಹಿನ್ನೆಲೆ ಸಂಗೀತದ ನಡುವೆ ಬುದ್ಧ ಮೂರ್ತಿಯನ್ನು ನೋಡುವ ಅನುಭವ ವಿಶಿಷ್ಟ. ಮೃದುವಾದ ಬೆಳಕಿನಲ್ಲಿ ಕಂಗೊಳಿಸುವ ಆ ನಗು, ಸಾವಿರಾರು ವರ್ಷಗಳ ಇತಿಹಾಸವನ್ನು ಮೌನವಾಗಿ ಹೇಳುವಂತೆ ತೋರುತ್ತದೆ. ಪ್ರತಿದಿನವೂ ಸಾವಿರಾರು ಜನರು ಇಲ್ಲಿ ಬಂದು ಆ ನಗುವನ್ನು ತಮ್ಮ ಮನಸ್ಸಿನಲ್ಲಿ ನೆಲೆಗೊಳಿಸಿಕೊಂಡು ಹೋಗುತ್ತಾರೆ.

ಒಡಿಶಾ ಮತ್ತು ಉತ್ತರ ಆಂಧ್ರ ಪ್ರದೇಶದ ಜನರಿಗೆ ಬುದ್ಧನ ತತ್ವ ಸಾರುವ ಪ್ರಮುಖ ತಾಣವಾಗಿ ದೌಲಿಗಿರಿ ಬೆಳೆದಿದೆ. ಪ್ರೀತಿ, ಕರುಣೆ, ಮೈತ್ರಿ, ಅಹಿಂಸೆ ಇವುಗಳೇ ಮಾನವಕುಲದ ಉಳಿವಿನ ಮಾರ್ಗವೆಂದು ಸಾರುವ ಈ ಸ್ಮಾರಕ, ಮಾನವೀಯತೆಯ ತುಡಿಯುವ ಹೃದಯವಾಗಿದೆ.

ಇಂದಿನ ಜಗತ್ತನ್ನು ನೋಡುವಾಗ, ಯುದ್ಧೋನ್ಮಾದ ಮತ್ತು ಸಂಘರ್ಷಗಳ ಸುದ್ದಿಗಳು ಕಿವಿಗೆ ಬೀಳುತ್ತವೆ. ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿವೆ. ಅಣುಬಾಂಬ್‌ಗಳ ಭೀತಿ ಮನುಷ್ಯನ ಅಸ್ತಿತ್ವವನ್ನೇ ಪ್ರಶ್ನಿಸುತ್ತದೆ. ಇಂತಹ ಸಂದರ್ಭದಲ್ಲಿ ದೌಲಿಗಿರಿಯಲ್ಲಿ ನಡೆದ ಅಶೋಕನ ಮನಪರಿವರ್ತನೆ, ಇಂದಿನ ಸರ್ವಾಧಿಕಾರಿ ಧೋರಣೆಯ ನಾಯಕರಿಗೂ ಪಾಠವಾಗಬೇಕೆಂಬ ಭಾವ ಮೂಡುತ್ತದೆ.

ಒಮ್ಮೆ ರಕ್ತದಿಂದ ರಂಜಿತವಾದ ಈ ನೆಲ, ಇಂದು ಶಾಂತಿ ಮತ್ತು ಪ್ರೀತಿಯ ಸಂದೇಶ ನೀಡುತ್ತಿದೆ. ಭುವನೇಶ್ವರ ಪ್ರವಾಸದ ನೆನಪಿನಲ್ಲಿ ದೌಲಿಗಿರಿ ಕೇವಲ ಒಂದು ತಾಣವಲ್ಲ; ಅದು ಯುದ್ಧದಿಂದ ಅಹಿಂಸೆಗೆ ನಡೆದ ಮಾನವ ಮನಸ್ಸಿನ ಯಾತ್ರೆಯ ಸಂಕೇತ. ಪ್ರಕೃತಿ ಸೌಂದರ್ಯ, ಇತಿಹಾಸದ ಪಾಠ ಮತ್ತು ಆಧ್ಯಾತ್ಮಿಕ ಶಾಂತಿ ಎಲ್ಲ ಒಂದೇ ಸ್ಥಳದಲ್ಲಿ ಸೇರುವ ಅನುಭವ ದೌಲಿಗಿರಿಯಲ್ಲಿ ಸಿಗುತ್ತದೆ. ಇಲ್ಲಿ ನಿಂತಾಗ, ಹೊರಗಿನ ಜಗತ್ತಿಗಿಂತ ಒಳಗಿನ ಜಗತ್ತೇ ಹೆಚ್ಚು ಸ್ಪಷ್ಟವಾಗುತ್ತದೆ ❖

'ಯಕ್ಷಗಾನ ಶನಿಕಥೆ'ಯ ದೃಶ್ಯ

ಪಡುವಲ ದೃಶ್ಯ ಮೂಡಲ ಶ್ರವ್ಯ

• ರವಿ ಮಡೋಡಿ

ಕರ್ನಾಟಕದ ಸಾಂಸ್ಕೃತಿಕ ನಕಾಶೆಯಲ್ಲಿ ಯಕ್ಷಗಾನವು ಪ್ರಾದೇಶಿಕವಾಗಿ ಹಲವು ರೂಪಾಂತರಗಳನ್ನು ಹೊಂದಿದೆ. ದಕ್ಷಿಣ ಕರ್ನಾಟಕದಲ್ಲಿ 'ಮೂಡಲಪಾಯ', ಕರಾವಳಿ–ಮಲೆನಾಡಿನಲ್ಲಿ 'ಪಡುವಲಪಾಯ' ಹಾಗೂ ಉತ್ತರ ಕರ್ನಾಟಕದಲ್ಲಿ 'ಬಯಲಾಟ' ರೂಪಗಳಲ್ಲಿ ಬೆಳೆಯುತ್ತ ಬಂದ ಈ ಕಲೆಯನ್ನು ಒಟ್ಟಾರೆ ಯಕ್ಷಗಾನವೆಂದೇ ಗುರುತಿಸಲಾಗುತ್ತದೆ. ಪ್ರತಿ ರೂಪವೂ ತನ್ನದೇ ಆದ ಸಂಗೀತ, ಮಾತುಗಾರಿಕೆ ಮತ್ತು ರಂಗಭಾವಗಳ ಮೂಲಕ ವಿಭಿನ್ನತೆ ತೋರಿಸುತ್ತದೆ.

ಆದರೆ, ಇತ್ತೀಚಿನ ದಶಕಗಳಲ್ಲಿ ಈ ಪರಂಪರೆಯಲ್ಲೇ ಹೊಸ ಸಂಯೋಜನೆಯೊಂದು ಜನಪ್ರಿಯತೆಯನ್ನು ಗಳಿಸಿದೆ. ಅದೇ 'ಯಕ್ಷಗಾನ ಶನಿಕಥೆ'. ಇದು ಪಡುವಲಪಾಯದ ರಂಗತಂತ್ರ ಮತ್ತು ಮೂಡಲಪಾಯದ ಶ್ರವ್ಯ ಸಂವೇದನೆಗಳನ್ನು ಮಿಳಿತಗೊಂಡಿರುವ ವಿಶಿಷ್ಟ ಸಮ್ಮಿಶ್ರ ರೂಪವಾಗಿದೆ. ಪರಂಪರೆಯೊಳಗಿನ ಈ ಹೊಸ ಪ್ರಯೋಗ, ಪ್ರೇಕ್ಷಕರಿಗೆ ವಿಭಿನ್ನ ಅನುಭವವನ್ನು ನೀಡುತ್ತಿದೆ.

ಸುಮಾರು ಐವತ್ತು ವರ್ಷಗಳ ಹಿಂದೆ ಸಾಗರ ತಾಲ್ಲೂಕಿನ ಹೊಸೂರಿನ ಎಚ್.ಎಂ.ಭಾಸ್ಕರ್ ಅವರು ಈ ಶೈಲಿಗೆ ರೂಪ ನೀಡಿದರು. ಯಕ್ಷಗಾನದ ವೇಷಭೂಷಣ ಮತ್ತು ಮಾತುಗಾರಿಕೆಯನ್ನು ಮೂಡಲ ಸಂಗೀತ ಪದ್ಧತಿಯೊಂದಿಗೆ ಜೋಡಿಸುವ ಮೂಲಕ ಹೊಸ ಪ್ರದರ್ಶನ ಶೈಲಿಯನ್ನೇ ಅವರು ರೂಪಿಸಿದರು. ಆರಂಭದಲ್ಲಿ ಸೀಮಿತ ವಲಯದಲ್ಲಿದ್ದ ಈ ಪ್ರಯೋಗ, ನಂತರ ಕ್ರಮೇಣ ಜನಪ್ರಿಯತೆಯನ್ನು ಗಳಿಸಿತು.

ಶನಿಕಥೆಯ ಶ್ರವ್ಯ ರೂಪವು ಅದರ ಮುಖ್ಯ ಆಕರ್ಷಣೆ. ಹಾರ್ಮೋನಿಯಂ ಮತ್ತು ತಬಲಾ ಬಳಕೆಯೊಂದಿಗೆ ಭಾಗವತರ ಗಾಯನವು ಇಲ್ಲಿ 'ಸಂಗೀತ ಪ್ರಧಾನ'ವಾಗಿದೆ. ಪಡುವಲಪಾಯದ ಚಂಡೆ–ಮದ್ದಲೆಯ ಗರ್ಜನೆಯ ಬದಲು, ಮೃದುವಾದ ನಾದ ಮತ್ತು ರಾಗಗಳ ವಿಸ್ತರಣೆ ಪ್ರೇಕ್ಷಕರ ಮನಸ್ಸನ್ನು ಆವರಿಸುತ್ತದೆ. ಸಂಗೀತದ ಈ ಮೃದುತ್ವವೇ ಕಥೆಯ ಭಾವನಾತ್ಮಕತೆಯನ್ನು ಮತ್ತಷ್ಟು ಗಾಢಗೊಳಿಸುತ್ತದೆ. ಆದಾಗ್ಯೂ, ದೃಶ್ಯ ರೂಪದಲ್ಲಿ ಪಡುವಲಪಾಯದ ವೇಷಭೂಷಣ, ರಂಗ ವಿನ್ಯಾಸ ಮತ್ತು ನಟನೆ ಪದ್ಧತಿಗಳನ್ನೇ ಉಳಿಸಿಕೊಂಡಿರುವುದು ವಿಶೇಷ.

ಮಲೆನಾಡಿನ ಕನ್ನಡ ಹಾಗೂ ಹಳೆಗನ್ನಡದ ಸೊಗಡಿನ ಮಾತುಗಾರಿಕೆ ಶನಿಕಥೆಗೆ ವಿಶಿಷ್ಟ ಭಾವನಾತ್ಮಕತೆಯನ್ನು ನೀಡುತ್ತದೆ. ಕಥೆಯ ಗಂಭೀರತೆಗೆ ಮಧ್ಯೆ ಹಾಸ್ಯ ಪಾತ್ರ 'ನಂದಿಶೆಟ್ಟಿ' ಪ್ರೇಕ್ಷಕರಿಗೆ ವಿಶ್ರಾಂತಿ ನೀಡುವ ಪ್ರಮುಖ ಅಂಶವಾಗಿದೆ. ಈ ಶೈಲಿ ಮುಖ್ಯವಾಗಿ ಸಾಗರ, ಹೊಸನಗರ, ಸೊರಬ, ಸಿದ್ದಾಪುರ ಮತ್ತು ಕುಂದಾಪುರ ಭಾಗಗಳಲ್ಲಿ ವ್ಯಾಪಕವಾಗಿದೆ. ಈ ಪ್ರದೇಶಗಳ ಧಾರ್ಮಿಕ ನಂಬಿಕೆಗಳೊಂದಿಗೆ ಇದು ನಂಟು ಬೆಳೆಸಿಕೊಂಡಿದೆ.

ಶನಿಕಥೆಯು ಕೇವಲ ಮನೋರಂಜನೆಗಷ್ಟೇ ಸೀಮಿತವಲ್ಲ; ಅದು ಭಕ್ತಿ ಮತ್ತು ಆರಾಧನೆಯ ಅಂಗವಾಗಿದೆ. 'ಹರಕೆ' ಮತ್ತು 'ಸೇವೆ' ಆಧಾರಿತ ಈ ಪ್ರದರ್ಶನದಲ್ಲಿ ಕಟ್ಟುನಿಟ್ಟಿನ ಆಚರಣೆಗಳಿವೆ. ಕಲಾವಿದರು ಮತ್ತು ಸೇವೆ ಮಾಡುವ ಕುಟುಂಬದವರು ಶುದ್ಧತೆಯನ್ನು ಕಾಪಾಡಿಕೊಂಡು, ಧಾರ್ಮಿಕ ವಿಧಿವಿಧಾನಗಳೊಂದಿಗೆ ಪ್ರದರ್ಶನವನ್ನು ಆರಂಭಿಸುತ್ತಾರೆ.

'ಶನಿ ಪ್ರವೇಶವಾದ ಮೇಲೆ ಮಂಗಳಾರತಿವರೆಗೂ ಕಥೆಯನ್ನು ಆಲಿಸಬೇಕು' ಎಂಬ ನಂಬಿಕೆ ಈ ಭಾಗದ ಜನರಲ್ಲಿ ಗಾಢವಾಗಿದೆ. ಧರ್ಮದ ಸಂದೇಶವನ್ನು ಸಾರುವ ಆಧ್ಯಾತ್ಮಿಕ ನಂಬಿಕೆ. ಈ ನಂಬಿಕೆ ಶನಿಕಥೆಯ ಪ್ರಭಾವವನ್ನು ಇನ್ನಷ್ಟು ಗಾಢಗೊಳಿಸುತ್ತದೆ.

ನೃತ್ಯಶೈಲಿಯಲ್ಲಿ ಜನಪದೀಯ ಅಂಶಗಳ ಪ್ರಾಬಲ್ಯ ಕಂಡುಬರುತ್ತದೆ. ಪದ್ಯಗಳಿಗೆ ಅನುಗುಣವಾಗಿ ಕಲಾವಿದರು ಸ್ವಯಂ ರೂಪಿಸುವ ಹೆಜ್ಜೆಗಳು ವಿಶಿಷ್ಟವಾಗಿವೆ. ರಾಜ ವಿಕ್ರಮಾದಿತ್ಯನ ನೋವು, ಶನಿದೇವನ ಗಾಂಭೀರ್ಯ ಮತ್ತು ಅಂತ್ಯದ ದರ್ಶನ–ಇವೆಲ್ಲವೂ ಸೇರಿ ಆಳವಾದ ಆಧ್ಯಾತ್ಮಿಕ ಅನುಭವವನ್ನು ಸೃಷ್ಟಿಸುತ್ತವೆ.

ಶನಿಕಥೆಯ ಪ್ರಮುಖ ಕಥಾನಕಗಳಲ್ಲಿ ರಾಜ ವಿಕ್ರಮಾದಿತ್ಯನ ಚರಿತ್ರೆ ಪ್ರಸಿದ್ಧ. ಅಹಂಕಾರದಿಂದ ಕಷ್ಟಕ್ಕೆ ಒಳಗಾಗಿ ಶರಣಾಗುವ ರಾಜನ ಕಥೆ, 'ನ್ಯಾಯಕ್ಕೆ ರಕ್ಷಣೆ, ತಪ್ಪಿಗೆ ದಂಡನೆ' ಎಂಬ ಶನಿದೇವನ ತತ್ವವನ್ನು ಸಾರುತ್ತದೆ. ಈ ಕಥೆಯ ಮೂಲಕ ಜೀವನ ಮೌಲ್ಯಗಳನ್ನೂ ಒತ್ತಿಹೇಳಲಾಗುತ್ತದೆ.

ಇಷ್ಟೊಂದು ಸಾಂಸ್ಕೃತಿಕ ಮಹತ್ವವಿದ್ದರೂ, ಶನಿಕಥೆ ಕಲಾವಿದರು ಇಂದು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಹೆಚ್ಚಿನವರು ಹವ್ಯಾಸಿಗಳಾಗಿದ್ದು, ಆರ್ಥಿಕ ಸ್ಥಿರತೆ ಕೊರತೆಯಾಗಿದೆ. ಯುವಪೀಳಿಗೆ ಈ ಕ್ಷೇತ್ರದತ್ತ ತಿರುಗಲು ಹಿಂಜರಿಯುತ್ತಿದೆ. ಜಾನಪದ ಅಥವಾ ಯಕ್ಷಗಾನ ಅಕಾಡೆಮಿಗಳಲ್ಲಿ ಈ ಶೈಲಿಗೆ ಇನ್ನೂ ಸೂಕ್ತ ಸ್ಥಾನಮಾನ ಸಿಕ್ಕಿಲ್ಲ.

ಕಿರಕೋಡು ಕೆ.ಬಿ. ಸರ್ಕಲ್‌ನ ಶ್ರೀ ಶನೀಶ್ವರ ಯಕ್ಷಗಾನ ಮಂಡಳಿ ಕಳೆದ 35 ವರ್ಷಗಳಲ್ಲಿ 2,000ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿರುವುದು ಗಮನಾರ್ಹ ಸಾಧನೆ. ಪ್ರಸ್ತುತ ಸುಮಾರು ಹತ್ತು ಮೇಳಗಳು ಈ ಕಲೆಯನ್ನು ಜೀವಂತವಾಗಿಟ್ಟುಕೊಂಡಿದ್ದು, ವರ್ಷಕ್ಕೆ ನೂರಾರು ಪ್ರದರ್ಶನಗಳು ನಡೆಯುತ್ತಿವೆ. ಈ ಪ್ರಯತ್ನಗಳು ಈ ಪರಂಪರೆಯನ್ನು ಉಳಿಸುತ್ತಿವೆ.

ಒಟ್ಟಾರೆ, ಶನಿಕಥೆಯು ಕೇವಲ ಕಲೆಯಲ್ಲ–ಅದು ಭಕ್ತಿ, ಸಂಸ್ಕೃತಿ ಮತ್ತು ಜೀವನ ಮೌಲ್ಯಗಳ ಸಮ್ಮಿಲನ. ಆಧುನಿಕತೆಯ ಭರಾಟೆಯಲ್ಲಿ ಇಂತಹ ಪರಂಪರೆಗಳನ್ನು ಸಂರಕ್ಷಿಸುವುದು ಅವಶ್ಯಕ. ಸರ್ಕಾರ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಈ ಕಲೆಗೆ ಸೂಕ್ತ ಪ್ರೋತ್ಸಾಹ ನೀಡಿದರೆ ಮಾತ್ರ ಅದು ಮುಂದಿನ ಪೀಳಿಗೆಗೆ ತಲುಪಲಿದೆ. ❖

ಪೊಲೀಸ್ ನಾಯಿಗಳಿಗೆ...
ಕಲಬುರಗಿಯಲ್ಲಿ 'ಕೂಲ್ ಕೂಲ್'

8ನೇ ಪುಟದಿಂದ....

ಇದು ಶೋಕಿ ಅಲ್ಲ, ಕರ್ತವ್ಯದ ಅವಶ್ಯಕತೆ. ವಿಶೇಷವಾಗಿ ವಿಐಪಿ ಬಂದೋಬಸ್ತ್ ಅಥವಾ ಸ್ಫೋಟಕ ತಪಾಸಣೆಯಂತಹ ಸಂದರ್ಭಗಳಲ್ಲಿ ನಾಯಿಗಳು ಹೆಚ್ಚು ಹೊತ್ತು ಹೊರಗೇ ಕೆಲಸ ಮಾಡಬೇಕಾಗುತ್ತದೆ. ಆಗ ಈ ರಕ್ಷಣಾತ್ಮಕ ಕ್ರಮಗಳು ಅವುಗಳ ಆರೋಗ್ಯವನ್ನು ಕಾಪಾಡುತ್ತವೆ.

ನಾಯಿಗಳ ದಿನಚರಿ ಸಹ ಬಿಸಿಲಿಗೆ ತಕ್ಕಂತೆ ಬದಲಾಗುತ್ತದೆ. ಬೆಳಗ್ಗೆ ಬೇಗ ತರಬೇತಿ ಮುಗಿಸಿ, ಬಳಿಕ ಗ್ರೂಮಿಂಗ್, ಪೌಷ್ಟಿಕ ಗಂಜಿ, ಮೊಟ್ಟೆ, ಡ್ರೈಫ್ರುಟ್ಸ್, ಮಲ್ಟಿವಿಟಾಮಿನ್‌ಗಳನ್ನು ನೀಡಲಾಗುತ್ತದೆ. ಮಧ್ಯಾಹ್ನ ಎಳನೀರು ಅಥವಾ ಮಜ್ಜಿಗೆ, ಸಂಜೆ ಮತ್ತೆ ತರಬೇತಿ. ಇದು ಅವುಗಳ ಶಿಸ್ತಿನ ಬದುಕು. ಕೂಲರ್ ನಡುವೆಯೇ ವಿಶ್ರಾಂತಿ ಅವಿಭಾಜ್ಯ ಅಂಗ. ಜತೆಗೆ, ಅವುಗಳಿಗೆ ಸಾಕಷ್ಟು ನೀರು ಕುಡಿಸಲು ವಿಶೇಷ ಗಮನ ನೀಡಲಾಗುತ್ತದೆ; ದೇಹದ ತಾಪಮಾನ ಸಮತೋಲನದಲ್ಲಿರಲು ಇದು ಅಗತ್ಯ.

ಕಲಬುರಗಿ ದಳದಲ್ಲಿ ಬೆಲ್ಜಿಯನ್ ಶೆಫರ್ಡ್, ಜರ್ಮನ್ ಶೆಫರ್ಡ್, ಡಾಬರಮನ್, ಲ್ಯಾಬ್ರಡರ್ ತಳಿಯ ನಾಯಿಗಳು ಅಪರಾಧ, ಸ್ಫೋಟಕ ಹಾಗೂ ಮಾದಕ ವಸ್ತು ಪತ್ತೆ ಕಾರ್ಯಗಳಲ್ಲಿ ತೊಡಗಿವೆ. 'ರೀಟಾ' ಎಂಬ ನಾಯಿ 900ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಪಾಲ್ಗೊಂಡಿದ್ದ ಸಾಧನೆ, ಈ ದಳದ ಕಾರ್ಯಕ್ಷಮತೆಯ ಸಾಕ್ಷಿ. ಇಂತಹ ನಾಯಿಗಳ ಅನುಭವ ಮತ್ತು ತರಬೇತಿ, ಪೊಲೀಸ್ ತನಿಖೆಗೆ ಅಮೂಲ್ಯ ಸಂಪತ್ತಾಗಿವೆ. ❖

'ಅನಿವಾರ್ಯ ತಂಪು'

8ನೇಪುಟದಿಂದ...

ಪ್ರತಿವಾರ ಆರೋಗ್ಯ ತಪಾಸಣೆ, ನಿಯಮಿತ ಸ್ನಾನ ಇವೆಲ್ಲ ನಾಯಿಗಳ ಆರೋಗ್ಯ ಕಾಪಾಡುವ ಕ್ರಮಗಳು. ಬಿಸಿಲಿನಲ್ಲಿ ದೇಹದ ನೀರಿನ ಅಂಶ ಕಡಿಮೆಯಾಗದಂತೆ ದ್ರವ ಪದಾರ್ಥಗಳನ್ನು ಹೆಚ್ಚಾಗಿ ನೀಡಲಾಗುತ್ತದೆ.

ಇಲ್ಲಿನ ಡಾಬರ್‌ಮನ್ ಹಾಗೂ ಲ್ಯಾಬ್ರಡರ್ ಶ್ವಾನಗಳು ಅಪರಾಧ ಪತ್ತೆ ಮತ್ತು ವಿಧ್ವಂಸಕ ತಪಾಸಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. 'ರಾಣಾ' ಎಂಬ ನಾಯಿ ಒಂದು ವರ್ಷದಲ್ಲೇ ಆರು ಕಳ್ಳತನ ಪ್ರಕರಣಗಳನ್ನು ಪತ್ತೆಹಚ್ಚಿದ ಸಾಧನೆ ಗಮನಾರ್ಹ. ಈ ಸಾಧನೆಗಳು, ನಾಯಿಗಳ ತರಬೇತಿ ಮತ್ತು ಆರೈಕೆಯ ನಡುವಿನ ನೇರ ಸಂಬಂಧವನ್ನು ತೋರಿಸುತ್ತವೆ.

ರಕ್ಷಣೆ ಮತ್ತು ಆರೈಕೆ: ಕಲಬುರಗಿ ಮತ್ತು ಬಳ್ಳಾರಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ವಿಧಾನಗಳು ಸ್ವಲ್ಪ ಬೇರೆ ಇದ್ದರೂ ಉದ್ದೇಶ ಒಂದೇ. ಬಿಸಿಲಿನ ಬೇಗೆಯಿಂದ ಶ್ವಾನಗಳನ್ನು ಕಾಪಾಡುವುದು ಮತ್ತು ಅವುಗಳ ಕಾರ್ಯಕ್ಷಮತೆಯನ್ನು ಉಳಿಸುವುದು. ಒಂದೆಡೆ ಕೂಲರ್ ಕೊಠಡಿಗಳು, ಮತ್ತೊಂದೆಡೆ ತಂಪು ಪಾನೀಯಗಳು; ಒಂದೆಡೆ ಶೂಗಳು, ಮತ್ತೊಂದೆಡೆ ನಿಯಂತ್ರಿತ ಚಟುವಟಿಕೆ ಈ ಎಲ್ಲಾ ಕ್ರಮಗಳು ಪೊಲೀಸ್ ಇಲಾಖೆಯ ಮಾನವೀಯ ಮುಖವನ್ನು ತೋರಿಸುತ್ತವೆ.

ಬಿಸಿಲಿನ ಕಾವು ಹೆಚ್ಚಾದಂತೆ, ಈ ಸಿಪಾಯಿಗಳ ಆರೈಕೆಗೂ ತಂಪಿನ ಮಿಡಿತ ಸೇರುತ್ತಿದೆ. ಕರ್ತವ್ಯದಲ್ಲಿ ನಿರತರಾಗಿರುವ ಈ ನಾಯಿಗಳಿಗೆ ಇದು ಕೇವಲ ಸೌಲಭ್ಯವಲ್ಲ; ಅವುಗಳ ಬದುಕಿನ ಅಗತ್ಯ. ಅವುಗಳ ಆರೋಗ್ಯವೇ ಅವುಗಳ ಕಾರ್ಯಕ್ಷಮತೆ; ಅವುಗಳ ಕಾರ್ಯಕ್ಷಮತೆಯೇ ಸಾರ್ವಜನಿಕರ ಭದ್ರತೆ ಎಂಬುದನ್ನು ಈ ಕ್ರಮಗಳು ಸದ್ದಿಲ್ಲದೆ ಸಾರುತ್ತವೆ.

ಉಚಿತ ಆರೋಗ್ಯ...

ವ್ಯಾಯಾಮ ಹೇಳಿಕೊಡುತ್ತಿರುವ ವೈದ್ಯ ಸಿಬ್ಬಂದಿ

8ನೇಪುಟದಿಂದ...

ಆ ಮಾತು ಕೇವಲ ಸಲಹೆಯಾಗಿರಲಿಲ್ಲ; ಅದು ಜೀವನದ ದಿಕ್ಕಾಯಿತು. ಎಂಬಿಬಿಎಸ್ ಪೂರ್ಣಗೊಳಿಸಿದ ಮಾರನೆಯ ದಿನವೇ ತಮ್ಮ ಫಾರಂ ಹೌಸ್‌ನಲ್ಲಿ ಉಚಿತ ಚಿಕಿತ್ಸಾಲಯ ಆರಂಭಿಸಿದರು.

ಅಂದು ಬಿತ್ತಿದ ಸೇವಾಭಾವದ ಬೀಜ ಇಂದು ಸಾವಿರಾರು ಜೀವಗಳಿಗೆ ನೆರಳಾಗಿದೆ, ಅನೇಕ ಕುಟುಂಬಗಳಿಗೆ ಆಶ್ರಯವಾಗಿದೆ.

ಈ ಕಾರ್ಯ 'ರಾಜ್‌ಪ್ರಕಾಶ್ ಪಬ್ಲಿಕ್ ಚಾರಿಟಬಲ್ ಟ್ರಸ್ಟ್' ಮೂಲಕ ಸಾಗುತ್ತಿದೆ. ದಾನಿಗಳು, ಸಂಸ್ಥೆಗಳ ಸಹಕಾರದಿಂದ ಸೇವೆ ವಿಸ್ತರಿಸಿದೆ. ಹರ್ಷ ಆಸ್ಪತ್ರೆಯ ಸಿಬ್ಬಂದಿ ಫಿಸಿಯೋಥೆರಪಿ, ಎಂ.ಎಸ್. ರಾಮಯ್ಯ ಆಸ್ಪತ್ರೆಯ ತಂಡ ದಂತ ಚಿಕಿತ್ಸೆಯಲ್ಲಿ ಕೈಜೋಡಿಸಿದ್ದಾರೆ. ಮೈಕ್ರೊ ಲ್ಯಾಬ್ಸ್, ಹಿಮಾಲಯ ವೆಲ್‌ನೆಸ್ ಸಂಸ್ಥೆಗಳು ಔಷಧ ಮತ್ತು ವೈಯಕ್ತಿಕ ಶುಚಿತ್ವ ಸಾಮಗ್ರಿಗಳನ್ನು ಪೂರೈಸುತ್ತಿವೆ. ತಿಂಗಳಿಗೊಮ್ಮೆ ನೇತ್ರ, ದಂತ, ಹೃದಯ ಪರೀಕ್ಷಾ ಶಿಬಿರಗಳು ನಡೆಯುತ್ತವೆ. ಕೆಲ ಬಡ ರೋಗಿಗಳಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯ ವ್ಯವಸ್ಥೆಯೂ ಇದೆ. ವ್ಯಾಯಾಮಗಳ ಮೂಲಕ ನೋವು ನಿವಾರಣೆಯ ಪ್ರಯತ್ನವೂ ನಡೆಯುತ್ತದೆ. ಈ ಎಲ್ಲವೂ ಸೇರಿ ಒಂದು ಸಮಗ್ರ ಆರೋಗ್ಯ ಸೇವೆಯ ರೂಪ ಪಡೆಯುತ್ತವೆ.

ಈ ಸೇವೆಯಲ್ಲಿ ಕುಟುಂಬವೂ ಕೈಜೋಡಿಸಿದೆ. ಪತ್ನಿ ಹೇಮಾ, ಪುತ್ರರಾದ ಡಾ.ಚರಿತ್ ಭೋಗರಾಜ್, ಡಾ.ಅಭಿಜಿತ್, ಸೊಸೆಯಂದಿರು ಡಾ.ಶಾಂತಿನಿ ಮತ್ತು ಜಾಹ್ನವಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ನೆರವಾಗುತ್ತಾರೆ. ಪಾಳಿಯಂತೆ ಬಂದು ರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಕುಟುಂಬದ ಬೆಂಬಲ ಇಲ್ಲದೆ ಇಷ್ಟು ದೀರ್ಘಕಾಲ ಸೇವೆ ಮುಂದುವರಿಸುವುದು ಸುಲಭವಲ್ಲ ಎಂಬುದನ್ನು ರಾವ್ ಅವರು ಹಲವಾರು ಬಾರಿ ಹೇಳಿದ್ದಾರೆ.

ಭಾನುವಾರ ಹಬ್ಬ ಬಂದರೂ, ಹಬ್ಬದ ಬಳಿಕವೇ ಚಿಕಿತ್ಸಾಲಯಕ್ಕೆ ಬರುವ ರಾವ್ ಅವರ ಶಿಸ್ತಿನ ಹಿಂದೆ ನಿಷ್ಠೆ ಇದೆ. ಸೇವೆ ಅವರಿಗೊಂದು ಕರ್ಮದಂತೆ. ಅವರ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಪದ್ಮಶ್ರೀ, ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ, ಐಎಂಎ ಬಿ.ಸಿ. ರಾಯ್ ಪ್ರಶಸ್ತಿ ನೀಡಿ ಗೌರವಿಸಿದೆ. ಚಿಕಿತ್ಸಾಲಯದ ರಸ್ತೆಗೆ ಅವರ ಹೆಸರನ್ನೇ ಇಡಲಾಗಿದೆ. ಲಂಡನ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ಗೂ ಈ ಸೇವೆ ದಾಖಲಾಗಿದೆ. ಆದರೆ ಈ ಎಲ್ಲ ಗೌರವಗಳಿಗಿಂತ, ಗೇಟ್ ಮುಂದೆ ನಿಂತಿರುವ ಸರತಿಯೇ ಈ ಸೇವೆಯ ನಿಜವಾದ ಮಾನ್ಯತೆ; ಜನರ ನಂಬಿಕೆಯೇ ದೊಡ್ಡ ಪ್ರಶಸ್ತಿ. ❖

ಶೌಚಾಲಯ

ಕಥೆ
ಸುರಹೊನ್ನೆ ಅರವಿಂದ ಅವರ ಪೋಯಾ... ಪೋಯ
prajavani.net/short-story

ಕವನ
ನಂದಿನಿ ಹೆದ್ದುರ್ಗ ಅವರ ನಾಡು ಪಣಕ್ಕಿಟ್ಟು...
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in

ಮೊದಲ ಓದು


ಸ್ವಗತದಲ್ಲಿ ಸಂವಾದ
ಲೇ: ವಿಕ್ರಮ ವಿಸಾಜಿ
ಪ್ರ: ನೆಲದನುಡಿ
ಸಂ: 78927 29847

ವಿವೇಕ–ಬಹುತ್ವದ ಸಂಕಥನ

ವಿವಿಧ ಕ್ಷೇತ್ರಗಳ ಪ್ರಮುಖರ, ಮುಖ್ಯವಾಗಿ ಬರಹಗಾರರ ಬದುಕು ಹಾಗೂ ವಿಚಾರಗಳನ್ನು ಅವರ ಜೊತೆಗಿನ ಮಾತುಕತೆಯ ಮೂಲಕವೇ ಕಟ್ಟಿಕೊಡುವ ಸಂದರ್ಶನಗಳಿಗೆ ವಿಶೇಷ ಮಹತ್ವವಿದೆಯಾದರೂ, ಸಂದರ್ಶನ ಬರಹಗಳೇ ಒಂದು ಪ್ರಕಾರವಾಗಿ ಕನ್ನಡದಲ್ಲಿ ಬೆಳೆದಿಲ್ಲ. ಪತ್ರಿಕೆಗಳು, ನಿಯತಕಾಲಿಕಗಳು ಸೇರಿದಂತೆ ವಿವಿಧ ಮಾಧ್ಯಮಗಳಲ್ಲಿ ಪ್ರಕಟಗೊಂಡು ಕಳೆದುಹೋಗುವ ಸಂದರ್ಶನಗಳು ಪುಸ್ತಕರೂಪದಲ್ಲಿ ಪ್ರಕಟಗೊಂಡಿರುವ ಉದಾಹರಣೆಗಳು ತೀರಾ ಕಡಿಮೆ. ಅಂಥ ವಿರಳ ನಿದರ್ಶನಗಳ ಸಾಲಿಗೆ ಸೇರುವಂತಹದ್ದು ವಿಕ್ರಮ ವಿಸಾಜಿ ಅವರ 'ಸ್ವಗತದಲ್ಲಿ ಸಂವಾದ' ಕೃತಿ.

ಈ ಕೃತಿ ಇಪ್ಪತ್ತೆರಡು ವಿಶಿಷ್ಟ ವ್ಯಕ್ತಿಗಳ ಚೈತನ್ಯವನ್ನು ಹಿಡಿದಿಡುವ ಸಂಕಲನ. ಕನ್ನಡದ ಬರಹಗಾರರು ಮಾತ್ರವಲ್ಲದೆ, ವಿವಿಧ ಭಾಷೆಗಳ ಪ್ರಸಿದ್ಧ ಲೇಖಕರು, ಕಲಾವಿದರು, ವಿಮರ್ಶಕರು ಈ ಕೃತಿಯಲ್ಲಿ ಒಟ್ಟುಗೂಡಿದ್ದಾರೆ. ಇಲ್ಲಿ ಸಮ್ಮಿಲನಗೊಂಡ ಸಾಹಿತ್ಯ, ಸಂಸ್ಕೃತಿ, ಕಲಾಲೋಕದ ಚಿಂತನೆಗಳು ಸಹೃದಯರ ಮನಸ್ಸನ್ನು ಮುದಗೊಳಿಸುವಂತಿವೆ; ಯೋಚನೆಗೆ ಹಚ್ಚುವಂತಿವೆ; ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಒಳನೋಟಗಳನ್ನು ಕಾಣಿಸುವಂತಿವೆ.

ಅಂತರರಾಷ್ಟ್ರೀಯ ಖ್ಯಾತಿಯ ಅಮೆರಿಕದ ವಿದ್ವಾಂಸ ಶೆಲ್ಡನ್ ಪೊಲಾಕ್, ಭಾರತೀಯ ಸಾಹಿತ್ಯದ ಮೇರುಗಳಾದ ಮಹಾಶ್ವೇತಾದೇವಿ, ನಬಾರುಣ್ ಭಟ್ಟಾಚಾರ್ಯ, ಅರುಣ್ ಕಮಲ್, ಪ್ರೊ. ರಾಜಕುಮಾರ್, ಪ್ರಸಿದ್ಧ ಕಲಾವಿದ ಅಶೋಕ್ ಭೌಮಿಕ್ ಅವರ ಸಂದರ್ಶನಗಳು ಈ ಕೃತಿಯಲ್ಲಿವೆ. ಕನ್ನಡದ ಷ. ಶೆಟ್ಟರ್, ಬರಗೂರು ರಾಮಚಂದ್ರಪ್ಪ, ಎಚ್.ಎಸ್. ರಾಘವೇಂದ್ರ ರಾವ್, ಮೊಗಳ್ಳಿ ಗಣೇಶ್, ಡಿ.ಎಸ್. ನಾಗಭೂಷಣ, ರಹಮತ್ ತರೀಕೆರೆ, ಬಸವರಾಜ ಕಲ್ಗುಡಿ, ಎಚ್.ಎಸ್. ಶಿವಪ್ರಕಾಶ್ ಸೇರಿದಂತೆ ಹಲವರೊಂದಿಗಿನ ಮಾತು–ಕತೆಗಳ 'ಸ್ವಗತದಲ್ಲಿ ಸಂವಾದ' ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಈ ಕೃತಿಯಲ್ಲಿನ ಹಲವು ಸಂದರ್ಶನಗಳು 'ಮಯೂರ' ಮಾಸಿಕದಲ್ಲಿ ಪ್ರಕಟಗೊಂಡಿವೆ. ಪುಸ್ತಕ ರೂಪದಲ್ಲಿ ಒಟ್ಟುಗೂಡಿರುವ ಮಾತುಕತೆಗಳ ಸಂಕಥನವು 'ಕನ್ನಡ ವಿವೇಕ' ಪರಂಪರೆಯನ್ನು ಹಾಗೂ ಭಾರತದ ಬಹುತ್ವದ ಚೆಲುವನ್ನು ಕಾಣಿಸುವಂತಿದೆ.

ಈ ಕೃತಿಯ ಸಂದರ್ಶನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದರೂ, ಇವು ಆ ಕ್ಷಣದ ತುರ್ತನ್ನು ಮೀರಿದ ಬರಹಗಳಾಗಿವೆ. ವಿಕ್ರಮ ವಿಸಾಜಿ ಅವರ ಪೂರ್ವಸಿದ್ಧತೆ, ಒಳನೋಟಗಳು, ಎದುರಿನ ವ್ಯಕ್ತಿಯನ್ನು ಗೌರವದಿಂದ ಕಾಣುತ್ತಲೇ ಅವರ ಒಳಗನ್ನು ಕೆದಕಿನೋಡುವ ಕೌಶಲ ಇಲ್ಲಿನ ಮಾತುಕತೆಗಳಲ್ಲಿವೆ. ಸಂದರ್ಶನ ಹೇಗಿರಬೇಕು ಎನ್ನುವುದಕ್ಕೆ ಮಾದರಿಯ ರೂಪದಲ್ಲಿ ಈ ಮಾತುಕತೆಗಳನ್ನು ನೋಡಬಹುದಾಗಿದೆ. ಕನ್ನಡ ಸಾಹಿತ್ಯಕ್ಕೆ 'ಸ್ವಗತದಲ್ಲಿ ಸಂವಾದ' ಒಂದು ವಿಶೇಷ ಸೇರ್ಪಡೆ.

ಪುಟ: 456 ₹450


ಭೂಮಿಗೆ ರಾಗಿ ಬಂದಿದ್ದು
ಲೇ: ಮಲ್ಲಿಕಾರ್ಜುನ ಹೊಸಪಾಳ್ಯ ಮತ್ತು ಜಿ.ಕೃಷ್ಣಪ್ರಸಾದ್
ಪ್ರ: ಧಾನ್ಯ
ಸಂ: 9880862058

ಮಣ್ಣಿನೊಳಗಿನ ಕಥೆಗಳ ಲೋಕ

ಜನಪದರ ಬಾಯಲ್ಲಿ ಕಥೆಗಳ ಭಂಡಾರವೇ ಅಡಗಿದೆ. ಬಾಲ್ಯದ ಸಂಜೆಯ ಹೊತ್ತಿನಲ್ಲಿ ಅಜ್ಜಿಯರ ಬಾಯಿಂದ ಕೇಳಿಬರುತ್ತಿದ್ದ ಕಥೆಗಳು, ಹೊಲಗಳಲ್ಲಿ ಕೆಲಸ ಮಾಡುವಾಗ ರೈತರ ತುಟಿಗಳಲ್ಲಿ ಹುಟ್ಟುತ್ತಿದ್ದ ಹಾಡುಗಳು–ಇವೆಲ್ಲ ಈಗ ನಿಧಾನವಾಗಿ ವಿರಳವಾಗುತ್ತಿವೆ. ಆ ಕಳೆದುಹೋಗುತ್ತಿರುವ ಮೌಖಿಕ ಸಂಪತ್ತನ್ನು ಹಿಡಿದು ಉಳಿಸುವ ಪ್ರಯತ್ನವಾಗಿ ಮಲ್ಲಿಕಾರ್ಜುನ ಹೊಸಪಾಳ್ಯ ಮತ್ತು ಜಿ. ಕೃಷ್ಣಪ್ರಸಾದ್ ಅವರು 'ಭೂಮಿಗೆ ರಾಗಿ ಬಂದಿದ್ದು– ಕೃಷಿ ಪರಿಸರ ಜನಪದ ಕಥೆಗಳು' ಕೃತಿಯನ್ನು ಹೊರತಂದಿದ್ದಾರೆ.

ಮಳೆಯ ಹಿಂದಿನ ಕಥೆಯಿಂದ ಹಿಡಿದು ಭೂಮಿಗೆ ಎಳ್ಳು ಬಂದಿದ್ದು ಹೇಗೆ, ಅವರೆಕಾಳಿಗೆ ಗೆರೆ ಏಕೆ ಬಂದಿದೆ ಎಂಬ ಕುತೂಹಲಕರ ವಿವರಣೆಗಳವರೆಗೆ–ಈ ಕೃತಿಯಲ್ಲಿರುವ ಕಥೆಗಳು ಪ್ರಕೃತಿಯೊಂದಿಗೆ ಮಾನವನ ನಂಟನ್ನು ಹೇಳುತ್ತವೆ. ಭೂಮಿಗೆ ಮನುಷ್ಯರು ಬಂದದ್ದು ಹೇಗೆ, ದನಗಳು ಬೇಸಾಯದ ಭಾಗವಾದದ್ದು ಹೇಗೆ ಎಂಬ ಪ್ರಶ್ನೆಗಳಿಗೆ ಜನಪದರು ತಮ್ಮದೇ ಕಲ್ಪನೆ ಮತ್ತು ಜೀವನಾನುಭವದಿಂದ ಉತ್ತರಗಳನ್ನು ಕಟ್ಟಿಕೊಟ್ಟಿದ್ದಾರೆ. ಆದ್ರಿ ಮಳೆ, ಕುಮಾರರಾಮ ಮೊದಲಾದ ಕಥೆಗಳು ಈ ಸಂಕಲನಕ್ಕೆ ಇನ್ನಷ್ಟು ವೈವಿಧ್ಯ ತರುತ್ತವೆ.

ಬೇಸಾಯ ಸಂಸ್ಕೃತಿಯೊಂದಿಗೆ ಬೆಸೆದುಕೊಂಡ ಜನಪದರು ಮಳೆ, ಭೂಮಿ, ಬೀಜ, ಕೆರೆ, ಧಾನ್ಯ ಇತ್ಯಾದಿಗಳ ಸುತ್ತ ಅನೇಕ ಕಥೆಗಳನ್ನು ರೂಪಿಸಿದ್ದಾರೆ. ಇವು ತಲೆತಲಾಂತರಗಳಿಂದ ಬಾಯಿಯಿಂದ ಬಾಯಿಗೆ ಸಾಗುತ್ತಾ ಬಂದಿದ್ದು, ಈಗಲೂ ರೈತರು, ಬುಡಕಟ್ಟು ಸಮುದಾಯಗಳು ಮತ್ತು ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ಜೀವಂತವಾಗಿವೆ. ಅಂಥ ಕಥೆಗಳನ್ನು ಆಯ್ದು, ಸಂಗ್ರಹಿಸಿ, ಈ ಕೃತಿಯಲ್ಲಿ ದಾಖಲಿಸಲಾಗಿದೆ.

ಸುಮಾರು ನಲವತ್ತಕ್ಕೂ ಹೆಚ್ಚು ಕಥೆಗಳಿರುವ ಈ ಸಂಕಲನದ ಪ್ರತಿಯೊಂದು ಕಥೆಯಲ್ಲೂ ಜನಪದರ ಲೋಕದೃಷ್ಟಿ, ಜೀವನದೃಷ್ಟಿ, ಸ್ಥಳೀಯ ಜ್ಞಾನ, ಅವರ ವಿನೋದಪ್ರವೃತ್ತಿ ಮತ್ತು ಬದುಕಿನ ಕೌಶಲಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಮೂಲ ಹಸ್ತಪ್ರತಿಯ ಮಾದರಿಗಳನ್ನು ಕೂಡ ಸಂಗ್ರಹಿಸಿ ಪ್ರಕಟಿಸಿರುವುದು ಈ ಕೃತಿಗೆ ದಾಖಲಾತಿ ಮೌಲ್ಯವನ್ನೂ ನೀಡುತ್ತದೆ.

ಪುಟ: 96 ₹130

ಉತ್ತರ ಪ್ರದೇಶದಲ್ಲಿ ನಾವು
ಸಂ: ಶಿವಕುಮಾರ ಕಾರೇಪುರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ
ಸಂ: 9900555255

ರೈತರ ಕಣ್ಣಿನಲ್ಲಿ ಭಾರತದ ಕೃಷಿ ಪಯಣ

'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ದ ಅಂಗವಾಗಿ ಗ್ರಾಮಮುಖಿ ಚಿಂತನೆಯ ಸಂಸ್ಥೆಯೊಂದು ಎರಡು ದಶಕಗಳಿಂದ ಪ್ರವಾಸವನ್ನು ಆಯೋಜಿಸುತ್ತಿದೆ. ಹಾಗಾಗಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕೆಲ ರೈತರಿಗೆ ದೇಶದ ನಾನಾ ಪ್ರದೇಶಗಳ ವ್ಯವಸಾಯ ಪದ್ಧತಿಯ ಪರಿಚಯ ಆಗಿದೆ. ಅಲ್ಲಿನ ಹವಾಗುಣ, ಕೃಷಿ ಬೆಳವಣಿಗೆ, ಸೌಲಭ್ಯಗಳನ್ನು ಪರಿಚಯಿಸುವ ಉದ್ದೇಶ ಈ ಪ್ರವಾಸದ್ದು.

ಇದುವರೆಗೆ ಹನ್ನೊಂದು ಅಧ್ಯಯನ ಪ್ರವಾಸಗಳು ಆಗಿವೆ. ಹತ್ತನೇ ಪ್ರವಾಸವನ್ನು ಇಪ್ಪತ್ತೆರಡು ರೈತರು ಉತ್ತರ ಪ್ರದೇಶದಲ್ಲಿ ಕೈಗೊಂಡಿದ್ದರು. ಅಲ್ಲಿನ ಯೂರಿಯಾ ಕಾರ್ಖಾನೆ, ಕೃಷಿ ಅಧ್ಯಯನ ಕೇಂದ್ರ, ತಜ್ಞರ ಜೊತೆ ಸಮಾಲೋಚನೆ, ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದ್ದರು. ಅದರ ನೆನಪಿಗಾಗಿ ಈ ಕೃತಿಯನ್ನು ಸಂಪಾದಿಸಲಾಗಿದೆ.

ರೈತರೇ ಅನುಭವವನ್ನು ದಾಖಲಿಸಿದ್ದು, ಇದು ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲ ಭಾಗದಲ್ಲಿ ಉತ್ತರ ಪ್ರದೇಶ ಪ್ರವಾಸಕ್ಕೆ ಸಂಬಂಧಿಸಿದ ಇಪ್ಪತ್ತು ಲೇಖನಗಳನ್ನು ಸಂಪಾದಿಸಲಾಗಿದೆ. ಎರಡನೇ ಭಾಗದಲ್ಲಿ 2006 ರಿಂದ ಕೈಗೊಂಡ ಒಂಬತ್ತು ಪ್ರವಾಸಗಳಿಗೆ ಸಂಬಂಧಿಸಿದ ಹನ್ನೊಂದು ಲೇಖನಗಳಿವೆ. ಈ ಮೂಲಕ ಕೃಷಿ ಪ್ರವಾಸವನ್ನು ಉತ್ತೇಜಿಸುವ ಅಗತ್ಯವನ್ನು ಈ ಕೃತಿ ಮನವರಿಕೆ ಮಾಡುತ್ತದೆ.

ಬಿ. ಚಂದ್ರೇಗೌಡ ಅವರ 'ದಕ್ಷಿಣ ಧ್ರುವದಿಂ ಉತ್ತರ ಧ್ರುವಕ್ಕೆ' ವಿನೋದ ಶೈಲಿಯ ನಿರೂಪಣೆ ಆಪ್ತ ಅನ್ನಿಸುತ್ತದೆ. ಯೂರಿಯಾ ಗೊಬ್ಬರ ಕಾರ್ಖಾನೆಯ ವಿಸ್ಮಯ ದೃಶ್ಯವನ್ನು ಹಿಡಿದಿಡುವ ಜೊತೆಗೆ ಪುಣ್ಯಕ್ಷೇತ್ರಗಳಲ್ಲಿ ಅಶುಚಿ ವಾತಾವಾರಣವನ್ನು ಚಿಕಿತ್ಸಕ ದೃಷ್ಟಿಯಲ್ಲಿ ನೋಡಿದ್ದಾರೆ. ಅಲ್ಲಿನ ಕೃಷಿ ಅಧ್ಯಯನ ಕೇಂದ್ರದ ದುಃಸ್ಥಿತಿ, ವಿಜ್ಞಾನಿಗಳ ಪರಿಸ್ಥಿತಿ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಈ ಭಾಗದ ಉಳಿದ ಲೇಖನಗಳಲ್ಲಿ ಅನೇಕ ಸಾಮ್ಯ ಕಾಣಿಸುತ್ತವೆ.

ಎರಡನೇ ಭಾಗದಲ್ಲಿ ಎನ್. ಶೋಭಾ ಕೃಷ್ಣೇಗೌಡ ಅವರ 'ಮಲೆನಾಡು ಮತ್ತು ಉತ್ತರ ಕರ್ನಾಟಕದ ಪ್ರವಾಸ', ಡಿ.ಎಸ್. ಚೌಗಲೆ ಅವರ 'ಮರಾಠರ ಗಡಿಯಲ್ಲಿ ನಾಗತಿಹಳ್ಳಿ ರೈತರು', ಜಗದಾಂಬ ನಾಗತಿಹಳ್ಳಿ ಅವರ 'ಮನರಂಜನೆಯೊಂದಿಗೆ ಮಾಹಿತಿಯನ್ನು ನೀಡಿದ ಕೇರಳ ಕೃಷಿ ಪ್ರವಾಸ' ಸೇರಿ ಹನ್ನೊಂದು ಲೇಖನಗಳು ಇವೆ.

ಒಟ್ಟಿನಲ್ಲಿ, ಈ ಕೃತಿ ರೈತರ ಅನುಭವಗಳನ್ನು ನೇರವಾಗಿ ದಾಖಲಿಸಿರುವ ಪ್ರಾಮಾಣಿಕ ಪ್ರಯತ್ನ ಎಂದು ಹೇಳಬಹುದು. ಆದರೆ, ಅನೇಕ ಲೇಖನಗಳಲ್ಲಿ ಪುನರಾವರ್ತನೆ ತಪ್ಪಿಸಿದ್ದರೆ ಕೃತಿ ಪರಿಣಾಮಕಾರಿ ಆಗುತ್ತಿತ್ತು.

ಪುಟ: 136 ₹150

ಜಗಳವಿಲ್ಲದ ಆಟ ಅಲ್ಟಿಮೇಟ್ ಫ್ರಿಸ್‌ಬೀ

• ವಿಕ್ರಂ ಕಾಂತಿಕೆರೆ

ಗಾಳಿಯಲ್ಲಿ ತೇಲುತ್ತ ಓಲಾಡುತ್ತ ಸಾಗುವ ಫ್ರಿಸ್‌ಬೀ ಅಥವಾ ಡಿಸ್ಕ್ ಹಿಡಿದು ಗುರಿ ಮುಟ್ಟಿಸಿ ಅಂಕ ಗಳಿಸುವ ಆಟ ಫ್ರಿಸ್‌ಬೀ ಅಲ್ಟಿಮೇಟ್. ಅಮೆರಿಕದಲ್ಲಿ ಆರಂಭಗೊಂಡ ಈ ಕ್ರೀಡೆ ಈಗ ವಿಶ್ವದ ಹಲವು ರಾಷ್ಟ್ರಗಳಲ್ಲಿ ಖ್ಯಾತಿ ಗಳಿಸಿದೆ, ಭಾರತದಲ್ಲೂ. ಈ ಆಟದ ನಿಯಮಗಳು ವಿಶಿಷ್ಟ. ಇಲ್ಲಿ ಅಂಪೈರ್‌ಗಳಾಗಲಿ ರೆಫರಿಯಾಗಲಿ ಇರುವುದಿಲ್ಲ. ಮನಸ್ತಾಪ, ಜಗಳಕ್ಕೆ ಅವಕಾಶ ನೀಡದೆ ಎಲ್ಲವನ್ನೂ ಕ್ರೀಡಾಪಟುಗಳೇ ನಿಭಾಯಿಸಬೇಕು. ಲಿಂಗತಾರತಮ್ಯವೂ ಇಲ್ಲದ ಈ ಕ್ರೀಡೆಯನ್ನು ಕೆಲವು ಕಂಪನಿಗಳು ಈಗ ಅಳವಡಿಸಿಕೊಳ್ಳುತ್ತಿವೆ.

ಅಹಮದಾಬಾದ್‌ನಲ್ಲಿ ನಡೆದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತದ ಅರ್ಷದೀಪ್ ಸಿಂಗ್ ತಮ್ಮ ಬೌಲಿಂಗ್‌ನ ಫಾಲೊಥ್ರೂನಲ್ಲಿ ನ್ಯೂಜಿಲೆಂಡ್ ಬ್ಯಾಟರ್ ಡ್ಯಾರಿಲ್ ಮಿಚೆಲ್ ಅವರ ಜಂಘಕ್ಕೆ ಚೆಂಡು ತಗುಲಿ ದಂಡಕ್ಕೊಳಗಾದರು. ಇದಾದ ಕೆಲವೇ ದಿನಗಳ ಬಳಿಕ ಮೀರ್‌ಪುರದಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶದ ಮೆಹದಿ ಹಸನ್, ಪಾಕಿಸ್ತಾನದ ಸಲ್ಮಾನ್ ಅಗಾ ಅವರ ಕಾಲಬುಡದಿಂದ ಚೆಂಡು ಎತ್ತಿಕೊಂಡು ಬೇಲ್ಸ್ ಬೀಳಿಸಿದ ಘಟನೆ ತೀವ್ರ ಚರ್ಚೆಗೆ ಕಾರಣವಾಯಿತು.

ಇಂತಹ ಕ್ಷಣಗಳು ಕ್ರೀಡೆ ಎಂದರೆ ಘರ್ಷಣೆ, ಆಕ್ರೋಶ, ನಿಯಮ ಉಲ್ಲಂಘನೆ, ವಿವಾದಗಳು ಎಂಬ ಭಾವನೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಆದರೆ ಇದೇ ಸಮಯದಲ್ಲಿ ಮಂಗಳೂರಿನ ತಣ್ಣೀರುಬಾವಿ ಬೀಚ್‌ನಲ್ಲಿ ನಡೆಯುತ್ತಿದ್ದ ಇಂಡಿಯಾ ಅಲ್ಟಿಮೇಟ್ ಫ್ರಿಸ್‌ಬೀ ರಾಷ್ಟ್ರೀಯ ಚಾಂಪಿಯನ್‌ಷಿಪ್ ಈ ಸಾಮಾನ್ಯ ಕಲ್ಪನೆಯನ್ನು ತಣ್ಣಗೆ, ಆದರೆ ದೃಢವಾಗಿ ಪ್ರಶ್ನಿಸುತ್ತಿತ್ತು.

ಕ್ರಿಕೆಟ್‌ನ ಮಂಕಡಿಂಗ್, ಸ್ಲೆಡ್ಜಿಂಗ್, ಫುಟ್‌ಬಾಲ್ ಮತ್ತು ಹಾಕಿಯ ತಳ್ಳಾಟ–ನೂಕಾಟ, ಕಬಡ್ಡಿಯ ಸವಾಲುಗಳು–ಇವೆಲ್ಲವನ್ನು ನೋಡಿರುವವರಿಗೆ ಇಲ್ಲಿ ಕಂಡದ್ದು ಸಂಪೂರ್ಣ ವಿಭಿನ್ನ ಅನುಭವ.

ಅಲ್ಟಿಮೇಟ್ ಫ್ರಿಸ್‌ಬೀ ಮೈದಾನದಲ್ಲಿ ಅಂಪೈರ್ ಇಲ್ಲ. ರೆಫರಿ ಇಲ್ಲ. ಟೈಮ್ ಕೀಪರ್ ಕೂಡ ಇಲ್ಲ. ಆದರೂ ಆಟ ನಿಲ್ಲುವುದಿಲ್ಲ. ವಿವಾದವೂ ದೊಡ್ಡದಾಗುವುದಿಲ್ಲ.

ಯಾಕೆಂದರೆ ಇಲ್ಲಿ ನಿಯಮಗಳು ಕಾಗದದಲ್ಲಷ್ಟೇ ಅಲ್ಲ; ಆಟಗಾರರ ಮನಸ್ಸಿನಲ್ಲಿವೆ. ಪ್ರತಿ ಆಟಗಾರನೇ 'ಫೇರ್ ಪ್ಲೇ'ಗೆ ಜವಾಬ್ದಾರ.

ಎದುರಾಳಿ ತಂಡದವರು ತಪ್ಪು ಮಾಡಿದರೆ 'ಕಾಲ್' ಕೊಡಬಹುದು. ಅದನ್ನು ಒಪ್ಪಿಕೊಂಡರೆ ಆಟ ಮುಂದುವರಿಯುತ್ತದೆ. ಒಪ್ಪದಿದ್ದರೆ, ಪ್ರಮಾದ ಸಂಭವಿಸಿದ ಕ್ಷಣದ ಮೊದಲು ಇದ್ದ ಸ್ಥಿತಿಗೆ ಆಟ ಹಿಂದಿರುಗುತ್ತದೆ. ಈ ನಿರ್ಧಾರದ ಪ್ರಕ್ರಿಯೆಗೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಸುಮಾರು 30 ಸೆಕೆಂಡುಗಳೊಳಗೆ ಮುಗಿಯುತ್ತದೆ. ಕೆಲವೇ ಕ್ಷಣಗಳಲ್ಲಿ ಆಟ ಮತ್ತೆ ಆರಂಭ.

ಸ್ಕೋರ್ ಸಮವಾದರೆ 'ಪ್ಲಸ್ ಒನ್' ನಿಯಮ ಅನ್ವಯವಾಗುತ್ತದೆ. ಪಂದ್ಯದಲ್ಲಿ ಯಾವುದೇ ಮಧ್ಯಸ್ಥ ಅಧಿಕಾರಿಯಿಲ್ಲದಿದ್ದರೂ, ಆಟಗಾರರ ನಡುವಿನ ಮಾತುಕತೆ ಮತ್ತು ನಂಬಿಕೆಯೇ ಆಟವನ್ನು ನಿಯಂತ್ರಿಸುತ್ತದೆ. ಪಂದ್ಯ ಮುಗಿದ ಬಳಿಕ ಕೈ ಕುಲುಕುವಿಕೆ ಇಲ್ಲಿ ಕೇವಲ ಔಪಚಾರಿಕವಲ್ಲ–ಅದು ಆಟದ ಭಾಗವೇ.

ಈ ಸಂಪೂರ್ಣ ವ್ಯವಸ್ಥೆಗೆ 'ಸ್ಪಿರಿಟ್ ಆಫ್ ದ ಗೇಮ್' ಎಂದು ಕರೆಯಲಾಗುತ್ತದೆ. ಇದು ಕೇವಲ ನಿಯಮಗಳ ಗುಚ್ಛವಲ್ಲ, ಪರಸ್ಪರ ಗೌರವದ ಒಪ್ಪಂದ. ಟೂರ್ನಿಗಳಲ್ಲಿ ಈ ಸ್ಪಿರಿಟ್‌ಗೆ ನೀಡುವ ಪ್ರಶಸ್ತಿ ಕೆಲವೊಮ್ಮೆ ಗೆಲುವಿನ ಟ್ರೋಫಿಗಿಂತಲೂ ಹೆಚ್ಚಿನ ಗೌರವ ಪಡೆಯುತ್ತದೆ.

ಫ್ರಿಸ್‌ಬೀ ಅಥವಾ ಡಿಸ್ಕ್ ಒಂದು ಸರಳ ವಸ್ತುವಾಗಿರಬಹುದು, ಆದರೆ ಮೈದಾನಕ್ಕೆ ಬಂದಾಗ ಅದು ಸಂಪೂರ್ಣ ಭಿನ್ನವಾಗಿ ವರ್ತಿಸುತ್ತದೆ. ಅದು ನೇರವಾಗಿ ಸಾಗುವುದಿಲ್ಲ. ಗಾಳಿಯ ಒತ್ತಡದಲ್ಲಿ ಬಾಗುತ್ತದೆ, ತಿರುಗುತ್ತದೆ, ಕೆಲವೊಮ್ಮೆ ನೆಲ ತಲುಪುವ ಕ್ಷಣದಲ್ಲಿ ಮತ್ತೆ ಏರುತ್ತದೆ. ಮೈದಾನವೇ ಒಂದು ನಾಟಕದ ವೇದಿಕೆಯಾಗಿ, ಎಲ್ಲ ಚಲನೆಗಳು ದೃಶ್ಯರಂಗದಂತೆ ಕಾಣುತ್ತವೆ.

ಡಿಸ್ಕ್‌ಗಾಗಿ....

ಆಟಗಾರರು ನಿರಂತರ ಓಡುತ್ತಾರೆ. ದಿಕ್ಕು ಬದಲಿಸುತ್ತಾರೆ. ಎದುರಾಳಿ ರಕ್ಷಣೆಯನ್ನು ದಾಟಲು ಜಾಗ ಹುಡುಕುತ್ತಾರೆ. ಡಿಸ್ಕ್ ಹಿಡಿಯಲು ಜಿಗಿಯುತ್ತಾರೆ, ಗಾಳಿಯಲ್ಲಿ ತೇಲುವಂತೆ ಕ್ಷಣಕಾಲ ನಿಲ್ಲುತ್ತಾರೆ. ಕೆಲವೊಮ್ಮೆ ಹಿಡಿದ ತಕ್ಷಣವೇ ನೆಲಕ್ಕೆ ಬೀಳುತ್ತಾರೆ, ಮತ್ತೆ ಎದ್ದು ಆಟ ಮುಂದುವರಿಸುತ್ತಾರೆ.

ಇಲ್ಲಿ ಓಡುವುದು ಇದೆ, ಆದರೆ ಡಿಸ್ಕ್ ಹಿಡಿದು ಓಡುವುದು ಸಾಧ್ಯವಿಲ್ಲ. ಪಾಸ್ ಮಾಡಲೇಬೇಕು. ಅದೇ ಆಟದ ನಿಯಮವೂ ಹೌದು, ತಂತ್ರವೂ ಹೌದು.

ಎದುರಾಳಿ ತಂಡದ ಆಟಗಾರನ ಬಳಿಯಿಂದ ಡಿಸ್ಕ್ ಕಸಿದುಕೊಳ್ಳುವ ಯತ್ನ

ಚಿತ್ರಗಳು: ಫಕ್ರುದ್ದೀನ್ ಎಚ್

ಎಂಡ್‌ಜೋನ್ ತಲುಪುವುದು ಗುರಿ. ಅಲ್ಲಿ ಸಹ ಆಟಗಾರ ಡಿಸ್ಕ್ ಕ್ಯಾಚ್ ಮಾಡಿದರೆ ಒಂದು ಪಾಯಿಂಟ್. ಸರಳವಾಗಿ ಕೇಳಿದರೂ, ಆ ಹಂತಕ್ಕೆ ತಲುಪಲು ಬೇಕಾಗುವ ಪಾಸ್‌ಗಳ ಸರಪಳಿ, ವೇಗ ಮತ್ತು ಸಂವಹನ ಈ ಆಟವನ್ನು ಅತ್ಯಂತ ತೀವ್ರಗೊಳಿಸುತ್ತದೆ.

ಮಿಶ್ರ ಆಟ: ಸಮಾನತೆಯ ಮೈದಾನ

ಅಲ್ಟಿಮೇಟ್ ಫ್ರಿಸ್‌ಬೀ ಕೇವಲ ಕ್ರೀಡೆಯಲ್ಲ; ಒಂದು ಸಾಮಾಜಿಕ ಅಭ್ಯಾಸ. ಇದು ಮಿಶ್ರ ಕ್ರೀಡೆ. ಪುರುಷರು ಮತ್ತು ಮಹಿಳೆಯರು ಒಂದೇ ತಂಡದಲ್ಲಿ ಆಡುತ್ತಾರೆ. 4:3 ಅಥವಾ 3:4 ಅನುಪಾತದಲ್ಲಿ ತಂಡ ರಚನೆ ಆಗುತ್ತದೆ. ಇದು ಕೇವಲ ಸಂಖ್ಯೆಗಳ ಸಮತೋಲನ ಅಲ್ಲ; ಅದು ದೃಷ್ಟಿಕೋನದ ಸಮಾನತೆ.

ಮೈದಾನದಲ್ಲಿ ಶಕ್ತಿ ಪ್ರದರ್ಶನಕ್ಕಿಂತ ಸಂಯಮ, ಸಂವಹನ ಮತ್ತು ಪರಸ್ಪರ ಗೌರವ ಹೆಚ್ಚು ಮುಖ್ಯವಾಗುತ್ತದೆ. ಒಂದು ತಪ್ಪು ಪಾಸ್, ಒಂದು ಕಾಲ್–ಇವೆಲ್ಲವೂ ತಂಡದ ನಂಬಿಕೆಯನ್ನು ಪರೀಕ್ಷಿಸುತ್ತವೆ.

ಈ ಕಾರಣದಿಂದಲೇ ಅನೇಕ ಎನ್‌ಜಿಒಗಳು ಮತ್ತು ಶಿಕ್ಷಣ ಸಂಸ್ಥೆಗಳು ಈ ಕ್ರೀಡೆಯನ್ನು ಶಾಲಾ ಮಟ್ಟದಲ್ಲಿ ಅಳವಡಿಸಿಕೊಳ್ಳುತ್ತಿವೆ. ಕೆಲವು ಕಡೆ ಇದು ಕೇವಲ ಆಟವಾಗಿರದೆ, ವ್ಯಕ್ತಿತ್ವ ನಿರ್ಮಾಣದ ಭಾಗವಾಗಿದೆ.

ಭಾರತದಲ್ಲಿ ಫ್ಲೈಯಿಂಗ್ ಡಿಸ್ಕ್ ಸ್ಪೋರ್ಟ್ಸ್ ಫೆಡರೇಷನ್ ಆಫ್ ಇಂಡಿಯಾ ನಿರಂತರ ಟೂರ್ನಿಗಳನ್ನು ಆಯೋಜಿಸುತ್ತಿದೆ. ದೇಶಾದ್ಯಂತ 400ಕ್ಕೂ ಹೆಚ್ಚು ಕ್ಲಬ್‌ಗಳು ಈ ಕ್ರೀಡೆಯನ್ನು ಜೀವಂತವಾಗಿಟ್ಟಿವೆ.

ಕರ್ನಾಟಕ ಈ ಕ್ರೀಡೆಯ ಪ್ರಮುಖ ಕೇಂದ್ರಗಳಲ್ಲಿ ಒಂದು.

ಫ್ರಿಸ್ಬಿ ಮೇಲೆ ಆಧಿಪತ್ಯ ಸ್ಥಾಪಿಸಲು ಪ್ರಯತ್ನ

ಬೆಂಗಳೂರು, ಮೈಸೂರು ಮತ್ತು ಮಂಗಳೂರು ನಗರಗಳಲ್ಲಿ ಬಲಿಷ್ಠ ತಂಡಗಳು ಬೆಳೆಯುತ್ತಿವೆ. ಆರಂಭದಲ್ಲಿ ಕೆಲವೇ ತಂಡಗಳಿದ್ದ ಈ ರಾಜ್ಯದಲ್ಲಿ ಈಗ 20ಕ್ಕೂ ಹೆಚ್ಚು ತಂಡಗಳು ಸಕ್ರಿಯವಾಗಿವೆ.

ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ತಂಡಗಳು ನಿರಂತರವಾಗಿ ಅಗ್ರಸ್ಥಾನಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಆಟಗಾರರ ಸಂಖ್ಯೆಯಲ್ಲೂ ರಾಜ್ಯದ ಪಾಲು ಗಮನಾರ್ಹವಾಗಿದೆ.

ಅಮೆರಿಕದಿಂದ ಆರಂಭವಾದ ಪ್ರಯಾಣ

1973ರ ಸಮಯದಲ್ಲಿ ಅಮೆರಿಕದ ಮೇಪಲ್‌ವುಡ್‌ನಲ್ಲಿ ವಿದ್ಯಾರ್ಥಿಗಳು ಡಿಸ್ಕ್ ಎಸೆದು ಆಡುತ್ತಿದ್ದ ಸರಳ ಆಟವನ್ನು ಗಮನಿಸಿದ ಡೇವಿಡ್ ಲ್ಯೂವಾಂಟ್ ಮತ್ತು ಜೋಯೆಲ್ ಸಿಲ್ವರ್ ಅದಕ್ಕೆ ನಿಯಮಗಳನ್ನು ರೂಪಿಸಿದರು. ಅದೇ ನಂತರ 'ಅಲ್ಟಿಮೇಟ್ ಫ್ರಿಸ್‌ಬೀ' ಎಂಬ ಕ್ರೀಡೆಯಾಗಿ ಬೆಳೆಯಿತು.

ಶಾಲೆಯ ಮೈದಾನದಿಂದ ಆರಂಭವಾದ ಈ ಆಟ ಇಂದು 40ಕ್ಕೂ ಹೆಚ್ಚು ದೇಶಗಳಲ್ಲಿ ಆಡಲಾಗುತ್ತಿದೆ. 2001ರಲ್ಲಿ ಜಪಾನ್‌ನ ಅಕಿಟಾದಲ್ಲಿ ನಡೆದ ವಿಶ್ವ ಗೇಮ್ಸ್‌ನಲ್ಲಿ ಇದನ್ನು ಅಧಿಕೃತವಾಗಿ ಸೇರಿಸಲಾಯಿತು. ಇದು ಜಾಗತಿಕ ಕ್ರೀಡೆಯಾಗಿ ಬೆಳೆಯುತ್ತಿರುವ ಪ್ರಮುಖ ಘಟ್ಟವಾಗಿತ್ತು.

ಈ ಆಟದಲ್ಲಿ ಓಟ, ಜಿಗಿತ, ವೇಗ–ಎಲ್ಲವೂ ಅತ್ಯಂತ ತೀವ್ರವಾಗಿವೆ. ಆದರೂ ದೇಹ ಸ್ಪರ್ಶವಿಲ್ಲದ ಕಾರಣ ಗಾಯದ ಸಾಧ್ಯತೆ ಕಡಿಮೆ. ಇದು ಫಿಟ್‌ನೆಸ್‌ಗೆ ಸಹಾಯಕವಾದರೂ, ಅದರ ನಿಜವಾದ ಪರಿಣಾಮ ಮನಸ್ಸಿನ ಮೇಲೆ.

ತಪ್ಪು ಒಪ್ಪಿಕೊಳ್ಳುವುದು, ಎದುರಾಳಿಯನ್ನು ಗೌರವಿಸುವುದು, ಸಂಘರ್ಷವನ್ನು ಮಾತುಕತೆಯಿಂದ ಪರಿಹರಿಸುವುದು–ಇವು ಈ ಆಟ ಕಲಿಸುವ ಮುಖ್ಯ ಮೌಲ್ಯಗಳು.

ನ್ಯಾಯವನ್ನು ಕಾಪಾಡಲು ಅಂಪೈರ್ ಬೇಕಾಗುವ ಅನೇಕ ಕ್ರೀಡೆಗಳ ನಡುವೆ, ಆಟಗಾರರ ಮನಸ್ಸೇ ಅಂಪೈರ್ ಆಗಿರುವ ಒಂದು ಕ್ರೀಡೆ–ಅಲ್ಟಿಮೇಟ್ ಫ್ರಿಸ್‌ಬೀ.

ಇಲ್ಲಿ ಗೆಲುವನ್ನು ಕೇವಲ ಸ್ಕೋರ್‌ನಲ್ಲಿ ಅಳೆಯಲಾಗುವುದಿಲ್ಲ. ಅದನ್ನು ಆಟಗಾರರ ನಡವಳಿಕೆಯಲ್ಲಿ, ನಂಬಿಕೆಯಲ್ಲಿ ಮತ್ತು ಪರಸ್ಪರ ಗೌರವದಲ್ಲಿ ಅಳೆಯಲಾಗುತ್ತದೆ.

ಬಹುಶಃ ಕ್ರೀಡೆಗಳ ನಿಜವಾದ ಅರ್ಥ ಇದೇ ಇರಬಹುದು–ಗೆಲ್ಲುವುದಕ್ಕಿಂತ ಮೊದಲು, ನ್ಯಾಯವಾಗಿ ಆಡುವುದು.

ಅಕ್ಕಿರಾಂಪುರ ಕುರಿ–ಮೇಕೆ ಸಂತೆಯೊಳ್...

8ನೇ ಪುಟದಿಂದ...

ಕೊರಟಗೆರೆ ತಾಲ್ಲೂಕಿನ ನಾಗೇನಹಳ್ಳಿಯ ತಿಮ್ಮರಾಯಪ್ಪನ ಲೆಕ್ಕಾಚಾರ ಇನ್ನೂ ಕಠಿಣ.

'ಆರು ತಿಂಗಳು ಬೆಳೆಸಿದ ಮರಿಗೆ ರೇಟು ಸಿಗದಿದ್ದರೆ ಆಟೊ ಬಾಡಿಗೆಯೇ ಹೋಗುತ್ತದೆ'.

ಅಕ್ಕಿರಾಂಪುರದ ಕುರಿಗಳ ವಿಶೇಷತೆ ಅವುಗಳ ಬೆಳವಣಿಗೆಯಲ್ಲಿದೆ. ಬಂಡೂರು ಕುರಿ, ನಾಟಿ ಕುರಿ ಮತ್ತು ಮೇಕೆಗಳು ಸಂತೆಯಲ್ಲಿ ಜಾಸ್ತಿ ಕಾಣಿಸಿಕೊಳ್ಳುತ್ತವೆ. ಇವುಗಳು ಶೆಡ್‌ನಲ್ಲಿ ಕಟ್ಟಿಹಾಕಿ ಬೆಳೆದವುಗಳಲ್ಲ. ಬಯಲು, ಜಮೀನು, ಕಾಡು ಪ್ರದೇಶಗಳಲ್ಲಿ ಸುತ್ತಾಡುತ್ತಾ ಬೆಳೆದವು. ತುಮಕೂರು ಜಿಲ್ಲೆಯ ಹುಲ್ಲುಗಾವಲು, ಕುರುಚಲು ಕಾಡು, ತೇವಭರಿತ ಹಾಗೂ ಒಣ ಪ್ರದೇಶಗಳ ಮಿಶ್ರಣ–ಈ ಪರಿಸರದಲ್ಲಿ ಸಿಗುವ ಜಾಲಿಕಾಯಿ, ಕಾಡು ಸೊಪ್ಪು, ಒಣ ಎಲೆಗಳು ಅವುಗಳ ಆಹಾರ.

ಸೂರ್ಯನ ಬಿಸಿ, ಮಳೆಯ ತೇವ, ಗಾಳಿ–ಇವೆಲ್ಲವೂ ಅವುಗಳ ಬೆಳವಣಿಗೆಯಲ್ಲಿ ಪಾತ್ರವಹಿಸುತ್ತವೆ. ಈ ಸಹಜ ಬೆಳವಣಿಗೆಯೇ ಮಾಂಸಕ್ಕೆ ವಿಭಿನ್ನ ರುಚಿ ನೀಡುತ್ತದೆ. ಇದೇ ಕಾರಣಕ್ಕೆ ಬೇರೆ ರಾಜ್ಯಗಳಿಂದಲೂ ವ್ಯಾಪಾರಿಗಳು ಇಲ್ಲಿಗೆ ಬರುತ್ತಾರೆ.

ಸಂತೆಯಾಚೆಗಿನ ಸಂತೆ

ಮೈದಾನಕಷ್ಟೇ ಈ ಸಂತೆ ಸೀಮಿತವಾಗಿಲ್ಲ. ಅದು ರಸ್ತೆಗಳಿಗೂ ಚಾಚಿಕೊಳ್ಳುತ್ತದೆ. ಅಕ್ಕಿರಾಂಪುರ ಬಸ್ ನಿಲ್ದಾಣದಿಂದ ಮಾರುಕಟ್ಟೆಯವರೆಗೆ ಬಟ್ಟೆ ಅಂಗಡಿಗಳು, ಚಹಾ ಅಂಗಡಿಗಳು, ಕೃಷಿ ಪರಿಕರ ಮಾರಾಟಗಾರರು ಸಾಲಾಗಿ ನಿಂತಿರುತ್ತಾರೆ.

ಹಗ್ಗ ಮಾರುವವರು, ಮೇವು ಪಾತ್ರೆ ಮಾರುವವರು, ಕುರಿಗಳಿಗೆ ಅಲಂಕಾರ ವಸ್ತು ಮಾರುವವರು, ಪ್ರತಿ ಅಂಗಡಿಯೂ ಒಂದು ಅಗತ್ಯ ಪೂರೈಸುತ್ತದೆ.

ಚಹಾ ಗ್ಲಾಸ್‌ಗಳ ಟಣಟಣಿ, ಬಿಸಿ ಹೊಗೆ, ಒಂದು ಗುಟುಕು... ಇವು ಸಂತೆಯಲ್ಲಿನ ಸಾಮಾನ್ಯ ದೃಶ್ಯಗಳು. ಜನರು ಸ್ವಲ್ಪ ವಿರಾಮ ತೆಗೆದುಕೊಂಡು ದಣಿವು ತಗ್ಗಿಸಿಕೊಳ್ಳುತ್ತಾರೆ. ಈ ಸಣ್ಣ ಕ್ಷಣಗಳೇ ಸಂತೆಗೆ ಚೈತನ್ಯ ನೀಡುತ್ತವೆ.

ಪ್ರತಿ ಶನಿವಾರ, ಈ ಹಳ್ಳಿ ಒಂದು ಚಿಕ್ಕ ಪಟ್ಟಣವಾಗಿ ಬದಲಾಗುತ್ತದೆ. ತಾತ್ಕಾಲಿಕವಾದರೂ ಚಟುವಟಿಕೆಯಿಂದ ಕೂಡಿದ ಪಟ್ಟಣ.

ಮರಿಗಳನ್ನು ಖರೀದಿಸಿದ ನಂತರ ಕೆಲವರು ಅವುಗಳಿಗೆ ಬಣ್ಣ ಬಳಿಯುತ್ತಾರೆ. ಕೆಲವರು ಬಾಲದ ಬಳಿ ಕೂದಲು ಕತ್ತರಿಸುತ್ತಾರೆ. ಇದು ಗುರುತು, 'ಇದು ನಮ್ಮದು' ಎನ್ನುವ ದೃಢೀಕರಣ. ಸಂತೆಯಲ್ಲಿ ಮರಿಗಳು ತಪ್ಪಿಸಿಕೊಂಡರೂ, ಈ ಗುರುತುಗಳಿಂದಲೇ ಅವುಗಳನ್ನು ಮತ್ತೆ ಪತ್ತೆಹಚ್ಚಬಹುದು.

ಕುರಿಗೆ ಗುರುತು ಹಾಕಿರುವುದು

ಆರ್.ಸಿ. ರಮೇಶ್ ಹೇಳುತ್ತಾರೆ: 'ಮೊದಲು ಏನೂ ಇರಲಿಲ್ಲ. ಮುಕ್ಕಾಲು ಎಕರೆ ಜಮೀನಿಟ್ಟುಕೊಂಡು ಕುಟುಂಬ ಸಾಗಿಸುವುದೇ ಕಷ್ಟವಾಗಿತ್ತು. ಈ ಸಂತೆ ಬದುಕಿಗೆ ತಿರುವು ಕೊಟ್ಟಿತು. ಎರಡು ಮನೆ ಕಟ್ಟಿಸಿದ್ದೇನೆ. ₹15 ಲಕ್ಷಕ್ಕೆ ಒಂದು ನಿವೇಶನ ಖರೀದಿಸಿದ್ದೇನೆ. ಮೂವರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದ್ದೇನೆ'.

'ನಾನು ಚಿಕ್ಕವನಿದ್ದಾಗಿಂದಲೇ ಈ ಸಂತೆ ನೋಡ್ತಾ ಬಂದಿದ್ದೀನಿ. ಈಗಲೂ ಅದೇ ಉತ್ಸಾಹ' ಎಂದು ಅರವತ್ತು ವರ್ಷದ ಬಸಪ್ಪ ಹೇಳುತ್ತಾರೆ.

ಇಂತಹ ನೂರಾರು ಕುಟುಂಬಗಳು ಈ ಸಂತೆಯನ್ನು ಅವಲಂಬಿಸಿವೆ. ಕೆಲವರಿಗೆ ಉಪಕಸುಬು, ಕೆಲವರಿಗೆ ಮುಖ್ಯ ಜೀವನೋಪಾಯ.

ಸಂತೆ ಬೆಳೆಯುತ್ತಿದೆ. ಆದರೆ ಮೂಲಸೌಕರ್ಯಗಳು ಅದೇ ಮಟ್ಟದಲ್ಲಿ ಬೆಳೆದಿಲ್ಲ. ಸಾವಿರಾರು ಜನ ಸೇರುವ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯ ಸೌಲಭ್ಯಗಳು ತೃಪ್ತಿಕರವಾಗಿಲ್ಲ. ರಾತ್ರಿ ಮುಂಚಿತವಾಗಿ ಬರುವವರಿಗೆ ಉಳಿಯಲು ವ್ಯವಸ್ಥೆ ಇಲ್ಲ. ಶೆಡ್‌ಗಳಲ್ಲಿ ಅಥವಾ ಬಯಲಲ್ಲೇ ಮಲಗಬೇಕು. ವಾಹನ ನಿಲ್ದಾಣದ ಸಮಸ್ಯೆ ಗಂಭೀರವಾಗಿದೆ. ಪ್ರತಿ ಶನಿವಾರ ಹೊಳವನಹಳ್ಳಿ ರಸ್ತೆ ಸಂಪೂರ್ಣವಾಗಿ ವಾಹನಗಳಿಂದ ತುಂಬಿ ಹೋಗುತ್ತದೆ. ಹಾರ್ನ್‌ಗಳ ಗದ್ದಲ, ನಿಧಾನ ಚಲನೆ–ಇದು ಸಹನೆಯ ಪರೀಕ್ಷೆ.

ಸರ್ಕಾರ ಮೈಲಾರಲಿಂಗೇಶ್ವರ ಕುರಿ ಸಾಕಾಣಿಕೆ ಮತ್ತು ಉಣ್ಣೆ ಉತ್ಪಾದಕರ ಸಂಘಕ್ಕೆ ಸಂತೆ ನಡೆಸುವ ಜವಾಬ್ದಾರಿ ವಹಿಸಿದೆ. ಮಾರಾಟವಾಗುವ ಪ್ರತಿ ಮರಿಗೆ ₹5 ಶುಲ್ಕ ವಿಧಿಸಲಾಗುತ್ತದೆ. ಅದರಲ್ಲಿ ₹2 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ, ₹2 ಸಂಘಕ್ಕೆ, ₹1 ಮಹಾಮಂಡಳಕ್ಕೆ ಹಂಚಿಕೆ. ಇದೇ ಹಣ ಮಾರುಕಟ್ಟೆ ನಿರ್ವಹಣೆಗೆ ಬಳಸಲಾಗುತ್ತಿದೆ. ಆದರೆ ಅಗತ್ಯಕ್ಕೆ ಸಾಕಾಗುವುದಿಲ್ಲ ಎನ್ನುವುದು ಸ್ಥಳೀಯರ ಅಭಿಪ್ರಾಯ.

ಸೂರ್ಯೋದಯದ ಹೊತ್ತಿಗೆ, ಸಂತೆ ನಿಧಾನವಾಗಿ ಖಾಲಿಯಾಗುತ್ತದೆ. ಮರಿಗಳು ಹೊಸ ದಾರಿಗಳತ್ತ ಹೊರಡುತ್ತವೆ. ಕೆಲವು ನಗರಗಳತ್ತ, ಕೆಲವು ಮತ್ತೆ ಗ್ರಾಮಗಳತ್ತ. ಮಣ್ಣಿನ ಮೇಲೆ ಕಾಲಿನ ಗುರುತುಗಳು ಮಾತ್ರ ಉಳಿಯುತ್ತವೆ. ದೂಳು ನಿಧಾನವಾಗಿ ಮರೆಯಾಗುತ್ತದೆ. ಶಬ್ದಗಳು ಒಂದೊಂದಾಗಿ ಅಳಿದುಹೋಗುತ್ತವೆ. ಇಲ್ಲಿ ಕೇವಲ ಕುರಿ-ಮೇಕೆಗಳ ವ್ಯವಹಾರ ನಡೆಯುವುದಿಲ್ಲ; ಪ್ರತಿ ವ್ಯವಹಾರದ ಜೊತೆ ಬದುಕು, ಭರವಸೆ ಮತ್ತು ನಷ್ಟ-ಲಾಭಗಳ ಲೆಕ್ಕವೂ ತೂಗುತ್ತದೆ.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಬೀದಿನಾಯಿ ಪ್ರದರ್ಶನ!

majakoora@prajavani.co.in

ದಸ್ಗ ಚಕ್ಕು
ಕೇಶ್ರ ಷ್ಟ ಕಥೆಯ

ಕಲೆ–ಪರಿಕಲ್ಪನೆ:
ಸಂತೋಷ್ ಸಸಿಹಿತ್ಲು

ಅಪಾರ್ಟ್‌ಮೆಂಟ್‌ವೊಂದರಲ್ಲಿ ಸಾಕಿದ ನಾಯಿಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಮಾಲೀಕರು ತಮ್ಮ ನಾಯಿಗಳನ್ನು ಚೆಂದವಾಗಿ ಅಲಂಕಾರ ಮಾಡಿ ಕರೆತಂದಿದ್ದರು. ಆ ನಾಯಿಗಳನ್ನು ವೇದಿಕೆಯಲ್ಲಿ ಕುರ್ಚಿಗಳಲ್ಲಿ ಕೂರಿಸಲಾಗಿತ್ತು. ಅವುಗಳ ವೇಷಭೂಷಣ ಕಂಡ ಬೀದಿ ನಾಯಿಗಳು ಜೋರಾಗಿ ಬೊಗಳಲು ಆರಂಭಿಸಿದವು. ಅವುಗಳನ್ನು ಕಂಡ ಸಾಕಿದ ನಾಯಿಗಳು ಬೆದರಿದವು. ಆಗ ಕಾರ್ಯಕ್ರಮವು ನಾಯಿ ಪ್ರದರ್ಶನ ಹೋಗಿ ಬೀದಿನಾಯಿ ಪ್ರದರ್ಶನವಾಯಿತು!



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಇತಿ	+	ಕಡು	+	ಲ	=	
2	ರತಿ	+	ಕಡು	+	ಪ್ರ	=	
3	ಮಳೆ	+	ಬೇಗೆ	+	ಸಿ	=	
4	ನವ	+	ಮರ	+	ಯೂ	=	
5	ಬಳಿ	+	ಕರಿ	+	ಕಂ	=	

ಮೋಜಿನ ಇಂಗ್ಲಿಷ್

ಇಲ್ಲಿ ಎರಡಕ್ಷರಗಳ ಕನ್ನಡ ಪದ ಕೊಡಲಾಗಿದೆ. ನೀವು ಅವುಗಳಿಗೆ ಇನ್ನೂ ಒಂದು ಕನ್ನಡ ಅಕ್ಷರ ಸೇರಿಸಿ. ಮೂರು ಅಕ್ಷರಗಳನ್ನು ಕೂಡಿಸಿ ಓದಿದರೆ ಅವು ಇಂಗ್ಲಿಷ್ ಉಚ್ಚಾರದ ಪದಗಳಾಗಿ ಬದಲಾಗುತ್ತವೆ. ಪ್ರಯತ್ನಿಸಿ

1	ಕರೆ		
2	ಶಿಲೆ		
3	ಸಮ		
4	ಆನೆ		
5	ಕೆಲ		
6	ಕಲೆ		
7	ಕಷ್ಟ		

2. ಇಲ್ಲಿ ಕೊಟ್ಟಿರುವ 'ಪರ' ಎಂಬ ಎರಡಕ್ಷರಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಪ	ರ		
2	ಪ	ರ		
3	ಪ	ರ		
4	ಪ	ರ		
5	ಪ	ರ		

ಅಕ್ಷರ ಪಟ್ಟಿ

ತ್ಮ	ದೈ	ಷೆ	ಭಾ	ವ
ಮಾ	ಹ್ಮ	ಬ್ರ	ರ	ಸ್ವ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರಗಳ ಪದದ ನಡುವೆ ಅಕ್ಷರ ಪಟ್ಟಿಯಿಂದ ಒಂದು ಅಕ್ಷರ ಆಯ್ದು ತುಂಬಿ ಅರ್ಥಬದ್ಧ ಮೂರಕ್ಷರದ ಪದ ಮಾಡಿ.

1	ಚಿ		ಣ್ಣ
2	ಕ		ಣಿ
3	ಕ		ಡ
4	ಕ		ರು
5	ಕ		ರ
6	ಕ		ಡಿ
7	ಕ		ಚ್ಚು
8	ಕ		ಟು
9	ಕ		ಲಿ
10	ಕ		ರಿ
11	ಕ		ರೆ
12	ಕ		ಡಿ
13	ಕ		ಣ
14	ಕ		ವಿ
15	ಕ		ಯ

ಅಕ್ಷರ ಪಟ್ಟಿ

ತ್ತ	ಕ್ಕ	ಲ್ನಾ	ಣ್ಮ	ಲ್ಲು
ವ್ವಾ	ಮ್ಮಾ	ಡ್ಡಾ	ಣ್ಮ	ಲ್ಲಾ
ಗ್ಗಂ	ನ್ನ	ಟ್ಟ	ಣ್ಮ	ಬ್ಬಿ

ಪದಶೋಧ

ಇಲ್ಲಿ ಕೊಟ್ಟಿರುವ ಪ್ರತಿ ಪದದಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಭಾರತದ ಓರ್ವ ಜಾಗತಿಕ ಗಣಿತಜ್ಞರ ಹೆಸರನ್ನು ಹುಡುಕಿ

1.ಆಗರ್ಭಶ್ರೀಮಂತ
2.ಕಾರ್ಯನಿಭಾಯಿಸು
3.ನೋವು ನಿವಾರಕ
4.ಕುದುರೆಸವಾರ
5.ಶಿವರಾತ್ರಿ ಹಬ್ಬ
6.ಹಣ್ಣಿನ ಮಾರಾಟ
7.ಕಾನೂನು ಶಿಬಿರ
8.ಸಾಮಾನ್ಯ ಜನರು
9.ಬೆಡೆನ್ ಪಾವೆಲ್

ಉತ್ತರ:

ವರ್ಡ್ ಗೇಮ್

ಇಲ್ಲಿ ಕೊಟ್ಟಿರುವ ಎರಡು ಪದಗಳ ಅಕ್ಷರ ಸೇರಿಸಿ ಒಂದೇ ಪದ ಮಾಡಿ.

GO + BALL =

ಶಬ್ದಾಟ

ಇಲ್ಲಿ ಕೊಟ್ಟಿರುವ ಒಂದು ಪದ ಹಾಗೂ ಒಂದು ಅಕ್ಷರ ಸೇರಿಸಿ ಒಂದೇ ಪದ ಮಾಡಿ.

ಸಮನೆಲ + ಗೆ =

ಗಣಿತದಲ್ಲಿ ಗರ್ದಿಗಮ್ಮತ್ತು

ಗುಣ್ಯದ ಸಂಖ್ಯೆ ಅಂಕಿಗಳ ಮೊತ್ತ ಹತ್ತು ಆಗಿರಲಿ. ಹಾಗೂ ಗುಣಿಸುವ ಗುಣಕದ ಸಂಖ್ಯೆಯು ಯಾವಾಗಲೂ 99 ಆಗಿರಲಿ. ಹೀಗಿರುವಾಗ ಉತ್ತರ ಯಾವಾಗಲೂ ಬಿಡಿ ಅಂಕಿಗಳ ಗುಣಲಬ್ದದ ಸಂಖ್ಯೆ ಹಾಗೂ ಆ ಸಂಖ್ಯೆಯ ವಿಲೋಮ ಸಂಖ್ಯೆಯೇ ಪೂರ್ಣ ಉತ್ತರವಾಗಿರುತ್ತದೆ.

ಉದಾ 1:
46
X 99
45/54

ಉದಾ 2:
19
X 99
18/81

ಉದಾ 3:
55
X 99
54/45

ಪಂಚ–ಕ್ವಿಜ್ಞಾಯ

1	ದೇವಾಲಯದ ಗಂಟೆಗಳನ್ನು ಯಾವ ಲೋಹದಿಂದ ತಯಾರಿಸುತ್ತಾರೆ	
2	ದೃಷ್ಟಿ ಇಲ್ಲದಿರುವವರಿಗೆ ಇರುವ ಲಿಪಿ ಯಾವುದು	
3	ಶಕುಂತಲೆಯನ್ನು ಸಾಕಿಸಲಹಿದ ಋಷಿ ಯಾರು	
4	ಭರತೇಶ ವೈಭವ ಯಾರ ಕೃತಿ	
5	ಮುದ್ದಣ ಇದು ಯಾರ ಕಾವ್ಯ ನಾಮ	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಚಡಪಡಿಕೆ 2.ಬರವಣಿಗೆ 3.ಜಗದಗಲ 4.ಪರಿಪೂರ್ಣತೆ 5.ಅನವರತ
ಶಬ್ದಾಟ: ಭಾರತದತ್ತ
ವರ್ಡ್ ಗೇಮ್: STORY
ಗಣಿತದಲ್ಲಿ ಗರ್ದಿಗಮ್ಮತ್ತು: ಒಂದು ಅಗಸಿ ಬಾಗಿಲಿಗೆ 16X16 = 256 ತೇರು, 256 ತೇರಿಗೆ ಒಟ್ಟು 256X16 = 4096 ಕಳಸ.
ಜಾಣಪದ ಆಟ: 1.ಸನಾದಿ, ಬುನಾದಿ, ಅನಾದಿ, 2.ಆಗರ, ಸಾಗರ, ನಾಗರ, 3.ಅಂಗಡಿ, ಗೊಂಗಡಿ, ಮಾಗಡಿ, 4.ಸಲಿಕೆ, ನುಲಿಕೆ, ಕಲಿಕೆ, 5.ಭವನ, ಕವನ, ಹವನ
ಜಾಣಪದ ಆಟ 2: 1.ಬ್ರಹ್ಮಜ್ಞಾನ 2.ಬ್ರಹ್ಮಚಾರಿ 3.ಬ್ರಹ್ಮಲಿಪಿ 4.ಬ್ರಹ್ಮವಿದ್ಯೆ 5.ಬ್ರಹ್ಮಸೂತ್ರ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಚಿರಾಗ್ ಕಲ್ಮಠ
ಗದಗ

ಯಜತ್ ಎಚ್.ಆರ್.
ಹೊಸಕೋಟೆ

ಕುಸುಮ ಎಚ್.ಎಸ್.
ಬೆಂಗಳೂರು

ಗಹನ್ ಎಂ.ಗೌಡ
ಶಿವಮೊಗ್ಗ

ಕುಶಲ್ ಗೋವರ್ಧನ
ಕೆ.ಎಚ್,ಡಾನ್ ಬಾಸ್ಕೊ ಶಾಲೆ

ಸಂಹಿತ್ ಎಚ್. ಶೆಟ್ಟಿ
ಬ್ರಹ್ಮಾವರ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ರನ್ ಸಾಗರ ಈಜಿ ಗೆದ್ದ ಪಂಜಾಬ್ 'ಕಿಂಗ್'

ರಾಹುಲ್ ಶತಕಕ್ಕೆ ಒಲಿಯದ ಜಯ
ಪ್ರಭಸಿಮ್ರನ್, ಶ್ರೇಯಸ್, ಪ್ರಿಯಾಂಶ್ ಅಬ್ಬರ

ಪ್ರಭಸಿಮ್ರನ್ ಸಿಂಗ್

ನವದೆಹಲಿ (ಪಿಟಿಐ): ಸಿಕ್ಸರ್, ಬೌಂಡರಿಗಳ ಅಬ್ಬರ. ರನ್‌ಗಳ ಭೋರ್ಗರೆತದ ನಡುವೆ ಪಂಜಾಬ್ ಕಿಂಗ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಜಯಭೇರಿ ದಾಖಲಿಸಿತು.

265 ರನ್‌ಗಳ ಗುರಿ ಬೆನ್ನಟ್ಟಿದ ಪಂಜಾಬ್ ತಂಡವು ಆರು ವಿಕೆಟ್‌ಗಳ ವಿಜಯದೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು. ಟೂರ್ನಿಯಲ್ಲಿ ಅಜೇಯ ಅಭಿಯಾನ ಮುಂದುವರಿಸಿತು.

ಶನಿವಾರ ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಕೆ.ಎಲ್. ರಾಹುಲ್ (151 ರನ್) ಅವರ ಸೊಗಸಾದ ಶತಕದಿಂದಾಗಿ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 264 ರನ್ ಗಳಿಸಿತು. ಪಂಜಾಬ್ ತಂಡದ ಆರಂಭಿಕ ಜೋಡಿ ಪ್ರಭಸಿಮ್ರನ್ ಸಿಂಗ್ (76 ರನ್) ಮತ್ತು ಪ್ರಿಯಾಂಶ್ ಆರ್ಯ (73 ರನ್) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ 41 ಎಸೆತಗಳಲ್ಲಿ 126 ರನ್ ಸೇರಿಸಿದರು. ಪವರ್‌ಪ್ಲೇ ಹಂತದಲ್ಲಿಯೇ 116 ಗಳಿಸಿದ ಇಬ್ಬರೂ ಬ್ಯಾಟರ್‌ಗಳು ತಂಡದ ಗೆಲುವಿಗೆ ಮುನ್ನುಡಿ ಬರೆದರು. ಆದರೂ ಡೆಲ್ಲಿ ತಂಡವನ್ನು ಗೆಲುವಿನತ್ತ ಮರಳಿ ತರುವ ಪ್ರಯತ್ನವನ್ನು ಒಂದು ಹಂತದಲ್ಲಿ ಬೌಲರ್‌ಗಳು ಮಾಡಿದರು. ಬ್ಯಾಟರ್‌ಗಳಿಂದ ವಿಪರೀತ ದಂಡನೆಗೊಳಗಾದರೂ ಎದೆಗುಂದದ ಸ್ಪಿನ್ನರ್ ಅಕ್ಷರ್ ಪಟೇಲ್ ಅವರು ಪ್ರಿಯಾಂಶ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ಕೆ.ಎಲ್.ರಾಹುಲ್

ಆದರೆ ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರನ್ನು ಕಟ್ಟಿಹಾಕಿದ್ದರೆ ಡೆಲ್ಲಿಗೆ ಗೆಲುವಿನ ಅವಕಾಶ ಬಾಗಿಲು ತೆರೆಯುತ್ತಿತ್ತು. ಆದರೆ ಅವರ ಎರಡು ಕ್ಯಾಚ್‌ಗಳನ್ನು ಕರುಣ್ ನಾಯರ್ (ಬದಲೀ ಫೀಲ್ಡರ್) ಅವರು ಕೈಚೆಲ್ಲಿದರು. ಇದರಿಂದಾಗಿ ಶ್ರೇಯಸ್ ಅಜೇಯ 71 ರನ್ ಗಳಿಸಿದ್ದಲ್ಲದೇ ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು.

2024ರಲ್ಲಿ ಪಂಜಾಬ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಎದುರು 262 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಸಾಧಿಸಿತ್ತು. ಇದುವರೆಗಿನ 20 ಕ್ರಿಕೆಟ್ ಚೇಸಿಂಗ್ ದಾಖಲೆಯಾಗಿತ್ತು. ತನ್ನ ದಾಖಲೆಯನ್ನು ಪಂಜಾಬ್ ತಂಡವು ಇಲ್ಲಿ ಮತ್ತಷ್ಟು ಉತ್ತಮಪಡಿಸಿಕೊಂಡಿತು. ಒಟ್ಟು 13 ಅಂಕ ಗಳಿಸಿರುವ ಶ್ರೇಯಸ್ ಬಳಗವು ಪ್ಲೇ ಆಫ್ ಹೊಸ್ತಿಲಿಗೆ ಬಂದು ನಿಂತಿತು. ತಂಡವು ಲೀಗ್ ಹಂತದಲ್ಲಿ ಇನ್ನೂ ಏಳು ಪಂದ್ಯಗಳನ್ನು ಆಡಬೇಕಿದೆ.

ಈ ಪಂದ್ಯದಲ್ಲಿ ಒಟ್ಟು 49 ಬೌಂಡರಿ ಮತ್ತು 33 ಸಿಕ್ಸರ್‌ಗಳು ದಾಖಲಾದವು. ಕೇವಲ ಆರು ವಿಕೆಟ್‌ಗಳು ಮಾತ್ರ ಪತನವಾದವು. ಪಂಜಾಬ್ ಆರಂಭಿಕ ಬ್ಯಾಟರ್ ಪ್ರಭಸಿಮ್ರನ್ ಸಿಂಗ್ ಅವರು ವೇಗಿ ಮುಕೇಶ್ ಕುಮಾರ್ ಅವರ ಒಂದೇ ಓವರ್‌ನಲ್ಲಿ ಎಲ್ಲ ಆರು ಎಸೆತಗಳನ್ನು ಬೌಂಡರಿಗಟ್ಟಿದರು. ಐಪಿಎಲ್‌ನಲ್ಲಿ ಈ ಸಾಧನೆ ಮಾಡಿದ 3ನೇ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. ಡೆಲ್ಲಿ ತಂಡದ ಲುಂಗಿ ಎನ್‌ಗಿಡಿ ಅವರು ಫೀಲ್ಡಿಂಗ್ ಮಾಡುವಾಗ ಕ್ಯಾಚ್ ಪಡೆಯುವ ಭರದಲ್ಲಿ ಬಿದ್ದು ತಲೆಗೆ ಪೆಟ್ಟಾಯಿತು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಇದರಿಂದಾಗಿ ಡೆಲ್ಲಿ ತಂಡದ ಬೌಲಿಂಗ್ ವಿಭಾಗಕ್ಕೆ ಕೊರತೆ ಕಾಡಿತು.

ರಾಹುಲ್ ಶತಕ: ಕನ್ನಡಿಗ ರಾಹುಲ್ ಅವರು 67 ಎಸೆತಗಳಲ್ಲಿ 152 ರನ್ ಗಳಿಸಿದರು. ಕ್ರಿಕೆಟ್ ಕಾಪಿ ಪುಸ್ತಕದ ಕಲಾತ್ಮಕವಾದ ಹೊಡೆತಗಳನ್ನು ಪ್ರಯೋಗಿಸಿದ ರಾಹುಲ್ ಆಟದ ಸೊಬಗು ಕಣ್ಮನ ಸೆಳೆಯಿತು. ನಿಖರವಾದ ಫ್ಲಿಕ್, ಪುಲ್ ಮತ್ತು ಸೊಗಸಾದ ಡ್ರೈವ್‌ಗಳನ್ನು ಆಡಿದರು. ತಮ್ಮ ಇನಿಂಗ್ಸ್ ಉದ್ದಕ್ಕೂ ರಾಹುಲ್ ಅವರು 200ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಇದರೊಂದಿಗೆ ಅವರು ಅತಿ ದೊಡ್ಡ ವೈಯಕ್ತಿಕ ಸ್ಕೋರ್ ದಾಖಲಿಸಿದ ಐಪಿಎಲ್‌ನ ಮೂರನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಕ್ರಿಸ್ ಗೇಲ್ (175) ಮತ್ತು ಬ್ರೆಂಡನ್ ಮೆಕ್ಕಲಮ್ (158) ಅವರು ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿದ್ದಾರೆ.

ರಾಹುಲ್ ಅವರ ಎರಡು ಕ್ಯಾಚ್‌ಗಳನ್ನು ಫೀಲ್ಡರ್‌ಗಳು ಕೈಚೆಲ್ಲಿದರು. ಇದನ್ನು ಸಮರ್ಥವಾಗಿ ಬಳಸಿಕೊಂಡ ಅವರು ನಿತೀಶ್ ರಾಣಾ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 220 (95 ಎಸೆತ) ರನ್ ಸೇರಿಸಿದರು. ರಾಣಾ 11 ಬೌಂಡರಿ ಮತ್ತು 4 ಸಿಕ್ಸರ್‌ಗಳಿಂದ 91 ರನ್ ಗಳಿಸಿದರು. ಕೇವಲ 44 ಎಸೆತಗಳನ್ನು ಅವರು ಆಡಿದರು.

ಶ್ರೇಯಸ್ ಅಯ್ಯರ್ ಪಿಟಿಐ ಚಿತ್ರಗಳು

ಗರಿಷ್ಠ ರನ್ ಯಶಸ್ವಿ ಚೇಸಿಂಗ್ (ಐಪಿಎಲ್‌ನಲ್ಲಿ)

ಗುರಿ	ತಂಡ	ಎದುರಾಳಿ	ತಾಣ	ವರ್ಷ
265	ಪಿಬಿಕೆಎಸ್	ಡಿ ಸಿ	ದೆಹಲಿ	2026
262	ಪಿಬಿಕೆಎಸ್	ಕೆಕೆಆರ್	ಕೋಲ್ಕತ್ತ	2024
246	ಎಸ್‌ಆರ್‌ಎಚ್	ಪಿಬಿಕೆಎಸ್	ಹೈದರಾಬಾದ್	2025
229	ಎಸ್‌ಆರ್‌ಎಚ್	ಆರ್‌ಆರ್	ಜೈಪುರ	2026
228	ಆರ್‌ಸಿಬಿ	ಎಲ್‌ಎಸ್‌ಜಿ	ಲಖನೌ	2025

529
ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಪಂದ್ಯದಲ್ಲಿ ಸೇರಿದ ಒಟ್ಟು ರನ್. ಇದು ಐಪಿಎಲ್ ಇತಿಹಾಸದಲ್ಲಿ ಎರಡನೇ ಅತಿ ಹೆಚ್ಚು ರನ್ ದಾಖಲೆಯಾಗಿದೆ.

220
ಕೆ.ಎಲ್.ರಾಹುಲ್ ಮತ್ತು ನಿತೀಶ್ ರಾಣಾ ಎರಡನೇ ವಿಕೆಟ್ ಜೊತೆಯಾಟದಲ್ಲಿ ಪೇರಿಸಿದ ರನ್. ಇದು ಐಪಿಎಲ್‌ನಲ್ಲಿ ಯಾವುದೇ ವಿಕೆಟ್‌ಗೆ ದಾಖಲಾದ ಎರಡನೇ ಗರಿಷ್ಠ ರನ್ ಜೊತೆಯಾಟವಾಗಿದೆ.

152*
ಪಂಜಾಬ್ ಕಿಂಗ್ಸ್ ವಿರುದ್ಧ ಕೆ.ಎಲ್. ರಾಹುಲ್ ಗಳಿಸಿದ ರನ್. ಐಪಿಎಲ್‌ನಲ್ಲಿ ಭಾರತೀಯ ಆಟಗಾರನೊಬ್ಬನ ಗರಿಷ್ಠ ರನ್ ಇದಾಗಿದೆ. ಒಟ್ಟಾರೆಯಾಗಿ ಮೂರನೇ ಗರಿಷ್ಠ ರನ್ ಇದಾಗಿದ್ದು, ಕ್ರಿಸ್ ಗೇಲ್ (175*) ಮತ್ತು ಬ್ರೆಂಡನ್ ಮೆಕ್ಕಲಂ (158*) ಮೊದಲೆರಡು ಸ್ಥಾನದಲ್ಲಿದ್ದಾರೆ

116 (ವಿಕೆಟ್ ನಷ್ಟವಿಲ್ಲದೆ)
ಪವರ್‌ಪ್ಲೇ (1ರಿಂದ 6ಓವರ್) ಅವಧಿಯಲ್ಲಿ ಪಂಜಾಬ್ ಕಿಂಗ್ಸ್ ತಂಡ ಗಳಿಸಿದ ರನ್. ಇದು ಐಪಿಎಲ್‌ನಲ್ಲಿ ಎರಡನೇ ಅತಿ ಹೆಚ್ಚು ರನ್ ದಾಖಲೆಯಾಗಿದೆ.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್: 2 ವಿಕೆಟ್‌ಗೆ 264 (20 ಓವರ್‌ಗಳಲ್ಲಿ)
ನಿಸಾಂಕ ಸಿ ಪ್ರಭಸಿಮ್ರನ್ ಬಿ ಅರ್ಷದೀಪ್ 11 (7ಎ, 4x2)
ಕೆ.ಎಲ್.ರಾಹುಲ್ ಔಟಾಗದೇ 152 (67ಎ, 4x16, 6x9)
ನಿತೀಶ್ ಸಿ ಶ್ರೇಯಸ್ ಬಿ ಬಾರ್ಟ್ಲೆಟ್ 91 (44ಎ, 4x11, 6x4)
ಡೇವಿಡ್ ಮಿಲ್ಲರ್ ಔಟಾಗದೇ 3 (3ಎ)
ಇತರೆ: 7 (ವೈಡ್ 6, ನೋಬಾಲ್ 1)
ವಿಕೆಟ್ ಪತನ: 1–28 (ಪಥುಮ್ ನಿಸಾಂಕ, 2.4), 2–248 (ನಿತೀಶ್ ರಾಣಾ, 18.3)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–49–1, ಜೇವಿಯರ್ ಬಾರ್ಟ್ಲೆಟ್ 4–0–69–1, ಮಾರ್ಕೊ ಯಾನ್ಸೆನ್ 4–0–45–0, ವೈಶಾಖ ವಿಜಯಕುಮಾರ್ 3–0–48–0, ಯಜುವೇಂದ್ರ ಚಾಹಲ್ 4–0–42–0, ಮಾರ್ಕಸ್ ಸ್ಟೋಯಿನಿಸ್ 1–0–11–0

ಪಂಜಾಬ್ ಕಿಂಗ್ಸ್: 4ಕ್ಕೆ 265 (18.5 ಓವರ್‌ಗಳಲ್ಲಿ)
ಪ್ರಿಯಾಂಶ್ ಸಿ ಸಮೀರ್ ಬಿ ಅಕ್ಷರ್ 43 (17ಎ, 4x2, 6x5)
ಪ್ರಭಸಿಮ್ರನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 76 (26ಎ, 4x9, 6x5)
ಕೂಪರ್ ಬಿ ಕುಲದೀಪ್ 17 (10ಎ, 4x1, 6x1)
ಶ್ರೇಯಸ್ ಅಯ್ಯರ್ ಔಟಾಗದೇ 71 (36ಎ, 4x3, 6x7)
ನೇಹಲ್ ಸಿ (ಸಬ್) ಕರುಣ್ ಬಿ ವಿಪ್ರಜ್ 25 (15ಎ, 4x3, 6x1)
ಶಶಾಂಕ್ ಸಿಂಗ್ ಔಟಾಗದೇ 19 (10ಎ, 4x2, 6x1)
ಇತರೆ: 14 (ಲೆಗ್‌ಬೈ 1, ವೈಡ್ 12, ನೋಬಾಲ್ 1)
ವಿಕೆಟ್ ಪತನ: 1–126 (ಪ್ರಿಯಾಂಶ್ ಆರ್ಯ, 6.5), 2–132 (ಪ್ರಭಸಿಮ್ರನ್ ಸಿಂಗ್, 7.3), 3–145 (ಕೂಪರ್ ಕೊನೊಲಿ, 9.2), 4–201 (ನೇಹಲ್ ವಧೇರಾ, 14.3)
ಬೌಲಿಂಗ್: ಅಕೀಬ್ ನಬಿ ದಾರ್ 2–0–41–0, ಮುಕೇಶ್ ಕುಮಾರ್ 3–0–55–0, ಅಕ್ಷರ್ ಪಟೇಲ್ 4–0–44–1, ಟಿ.ನಟರಾಜನ್ 3.5–0–54–0, ಕುಲದೀಪ್ ಯಾದವ್ 4–0–46–2, ವಿಪ್ರಜ್ ನಿಗಮ್ 2–0–24–1.
ಪಂದ್ಯದ ಆಟಗಾರ: ಕೆ.ಎಲ್. ರಾಹುಲ್

ಇಂದಿನ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್ V/s ಗುಜರಾತ್ ಟೈಟನ್ಸ್
ತಾಣ: ಚೆನ್ನೈ, ಆರಂಭ: ಮಧ್ಯಾಹ್ನ 3.30

ಲಖನೌ ಸೂಪರ್ ಜೈಂಟ್ಸ್ V/s ಕೋಲ್ಕತ್ತ ನೈಟ್ ರೈಡರ್ಸ್
ತಾಣ: ಲಖನೌ, ಆರಂಭ: ರಾತ್ರಿ 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಐಪಿಎಲ್ 2026ರಲ್ಲಿ ತನ್ನ ಎರಡನೇ ಶತಕದೊಂದಿಗೆ ಸ್ಯಾಮ್ಸನ್ ಸಿಎಸ್‌ಕೆಗಾಗಿ ಅಮೋಘವಾದ ಪ್ರದರ್ಶನ ನೀಡಿದ್ದಾರೆ

ಅಭಿಷೇಕ್–ಇಶಾನ್ ಆಟಕ್ಕೆ ಒಲಿದ ಜಯ

ಜೈಪುರ (ಪಿಟಿಐ): ಅಭಿಷೇಕ್ ಶರ್ಮಾ–ಇಶಾನ್ ಕಿಶಾನ್ ಅವರ ಶತಕದ ಜೊತೆಯಾಟದ ಎದುರುಹದಿನೈದು ವರ್ಷದ ಪೋರ ವೈಭವ್ ಸೂರ್ಯವಂಶಿ ಅವರ ಶತಕ ಕಳೆಗುಂದಿತು. ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು 5 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ತಂಡವನ್ನು ಮಣಿಸಿತು.

ಸನ್‌ರೈಸರ್ಸ್ ತಂಡವು 8 ಪಂದ್ಯಗಳಲ್ಲಿ 5ನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ರಾಯಲ್ಸ್ ನೆಟ್ ರನ್‌ರೇಟ್ ಆಧಾರದಲ್ಲಿ ನಾಲ್ಕನೇ ಸ್ಥಾನಕ್ಕೆ ಸರಿಯಿತು.

36 ಎಸೆತಗಳಲ್ಲಿ ಶತಕ ಬಾರಿಸಿದ ವೈಭವ್ ಅವರ ಆಟದಿಂದ ರಾಜಸ್ಥಾನ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 228 ರನ್ ಗಳಿಸಿತು.

ಕಠಿಣ ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡವು ಆರಂಭ ಆಟಗಾರ ಟ್ರಾವಿಸ್ ಹೆಡ್ (6; 5ಎ) ಅವರನ್ನು ಬೇಗನೆ ಕಳೆದುಕೊಂಡಿತು. ಆಗ ಜೊತೆಯಾದ ಅಭಿಷೇಕ್ ಹಾಗೂ ಇಶಾನ್ 55 ಎಸೆತಗಳಲ್ಲಿ 132 ರನ್ ಸೇರಿಸಿ, ಆಸರೆಯಾದರು. ಅಭಿಷೇಕ್ 29 ಎಸೆತಗಳಲ್ಲಿ 11 ಬೌಂಡರಿ, 1 ಸಿಕ್ಸರ್ ಸಹಿತ 57 ರನ್ ಸಿಡಿಸಿದರೆ, ಇಶಾನ್ 31 ಎಸೆತಗಳಲ್ಲಿ 74 ರನ್ ಸೂರೆಮಾಡಿದರು. ಅವರ ಇನಿಂಗ್ಸ್‌ನಲ್ಲಿ 11 ಬೌಂಡರಿ, 3 ಸಿಕ್ಸರ್ ಇದ್ದವು.

ಈ ಇಬ್ಬರು ಆಟಗಾರರು ನಿರ್ಗಮಿಸಿದ ಬಳಿಕ, ಹೆನ್ರಿಚ್ ಕ್ಲಾಸೆನ್ (29; 24ಎ) ಹಾಗೂ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ (36; 18ಎ) 53 ರನ್ ಜೊತೆಯಾಟವಾಡಿ ತಂಡವನ್ನು ಗೆಲುವಿನ ಹೊಸ್ತಿಲಿಗೆ ತಂದು ನಿಲ್ಲಿಸಿದರು. ಸಲೀಲ್ ಅರೋರಾ ಗೆಲುವಿನ ಸಿಕ್ಸರ್ ಹೊಡೆದರು.

ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ತಂಡ ಇನ್ನೂ 9 ಎಸೆತ ಬಾಕಿ ಇರುವಂತೆ 5 ವಿಕೆಟ್‌ಗೆ 229 ರನ್ ಹೊಡೆದು ಸಂಭ್ರಮಿಸಿತು. ಗಾಯದಿಂದ ಚೇತರಿಸಿ ಕೊಂಡು ಬಂದ ನಂತರ ಕಮಿನ್ಸ್ ಆಡಿದ ಮೊದಲ ಪಂದ್ಯ ಇದಾಗಿತ್ತು.

ಇದಕ್ಕೆ ಮೊದಲು, ಬಿಹಾರದ ಬಾಲಕ ವೈಭವ್ ಸೂರ್ಯವಂಶಿ ಶತಕದ ಆಟಕ್ಕೆ ಸನ್‌ರೈಸರ್ಸ್ ಬೌಲರ್‌ಗಳು ಬೆಚ್ಚಿದರು. ವೈಭವ್ 12 ಸಿಕ್ಸರ್, 5 ಬೌಂಡರಿ ಹೊಡೆದರು. 37 ಎಸೆತಗಳಲ್ಲಿ 103 ರನ್ ಗಳಿಸಿ ಔಟಾದರು.

ಐಪಿಎಲ್‌ನಲ್ಲಿ ಮೂರನೇ ಅತಿವೇಗದ ಶತಕ (36ಎ) ಇದಾಗಿದೆ. ಅಲ್ಲದೇ ಹೋದ ವರ್ಷ ಐಪಿಎಲ್‌ಗೆ ಪದಾರ್ಪಣೆ ಮಾಡಿದ ವೈಭವ್ ಅವರಿಗೆ ಎರಡನೇ ಶತಕ ಇದು.

ವೈಭವ್ ಅವರು ಹೋದ ವರ್ಷ 35 ಎಸೆತಗಳಲ್ಲಿ ಶತಕ ಗಳಿಸಿದ್ದರು. 2013ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕ್ರಿಸ್ ಗೇಲ್ ಅವರು 30 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 228 (ವೈಭವ್ ಸೂರ್ಯವಂಶಿ 103, ಧ್ರುವ್ ಜುರೆಲ್ 51, ಡೊನೊವನ್ ಫೆರಿರಾ 33; ಇಶಾನ್ ಮಾಲಿಂಗ 38ಕ್ಕೆ2). ಸನ್‌ರೈಸರ್ಸ್ ಹೈದರಾಬಾದ್: 18.3 ಓವರ್‌ಗಳಲ್ಲಿ 5 ವಿಕೆಟ್‌ಗೆ 229 (ಅಭಿಷೇಕ್ ಶರ್ಮಾ 57, ಇಶಾನ್ ಕಿಶನ್ 74, ನಿತೀಶ್ ಕುಮಾರ್ ರೆಡ್ಡಿ 36; ಜೋಫ್ರಾ ಆರ್ಚರ್ 34ಕ್ಕೆ2, ಬ್ರಿಜೇಶ್ ಶರ್ಮಾ 44ಕ್ಕೆ2).
ಪಂದ್ಯದ ಆಟಗಾರ: ಇಶಾನ್ ಕಿಶನ್.

ಇಶಾನ್ ಕಿಶಾನ್ (ಎಡ). ವೈಭವ್ ಸೂರ್ಯವಂಶಿ ಚಿತ್ರಗಳು: ಪಿಟಿಐ/ಎಎಫ್‌ಪಿ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	7	6	0	1	13	1.333
ಆರ್‌ಸಿಬಿ	7	5	2	0	10	1.101
ಎಸ್‌ಆರ್‌ಎಚ್	8	5	3	0	10	0.815
ಆರ್ ಆರ್	8	5	3	0	10	0.602
ಸಿಎಸ್‌ಕೆ	7	3	4	0	6	0.118
ಡಿ ಸಿ	7	3	4	0	6	- 0.184
ಜಿ ಟಿ	7	3	4	0	6	- 0.790
ಎಂ ಐ	7	2	5	0	4	0.736
ಎಲ್‌ಎಸ್‌ಜಿ	7	2	5	0	4	- 1.277
ಕೆಕೆಆರ್	7	1	5	1	3	- 0.879

ಆರೆಂಜ್ ಕ್ಯಾಪ್–ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (380 ರನ್)
ಪರ್ಪಲ್ ಕ್ಯಾಪ್–ಅನ್ಶುಲ್ ಕಂಬೋಜ್ , ಸಿಎಸ್‌ಕೆ (14 ವಿಕೆಟ್)



ಎನ್‌ಗಿಡಿ 'ಕಂಕಷನ್'

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪ್ರಮುಖ ಬೌಲರ್, ದಕ್ಷಿಣ ಆಫ್ರಿಕಾದ ವೇಗಿ ಲುಂಗಿ ಎನ್‌ಗಿಡಿ ಅವರು ಶನಿವಾರ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಕ್ಯಾಚ್ ಪಡೆಯುವ ಯತ್ನದಲ್ಲಿ ಬಿದ್ದು ಗಾಯಗೊಂಡರು.

ಪಂಜಾಬ್ ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ ಅವರು ಅಕ್ಷರ್ ಪಟೇಲ್ ಹಾಕಿದ ಎರಡನೇ ಓವರ್‌ನ ಎಸೆತವನ್ನು ಹೊಡೆದರು. ಆದರೆ ಚೆಂಡು ಬ್ಯಾಟ್‌ಗೆ ಅಪ್ಪಳಿಸಿ ಎತ್ತರಕ್ಕೆ ಸಾಗಿತು. ಕ್ಯಾಚ್ ಪಡೆಯಲು ಲುಂಗಿ ಓಡಿದರು. ಆದರೆ ಡೈವ್ ಮಾಡುವ ಯತ್ನದಲ್ಲಿ ಬಿದ್ದರು. ಅಂಗಾತ ಬಿದ್ದ ಅವರ ತಲೆಯ ಹಿಂಭಾಗವು ನೆಲಕ್ಕೆ ಅಪ್ಪಳಿಸಿತು. ಕುತ್ತಿಗೆಯ ಭಾಗವೂ ಗಾಸಿಗೊಂಡಿತು. ಏಳಲು ಯತ್ನಿಸಿದ ಅವರು ಹಾಗೇಯೇ ಕುಸಿದು ಮಲಗಿದರು. ಕೂಡಲೇ ಧಾವಿಸಿ ಬಂದ ವೈದ್ಯಕೀಯ ಸಿಬ್ಬಂದಿಯು ಪ್ರಥಮ ಚಿಕಿತ್ಸೆ ನೀಡಿದರು.

ಮೈದಾನದೊಳಗೇ ಆಂಬುಲೆನ್ಸ್ ಕರೆಸಿ ಲುಂಗಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆಂಬುಲೆನ್ಸ್ ಮೈದಾನದಿಂದ 'ಬಿಎಲ್‌ಕೆ ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'ಗೆ ಕೇವಲ 11 ನಿಮಿಷಗಳಲ್ಲಿ ತಲುಪಿತು.

ಲುಂಗಿ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಒತ್ತಡದಲ್ಲಿ ರಹಾನೆ, ರಿಷಭ್

ಲಖನೌ (ಪಿಟಿಐ): ನಾಯಕ ಸಮರ್ಥನಾಗಿದ್ದರೆ ತಂಡವೂ ಉತ್ತಮವಾಗಿರುತ್ತದೆ ಎಂಬ ಮಾತಿದೆ. ಇದು ನಾಯಕರಾಗಿ ಸದ್ಯ ವಿಫಲರಾಗುತ್ತಿರುವ ರಿಷಭ್ ಪಂತ್ ಮತ್ತು ಅಜಿಂಕ್ಯ ರಹಾನೆ ಅವಬ್ಬರಿಗೂ ಒಪ್ಪುತ್ತದೆ. ರಿಷಭ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ಮತ್ತು ರಹಾನೆ ಸಾರಥ್ಯದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಭಾನುವಾರ ಮುಖಾಮುಖಿಯಾಗಲಿದ್ದು, ಈ ಇಬ್ಬರ ಮೇಲೆ ಹೆಚ್ಚಿನ ಒತ್ತಡವಿದೆ.

ರಹಾನೆ ನಾಯಕತ್ವದಲ್ಲಿ ತಂಡ ಈ ಹಿಂದಿನ ವರ್ಷವೂ ನೀರಸ ಪ್ರದರ್ಶನ ನೀಡಿತ್ತು. ಆದರೆ ತಂಡ ಅವರ ಮೇಲೆ ವಿಶ್ವಾಸ ಮುಂದುವರಿಸಿತ್ತು. ಈ ಋತುವಿನಲ್ಲಿ ತಂಡ ಮೊದಲ ಜಯ ಕಾಣಲು ಏಳನೇ ಪಂದ್ಯದವರೆಗೆ ಕಾಯಬೇಕಾಯಿತು.

ಒಂಬತ್ತನೇ ಸ್ಥಾನದಲ್ಲಿರುವ ಪಂತ್ ಪಡೆ ಕೂಡ ಬೇಗ ಹೊರಬೀಳುವ ಆತಂಕ ಎದುರಿಸುತ್ತಿದೆ. ಪಂತ್ ಅವರ ಪರದಾಟ, ಹತಾಶೆ ಅವರ ಹಾವಭಾವಗಳಲ್ಲಿ ವ್ಯಕ್ತವಾಗುತ್ತಿದೆ. ಮತೀಶ ಪಥಿರಾಣ ಕೆಕೆಆರ್ ತಂಡಕ್ಕೆ ತಮ್ಮ ಮೊದಲ ಪಂದ್ಯ ಆಡುವುದು ಖಚಿತವಾಗಿದೆ.

ಶೂಟಿಂಗ್: ವಂಶಿಕಾ-ಚಿರಾಗ್‌ಗೆ ಚಿನ್ನ

ಕೈರೊ (ಪಿಟಿಐ): ಭಾರತದ ವಂಶಿಕಾ ಚೌಧರಿ ಹಾಗೂ ಚಿರಾಗ್ ಶರ್ಮಾ ಜೋಡಿಯು ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್‌ನ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಶನಿವಾರ ಸ್ವರ್ಣಕ್ಕೆ ಗುರಿಯಿಟ್ಟಿತು.

ವಂಶಿಕಾ ಚೌಧರಿ ಹಾಗೂ ಚಿರಾಗ್ ಶರ್ಮಾ

ಭಾರತದ ಜೋಡಿ ಫೈನಲ್ ಸುತ್ತಿನಲ್ಲಿ 484.3 ಅಂಕ ಗಳಿಸಿತು. ಐಎಸ್‌ಎಸ್‌ಎಫ್ ಧ್ವಜದಡಿ ಸ್ಪರ್ಧಿಸಿರುವ ಬೆಲರೂಸ್‌ನ ಅಲಿಯಾಕ್‌ಸಾಂಡ್ರಾ ಪಿಯಟ್ರೊವಾ ಹಾಗೂ ಮಿಕಿಟ ದೌಬಶ್ ಅವರು (467.6 ಅಂಕ) ರಜತ ಪದಕ ಜಯಿಸಿದರು. ಕಣದಲ್ಲಿದ್ದ ಭಾರತದ ಮತ್ತೊಂದು ಜೋಡಿ ಮೋಹಿನಿ ಸಿಂಗ್– ಹಿಮಾಂಶು ರಾಣಾ (407.4) ಕಂಚಿನ ಪದಕ ಗೆದ್ದುಕೊಂಡರು.

ಒಟ್ಟಾರೆ 14 ಪದಕ (5 ಸ್ವರ್ಣ, 5 ಬೆಳ್ಳಿ ಹಾಗೂ 4 ಕಂಚು) ಜಯಿಸಿರುವ ಭಾರತ ತಂಡವು ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಕೊನೆಯ ದಿನವಾದ ಭಾನುವಾರ ಜೂನಿಯರ್ ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಹಾಗೂ ಟ್ರ್ಯಾಪ್ ಮಿಶ್ರ ತಂಡ ವಿಭಾಗದ ಸ್ಪರ್ಧೆಗಳು ನಡೆಯಲಿವೆ.

ಕೆಎಸ್‌ಎಚ್‌ಎ 'ಎ' ಡಿವಿಷನ್ ಲೀಗ್ ಹಾಕಿ: ಗುರು ಕ್ಲಬ್ ಚಾಂಪಿಯನ್

ಬೆಂಗಳೂರು: ಸಂಘಟಿತ ಪ್ರದರ್ಶನ ತೋರಿದ ಗುರು ಹಾಕಿ ಕ್ಲಬ್ ತಂಡವು ಶನಿವಾರ ನಡೆದ ಕೆಎಸ್‌ಎಚ್‌ಎ ಎ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ 3–0ಯಿಂದ ಬ್ಲ್ಯೂಸ್ಟಾರ್ ಹಾಕಿ ಕ್ಲಬ್ ತಂಡವನ್ನು ಮಣಿಸಿ, ಚಾಂಪಿಯನ್ ಆಯಿತು.

ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗುರು ಕ್ಲಬ್‌ನ ವೆಂಕಟೇಶ್ ಟಿ. 14ನೇ ನಿಮಿಷದಲ್ಲಿ ಗೋಲು ಗಳಿಸಿ, ಆರಂಭಿಕ ಮುನ್ನಡೆ ಒದಗಿಸಿದರು. ಸಂದೀಪ್ ಎಸ್. (26ನೇ ನಿ.) ಹಾಗೂ ಅರವಿಂದ್ (49ನೇ ನಿ.) ತಲಾ ಒಂದು ಗೋಲು ದಾಖಲಿಸಿ, ಗೆಲುವಿನ ಅಂತರವನ್ನು ಹಿಗ್ಗಿಸಿದರು.

ಮೂರು ಮತ್ತು ನಾಲ್ಕನೇ ಸ್ಥಾನದ ನಿರ್ಧಾರಕ್ಕಾಗಿ ನಡೆದ ಪಂದ್ಯದಲ್ಲಿ ಬಾಂಬರ್ಸ್ ಹಾಕಿ ಕ್ಲಬ್ ತಂಡವು ಶೂಟೌಟ್‌ನಲ್ಲಿ 4–3ರಿಂದ ಬೆಂಗಳೂರು ಯುನೈಟೆಡ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ನಿಗದಿತ ಅವಧಿಯ ಪಂದ್ಯವು 1–1 ಡ್ರಾ ಆಗಿತ್ತು.

ಬಾಂಬರ್ಸ್ ಕ್ಲಬ್‌ನ ಮೊಹಮ್ಮದ್ ನಯೀಮ್ ಟೂರ್ನಿಯ ಆಟಗಾರ ಗೌರವಕ್ಕೆ ಪಾತ್ರರಾದರು.

ಉತ್ತಮ ಗೋಲ್‌ಕೀಪರ್: ಸಾಯಿಕುಮಾರ್ (ಗುರು ಹಾಕಿ ಕ್ಲಬ್); ಉತ್ತಮ ಡಿಫೆಂಡರ್: ಕಾರ್ತಿಕ್ (ಗುರು ಹಾಕಿ ಕ್ಲಬ್); ಉತ್ತಮ ಮಿಡ್‌ಫೀಲ್ಡರ್: ಮುತ್ತುಕುಮಾರ್ (ಬೆಂಗಳೂರು ಯುನೈಟೆಡ್ ಹಾಕಿ ಕ್ಲಬ್); ಉತ್ತಮ ಅಟ್ಯಾಕರ್: ಕಾರ್ತಿಕ್ (ಬ್ಲ್ಯೂಸ್ಟಾರ್ ಹಾಕಿ ಕ್ಲಬ್).

ಕರ್ನಾಟಕದ ನೂಪುರ ಹೊಳ್ಳಗೆ ಕಂಚು

ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್: 400 ಮೀ. ಓಟದಲ್ಲಿ ಅಶ್ಫಾಕ್ ದಾಖಲೆ

• ಮೈಲಾರಿ ಲಿಂಗಪ್ಪ

ತುಮಕೂರು: ರಾಜ್ಯದ ಅಥ್ಲೀಟ್ ನೂಪುರ ಹೊಳ್ಳ ಅವರು ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 24ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ (20 ವರ್ಷದೊಳಗಿನವರ) ಕ್ರೀಡಾಕೂಟದ ಮಹಿಳೆಯರ 100 ಮೀಟರ್ ಹರ್ಡಲ್ಸ್‌ನಲ್ಲಿ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಇದರೊಂದಿಗೆ ಕೂಟದಲ್ಲಿ ಕರ್ನಾಟಕ ಪದಕದ ಖಾತೆ ತೆರೆಯಿತು.

ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಮತ್ತು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಆಶ್ರಯದಲ್ಲಿ ನಡೆಯುತ್ತಿರುವ ಕೂಟದ ಎರಡನೇ ದಿನವಾದ ಶನಿವಾರ ಸ್ಪರ್ಧೆಯಲ್ಲಿ ನೂಪುರ 14.22 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ತಮಿಳುನಾಡಿನ ಯಾಮಿನಿ ಕಾರ್ತಿಕೇಯನ್ (13.79 ಸೆ) ಚಿನ್ನದ ಪದಕ ಪಡೆದರು.

ಅಶ್ಫಾಕ್ ದಾಖಲೆ: ಕೇರಳದ ಅಥ್ಲೀಟ್ ಮೊಹಮ್ಮದ್ ಅಶ್ಫಾಕ್ ಅವರು ಪುರುಷರ 400 ಮೀಟರ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಮತ್ತು ಕೂಟ ದಾಖಲೆ ಮಾಡಿದರು. 46.05 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದ ಅವರು, 2017ರಲ್ಲಿ ಅಮೋಜ್ ಜೇಕಬ್ (46.26ಸೆ) ನಿರ್ಮಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಮುರಿದರು. ಅಲ್ಲದೆ, ಆಸ್ತಿಕ್ ಪ್ರಧಾನ್ ಅವರ ಹೆಸರಿನಲ್ಲಿದ್ದ ಕೂಟ ದಾಖಲೆಯನ್ನು ವರ್ಗಾಯಿಸಿಕೊಂಡರು. 2025ರ ಪ್ರಯಾಗರಾಜ್ ಆವೃತ್ತಿಯಲ್ಲಿ ಆಸ್ತಿಕ್ (46.58 ಸೆ.) ಕೂಟ ದಾಖಲೆ ನಿರ್ಮಿಸಿದ್ದರು.

ಎಎಫ್‌ಐ ನಿಗದಿಪಡಿಸಿದ ಮಾನದಂಡ (47.53ಸೆ) ಪೂರೈಸಿದ ಅಶ್ಫಾಕ್ ಅವರು ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡರು.

ಕಂಚಿನ ಪದಕದೊಂದಿಗೆ ನೂಪುರ ಹೊಳ್ಳ

ಫಲಿತಾಂಶ: ಪುರುಷರು: 400 ಮೀ. ಓಟ: ಮೊಹಮ್ಮದ್ ಅಶ್ಫಾಕ್ (ಕಾಲ: 46.05 ಸೆ, ಕೇರಳ)–1, ಪಿಯೂಷ್ ರಾಜ್ (ಬಿಹಾರ)–2, ಎಸ್.ರಂಜಿತ್ ಕುಮಾರ್ (ತಮಿಳುನಾಡು)–3.
1,500 ಮೀ. ಓಟ: ಕುಮಾರ್ ಶರ್ವ (ಕಾಲ: 3ನಿ.52 ಸೆ, ಉತ್ತರ ಪ್ರದೇಶ)–1, ಹಿತೇಶ್ (ಹರಿಯಾಣ)–2, ರೋಹಿತ್ ಸಾಗರ್ (ಉತ್ತರ ಪ್ರದೇಶ)–3.
5 ಸಾವಿರ ಮೀ. ನಡಿಗೆ: ನಿತಿನ್ ಗುಪ್ತ (ಸಮಯ:18 ನಿ. 54 ಸೆ, ಉತ್ತರ ಪ್ರದೇಶ)–1, ತುಷಾರ್ ಪನ್ವಾರ್ (ಉತ್ತರಾಖಂಡ)–2, ಹಿಮಾಂಶು ಪನ್ವಾರ್ (ಉತ್ತರಾಖಂಡ)–3.
110 ಮೀ. ಹರ್ಡಲ್ಸ್: ಕೆ.ಕಿರಣ್ (13.75 ಸೆ, ಕೇರಳ)–1, ಸೈಫ್ ಫಾರುಕ್ (ಮಹಾರಾಷ್ಟ್ರ)–2, ಸಲ್ ಉಲ್ ಹಕ್ (ಕೇರಳ)–3.
ಹ್ಯಾಮರ್ ಥ್ರೋ: ಅಶುವೇಂದ್ರ ಪ್ರತಾಪ್ ಸಿನ್ಹಾ (ಎಸೆತ: 67.87 ಸೆ, ಉತ್ತರ ಪ್ರದೇಶ)–1, ಅಮನ್ (ಹರಿಯಾಣ)–2, ಕಾರ್ತಿಕ್ (ಉತ್ತರ ಪ್ರದೇಶ)–3.
ಶಾಟ್‌ಪಟ್: ಸಾಯಿ ಕಿರಣ್ (ಎಸೆತ: 18.65 ಮೀ, ಎನ್‌ಸಿಒಇ)–1, ಅಖಂಡ್ ಪ್ರತಾಪ್‌ಸಿಂಗ್ (ಉತ್ತರ ಪ್ರದೇಶ)–2 ಓಂಕಾರ್ ಪ್ರಸಾದ್ ನಂದ್ (ಒಡಿಶಾ)–3.
ಪೋಲ್‌ವಾಲ್ಟ್: ಕವಿನ್ ರಾಜಾ (ಎತ್ತರ: 5.12 ಮೀ, ತಮಿಳುನಾಡು)–1, ಅಶಿಶ್‌ಕುಮಾರ್ ಯಾದವ್ (ಮಧ್ಯಪ್ರದೇಶ)–2, ವಿಶಾಲ್ (ತಮಿಳುನಾಡು)–3.
ಲಾಂಗ್ ಜಂಪ್: ಶಹನವಾಜ್ ಖಾನ್ (ಜಿಗಿತ: 8.23 ಮೀ., ಉತ್ತರ ಪ್ರದೇಶ)–1, ಜಿತಿನ್ ಅರ್ಜುನನ್ (ತಮಿಳುನಾಡು)–2, ಧನುಷ್ ರಾಜ್ (ಕೇರಳ)–3.
ಡೆಕಥ್ಲಾನ್: ಉಪ್ಕಾರ್ (7,039 ಅಂಕ, ರಾಜಸ್ಥಾನ)–1, ಜಾಕರ್ ರಾಹುಲ್ (ಗುಜರಾತ್)–2, ಅಭಯ್ ಸಿಂಗ್ (ಬಿಎಸ್‌ಎಫ್)–3.
ಮಹಿಳೆಯರು: 400 ಮೀ. ಓಟ: ನೀರೂ ಪಾಠಕ್ (ಕಾಲ: 54.31 ಸೆ, ಎನ್‌ಸಿಒಇ)–1, ತಾಹೂರಾ ಖಾಟುನ್ (ಒಎನ್‌ಜಿಸಿ)–2, ಭೂಮಿಕಾ ನೆಹಾತೆ (ಮಹಾರಾಷ್ಟ್ರ)–3.
1,500 ಮೀ. ಓಟ: ರಾಧಾ ಯಾದವ್ (ಕಾಲ: 4ನಿ.32 ಸೆ, ಮಧ್ಯಪ್ರದೇಶ)–1, ಸ್ನೇಹಲ್ ಕೆ. (ಮಹಾರಾಷ್ಟ್ರ)–2, ಜಾಹ್ನವಿ ದ್ಯಾನೇಶ್ವರ್ (ಮಹಾರಾಷ್ಟ್ರ)–3.
5 ಸಾವಿರ ಮೀ. ನಡಿಗೆ: ರಂಜನಾ ಯಾದವ್ (ಕಾಲ: 23ನಿ.22 ಸೆ, ಮಧ್ಯಪ್ರದೇಶ)–1, ಯೋಗಿತಾ (ಹರಿಯಾಣ)–2, ಮೋನಿಷಾ (ರಾಜಸ್ಥಾನ)–3.
100 ಮೀ. ಹರ್ಡಲ್ಸ್: ಯಾಮಿನಿ ಕಾರ್ತಿಕೇಯನ್ (ಕಾಲ: 13.79 ಸೆ, ತಮಿಳುನಾಡು)–1, ಜಿ.ಭಾವನಾ (ತಮಿಳುನಾಡು)–2, ನೂಪುರ ಹೊಳ್ಳ (ಕರ್ನಾಟಕ)–3.
ಶಾಟ್‌ಪಟ್: ವಿ.ಎಸ್. ಅನುಪ್ರಿಯಾ (ಎಸೆತ: 14.35 ಮೀ, ಕೇರಳ)–1, ಪೂಜಾ ಕುಮಾರಿ (ಎನ್‌ಸಿಒಇ)–2, ವಿ.ಮಧುಮಿತಾ (ತಮಿಳುನಾಡು)–3.
ಲಾಂಗ್‌ಜಂಪ್: ಮುನ್‌ಮುನ್ ಚೇಟಾ (ಜಿಗಿತ: 6.03 ಮೀ, ಅಸ್ಸಾಂ)–1, ಸಾಧನಾ ರವಿ (ತಮಿಳುನಾಡು)–2, ಶ್ರೇಷ್ಠಪ್ರಸಾದ್ ಸೇಠ್ (ಮಹಾರಾಷ್ಟ್ರ)–3.

ಮುಂಬೈ ವಿರುದ್ಧ ಡ್ರಾ ಸಾಧಿಸಿದ ಬಿಎಫ್‌ಸಿ

ಬೆಂಗಳೂರು: ಆತಿಥೇಯ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಹಾಲಿ ಋತುವಿನ ಕೊನೆಯ ತವರಿನ ಪಂದ್ಯದಲ್ಲಿ ಗೋಲುರಹಿತವಾಗಿ ಮುಂಬೈ ಸಿಟಿ ಎಫ್‌ಸಿ ವಿರುದ್ಧ ಡ್ರಾ ಸಾಧಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರೋಚಕ ಪಂದ್ಯದಲ್ಲಿ ಉಭಯ ತಂಡಗಳು ತಲಾ ಒಂದು ಅಂಕಗಳನ್ನು ಹಂಚಿಕೊಂಡವು. ಇದರೊಂದಿಗೆ ಬಿಎಫ್‌ಸಿ ತಂಡವು 16 ಅಂಕಗಳೊಂದಿಗೆ ಐದನೇ ಸ್ಥಾನದಲ್ಲೇ ಮುಂದುವರಿಯಿತು. ಮುಂಬೈ ತಂಡವು (19 ಅಂಕ) ಮೂರನೇ ಸ್ಥಾನದಲ್ಲೇ ಉಳಿಯಿತು.

ಬಿಎಫ್‌ಸಿ ಕೋಚ್ ಪೆಪ್ ಮುನೋಝ್ ತಂಡದಲ್ಲಿ ಒಂದು ಬದಲಾವಣೆ ಮಾಡಿದ್ದರು. ಈಸ್ಟ್ ಬೆಂಗಾಲ್ ವಿರುದ್ಧದ ಹಿಂದಿನ ಪಂದ್ಯದಲ್ಲಿ ಹನ್ನೊಂದರ ಬಳಗದಲ್ಲಿದ್ದ ಸುರೇಶ್ ಸಿಂಗ್ ಬದಲು ಲಾಲ್ರೆಮ್‌ಸಂಗ ಫನೈ ಸ್ಥಾನ ಪಡೆದಿದ್ದರು.

